ಬಿಸಿಲ

ಐಪ್ರಿಲ್ 1999 ರೂ. 10

■ ವಾಣಿಜ್ಯ ■ ವಿಕಾಸ ■ ಮಾಹಿತಿ ■ ಸಂಪರ್ಕ

ಮಾಸ ಪತ್ರಿಕೆ



ಸಚಿನ್ - ಹುಟ್ಟುಹಬ್ಬ ವಿಶೇಷ!





ಬೆಳುದಿಂಗಳ ಬಾಲೆಯರು


ISI - RDX ಡೆಡ್ಲಿ ಜೋಡಿ


ಸತ್ತು ಬದುಕಿದ ರೂಪಿಣಿ !
















ಯಾರು ಸರಿ ?

ಬಿಸಿಲ ಬದುಕು

ಏಪ್ರಿಲ್ 1999 ಸಂಪುಟ 2 ಸಂಚಿಕೆ 10

ಸಮಾಜವಾದಿ ಸೋಗು

'ವಾಸ್ತವಿಕವಾಗಿ ಮಹಾತ್ಮಾಗಾಂಧಿಯಂತೆ ಇರುವುದು ಕಷ್ಟ. ನಿತ್ಯ ಜೀವನದಲ್ಲಿ ಲೋಹಿಯಾ ಅವರಂತೆ ಬದುಕಬಹುದು' ಎಂದು ಎಂದಿನಂತೆ ಭಾಷಣ ಬಿಗಿದಿದ್ದಾರೆ ಜೆ.ಎಚ್. ಪಟೇಲ್. ಮುಖ್ಯಮಂತ್ರಿಯನ್ನು ಒಳಗೊಂಡಂತೆ ದಳ ಸರ್ಕಾರದ ಹಲವಾರು ಮಂತ್ರಿಗಳಿಗೆ ತಾವು ಸಮಾಜವಾದಿ ಹಿನ್ನೆಲೆಯವರು ಎಂಬುದೇ ಬಂಡವಾಳ. ಈ ಬಗ್ಗೆ ಸಮಯ ಸಿಕ್ಕಾಗಲೆಲ್ಲಾ ಬುದ್ಧಿಜೀವಿ ವಲಯದಲ್ಲಿ ಬಡಾಯಿ ಕೊಚ್ಚಿಕೊಳ್ಳುವುದನ್ನು ಇವರು ವ್ಯವಸ್ಥಿತವಾಗಿ ಮಾಡುತ್ತಾರೆ. ವಾಸ್ತವದಲ್ಲಿ ಇವರು ಲೋಹಿಯಾರಂತೆ ಬದುಕುವುದು ಒತ್ತಟ್ಟಿಗಿರಲಿ ಪಟೇಲರಿಗೆ ಪಟೇಲರಂತೆ, ಎಂ.ಪಿ. ಪ್ರಕಾಶರಿಗೆ ಎಂ.ಪಿ. ಪ್ರಕಾಶರಂತೆ ಕೂಡ ಬದುಕಲು ಸಾಧ್ಯವಾಗುತ್ತಿಲ್ಲ. ಇದಕ್ಕೆಲ್ಲಾ ವ್ಯವಸ್ಥೆಯ ಮೇಲೆ ಗೂಬೆ ಕೂರಿಸಿ ಗುಮ್ಮನಗುಸುಗರಂತೆ ಕಬಳಿಸುವ ಕಾಯಕ ಮುಂದುವರಿಸುವುದು ಈ ಕಳಂಕಿತ ಸಮಾಜವಾದಿಗಳಿಗೆ ಕರಗತವಾಗಿದೆ.

ಪಟೇಲರು ಕೇವಲ ಪಟೇಲರಂತೆ ವರ್ತಿಸಿ ಶಬರಿಮಲೆ ಯಾತ್ರೆ ಕೈಗೊಳ್ಳದಿರಬಹುದಿತ್ತು. ಆದರೆ ವೇದಿಕೆಗಳಲ್ಲಿ ಮಹಾಮೇಧಾವಿಯಂತೆ ವರ್ತಿಸುವ ಪಟೇಲರು ಮೌಢ್ಯದ ಪ್ರತೀಕವಾದ ಅಯ್ಯಪ್ಪಸ್ವಾಮಿಗೆ ಅಡ್ಡ ಬೀಳಲು ಹೇಸುವುದಿಲ್ಲ. ಹಾಗೆಯೇ ಪಂಚಾಯ್ತಿ ಚುನಾವಣೆ ಮುಂದೂಡಿಕೆ ವಿಚಾರದಲ್ಲಿ ತಾವು ನೀಡಿದ ರಾಜೀನಾಮೆಯನ್ನು ಹಿಂತೆಗೆದುಕೊಳ್ಳದೆ ತಮ್ಮ ಬದ್ಧತೆಯನ್ನು ಮೆರೆಯುವ ಅವಕಾಶ ಸಚಿವ ಎಂ.ಪಿ. ಪ್ರಕಾಶರಿಗೆ ಬಂದಿತ್ತು. ಆದರೆ ಆದರ್ಶ ಮತ್ತು ಖುರ್ಚಿ ನಡುವೆ ಅಂತಿಮವಾಗಿ ಖುರ್ಚಿಯೇ ಗೆದ್ದಿತು!

ಇದೇ ವಿಷಯದಲ್ಲಿ ಮಾಜಿ ಸಚಿವ ಎಂ.ವೈ. ಘೋರ್ಪಡೆಯವರು ನಡೆದುಕೊಂಡದ್ದೇ ಬೇರೆ ರೀತಿ. ಹಿಂದೆ ಇಂತಹದೇ ಸಂದರ್ಭದಲ್ಲಿ ಅವರು ರಾಜೀನಾಮೆ ಚೆಲ್ಲಿ ನಾಡಿನ ಜನತೆಯ ಮೆಚ್ಚುಗೆ ಬಾಚಿದ್ದರು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಸಂಖ್ಯಾತರ ನಿಲುವಿಗೆ ತಲೆಬಾಗಿ ತಾವು ರಾಜೀನಾಮೆ ಹಿಂದೆ ಪಡೆದದ್ದಾಗಿ ಬಡಬಡಿಸಿದ ಪ್ರಕಾಶ್ ಎಂದಿನಂತೆ ಸ್ವಾರ್ಥಕ್ಕೆ ಸಿದ್ಧಾಂತದ ಲೇಪ ಸವರಿದರು.

ಇಲ್ಲಿ ಗಮನಿಸಬೇಕಾದ ವಿಪರ್ಯಾಸವೆಂದರೆ ಪಟೇಲ್, ಪ್ರಕಾಶ್, ಘೋರ್ಪಡೆ ಎಲ್ಲರೂ ಇದೇ ವ್ಯವಸ್ಥೆಯ ಶಿಶುಗಳು. ಆದರೆ ಘೋರ್ಪಡೆಯವರು ಒಬ್ಬ ಬಂಡವಾಳಶಾಹಿ; ಪಟೇಲ್, ಪ್ರಕಾಶರಂತೆ ಸಮಾಜವಾದಿಯಲ್ಲ!

ಇಂಥವರ ಈ ಪರಿ ಸೋಗಲಾಡಿತನವನ್ನು ಸುಮ್ಮನೆ ಉಪೇಕ್ಷಿಸಬೇಕೆ? ಅಥವಾ ಇವರನ್ನು ಸಹಿಸುತ್ತಿರುವುದಕ್ಕೆ ಜನ ತಮ್ಮನ್ನು ತಾವೇ ಹಳಿದುಕೊಳ್ಳಬೇಕೆ?

-ಸಂಪಾದಕ

ಸಂಪಾದಕ
ಚಂದ್ರಕಾಂತ ವಡ್ಡು

ಉಪ ಸಂಪಾದಕರು
ಎ.ಎಂ.ಸುರೇಶ್

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ರಮೇಶ್ ವಿಟ್ಲಾಪುರ

ಅಕ್ಷರ ಜೋಡಣೆ
ನರೇಂದ್ರ ಪಾಟೀಲ, ಕೋಕಿಲ

ಮುಖಪುಟ ವಿನ್ಯಾಸ
ಅಂಕುರ

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Printed at M.N.S.Enterprises, Bhattarahalli, Old Madras Road, Bangalore -560 049 Editor : Chandrakanta Vaddu

ಹಾಸ್ಯ

ಆರುಗಂಟೆ!

ಯಾವುದೋ ವಿಷಯಕ್ಕೆ ಗಂಡಹೆಂಡತಿ ಜಗಳವಾಡಿದರು. ರಾತ್ರಿ ಬೆನ್ನು ತಿರುಗಿಸಿ ಮಲಗಿದರು. ತತ್‌ಕ್ಷಣ ಗಂಡನಿಗೆ ನೆನಪಾಯಿತು- ಬೆಳಿಗ್ಗೆ ಬೇಗ ಏಳಬೇಕು ಅಂತ, ಹೆಂಡತಿಗೆ ಹೇಗೆ ಹೇಳೋದು? ಸರಿ, ಒಂದು ಚೀಟಿ ಬರೆದಿಟ್ಟ:

''ನನ್ನನ್ನು ಆರು ಗಂಟೆಗೆ ಎಬ್ಬಿಸು'' ಅಂತ.

ಆದರೆ ಎಚ್ಚೆತ್ತಾಗ ಎಂಟುಗಂಟೆ. ಹೆಂಡತಿ ಮೇಲೆ ಬಹಳ ಸಿಟ್ಟು ಬಂದಿತು. ಅವನು ಬರೆದಿಟ್ಟಿದ್ದ ಚೀಟಿ ಪಕ್ಕ ಇನ್ನೊಂದು ಚೀಟಿ ಇತ್ತು, ಅದರಲ್ಲಿ ಬರೆದಿತ್ತು:

''ಈಗಾಗಲೇ ಆರು ಗಂಟೆಯಾಗಿದೆ ಏಳಿ!''

ನಾಚಿಕೆ ಆಗುತ್ತೆ

ಮಾವನ ಮನೆ ಅಳಿಯನಾಗಿದ್ದ ಮಹಾಭಂಡನೂ ಆಗಿದ್ದ. ಜತೆಗೆ ಶುದ್ಧ ಸೋಮಾರಿ ತಿನ್ನು, ಉಣ್ಣು, ಸುತ್ತಾಡು - ಇದೇ ಅವನ ಜೀವನ ಸಿದ್ಧಾಂತ. ಒಂದು ಕಾಸು ಸಂಪಾದಿಸಿರಲಿಲ್ಲ.

ಬಹಳ ವರ್ಷಗಳ ಬಳಿಕ ಬೇಸತ್ತ ಹೆಂಡತಿ ಗುಡುಗಿದಳು.

''ಛೇ! ನಮ್ಮದೂ ಒಂದು ಬದುಕೇನ್ರೀ? ನಮ್ಮಮ್ಮ ಮನೆ ಬಾಡಿಗೆ ಕೊಡ್ತಾಳೆ.

ಚಿಕ್ಕಮ್ಮ ಬಟ್ಟೆ ಕೊಡಿಸ್ತಾಳೆ. ನನ್ನ ತಂಗಿ ರೇಷನ್ ಕೊಡಿಸ್ತಾಳೆ. ಮನೆ ವೆಚ್ಚಕ್ಕೆ ನಮ್ಮಪ್ಪ ಹಣ ಕೊಡ್ತಾರೆ. ಛೇ, ನನಗಂತೂ ನಾಚಿಕೆಯಿಂದ ತಲೆ ತಗ್ಗಿಸುವ ಹಾಗಿದೆ''.

''ನಂಗೂ ಅಷ್ಟೇ. ನಾಚಿಕೆ ಆಗ್ಲೇಬೇಕು ಇಬ್ಬರಿಗೂ, ಅಲ್ಲಾ ನಿಂಗೆ ಇಬ್ಬರು-ಇಬ್ಬರು ಚಿಕ್ಕಪ್ಪಂದಿರು ಇದ್ದಾರೆ. ಅವರು ಮೂರು ಕಾಸೂ ನಮಗೋಸ್ಕರ ಖರ್ಚು ಮಾಡಿಲ್ಲ, ನಾಚಿಕೆ ಆಗ್ಲೇಬೇಕು!....''

ಪುಕ್ಕಟೇ ಪ್ರಭಾವ!

ಹೊಸದಾಗಿ ಮದುವೆಯಾದ ಜೋಡಿಯೊಂದು ಬೆಲೆಬಾಳುವ ಸಾಮಗ್ರಿಗಳಿಂದ ತಮ್ಮ ಮನೆಯನ್ನು ಸಿಂಗರಿಸಿ ಹೊಸ ಸಂಸಾರ ಮಾಡುವ ಹುನ್ನಾರದಲ್ಲಿತ್ತು. ಆ ದಿನ ಸಂಜೆ ಅವರ ಹೆಸರಿಗೆ ಅಂದಿನ 'ನೈಟ್‌ಷೋ' ಸಿನಿಮಾಗೆಂದು ಎರಡು ಟಿಕೆಟ್ ಅಂಚೆ ಮೂಲಕ ಬಂದಿದ್ದವು. ಜೊತೆಗೆ ಒಂದು ಚೀಟಿಯಿತ್ತು:

''ಯಾರು ಕಳುಹಿಸಿರಬಹುದೆಂದು ಊಹಿಸಬಲ್ಲಿರಾ?''

''ಯಾರು ಕಳುಹಿಸಿದ್ದರೆ ನಮಗೇನು? ಮಜವಾಗಿ ಸಿನಿಮಾ ನೋಡಿ ಬರೋಣ'' ಎಂದು ಮನೆಗೆ ಬೀಗ ಜಡಿದು ಅವರು ಹೊರಟೇ ಬಿಟ್ಟರು.

ಷೋ ಮುಗಿಸಿ ಮನೆಗೆ ಬಂದು ನೋಡಿದಾಗ, ಮನೆಯಲ್ಲಿದ್ದ ವಸ್ತುಗಳೆಲ್ಲಾ ಮಂಗಮಾಯ ವಾಗಿದ್ದವು. ಹತಾಶರಾದ ದಂಪತಿಗಳು ತಲೆಯ ಮೇಲೆ ಕೈ ಹೊತ್ತು ಕುಳಿತಾಗ ಮೂಲೆಯಲ್ಲಿ ಒಂದು ಚೀಟಿ ಕಣ್ಣಿಗೆ ಬಿತ್ತು. ಅದರಲ್ಲಿ ''ಈಗ ತಿಳಿಯಿತೇ, ಟಿಕೆಟ್ ಕಳಿಸಿದವರು ಯಾರು ಅಂತ?'' ಎಂದು ಬರೆದಿತ್ತು.

ಗಂಡಸು ಅಲ್ಲ

ಆಕೆ: ಈವೊತ್ತು ಬೆಳಿಗ್ಗೆ ಸಂತೆಯಲ್ಲಿ ಯಾರೋ ಗಂಡಸರು ನಿನ್ನೊಂದಿಗೆ ಮಾತಾಡ್ತಾ ಇದ್ದರು. ಯಾರೇ ಅವರು?

ಈಕೆ: ಅವರು ಗಂಡಸರು ಅಲ್ಲಾರೀ! ನಮ್ಮ ಯಜಮಾನರು!

ಕಾರಣ

ಒಬ್ಬ ವಯಸ್ಕ ಶ್ರೀಮಂತ ಮಹಿಳೆ ವಯೋಪರಿಣಿತರೊಬ್ಬರನ್ನು ಭೇಟಿ ಆದಾಗ ಕೇಳಿದಳು:

''ನೀವು ನನ್ನನ್ನು ಇಪ್ಪತ್ತೈದು ವರ್ಷದ ಯುವತಿಯನ್ನಾಗಿ ಮಾಡಲು ಸಾಧ್ಯವೇ?''

''ಐದು ವರ್ಷದ ಯುವತಿಯನ್ನು ಮಾಡಲಿಕ್ಕೆ''

''ಇಪ್ಪತ್ತು ಸಾವಿರ ರೂಪಾಯಿ.''

ಮಹಿಳೆ ಒಪ್ಪಿದಳು. ಪರಿಣಿತರ ಚಿಕಿತ್ಸೆಯಿಂದ ಹದಿನೈದು ವರ್ಷದ ಯುವತಿಯಾಗಿ ಮಾರ್ಪಟ್ಟಳು. ಪರಿಣಿತರು ತಮ್ಮ ಪರಿಶ್ರಮ ಶುಲ್ಕ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೇಳಿದಾಗ ಆಕೆ ಶುಲ್ಕ ತೆರಲು ನಿರಾಕರಿಸದಳು. ಆಕೆ ಕೊಟ್ಟ ಕಾರಣ ಹೀಗಿತ್ತು:

''ನನಗೆ ಹದಿನೈದು ವರ್ಷವಾಗಿರುವುದರಿಂದ ಅಪ್ರಾಪ್ತ ವಯಸ್ಕಳು ಹಣ ತೆರುವ ಜವಾಬ್ದಾರಿ ನನ್ನದಲ್ಲ. ನನಗೆ ನೀವು ಹದಿನೈದು ವರ್ಷವೆಂದು ನಿರಾಕರಿಸಿದರೆ, ನಾನು ನಿಮ್ಮ ಮೇಲೆ ವಂಚನೆಯ ಆರೋಪ ಹೊರಿಸಿ ಮೊಕದ್ದಮೆ ಹೂಡ ಬೇಕಾಗುತ್ತದೆ!''

○

ಅವನು ಕಾರನ್ನು ಕಂಡೊಡನೇ ಬೆವರುತ್ತಿದ್ದ ಒಂದು ದಿನ ಅವನ ಸ್ನೇಹಿತ ಈ ಬಗ್ಗೆ ಕೇಳಿದಾಗ ಅವನು ಈ ರೀತಿ ಉತ್ತರಿಸಿದ.

''ಈಚೆಗೆ ಒಂದೆರಡು ತಿಂಗಳ ಹಿಂದೆ ನಡೆದ ಘಟನೆ. ನಾನು ಹೆಂಡ್ತಿ ಜೊತೆಗೆ ರಸ್ತೆಯ ಬದಿಯಲ್ಲಿ ನಿಂತಿದ್ದೆ. ಆಗಲೇ ಅಲ್ಲಿಗೊಂದು ಕಾರ್ ಬಂತು. ಒಂದಿಬ್ಬರು ಕಾರಿನಿಂದ ಹೊರಬಂದು ನನ್ನ ಹೆಂಡ್ತಿ ಯನ್ನು ಬಲಾತ್ಕಾರವಾಗಿ ಕಾರಲ್ಲಿ ಹಾಕಿಕೊಂಡು ಹೊರಟು ಹೋದರು. ಈಗ ಯಾವುದೇ ಕಾರು ನನ್ನ ಬಳಿಯಿಂದ ಹಾಯ್ದು ಹೋದರೂ, ಅದರಲ್ಲಿ ಯಾರಾ ದರೂ ಮತ್ತೆ ನನ್ನ ಹೆಂಡ್ತಿಯನ್ನು ನನ್ನ ಬಳಿಗೆ ಬಿಟ್ಟು ಹೋದರೇನೆಂದು ಯೋಚಿಸಿಯೇ ನನ್ನ ಮೈ ಬೆವರುತ್ತದೆ!''

ವಿಶ್ರಾಂತಿ

ಒಬ್ಬ ಸರಕಾರಿ ನೌಕರ ಡಾಕ್ಟರ್ ಬಳಿಗೆ ಬಂದು, 'ಡಾಕ್ಟ್ರೇ, ನನಗೆ ಬಹಳ ಸುಸ್ತು, ದಯವಿಟ್ಟು ಪರೀಕ್ಷೆ ಮಾಡಿ ಔಷಧ ಕೊಡಿ', ಎಂದು ಅಂಗಲಾಚಿದ.

ಡಾಕ್ಟರ್ ಪರೀಕ್ಷೆ ಮಾಡಿ ಹೀಗೆ ಹೇಳಿದರು. 'ನಿಮಗೆ ಈಗ ಬೇಕಾದುದು ಪೂರ್ಣ ವಿಶ್ರಾಂತಿ, ನೀವು ನಿಮ್ಮ ಆಫೀಸಿಗೆ ಹೋಗಬಹುದು.'

ಅದ್ಭುತಗಳು

''ಹಾಯ್! ಒಂದು ಖುಷಿಯ ವಿಷಯ. ನನ್ನ ಮದುವೆ ನಿಶ್ಚಯ ಆಯ್ತು. ಹುಡುಗಿ ಹೇಗಿದ್ದಾಳೆ ಗೊತ್ತಾ? ದಂತದ ಬೊಂಬೆ. 'ನೀನು ಪ್ರಪಂಚದ ಎಂಟನೇ ಅದ್ಭುತ' ಅಂತ ಅವಳಿಗೆ ಹೇಳಬೇಕು ಅಂತಿದೀನಿ.''

''ಹೇಳು ಆದರೆ ಹುಶಾರಾಗಿರು ಉಳಿದ ಏಳು ಅದ್ಭುತಗಳು ಅವಳಿಗೆ ಗೊತ್ತಾಗದಂತೆ ನೋಡಿಕೋ'' ಗೆಳೆಯ ಎಚ್ಚರಿಕೆ ನೀಡಿದ.

■ ಟಿ.ವಿ. ವೆಂಕಟರಮಣಯ್ಯ

ಒಳನೋಟ



ರೂಪಿಣಿ ಪ್ರಕರಣ: ಮೂರು ದಾರಿ ಯಾರು ಸರಿ? 8



ಸಚಿನ್ : ಹ್ಯಾಪಿ ಬರ್ತ್‌ಡೇ 16



ಭೈರಪ್ಪನವರು ಎಬ್ಬಿಸಿದ ಬಿರುಗಾಳಿ 61



ISI-RDX ಡೆಡ್ಲಿ ಜೋಡಿ! 24



ಬೆಳುದಿಂಗಳ ಬಾಲೆಯರು 71

ವಿದ್ಯೆ - ಉದ್ಯೋಗ

ಸ್ಥಿರ ಶೀರ್ಷಿಕೆಗಳು

ಟಪಾಲು



ಪಲ್ಲಕ್ಕಿ ಉತ್ಸವದ ಜಗದ್ಗುರುಗಳು

ಮಾರ್ಚ್ 1999ರ 'ಬಿಸಿಲ ಬದುಕು' ಮಾಸ ಪತ್ರಿಕೆಯು ಚೆನ್ನಾಗಿ ಮೂಡಿ ಬಂದಿದೆ. ಈ ಪತ್ರಿಕೆಯನ್ನು ನಿಯಮಿತವಾಗಿ ಓದುತ್ತ ಬಂದಿದ್ದೇನೆ. ಸಂಪಾದಕೀಯ ಹಾಗೂ ಕೋ.ಚೆನ್ನಬಸಪ್ಪನವರ ಲೇಖನಗಳನ್ನು ಓದುವುದೇ ಮೊದಲು. ಈ ತಿಂಗಳು ಪ್ರಕಟಗೊಂಡ 'ಪಲ್ಲಕ್ಕಿ ಉತ್ಸವದ ಕಾಮ ಪೀಡಿತ ಜಗದ್ಗುರುಗಳು' ಲೇಖನವು ನನಗೆ ಮೆಚ್ಚುಗೆಯಾಗಿದೆ. 'ಮಾಡುವಂತಿರಬೇಕು ಮಾಡದಂತಿರಬೇಕು ಮಾಡುವ ಮಾಟದೊಳಗೆ ತಾನಲ್ಲದಂತಿರಬೇಕು' ಎಂಬ ಮಾತನ್ನು ಅಳವಡಿಸಿಕೊಂಡು ಕೆಲಸ ಮಾಡುತ್ತಿರುವ ಸ್ವಾಮಿಗಳು ಒಂದೆಡೆ, ಸದಾ ಪ್ರಚಾರ ವೈಭವದಿಂದ ಬದುಕುವ ಸ್ವಾಮಿಗಳು ಇನ್ನೊಂದು ಕಡೆ, ಸ್ವಾಮಿ ಸ್ವಾಮಿಗಳಲ್ಲಿ ಕಚ್ಚಾಟ ಮಗದೊಂದು ಕಡೆ. ಇಂಥ ಸಮಯದಲ್ಲಿ ಪ್ರಕಟಗೊಂಡ ಈ ಲೇಖನವು ಅರ್ಥಪೂರ್ಣವಾಗಿತ್ತು. ಇಂಥ ಲೇಖನ ಪ್ರಕಟಿಸುತ್ತಿರುವ 'ಬಿಸಿಲ ಬದುಕು' ತನ್ನ ಗೌರವ ಹೆಚ್ಚಿಸಿಕೊಂಡಿದೆ.

-ಮಡಿವಾಳದೇವರು, *ಶ್ರೀ ನಾಗನೂರು ರುದ್ರಾಕ್ಷಿಮಠ*
ಶಿವಬಸವನಗರ, ಬೆಳಗಾವಿ - 590 010

ಲೈಂಗಿಕ ಶಿಕ್ಷಣ ಬೇಕು

-ಪಕೀರಪ್ಪ ಸಾಗರ, ಬಳ್ಳಾರಿ.

ನಾನು 'ಬದುಕು' ಪತ್ರಿಕೆಯ ಖಾಯಂ ಓದುಗ. ಕೆಲವು ಓದುಗರು 'ಹಯಸ್ಕರ ಸಂದೇಹ ಸಲಹೆ' ಪ್ರಕಟಿಸಬಾರದೆಂದು ಕೋರುತ್ತಾರೆ. ಶಾಲಾ ಪಠ್ಯಕ್ರಮದಲ್ಲೇ ಲೈಂಗಿಕ ಶಿಕ್ಷಣ ಅಳವಡಿಸಬೇಕೆನ್ನುವಾಗ ಪತ್ರಿಕೆಯಲ್ಲಿ ಈ ಅಂಕಣ ಪ್ರಕಟಿಸುವುದು ತಪ್ಪಲ್ಲ. ಲೈಂಗಿಕ ತಿಳಿವಳಿಕೆಯ ಕೊರತೆ, ಅಜ್ಞಾನದಿಂದಾಗಿ ಡೋಂಗಿ ಲೈಂಗಿಕ ವೈದ್ಯರಿಗೆ ಸಾವಿರಾರು ರೂಪಾಯಿ ಸುರಿಯುವ ಬದಲು ಈ ಅಂಕಣದಿಂದ ಪ್ರಯೋಜನ ಪಡೆಯಬಾರದೇಕೆ? ಇದರಲ್ಲಿ ಅಶ್ಲೀಲತೆ ಶೋಧಿಸುವುದು ತರವಲ್ಲ. ಆದರೆ 'ಸರಸವಾರ್ತೆ' ಯನ್ನು ಮಾತ್ರ ಪ್ರಕಟಿಸಬೇಡಿ.

ಇನ್ನೊಂದು ಅವಕಾಶ

-ಅನಾಮಿಕೆ, ಊರುಬೇಡ.

ಫೆಬ್ರವರಿ ಸಂಚಿಕೆ 39ನೇ ಪುಟದಲ್ಲಿ 'ಮನೆ ಬಿಟ್ಟು ಹೋಗಬೇಕೆಂದಿರುವೆ' ಶೀರ್ಷಿಕೆಯಡಿ ಒಬ್ಬ ಯುವತಿ ತನ್ನ ಗೋಳು ಹೇಳಿಕೊಂಡಿದ್ದಾಳೆ. ಇಂಥ ಸ್ತ್ರೀಯರು ಶ್ರೀ ಶಾರದಾ ಮಠ, ದಕ್ಷಿಣೇಶ್ವರ, ಕಲಕತ್ತಾ ಸೇರಬಹುದು. ಅದರ ಶಾಖೆಯೊಂದು ಬೆಂಗಳೂರಿನಲ್ಲಿ ಇದೆ. ಅದರ ವಿಳಾಸ: ಶ್ರೀ ಶಾರದಾ ಮಠ, 260, ನಂದೀದುರ್ಗ ರೋಡ್, ಬೆಂಗಳೂರು - 560 046. (ದೂರವಾಣಿ : 080 - 3330753). ಇಲ್ಲಿ ಸೇರಿ ಆಧ್ಯಾತ್ಮಿಕವಾಗಿ ಶರಣಾಗತಿ ಆಗಬಹುದು ಅಥವಾ ಸಂಬಳ ತೆಗೆದುಕೊಂಡು ಸೇವೆ ಮಾಡಬಹುದು.

ಚಂದಾದಾರರಿಗೊಂದು ಮನವಿ

ಚಂದಾದಾರರಿಗೆ ಅತ್ಯಾಕರ್ಷಕ ಉಚಿತ ಕೊಡುಗೆ ನೀಡುವ ನಮ್ಮ ಯೋಜನೆಯನ್ನು ಸಾವಿರಾರು ಓದುಗರು ಪ್ರೀತಿಯಿಂದ ಬರಮಾಡಿಕೊಂಡಿದ್ದಾರೆ. ನಮ್ಮ ಪತ್ರಿಕಾ ಕಾರ್ಯಾಲಯಕ್ಕೆ ಇನ್ನೂ ಚಂದಾ ಹಣ ಹರಿದು ಬರುತ್ತಲೇ ಇದೆ. ಚಂದಾದಾರರಾಗಲು ಮುಂದೆ ಬಂದವರ ಸಂಖ್ಯೆ ನಮ್ಮ ನಿರೀಕ್ಷೆಯನ್ನು ಮೀರಿದ್ದರಿಂದ ಉಚಿತ ಕೊಡುಗೆಗಳನ್ನು ರವಾನಿಸುವಲ್ಲಿ ವಿಳಂಬವಾಗುತ್ತಿದೆ. ಅನೇಕ ಓದುಗರು ಈ ವಿಳಂಬವನ್ನು ಅಪಾರ್ಥ ಮಾಡಿಕೊಂಡು ಪತ್ರ ಬರೆಯುತ್ತಿದ್ದಾರೆ. ವಾರ್ಷಿಕ ಚಂದಾದಾರರಿಗೆ ಉಚಿತ ಕೊಡುಗೆಗಳನ್ನು ಸುರಕ್ಷಿತವಾಗಿ ತಲುಪಿಸುವ ಜವಾಬ್ದಾರಿ ನಮ್ಮದು. ಈ ಬಗ್ಗೆ ಯಾವುದೇ ಅನುಮಾನ ಬೇಡ. ಆದರೆ ಕೊಡುಗೆಗಳ ರವಾನೆಯಲ್ಲಿ ಆಗುತ್ತಿರುವ ವಿಳಂಬಕ್ಕಾಗಿ ವಿಷಾದಿಸುತ್ತೇವೆ.

ಕೆಲವು ಓದುಗರು ತಮಗೆ 'ಮನೆ' ವಾರಪತ್ರಿಕೆ ತಲುಪುತ್ತಿಲ್ಲವೆಂದು ದೂರುತ್ತಿದ್ದಾರೆ. 'ಮನೆ' ವಾರಪತ್ರಿಕೆ ಇನ್ನೂ ಬಿಡುಗಡೆಯಾಗಿಲ್ಲ. ಕನ್ನಡ ಪತ್ರಿಕೋದ್ಯಮದ ವಿನೂತನ ಪ್ರಯೋಗವಾದ ಈ ವಾರಪತ್ರಿಕೆಗೆ ಗಟ್ಟಿ ಅಡಿಪಾಯ ಹಾಕಲು ನಾವು ಹಗಲಿರುಳು ಶ್ರಮಿಸುತ್ತಿದ್ದೇವೆ. 'ಮನೆ' ಶೀಘ್ರದಲ್ಲೇ ನಿಮ್ಮನ್ನು ತಲುಪಲಿದೆ. ದಯವಿಟ್ಟು ತಾಳ್ಮೆ ಕಳೆದುಕೊಳ್ಳಬೇಡಿ.

- ಸಂಪಾದಕ

21ನೇ ಶತಮಾನದ ದುರಂತ

-ಎಚ್.ಐ.ವಿ. ರೋಗಿ, ಊರು ಬೇಡ.

ನಾನೊಬ್ಬ HIV ಪೀಡಿತ ವ್ಯಕ್ತಿ. ಡಿಸೆಂಬರ್ 'ಬಿಸಿಲ ಬದುಕು' ಪತ್ರಿಕೆ ಮೂಲಕ ಏಡ್ಸ್ ಬಗ್ಗೆ ಇರುವ ಎಲ್ಲಾ ಮಾಹಿತಿಗಳನ್ನು ಮತ್ತು ಇನ್ನಿತರರಿಗೆ ಹರಡದಂತಿರುವ ಕ್ರಮಗಳ ಬಗ್ಗೆ ಎಲ್ಲಾ ತಿಳಿದುಕೊಂಡಿದ್ದೇನೆ.

ನಾವೀಗ 21ನೇ ಶತಮಾನದಲ್ಲಿದ್ದೇವೆ. ನಮ್ಮೊಂದಿಗೆ ಬಾಳಿ ಬದುಕ ಬೇಕಾದ ಅನೇಕ ಜೀವಗಳು ಈ ಮಹಾ ರೋಗಕ್ಕೆ, ಸೋಂಕಿಗೆ ತುತ್ತಾಗಿವೆ. ಏಡ್ಸ್ ರೋಗದ ನಿರ್ಮೂಲನೆಗಾಗಿ ಪರಿಣಾಮಕಾರಿ ಔಷಧಿ ಸಂಶೋಧಿಸಬೇಕು. 'ಕ್ಲೋನಿಂಗ್' ತಂತ್ರಜ್ಞಾನದಿಂದ ತದ್ರೂಪಿ ಜೀವಿಗಳನ್ನು ಸೃಷ್ಟಿಸುವ ವಿಜ್ಞಾನಿಗಳಿಂದ ಏಡ್ಸ್‌ಗೆ ಉತ್ತಮ ಔಷಧಿ ಕಂಡು ಹಿಡಿಯುವುದು ಕಠಿಣವಲ್ಲ.

ಕ್ವಿಜ್: ಹೆಸರು ಪ್ರಕಟಿಸಿ

-ಕೆ. ಚಂದ್ರಮೌಳಿ, ಹರಪನಹಳ್ಳಿ.

ಕ್ವಿಜ್‌ನಲ್ಲಿ ಭಾಗವಹಿಸಿ ವಿಜೇತರಾದವರಿಗೆ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ಕೊಡುವುದು ಸಮಂಜಸ. ಆದಾಗ್ಯೂ ಬಹಳಷ್ಟು ಜನ ಸ್ಪರ್ಧಾಳುಗಳು ಕ್ವಿಜ್‌ನಲ್ಲಿ ಸರಿ ಉತ್ತರ ಬರೆದಿರುತ್ತಾರೆ. ನೀವು ಲಾಟರಿ ಮೂಲಕ ವಿಜೇತರನ್ನು ಆಯ್ಕೆ ಮಾಡುವುದರಿಂದ ಸರಿಯುತ್ತರ ಬರೆದು ಆಯ್ಕೆಯಾಗದವರಿಗೆ ಬೇಸರವೆನಿಸುತ್ತದೆ.

ಕಾರಣ ಕ್ವಿಜ್‌ನಲ್ಲಿ ಸರಿಯುತ್ತರ ಬರೆದ ಇತರರ ಹೆಸರನ್ನು ಪ್ರಕಟಿಸಬೇಕು ಹಾಗೂ

ಟಪಾಲು

ಪದಬಂಧಕ್ಕೂ ಪುಸ್ತಕ ಬಹುಮಾನವಿಟ್ಟರೆ ಮೆದುಳಿಗೆ ಜ್ಞಾನ ನೀಡಿದ ಶ್ಲಾಘನೆಗೆ ಬದುಕು ಪಾತ್ರವಾಗುತ್ತದೆ.

ಕವನಗಳಿಗೆ ಆಹ್ವಾನ

ಅನನ್ಯ ಪ್ರಕಾಶನದಡಿಯಲ್ಲಿ ರಾಜ್ಯಮಟ್ಟದ ಕವನಸಂಕಲನವನ್ನು ಹೊರತರಲು ನಿರ್ಣಯಿಸಿದ್ದು, ರಾಜ್ಯದ ಕವಿ - ಕವಿಯತ್ರಿಯರು ತಮ್ಮ ಸ್ವರಚಿತ 2 ಕವನಗಳನ್ನು ಕಳಿಸಲು ಕೋರಲಾಗಿದೆ. ಸಹಕಾರ ತತ್ವದಡಿ ಹೊರತರುವುದರಿಂದ ಆಯ್ಕೆಯಾದ ಕವಿ ಕವಿಯತ್ರಿಯರು ರೂ. 30.00 ಶುಲ್ಕವನ್ನು ಕಳಿಸಬೇಕು ಕವನ ಸಂಕಲನದ ಬಿಡುಗಡೆಯ ದಿನಾಂಕವನ್ನು ಮುದ್ರಣ ಮುಗಿದ ನಂತರ ತಿಳಿಸಲಾಗುವುದು. ಸಂಪರ್ಕಿಸುವ ವಿಳಾಸ:

ಅಕ್ಬರ ಸಿ. ಕಾಲಿಮಿರ್ಚಿ
ರಾಜ್ಯ ಯುವ ಪ್ರಶಸ್ತಿ ವಿಜೇತರು,
ಕಾಲಿಮಿರ್ಚಿ ಮೆಡಿಕಲ್ ಸ್ಟೋರ್ಸ್
ಸಾಲಾರ ಜಂಗ ರಸ್ತೆ, ಕೊಪ್ಪಳ - 583 231

ಸಮಾಜದ ಕಣ್ಣು ತೆರೆಸಲಿ

-ಲಕ್ಷ್ಮೀಕಾಂತ ಕೊಂಪಲ್, ಲಿಂಗಸುಗೂರು.

'ಅಂಜನಾ ಮಿಶ್ರಾ'ಳ ರೇಪ್ ಕಥೆ (ಮಾರ್ಚ್ 99) 'ವಿಶ್ವ ಮಹಿಳಾ ದಿನ'ದ ಸಂದರ್ಭದಲ್ಲಿ ಸಮಾಜದ ಕಣ್ಣು ತೆರೆಸುವಲ್ಲಿ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ಕಂಡವರಾರು?

- ರಾಜೇಶ್. ಎಲ್. ಅದ್ದಡ.

ಮಾರ್ಚ್ 1999ರ 'ಬಿಸಿಲ ಬದುಕು' ಸಂಚಿಕೆ ಆಕರ್ಷಕವಾಗಿ ಬಂದು ನಮ್ಮ ರಂಜಿಸಿದೆ. 'ಅಂಜನಾ ಮಿಶ್ರಾ'ರವರ ಕರುಣಾಜನಕ ಕಥೆ ಓದಿ ದುಃಖವಾಯಿತು. ನಮ್ಮ ದೇಶ ಇನ್ನೂ ಎಂತಹ ಗಂಡಾಂತರವನ್ನು ಅನುಭವಿಸಲಿಕ್ಕೆ ಇದೆಯೋ ಎಣಿಸಿದರೆ ಭಯವಾಗುತ್ತದೆ. ಇದೊಂದೆ ಪ್ರಕರಣವಲ್ಲ, ಮುಚ್ಚಿ ಹಾಕಿದ ಪ್ರಕರಣ ಎಷ್ಟಿವೆಯೋ ಕಂಡವರಾರು? ಅಂಜನಾ ಮಿಶ್ರಾರ ಬಗ್ಗೆ ತಿಳಿಸಿದ್ದಕ್ಕೆ ಧನ್ಯವಾದಗಳು.

ಶಿಕ್ಷೆಯಾಗಲಿ

- ಶಾರದಾ, ಇಲಕಲ್ಲ

'ಅಂಜನಾ ಮಿಶ್ರಾ' ರವರ ಕರುಣಾಜನಕ ಕಥೆಯನ್ನು ಓದಿ ಮನಸ್ಸಿಗೆ ತುಂಬಾ ವೇದನೆಯಾಗುತ್ತಿದೆ. ಅಂಜನಾರವರ ಹೋರಾಟದಲ್ಲಿ ಜಯ ದೊರೆಯಲು ಅವರಿಗೆ ಅಡ್ಡವಾಗಿರುವ ದುಷ್ಟ ಶಕ್ತಿಗಳಿಗೆಲ್ಲಾ ಶಿಕ್ಷೆಯಾಗಿ ಅಂಜನಾರವರ ಬಾಳಿನಲ್ಲಿ ಆದಷ್ಟು ಬೇಗನೆ ಶಾಂತಿ ನೆಮ್ಮದಿಗಳು ನೆಲೆಸಲೆಂದು ಪ್ರಾರ್ಥಿಸಿಕೊಳ್ಳುವೆ.

ನಿಲ್ಲಿಸಬೇಡಿ

-ಪಿ.ಎಚ್. ದಯಾನಂದ, ಹೊನ್ನಾವರ.

ತಮ್ಮ ಪತ್ರಿಕೆಯಲ್ಲಿ ಮೂಡಿ ಬರುವ 'ವಯಸ್ಕರ ಮತ್ತು ಆಪ್ತ ಸಮಾಲೋಚನೆ' ವಿಭಾಗವು ಲಕ್ಷಾಂತರ ಓದುಗರಿಗೆ ಪ್ರಯೋಜನವಾಗುವುದರಿಂದ ಅದನ್ನು ದಯವಿಟ್ಟು ನಿಲ್ಲಿಸಬೇಡಿ.

ವಾರಪತ್ರಿಕೆ ಮಾಡಿ

- ಚಂದ್ರಶೇಖರ ಗೌಡ, ಮೋರಟಗಿ.

'ಬದುಕು' ಪತ್ರಿಕೆ ಜನಮನ್ನಣೆ ಪಡೆಯುತ್ತಿರುವುದು. ಆದರೆ ಒಂದು ತಿಂಗಳವರೆಗೆ 'ಬದುಕು' ಗೋಸ್ಕರ ಕಾತರದಿಂದ ಕಾಯುವುದು ಸಾಧ್ಯವಾಗುತ್ತಿಲ್ಲ. ದಯಮಾಡಿ 'ಬದುಕು' ಪತ್ರಿಕೆಯನ್ನು ವಾರಪತ್ರಿಕೆಯನ್ನಾಗಿ ಮಾಡಿ ಇಲ್ಲವೆ 15 ದಿನದ ಪತ್ರಿಕೆಯನ್ನಾದರು ಮಾಡಿ. (ಇದು out look ತರಹ ಮೂಡಿ ಬರುತ್ತಿದೆ)

ಉತ್ತಮ ಲೇಖನ

-ಹುಸೇನಪ್ಪ ಮುಂಡರಗಿ, ಕಸಬಾ.

ಆಕರ್ಷಕ ಮುಖ ಪುಟ ಹೊಂದಿದ್ದ ಮಾರ್ಚ್ ತಿಂಗಳ 'ಬಿಸಿಲ ಬದುಕು' ಪತ್ರಿಕೆಯು 'ತೆರಿಗೆ ಉಳಿಸುವ ಉಪಾಯ' ಎಂಬ ಸೂಕ್ತ ಲೇಖನ, ವಿಕೆಟ್ ವೀರ ಅನಿಲ್ ಕುಂಬ್ಳೆಯ ಸಾಧನೆಯ ಅಂಕಿ ಅಂಶಗಳ ವಿವರ ಮತ್ತು ಅಂಜನಾ ಮಿಶ್ರಾ ಪ್ರಕರಣದಂತಹ ಉತ್ತಮ ಲೇಖನಗಳಿಂದ ಕೂಡಿದ್ದು ಕನ್ನಡದ ಮಾಸಪತ್ರಿಕೆಗಳಲ್ಲಿ ಮೈಲಿಗಲ್ಲಾಗುವ ಮುನ್ಸೂಚನೆ ನೀಡಿದೆ.

ಅರ್ಥ - ಅಪಾರ್ಥ

ಯುವಕರಾದ ಹೆಚ್ಚು ಜನ **ವೈದುನರೊಂದಿಗೆ** ಒಂದೇ ಮನೆಯಲ್ಲಿ ಕೂಡಿ ಇರುವುದು ಸ್ತ್ರೀಗೆ ಒಳ್ಳೆಯದಲ್ಲ.
[**ಸ್ಫೂರ್ತಿ** ಮಾಸ ಪತ್ರಿಕೆ, ಜನೆವರಿ 1999] -ಪ್ರವೀಣ ಆರ್.ಶಿಂಧೆ, ಧಾರವಾಡ.

ಪೋಲಿಸ್‌ನ ಸೋಗಿನಲ್ಲಿ ಹತ್ತಾರು ವರ್ಷ ಉಚಿತ ಬಸ್ ಪ್ರಯಾಣ ಮಾಡಿದ **ಭೂಪ.**
[**ಮಧುರವಾಣಿ,** 22. 12.98] **- ಹಣಮಂತಪ್ಪ ಸೇಡಂಕರ್,** ಗುರುಮಿಠಕಲ್.

ಇಂಥ ಅರ್ಥಪೂರ್ಣ ಜೀವನ ನಡೆಸಿದ ಅಜ್ಜನವರು **1976** ರಲ್ಲಿ ಲಿಂಗದಲ್ಲಿ ಬೆರೆತರು.
[**ಸಂಯುಕ್ತ ಕರ್ನಾಟಕ,** 22. 1.99] **-ಶ್ರೀಶೈಲ,** ಮುದ್ದೇಬಿಹಾಳ.

ಉಪಯೋನ್ಮುಖ ಅಥ್ಲೀಟ್: ಚಿತ್ರಾ ಪುರಾಣಿಕ
[**ಪ್ರಜಾವಾಣಿ,** ಕ್ರೀಡೆ ವಿಭಾಗ, 8.3.99] **-ಹನುಮಂತರಾವ್** ಎಂ.ಭಜಂತ್ರಿ, ತುಳಸಿಗೇರಿ.

ಚಂದ್ರಕಾಂತ ಬೆಲ್ಲದ ಅವರು ವಜ್ರ ಪರಂಗಿನಿ ಪುಸ್ತಕವನ್ನು ಬಿಡುಗಡೆ**ಗೋಳಿ**ಸಿದರು.
[**ಸಂಜೆವಾಣಿ,** 21.2.99] **- ಶ್ರೀಕಾಂತ ಎನ್.ಪೂಜಾರ,** ಮೂಡಲಗೇರಿ.

1960ರ ದಶಕದ **ಮಧ್ಯ**ದಲ್ಲಿ ಕಂಪನಿಗಳು ಸಕ್ಕರೆ ರಹಿತ ಚ್ಯೂಯಿಂಗ್ ಗಮ್ ತಯಾರಿಸ ತೊಡಗಿದವು.
[**ಸುಧಾ,** 21.2.99] **- ಯಶೋಧ** ಪಿ.ವೈ, ಕೂಡ್ಲಿಗಿ.

ಕನಕಪುರದಲ್ಲಿ ಶುಕ್ರವಾರ ಆರಂಭವಾದ ಅಖಿಲ **ಕನ್ನ** ಸಾಹಿತ್ಯ ಸಮ್ಮೇಳನವನ್ನು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಉದ್ಘಾಟಿಸಿದರು.
[**ಪ್ರಜಾವಾಣಿ,** 27.2.99] **- ಮುತ್ತುರಾಜ** ನಿಂ.ಚಲವಾದಿ, ತಂಗಡಗಿ.

ರೂಪಿಣಿ ಪ್ರಕರಣ

ಮೂರು ದಾರಿ ಯಾರು ಸರಿ?

ಸಾಂಪ್ರದಾಯಿಕ ಪತ್ರಿಕೋದ್ಯಮದ ಏಕತಾನತೆಯನ್ನು ಮುರಿದು ನಿಲ್ಲುವ ಟ್ಯಾಬ್ಲಾಯ್ಡ್ ಪತ್ರಿಕೆಗಳು ಶರವೇಗದಲ್ಲಿ ಜನರನ್ನು ತಲುಪುತ್ತವೆ. ಈ ಕಾರಣಕ್ಕಾಗಿಯೇ ಇಂಥ ಪತ್ರಿಕೆಗಳಿಗೆ ಹೊಣೆಗಾರಿಕೆ ಹೆಚ್ಚು. ಆದರೆ ವಾಸ್ತವದಲ್ಲಿ ಆಗುತ್ತಿರುವುದೇನು? ಇತ್ತೀಚಿನ ರೂಪಿಣಿ ಪ್ರಕರಣದ ಹಿನ್ನೆಲೆಯಲ್ಲಿ ಪ್ರಚಲಿತ ಟ್ಯಾಬ್ಲಾಯ್ಡ್ ಪತ್ರಿಕೋದ್ಯಮವನ್ನು ನಿಷ್ಪಕ್ಷಪಾತವಾಗಿ ನಿಕಷಕ್ಕೊಡ್ಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಪ್ರಜ್ಞಾವಂತ ಓದುಗರ ಮೇಲೆ ತಮ್ಮ ಓದಿನ ಆಯ್ಕೆ ಮಾಡಿಕೊಳ್ಳುವ ಗುರುತರ ಜವಾಬ್ದಾರಿ ಎಂದಿಗಿಂತ ಹೆಚ್ಚಾಗಿರುವುದನ್ನು ಇದು ಸೂಚಿಸುತ್ತದೆ.

■ ಮಾಧವ ಐತಾಳ್

ದಾರಿ ಒಂದು:

ಮಾರ್ಚ್ 24ರ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ 'ರೂಪಿಣಿ ಮತ್ತು ಏಡ್ಸ್ ಪತ್ರಕರ್ತ' ಲೇಖನದಲ್ಲಿ ವ್ಯಕ್ತವಾದ ಅಂಶಗಳಿವು:



● ರೂಪಿಣಿಯ ಸಾವನ್ನು ಮೊದಲು 18ನೇ ಪುಟದ ಸಣ್ಣ ಸುದ್ದಿಯಾಗಿ ಬರೆದದ್ದು ಶೆಣೈ. ಸಾವಿನ ಬಗ್ಗೆ ಹೇಳಿದ್ದು ಜೈಜಗದೀಶ್. ಅದರಲ್ಲಿ ಹೀಯಾಳಿಕೆ ಅಥವಾ ಅಪಪ್ರಚಾರದ ಸಣ್ಣತನವಿರಲಿಲ್ಲ. ಶೆಣೈ ಪ್ರಕಾರ ಅವರ ಬರಹ ರಂಜಿತ, ವೈಭವೀಕರಣದ ಬರಹವಲ್ಲ, ಬರೀ ಅನುಮಾನದ ಗಾಳಿ ಸುದ್ದಿ.

● ಪತ್ರಕರ್ತನೊಬ್ಬ ಬೇರೆ ಹೆಸರನ್ನು ಬಳಸುವುದು 'ತನಿಖಾ ಪತ್ರಿಕೋದ್ಯಮ'ದಲ್ಲಿ ಅನಿವಾರ್ಯ. ಆದರೆ ಸಿನೆಮಾ ನಟಿಯೊಬ್ಬಳ ಸಂದರ್ಶನಕ್ಕಾಗಿ, ಭೂಗತ ಜಗತ್ತಿನ ದೊರೆಗಳು ತನ್ನ ಜೇಬಿನಲ್ಲಿದ್ದಾರೆ ಎನ್ನುವ ಮನುಷ್ಯ, ಬೋಗಸ್ ಹೆಸರು ನೀಡಿದ್ದು ತಲೆತಗ್ಗಿಸುವಂತಹದ್ದು.

● ರೂಪಿಣಿಯನ್ನು ಇಂಡಿಯನ್ ಎಕ್ಸ್‌ಪ್ರೆಸ್‌ನ ರಂಗನಾಥ್ ಹೆಸರಿನಲ್ಲಿ ಸಂದರ್ಶನ ಮಾಡಿದ್ದು ಆಕೆ ಚಪ್ಪಲಿಯಲ್ಲಿ ಹೊಡೆಯುತ್ತಾಳೆ ಎಂದು.

● ಸುದ್ದಿ ಮೂಲದ ರಕ್ಷಣೆ ಪತ್ರಿಕೋದ್ಯಮದ ಧರ್ಮ. ಇಲ್ಲಿ ಸುದ್ದಿ ನೀಡಿದಾತನ ಕತ್ತು ಹಿಚುಕುವ ಪ್ರಯತ್ನ ನಡೆಯಿತು.

● ನಮ್ಮ ಪತ್ರಿಕೆಯ ಸಣ್ಣ ಸುದ್ದಿ, ಆ ಪತ್ರಿಕೆಯ ಮುಂದಿನ ವಾರದ ಪ್ರಮುಖ ಸುದ್ದಿಯಾದದ್ದು ವಿಪರ್ಯಾಸ.

ದಾರಿ ಎರಡು:

ಶ್ರೀಧರ್ ಸಂಪಾದಕತ್ವದ 'ಅಗ್ನಿ' ಗಾಗಿ ಪ್ರತಿಭಾ ನಂದಕುಮಾರ್ ಮಾಡಿದ ರೂಪಿಣಿ ಸಂದರ್ಶನ-ಲೇಖನದ ತಾತ್ಪರ್ಯ ಹೀಗಿದೆ:

ಕವಲು 1 :

● ರೂಪಿಣಿಯ ಸಾವಿನ ಬಗ್ಗೆ ಮೊದಲು ಪ್ರಕಟವಾದದ್ದು ತಮಿಳಿನಲ್ಲಿ. ರೂಪಿಣಿ ನನಗೆ (ಪ್ರತಿಭಾಗೆ) ಮದರಾಸಿನಲ್ಲಿ ಪರಿಚಿತಳು.

● ರೂಪಿಣಿ ಹೇಳಿದ್ದು - ಕನಕ ಸಿಕ್ಕಿಲ್ಲ, ಅತುಲ್ ತಿವಾರಿ ಸಿಕ್ಕಿದ್ದರು.

● ಪತ್ರಿಕೋದ್ಯಮದ ಧೋರಣೆ ಬಗ್ಗೆ ಮಾತನ್ನಾಡುವವರು ತಮಗದನ್ನು ಅನ್ವಯಿಸಿಕೊಳ್ಳುವುದಿಲ್ಲ.

● ಈ ಪತ್ರಿಕೆಗಳಿಗೆ ಮನುಷ್ಯ ಸುದ್ದಿಯಾಗುತ್ತಾನೆ, ಭಾವನೆ ತುಂಬಿದ ಜೀವವಾಗಿ ಕಾಣುವುದಿಲ್ಲ. ರೋಮಾಂಚನ ಹುಟ್ಟಿಸಿ ಬರೆಯುವ ಪತ್ರಿಕೆಗಳು ಹೆಚ್ಚುತ್ತಿವೆ. ಈ ಪತ್ರಿಕೆಗಳು ಓದುಗರ ಆಲೋಚನೆಗಳಿಗೆ ಮಿತಿಯನ್ನು ಹೇರಿಬಿಟ್ಟಿವೆ.

● ರೂಪಿಣಿ ಹೇಳಿದಳು - ಮುಂಬೈನ ಮನೆಯಲ್ಲಿ ಯಾರೂ ಫೋನೆತ್ತಲಿಲ್ಲ ಎಂದ ಮಾತ್ರಕ್ಕೆ ನಾನು ಸತ್ತಿದ್ದೇನೆ ಎಂದರ್ಥವಾ?

ಕವಲು 2:

● ರೂಪಿಣಿ ನಮ್ಮ ಕಚೇರಿಗೆ ಶನಿವಾರ ಬಂದಾಗ 'ರಂಗನಾಥ್ ಅವರನ್ನು ಹುಡುಕಿಕೊಂಡು ಬಂದಿದ್ದೇನೆ' ಎಂದಿದ್ದಳು. 'ಆತ ನನ್ನ ಎದುರು ರಂಗನಾಥನಾಗಿ ನಿಂತಿದ್ದ. ಆತ ನನ್ನ ಕ್ಷಮೆ ಕೇಳಿಲ್ಲ, ಓದುಗರ ಕ್ಷಮೆ ಕೇಳಿದ್ದಾನೆ' ಎಂದಳು.


● ಆ 'ಪತ್ರಕರ್ತ' ಫೋಟೋಗಳನ್ನು ತೆಗೆದುಕೊಂಡು ಹೋಗಿ 'ಈಕೆ ಯಾರು ಗೊತ್ತೇ' ಎಂದು ಕೇಳಿದ್ದ. ಆತ ತೋರಿಸಿದ್ದು ಯಾರ ಫೋಟೋಗಳನ್ನು?



● ಆ 'ಪತ್ರಕರ್ತ' ರೂಪಿಣಿಯ ವೈಯಕ್ತಿಕ ವಿಷಯಗಳನ್ನು ಕೇಳಿದನಂತೆ, ಗ್ಲೂರ್ಖಾ ಬಳಿ ಗುಟ್ಟಾಗಿ ಪ್ರಶ್ನಿಸಿದ್ದನಂತೆ, ರೂಪಿಣಿ ಆತನ ಜೊತೆ ಮುಕ್ತವಾಗಿ ಮಾತಾಡಲಿಲ್ಲವಂತೆ, ಕಾರಿನ ನಂಬರ್ ಬರೆದುಕೊಂಡಳಂತೆ.

ದಾರಿ ಮೂರು:

ಹಾಯ್ ಬೆಂಗಳೂರ್ ಪತ್ರಿಕೆಯಲ್ಲಿ ರವಿ ಬೆಳಗೆರೆ ಅವರ ಪ್ರತಿಪಾದನೆಗಳು :



ಕವಲು 1:

● ಈಗ, ಪತ್ರಿಕೆ ಅಚ್ಚಿಗೆ ಹೋಗುತ್ತಿರುವ ಕೊನೆಯ ಗಳಿಗೆಯಲ್ಲಿ ಖಚಿತಗೊಂಡಿರುವ ವರ್ತಮಾನವೆಂದರೆ, ನಟಿ ರೂಪಿಣಿ ಮುಂಬಯಿಯ ಆಸ್ಪತ್ರೆಯಲ್ಲಿ ಸುದೀರ್ಘ ಖಾಯಿಲೆಯ ನಂತರ ತೀರಿಕೊಂಡಿದ್ದಾರೆ. ಮತ್ತು ಆಕೆಗೆ ಏಡ್ಸ್ ಸೋಂಕಿತ್ತು!

ಕವಲು 2:

'ನಾನು ನೋಡಿ ಬಂದ ರೂಪಿಣಿ'

● ಪತ್ರಕರ್ತ - ಕರ್ತೆಯರ ಹಲುಬಾಟಕ್ಕೆ ತೆರೆ ಹಾಕೋಣ ಎಂದು ಮುಂಬೈಗೆ ಹೋದೆ. ಜೀವಮಾನದಲ್ಲಿ ಮೊದಲ ಬಾರಿಗೆ ನನಗಿಂತ ಚಿಕ್ಕವಳ ಎದುರಿಗೆ ತಪ್ಪಿತಸ್ಥನಂತೆ ನಿಂತಿದ್ದೆ.

● ರೂಪಿಣಿ ಸಾವಿನ ಬಗ್ಗೆ ಹಿಂಡುಗಟ್ಟಳೆ ಪತ್ರಕರ್ತರ ಎದುರು ಜೈ ಜಗದೀಶ್ ಗಂಟೆಗಟ್ಟಳೆ ಹೇಳಿದ್ದ. ತನ್ನ ಪ್ಲೇಬಾಯ್ ಪ್ರವೃತ್ತಿಯ ಬಗ್ಗೆ, ರಾಜೇಂದ್ರಸಿಂಗ್ ಬಾಬುವಿನ ಎರಡನೇ ಮದುವೆ ಬಗ್ಗೆ ಹೇಳಿದ್ದೂ ಆ ದಿನವೇ.

● ಶೆಣೈ ಮಂಗಳವಾರ ರೂಪಿಣಿ ಸಾವಿನ ಬಗ್ಗೆ ಬರೆದ ನಂತರ ನಮ್ಮ ಆಫೀಸಿಗೆ ಅಸಂಖ್ಯಾತ ಫೋನ್ ಬಂದವು. ನಾನೇ ವಿಚಾರಿಸಿ ಬರೆಯುವ ಬದಲು ಸಿನೆಮಾ ವರದಿಗಾರನಿಗೆ ಹೇಳಿದೆ. ಮದ್ರಾಸಿನ ಮನೆ ಖಾಲಿ ಮಾಡಿ ಮುಂಬಯಿಗೆ ಹೋಗಿದ್ದ ರೂಪಿಣಿಯ ಮನೆ 'ಲೀಲಾವತಿ ಆಸ್ಪತ್ರೆ'ಯ ಬಳಿ ಇದೆ ಎಂದಿದ್ದನ್ನು ವರದಿಗಾರ ತಪ್ಪಾಗಿ ಅರ್ಥೈಸಿದ್ದಾನೆ. ಮುಂಬೈ ಮನೆಯಲ್ಲಿ ಯಾರೂ ಫೋನ್ ಎತ್ತಿಲ್ಲ. ಎಲ್ಲವೂ ನಿಗೂಢವಾಗಿದೆ.

● 178 ವಾರಗಳ ಕಾಲ ನಿಖರವಾಗಿ, ಸೂಕ್ತ ಸಾಕ್ಷ್ಯಗಳಿಲ್ಲದೆ ಪತ್ರಿಕೆಯನ್ನು ಎಂದೂ ಪ್ರಿಂಟಿಗೆ ಕಳಿಸದಿದ್ದ ನಾನು ಯಾಮಾರಿಬಿಟ್ಟೆ. ಮುಂಬೈಗೆ ಹೋಗಿ ಬಂದು ಎಲ್ಲ ವಿವರ ಮುಂದಿರಿಸಿದ್ದೇನೆ. ಕ್ಷಮಿಸಬೇಕೆಂಬ ವಿನಂತಿಯನ್ನು ಕೂಡಾ.

● ಆ 'ಪತ್ರಕರ್ತೆ' ತನಗೆ ಗೊತ್ತೇ ಇಲ್ಲ ಎಂದಳು ರೂಪಿಣಿ.

ಕವಲು 3:

'ಪಂಟರುಗಳ ಪಲ್ಲವಿ'

● 3 1/2 ವರ್ಷಗಳ ಅವಧಿಯಲ್ಲಿ ಕನ್ನಡ ಟ್ಯಾಬ್ಲಾಯ್ಡ್ ಪತ್ರಿಕೋದ್ಯಮಕ್ಕೆ ಹೊಸ ವೇಗ ಕಲ್ಪಿಸಿಕೊಟ್ಟ ಹುಡುಗನ ವಿರುದ್ಧ ಮುದಿ ಪಂಟರುಗಳ ಪಲ್ಲವಿ.

● ರೂಪಿಣಿ ಸಾವಿನ ಬಗ್ಗೆ ಹೇಳಿದಾತ ಜೈಜಗದೀಶ್. ಪ್ರಕಟಿಸಿ ಕ್ರೆಡಿಟ್ ಪಡೆದವ ಲಂಕೇಶ್ ಪತ್ರಿಕೆಯ ಶೆಣೈ, ನಂತರ ಸಂದರ್ಶಿಸಿ ಲೇಖನ ಪ್ರಕಟಿಸಿ ಕ್ಷಮೆ ಕೇಳಿದ್ದೇನೆ.

● ರೂಪಿಣಿ ಜೊತೆ ಮಾತಾಡಿದ್ದೇನೆ ಎನ್ನುವ ಪತ್ರಕರ್ತ-ಕರ್ತೆಯರು ಸುಮ್ಮನಿದ್ದರು. ಈ ನೇರ ನಡಾವಳಿ ಯಾರೂ ನಿರೀಕ್ಷಿಸಿರಲಿಲ್ಲ, ಲಂಕೇಶ್‌ನ ಶೆಣೈ ಫೋನ್ ಮಾಡಿ 'ಅದ್ಭುತ ಕೆಲಸ ಮಾಡಿದ್ದೀರಿ' ಎಂದರು.

● 'ರವಿ ನಿನ್ನ ಬಗ್ಗೆ ಇಲ್ಲಸಲ್ಲದ್ದು ಬರೆದಿದ್ದಾನೆ' ಎಂದು ಇಲ್ಲಿಗೆ ರೂಪಿಣಿಯನ್ನು ಕರೆಸಿ, 2ನೇ ವರದಿಯನ್ನು ತಪ್ಪಾಗಿ ತಿರುಚಿ ಹೇಳಿ ರೂಪಿಣಿಯಿಂದ "I am not a ghost' ಎನ್ನಿಸಿದರು.

● 'ರಂಗನಾಥ್' ಎಂಬ ಹೆಸರಿನಲ್ಲಿ ಹೋಗಿದ್ದೆ ಎಂದು ರೇಖಾರಾಣಿ, ಮುಖಹೀನ ಪತ್ರಕರ್ತೆ ಪತ್ರಿಕಾ ಗೋಷ್ಠಿಯಲ್ಲಿ ಹೇಳತೊಡಗಿದರು. 'ನಾನು ಬರೆದಿದ್ದರಲ್ಲಿ ತಪ್ಪಿಲ್ಲ ಎಂದವರನ್ನು ಬಾಯಿ ಮುಚ್ಚಿಸಲಾಯ್ತು.

● ವಿಡಿಯೋಟೇಪ್‌ನಲ್ಲಿ ನಾನು 'ರವಿ' ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ರೂಪಿಣಿ, ನನ್ನ ವೀರೇಶನ ವಿಮಾನದ ಟಿಕೆಟ್ ನೋಡಿದ್ದಾಳೆ. ನನ್ನ ಲೇಖನದಲ್ಲಿ ರೂಪಿಣಿ ಬಗ್ಗೆ ಒಂದೇ ಒಂದು ಅಪಸ್ವರವಿಲ್ಲ.

● ಜೈ ಜಗದೀಶ್ ಹೇಳಿದ್ದನ್ನು ನನಗೆ ಹೇಳಿದ್ದು ವೀರೇಶ್ ಮಾತ್ರವಲ್ಲ, ಸದಾಶಿವ ಶೆಣೈ ಕೂಡಾ. ಆತನೇ 'ಪತ್ರಿಕೆಯಲ್ಲಿ ಈ ಬಗ್ಗೆ ಬರೆಯುತ್ತಿದ್ದಾರೆ, ನಾನೂ ಬರೆಯಬೇಕು. ಇಲ್ಲದಿದ್ದರೆ ಬ್ರಾಹ್ಮಣ ಅಂತ ಬ್ರಾಂಡ್ ಮಾಡ್ತಾರೆ' ಎಂದು ಹಲುಬಿದ. ಮೊದಲು ಬರೆದಾತನೇ ನನಗೆ ಪತ್ರಿಕೋದ್ಯಮದ ನೀತಿಯನ್ನು ಹೇಳಿಕೊಡ್ತಿದ್ದಾನೆ.

● ಕಲ್ಲೆಸೆಯ ಬಯಸುತ್ತಿರುವ ತೋಳಗಳೇ ಹಳ್ಳದಲ್ಲಿವೆ ಮತ್ತು ತಾವು ತೋಳಗಳೆಂದು ಅವಕ್ಕೆ ಗೊತ್ತಿದೆ.

● ಕಾನ್ಸ್‌ಪಿರೆಸಿಗಳ ಪತ್ರಿಕೋದ್ಯಮ, ಇವರ ಆತ್ಮ ಪ್ರಶಂಸೆ, ಪರನಿಂದೆ ಇವುಗಳ ನಡುವೆಯೇ ಕಾಯಕ ಮುಂದುವರಿಸಬೇಕು.

● ಓದುಗರಿಗೆ ಗೊತ್ತಿದೆ. 'ಈ ಮನುಷ್ಯ ಬೇಕಿದ್ದರೆ ಮುರಿದುಹೋಗಬಲ್ಲ, ಆದರೆ ಬಗ್ಗಲಾರ. ಈ ಮನುಷ್ಯ ತಪ್ಪು ಮಾಡಿಯಾನು, ಆದರೆ ಒಪ್ಪಿಕೊಳ್ಳದೆ ಇರಲಾರ.'

● ಕರ್ನಾಟಕ-ಬೆಂಗಳೂರಿನ ಸ್ವಾಸ್ಥ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಪಾರದರ್ಶಕ ಪತ್ರಿಕೋದ್ಯಮ ಕೈಗೆತ್ತಿಕೊಂಡವನು ನಾನು. ಓದುಗರೆಡೆಗೊಂದು ಪ್ರಶ್ನಾತೀತ ಪ್ರಾಮಾಣಿಕತೆ, ಸತ್ಯದೆಡೆಗೆ ತೆರೆದ ಕಣ್ಣು ಮತ್ತು ಸಂಪೂರ್ಣವಾದ ಪಾರದರ್ಶಕ ವ್ಯಕ್ತಿತ್ವ ಇಷ್ಟನ್ನು ಮೈಗೂಡಿಸಿಕೊಂಡರೆ ಶತ್ರು ಭಯದ್ದೊಂದು ಲೆಕ್ಕವೇ ಅಲ್ಲ.



ಸಮರ್ಥ ಕಥೆಗಾರರ..... ಟ್ಯಾಬ್ಲಾಯ್ಡ್‌ಗಳು!



'ಲಂಕೇಶ್' ಮತ್ತು 'ಹಾಯ್' ಪತ್ರಿಕೆಗಳ ಧೋರಣೆಯನ್ನು ಸಾರಾಸಗಟು ಒಪ್ಪಿ ಆರಾಧಿಸುವವರು ಸಿಗುವಂತೆ ಈ ಪತ್ರಿಕೆಗಳ ನೆರಳು ಕಂಡರೂ ಉರಿದು ಬೀಳುವವರು ಸಾಕಷ್ಟಿದ್ದಾರೆ. ಆದರೆ ಈ ಎರಡೂ ಪತ್ರಿಕೆಗಳು ಅಪಾರ ಸಂಖ್ಯೆಯ ಓದುಗರ ಮೇಲೆ ಬೀರಿರುವ ಪ್ರಭಾವ ಹಾಗೂ ಸಾಧಿಸಿರುವ ಹಿಡಿತವನ್ನು ಅಲ್ಲಗಳೆಯಲು ಯಾರಿಂದಲೂ ಸಾಧ್ಯವಿಲ್ಲ.



● ಲಂಕೇಶ್ 'ಪತ್ರಿಕೆ'ಯನ್ನು ಪ್ರಾರಂಭಿಸಿದಾಗ ಪತ್ರಿಕೋದ್ಯಮ ಹಾಗೂ ಸಾಂಸ್ಕೃತಿಕ ಕ್ಷೇತ್ರವನ್ನು ಶೂನ್ಯವೊಂದು ಆವರಿಸಿಬಿಟ್ಟಿತ್ತು. ಆದರ್ಶಗಳೆಲ್ಲ ಹಳಸಿಹೋಗಿದ್ದವು. ಲೋಹಿಯಾ, ಜೆಪಿ ಹುಟ್ಟು ಹಾಕಿದ ಅಲೆ ಎಲ್ಲೆಡೆ ಹರಡಿತ್ತು. ಈಗ 60ರ ಆಜೂಬಾಜಿನಲ್ಲಿರುವ ಬಹುಪಾಲು ಸಾಹಿತಿ-ರಾಜಕಾರಣಿಗಳ ಅಭಿವ್ಯಕ್ತಿಗೊಂದು ಹೊಸಮಾರ್ಗ ಬೇಕಿತ್ತು. 'ಪತ್ರಿಕೆ' ಜನಪ್ರಿಯವಾಗಲು ಗಿಮಿಕ್ಸ್‌ಗಳನ್ನು, ಗಾಸಿಪ್‌ಗಳನ್ನು ಯಥೇಚ್ಛವಾಗಿ ಬಳಸಿದೆ.

● 'ಹಾಯ್' ಕೂಡಾ 'ಎಲ್ಲವೂ ತಣ್ಣಗಿದೆ' ಎಂದಿರುವಾಗ ಹುಟ್ಟಿಕೊಂಡಿದ್ದು, ಮೇಲಿನ ಸ್ತರದ ಜನರನ್ನು ಮುಟ್ಟುವುದು ಅದಕ್ಕೆ ಇಂದಿಗೂ ಸಾಧ್ಯವಾಗಿಲ್ಲ. ಪತ್ರಿಕೆಯೊಂದು ಜನಪ್ರಿಯವಾಗಲು ಬೇಕಾದ ಎಲ್ಲ ತಂತ್ರಗಳೂ ಅದರಲ್ಲಿ ಬಳಕೆಯಾಗಿವೆ. ಭಾಷೆ ಮೂಲಕ ತಲ್ಲಣಗೊಳಿಸುವ ತಂತ್ರವನ್ನು 'ಪತ್ರಿಕೆ'ಯಲ್ಲಿ ಬಳಸಿದ ಪ್ರಮಾಣಕ್ಕಿಂತ ಹೆಚ್ಚು ಪ್ರಮಾಣದಲ್ಲಿ 'ಹಾಯ್'ನಲ್ಲಿ ಬಳಕೆಯಾಗಿದೆ. 'ಹಾಯ್'ನ ಇನ್ನೊಂದು ಗುಣ - ಅತಿ ರಂಜಕತೆ, ಎಲ್ಲವನ್ನು ರಂಜನೀಯವಾಗಿ ಹೇಳುವ ಪ್ರಯತ್ನ, ಕೆಲವೊಮ್ಮೆ ಅದು ಗೀಳಾಗಿ ಬಿಟ್ಟಿದೆ.

● ಆತ್ಮ ಪ್ರಶಂಸೆ, ಕಾನ್ಸ್‌ಪಿರೆಸಿಗಳ ಪತ್ರಿಕೋದ್ಯಮ, ಪರನಿಂದೆ: ಇದು ಪ್ರಾರಂಭವಾದದ್ದು 'ಪತ್ರಿಕೆ'ಯಿಂದಲೇ. ಅದು ರಾಜಕೀಯವಿರಲಿ ಅಥವಾ ಸಾಹಿತ್ಯ ಕ್ಷೇತ್ರವಿರಲಿ, 'ಪತ್ರಿಕೆ' ಜೊತೆ ಹೊಂದಿಕೊಂಡಿದ್ದರೆ ಮಾತ್ರ ಎಲ್ಲವೂ ಸರಿ. ಡಿ.ಆರ್., ಅನಂತಮೂರ್ತಿ, ಚಂಪಾ, ತೇಜಸ್ವಿ- ಇವರೆಲ್ಲ ಮೊದಲು 'ಪತ್ರಿಕೆ'ಯ ಬಳಗದವರು. ಎಲ್ಲೋ ಪತ್ರಿಕೆಯ ಧೋರಣೆ ಸರಿ ಇಲ್ಲ ಎನ್ನಿಸಿದಾಗ ಅಥವಾ ಸ್ವಯಂ ಪ್ರತಿಷ್ಠೆಯೆ ಹೆಚ್ಚಾದಾಗ ಅವರೆಲ್ಲಾ ಸಂಗ ತೊರೆದರು. ಅಲ್ಲಿಯತನಕ 'ಶ್ರೇಷ್ಠ ಬರಹಗಾರ'ರಾಗಿದ್ದವರು ಮುಂದಿನ ಕ್ಷಣದಲ್ಲಿ 'ಖಳ'ರಾಗಿಬಿಟ್ಟರು. 'ಪತ್ರಿಕೆ'ಯು ಪುಂಖಾನುಪುಂಖನಾಗಿ ಅವರ ಬಗ್ಗೆ ಬರೆದು ಅವರೆಲ್ಲರ ತೇಜೋವಧೆ ಮಾಡಿಬಿಟ್ಟಿತು. 'ಹಾಯ್' ಇದನ್ನು ಇನ್ನಷ್ಟು ವಿಸ್ತರಿಸಿದೆ. 'ಪತ್ರಿಕೆ'ಯ ಜೊತೆ ಮುನಿಸಿಕೊಂಡವರಿಗೆ ಹೇಳಿಕೊಳ್ಳಲು ಹಾಗೂ ಬರೆಯಲು ವೇದಿಕೆ ನೀಡಿದೆ. ವಿರೋಧಿ ಅಭಿಪ್ರಾಯವನ್ನು ತೀವ್ರವಾಗಿ ಹತ್ತಿಕ್ಕುವ 'ಪತ್ರಿಕೆ'ಯ ಚಾಳಿ ಇಂದಿಗೂ ಮುಂದುವರಿದಿದೆ.

'ಹಾಯ್' 'ಆತ್ಮ ಪ್ರಶಂಸೆ, ಪರನಿಂದೆ'ಗಳ ಬಗ್ಗೆ ಬರೆದ ಲೇಖನದಲ್ಲೇ 'ನಾನು-ನಾವು-ನಮ್ಮ' ಪದಗಳು ಒಟ್ಟು 32 ಸಲ ಬಂದಿವೆ!

● ಮುಖ್ಯವಾದ ಇನ್ನೊಂದು ಅಂಶವೆಂದರೆ 'ಇವರೆಲ್ಲರೂ ಹೇಳುವುದು ಜನರಿಗೆ ಬೇಕಾದ್ದನ್ನು ನಾವು ಕೊಡುತ್ತೇವೆ' ಎಂದು. ಆದರೆ ಜನರಿಗೆ ಬೇಕಾದದ್ದೇನು ಎನ್ನುವುದನ್ನು ನಿರ್ಧರಿಸುವುದೂ ಇವರೇ.

● 'ಪತ್ರಿಕೆ' ಪ್ರಾರಂಭವಾದಾಗ ಲಂಕೇಶ್ ಸೋಲಿನ ಸರಮಾಲೆಯನ್ನು ಹೊತ್ತಿರಲಿಲ್ಲ. ಅವರು ಕೈಹಾಕಿದ ವೃತ್ತಿಯಲ್ಲೆಲ್ಲ ಯಶಸ್ಸು ಕಂಡಿದ್ದಾರೆ. ಅವರ ಬಾಲ್ಯ -ಯೌವನ ತೀವ್ರ ಬಡತನ ಹಾಗೂ ನೋವಿನಿಂದ ಕೂಡಿದ್ದಲ್ಲ. ಯಶಸ್ಸನ್ನು ಭರ್ಜರಿಯಾಗಿ ಉಂಡಿರುವ 'ಲಂಕೇಶ್'ಗೆ ಸಹಜವಾಗಿಯೇ ಅದು ಏರಿಬಿಟ್ಟಿದೆ. ರವಿ ಹಾಗಲ್ಲ. ಕಷ್ಟಪಟ್ಟು ಯಶಸ್ಸು ಗಳಿಸಿರುವ ಆತ ಟೀಕೆಯನ್ನು, ವಿಮರ್ಶೆಯನ್ನು ಸಹಿಸುವುದಿಲ್ಲ. ಟೀಕಿಸಿದವರೆಲ್ಲ ತನ್ನ ಯಶಸ್ಸನ್ನು ಕಂಡು ಕರುಬುತ್ತಿದ್ದಾರೆ ಎನ್ನುವ ಭಾವನೆ ರವಿಗೆ ಬಂದಿರುವುದು ಸಹಜವೇ. ತಾವೇ ವಿಮರ್ಶಿಸಿಕೊಂಡರೂ ಎರಡೂ ಪತ್ರಿಕೆಗಳಲ್ಲಿ ಕಂಡು ಬರುವುದು 'ಆತ್ಮರತಿ'ಯೇ. ಸಂಕ್ರಮಣದ ಸಂಪಾದಕ ಚಂಪಾ ಅವರು ಹೇಳಿದರಂತೆ 'ಸ್ವಕುಚ ಮರ್ದನಾಸಕ್ತಿ'

● ಲಂಕೇಶ್ ನಡೆಸುವ ವ್ಯಕ್ತಿಗತ ಹಲ್ಲೆಯಿಂದಾಗಿ ಕನ್ನಡದಲ್ಲಿ ಸೃಜನಶೀಲ ವಿಮರ್ಶೆ ಸತ್ತು ಹೋಗಿದೆ. ಲಂಕೇಶ್ ಬರೆದದ್ದನ್ನು ವಿಮರ್ಶಿಸುವುದಿರಲಿ, ಅವರ ಕ್ಯಾಂಪ್‌ನ ಲೇಖಕರ ಕೃತಿಗಳನ್ನು ವಿಮರ್ಶಿಸಿದರೂ ಇಕ್ಕುವಿಕೆ ತಪ್ಪಿದ್ದಲ್ಲ ಎಂಬ ಅಭಿಪ್ರಾಯ ವ್ಯಾಪಕವಾಗಿದೆ. 'ಹುಳಿ ಮಾವಿನಮರ'ದ ಬಗೆಗಿನ ಪ್ರಶಂಸೆಯನ್ನು ಮಾತ್ರ ಪುಂಖಾನುಪುಂಖವಾಗಿ ಮುದ್ರಿಸಿಕೊಂಡ ಲಂಕೇಶ್ '2 ತಿಂಗಳಲ್ಲಿ ಇಂತಿಷ್ಟು ಪ್ರತಿ ಮಾರಾಟವಾಯಿತು' ಎಂದು ಬರೆದುಕೊಂಡರೆ, ರವಿ ಅದನ್ನು ಇನ್ನಷ್ಟು ರಂಜನೀಯವಾಗಿ 'ಮಾಂಡೋವಿ ಏಕಿಷ್ಟು ಖರ್ಚಾಗುತ್ತಿದೆಯೋ ಗೊತ್ತಿಲ್ಲ' ಎಂದು ಬರೆದರು.

● ಲಂಕೇಶ್ ತಮಗಾಗದವರಿಗೆ 'ಕ್ರಿಮಿ' 'ಹುಳಾಪಾರ್ಟಿ' ಎಂದು ಬರೆಯುವುದಲ್ಲದೆ ಹೆಸರನ್ನು ಅಪಭ್ರಂಶ ಮಾಡಿ (ಉದಾ. ಚಂಪೇಶಿ)

ಏಕವಚನದಲ್ಲಿ, ವ್ಯಕ್ತಿಯ ಲಿಂಗ ಬದಲಿಸಿ ಬರೆಯುತ್ತಾರೆ. ರವಿ ಬಳಸುವುದೂ ಇದೇ ತಂತ್ರವನ್ನು (ಉದಾ. ಸೀಡ್‌ಲೆಸ್ ಸುಬ್ಬ, ಮುಖಹೀನ ಪತ್ರಕರ್ತೆ)



● ಇಬ್ಬರೂ ಅದ್ಭುತ ಕತೆಗಾರರು. ರವಿ ಅವರ 'ಪಾಪ ಹೇಳಿದ ಕತೆಗಳು' ಸಂಗ್ರಹದಲ್ಲಿ ಯಾವ ಕಥಾ ಪ್ರಕಾರಕ್ಕೂ ಗೌರವ ತಂದು ಕೊಡಬಲ್ಲ ಕತೆಗಳಿವೆ. ಇದೇ ಮಾತನ್ನು ಲಂಕೇಶ್ ಅವರ 'ಕಲ್ಲು ಕರಗುವ ಸಮಯ' ಕ್ಕೂ ಅನ್ವಯಿಸಬಹುದು. ಲಂಕೇಶ್ ಅತೀ ಸಣ್ಣ ವಿಷಯವನ್ನು ಅದ್ಭುತವಾಗಿ ಬರೆಯಬಲ್ಲರು. ರವಿ ವೈಯಕ್ತಿಕ ವಿಷಯದ ಬಗ್ಗೆ ಬರೆಯುವಾಗ ವಿಜೃಂಭಿಸುತ್ತಾರೆ. ಬೇರೆಡೆ ಸೋಲುತ್ತಾರೆ.

● ಇವರಿಬ್ಬರ ವೈಯಕ್ತಿಕ ಬದುಕು, ಬರಹ, ಎಲ್ಲವೂ 'ಓದುಗ ಮಹಾಶಯನಿಗಾಗಿ' ಮಾತ್ರ. 'ಓದುಗನೇ ದೇವರು' ಎನ್ನುವ ಭ್ರಮೆ ಹುಟ್ಟಿಸುತ್ತವೆ ಇವರ ಬರಹಗಳು. ಈ 'ಇಮೇಜ್' ಸೃಷ್ಟಿಸುವಲ್ಲಿ ರವಿ ಅದ್ವಿತೀಯರು.

● ವ್ಯಕ್ತಿಯೊಬ್ಬನ ಬಗ್ಗೆ ಬರೆಯುವಾಗ ತನಗೆ ಆತ ಆಪ್ತ ಎಂದು ಹೇಳಿಕೊಳ್ಳುವುದು ಒಂದು ರೀತಿ ದೋಷ. ಆ ಆಪ್ತತೆ ಓದುಗನಲ್ಲಿ ಸಂದೇಹವನ್ನು (ಬರಹದ ವಸ್ತುನಿಷ್ಠತೆಯ ಬಗ್ಗೆ) ಹುಟ್ಟು ಹಾಕಿ ಬಿಡುತ್ತದೆ. ಇನ್ನೊಂದೆಡೆ ಆ ಆಪ್ತತೆ 'ಆಥೆಂಟಿಕ್' ಎಂದು ಸಾಬೀತು ಮಾಡಲು ಬಳಸಿಕೊಂಡ ಗಿಮಿಕ್ ಎನ್ನಿಸಿಬಿಡುತ್ತದೆ. ಇದು ಎಲ್ಲರೂ ಬಳಸುವ ಮಾರ್ಗ, ಆದರೆ ಸರಿಯಾದದ್ದಲ್ಲ.


ಜಾರ್ಜ್ ಆರ್ವೆಲ್ ಒಂದೆಡೆ ಹೇಳಿದ್ದಾರೆ - ವ್ಯಕ್ತಿಯೊಬ್ಬ ತನ್ನ ಬಗ್ಗೆ ಬರೆಯಬೇಕೆಂದಿದ್ದಲ್ಲಿ ಪ್ಯಾಂಟನ್ನು ಕೆಳಗಿಳಿಸಬೇಕೆಂದೇನೂ ಇಲ್ಲ. ಬೇರೆಯವರನ್ನು ದೂಷಿಸದೆ, ಕೆಳಗೆ ತಳ್ಳದೆ, ವ್ಯಕ್ತಿ ತನ್ನ ಬಗ್ಗೆ ಬರೆದುಕೊಳ್ಳಬಹುದು. ಅದು ಕಷ್ಟದ ದಾರಿ, ಆದರೆ ಸತ್ಯದ ದಾರಿ.

ಪ್ರತಿಭಾಗೆ ರೂಪಿಣಿ ಗೊತ್ತಿದ್ದು, ಅದನ್ನು ಹೇಳಿಕೊಂಡದ್ದು, 'ಹಾಯ್'ನಲ್ಲಿ 'ಕ್ಲೋಜು' ಎಂದು ಟೀಕೆಗೊಳಗಾಗಿದೆ. ಪ್ರತಿಭಾ ಒಂದು ಕಾಲದಲ್ಲಿ 'ಹಾಯ್' ಗೆ ಬರೆದವರೇ. ಇಂದು 'ಮುಖಹೀನ ಪತ್ರಕರ್ತೆ' ಯಾಗಿ ಬದಲಾಗಿದ್ದಾರೆ!

● ಇನ್ನೊಂದು ವಿಷಯ - ಈ ಇಡೀ ಪ್ರಕರಣದಲ್ಲಿ ನಡೆದಿರುವುದು ವ್ಯಕ್ತಿಗತ ಹಲ್ಲೆ. 'ASNE canons of Journalism'ನಲ್ಲಿ ಒಂದು ಮಾತಿದೆ. 'ಸಂಪಾದಕೀಯದಲ್ಲಿ ಗೊತ್ತಿದ್ದೂ ಸತ್ಯಕ್ಕೆ ದೂರವಾದ ಸಂಗತಿಗಳನ್ನು ಬರೆಯುವುದು ಪತ್ರಿಕೋದ್ಯಮದ ಅತ್ಯುತ್ತಮ ತತ್ವಗಳಿಗೆ ಹಾನಿ ತರುವಂತಹದ್ದು. ಇಂತಹ ಸುಳ್ಳು ಅಂಕಣಗಳಲ್ಲಿ ನಡೆದಲ್ಲಿ ಅದು ಪತ್ರಿಕೋದ್ಯಮದ ಮೂಲಭೂತ ತತ್ವಗಳನ್ನು ತಲೆ ಕೆಳಗು ಮಾಡಿಬಿಡುತ್ತದೆ.' ಒಂದು 'ಸಣ್ಣ ಕ್ಷಮಾಪಣೆ' ಅಥವಾ ಒಂದು 'ಹೋಗಲಿ ಬಿಡು' ಇಡೀ ಪ್ರಸಂಗಕ್ಕೆ ತೆರೆ ಎಳೆದುಬಿಡುತ್ತಿತ್ತು. ಹಾಗಾಗಲಿಲ್ಲ. ವಿವಾದದಲ್ಲಿ ಸಿಲುಕಿದ ಮೂರು ಪತ್ರಿಕೆಗಳು ಈಗಾಗಲೇ ಸಾಕಷ್ಟು ನ್ಯೂಸ್‌ಪ್ರಿಂಟ್ ತಿಂದಿವೆ.

ತಮಾಷೆ ಎಂದರೆ ಈ ವಿಷಯದಲ್ಲಿ ನಾವೂ ಅವರೊಟ್ಟಿಗೆ ಸೇರಬೇಕಾಗಿ ಬಂದಿದೆ!

ಸಾಹಿತ್ಯ, ರಾಜಕೀಯ ಎರಡನ್ನು ಉಳ್ಳ ಪಾಕವೊಂದನ್ನು ಆರ್ಥಿಕವಾಗಿ ಯಶಸ್ವಿಯಾಗಿಸ



ಬಹುದು ಎಂಬುದನ್ನು ಮೊಟ್ಟ ಮೊದಲ ಬಾರಿಗೆ ಸಾಧಿಸಿ ತೋರಿಸಿದವರು ಲಂಕೇಶ್. 'ಪತ್ರಿಕೆ' ಬಂದ ನಂತರ ಅದರ ನಕಲುಗಳು ಅನೇಕ ಬಂದವು, ಅಷ್ಟೇ ವೇಗವಾಗಿ ಉದುರಿಹೋದವು.

'ಹಾಯ್' ಬಂದ ನಂತರ 'ಇಂತಹದ್ದೊಂದು ಪತ್ರಿಕೆ ಇರಲಿಲ್ಲ ಕನ್ನಡದಲ್ಲಿ' ಎಂದಾಯ್ತು. 'ಹಾಯ್'ನ ಅನೇಕ 'ಮರಿ'ಗಳು ಇಂದೂ ಮಾರುಕಟ್ಟೆಯಲ್ಲಿ ಉಳಿದುಕೊಂಡಿವೆ. ಅವು ರವಿ ಅವರ ಶೈಲಿಯನ್ನು ಯಥಾವತ್ತಾಗಿ ನಕಲು ಮಾಡುತ್ತವೆ. ಇಂಥ ಜೆರಾಕ್ಸ್ ಪತ್ರಿಕೆಗಳಿಗೆ ಹೆಚ್ಚೇನೂ ಮಹತ್ವವಿಲ್ಲ.

'ಲಂಕೇಶ್' ಮತ್ತು 'ಹಾಯ್' ಪತ್ರಿಕೆಗಳ ಧೋರಣೆಯನ್ನು ಸಾರಾಸಗಟು ಒಪ್ಪಿ ಆರಾಧಿಸುವವರು ಸಿಗುವಂತೆ ಈ ಪತ್ರಿಕೆಗಳ ನೆರಳು ಕಂಡರೂ ಉರಿದು ಬೀಳುವವರೂ ಸಾಕಷ್ಟಿದ್ದಾರೆ. ಆದರೆ ಈ ಎರಡೂ ಪತ್ರಿಕೆಗಳು ಅಪಾರ ಸಂಖ್ಯೆಯ ಓದುಗರ ಮೇಲೆ ಬೀರಿರುವ ಪ್ರಭಾವ ಹಾಗೂ ಸಾಧಿಸಿರುವ ಹಿಡಿತವನ್ನು ಅಲ್ಲಗಳೆಯಲು ಯಾರಿಂದಲೂ ಸಾಧ್ಯವಿಲ್ಲ. ■

ಪತ್ರಿಕೋದ್ಯಮದಲ್ಲಿ ಪಾಳೆಗಾರಿಕೆ

■ ಪ್ರೊ. ಅಶೋಕ್ ಕುಮಾರ್
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ.

ನೀವು ಈ ಶತಮಾನದ ಆದಿ ಭಾಗದಲ್ಲಿ ರೂಢಿಯಲ್ಲಿದ್ದ ಪಾಳೆಗಾರಿಕೆ ಬಗ್ಗೆ ಓದಿರ ಬಹುದು. ಕೇಳಿರಬಹುದು. ಬಹುಶಃ ನೋಡಿ ರಲೂ ಬಹುದು. ಒಂದು ಪಾಳೆಗಾರರ ತಂಡ ಇನ್ನೊಂದು ಪಾಳೆಗಾರರ ತಂಡದ ಮೇಲೆ ಎರಿ ಹೋಗುವುದು, ಕೊಲೆ, ರಕ್ತಪಾತ, ಬೈಗುಳ.... ಕೊನೆಗೆ ಹೆಚ್ಚು ಕೊಲೆಗೈದವರು, ಹೆಚ್ಚು ರಕ್ತಪಾತ ಹರಿಸಿದವರು, ಹೆಚ್ಚು ಬೈದವರು ಗೆಲ್ಲುತ್ತಾರೆ. ಪಾಳೆಗಾರಿಕೆ ವಿಜೃಂಭಿಸುತ್ತದೆ. ಅಮಾಯಕ ಹಳ್ಳಿ ಜನ ಮುಗ್ಧತೆಯ ಮುಂಚೂಣಿಯಲ್ಲಿದ್ದು ಪ್ಯಾದೆಗಳಾಗಿ ಹೋಗಿರುತ್ತಾರೆ.

ಇದೇ ದೃಶ್ಯವನ್ನು, ಇತ್ತೀಚೆಗೆ ಕನ್ನಡ ಪತ್ರಿಕೋದ್ಯಮದಲ್ಲಿ ಅದರಲ್ಲೂ ಟ್ಯಾಬ್ಲಾಯ್ಡ್ ಪತ್ರಿಕೋದ್ಯಮದಲ್ಲಾಗುತ್ತಿರುವ ಹಲ್ಲಂಡೆ ಆಟವನ್ನು, ಪಾಳೆಗಾರಿಕೆಯನ್ನು ನೀವು ಓದುತ್ತಿರ ಬಹುದು. ಇದು ಪಾಳೆಗಾರಿಕೆಯ ಇನ್ನೊಂದು ಮುಖ. ಇಲ್ಲಿ ನಡೆಯುವ ಹೊಡೆದಾಟವೇ ಬೇರೆ ರೀತಿಯದು. ಪದಗಳ ಜೊತೆ ಚೆಲ್ಲಾಟ, ಗುಣ ವಾಚಕಗಳ ಮೂಲಕ ಕೈಮಿಲಾಯಿಸುವುದು

ಕ್ರಿಯಾಪದಗಳೊಡನೆ ಒಡನಾಟ, ಶಾಬ್ದಿಕ ವ್ಯತ್ಯಾಸಗಳೊಂದಿಗೆ ತಲೆ ಹರಟೆ. ಇದು ಅಮಾಯಕ ಓದುಗರ ಹೆಸರಿನಲ್ಲಿ ನಡೆಸುವ ಪತ್ರಿಕೋದ್ಯಮವೆನ್ನುವ ಪಾಳೆಗಾರಿಕೆ.

ಈ ಪತ್ರಿಕೆಗಳು, ಅವುಗಳನ್ನು ಹೆಸರಿಸಲು ಒಬ್ಬ ಸಂಭಾವಿತ ಓದುಗನಿಗೆ ವಾಕರಿಕೆ ಬರಿಸುವಷ್ಟು ಅನಿಷ್ಟ ಮಟ್ಟಕ್ಕೆ ತಲುಪಿ, ಪತ್ರಿಕೋದ್ಯಮದ ಹಾದರದ ಆಳಕ್ಕೆ ಮುಳುಗಿ ಹೋಗಿವೆ. ಇವರ ವೈಯಕ್ತಿಕ ತೆವಲುಗಳಿಂದಾಗಿ, ಹೇಗಾದರೂ ಮಾಡಿ ಪತ್ರಿಕಾ ಪ್ರಸಾರವನ್ನು ಹೆಚ್ಚಿಸಬೇಕೆಂಬ ಅದಮ್ಯ ಕಾರಣದಿಂದಾಗಿ ಇಂದು ಕನ್ನಡ ಪತ್ರಿಕೋದ್ಯಮ ದಿಕ್ಕು ತಪ್ಪಿದೆ. ಪತ್ರಿಕಾ

ಲಂಕೇಶ್‌ಗಿಂತ ರೌಡಿ ಬೇಕೇ?

ನೀತಿ, ಪತ್ರಿಕಾಧರ್ಮವನ್ನು ನೆಲಕಚ್ಚಿಸುವಂತೆ ಮಾಡಿದೆ.

ದುರಂತ ವೆಂದರೆ ಇವರ ಜಗಳಗಳಿಗೆ ಮುಗ್ಧ ಓದುಗರನ್ನು ಗುರಿ ಮಾಡಿರುವುದು. ಈ ಟ್ಯಾಬ್ಲಾಯ್ಡ್‌ಗಳು ಪತ್ರಿಕೋದ್ಯಮದಲ್ಲಿ ನೀಚತನವನ್ನು ಎಸಗುವ ಮೂಲಕ ಭಾರತ ದೇಶದ ಪತ್ರಿಕೋದ್ಯಮದಲ್ಲಿ ಒಳ್ಳೆಯ ಹೆಸರು ಮಾಡಿರುವ, ಪತ್ರಿಕೋದ್ಯಮದ ಪಾವಿತ್ರತೆಯನ್ನು, ಪತ್ರಿಕಾ ಧರ್ಮವನ್ನು ಮತ್ತು ಪತ್ರಿಕಾ ನೀತಿ ಸಂಹಿತೆಯನ್ನು ಕಾಪಾಡಿಕೊಂಡು ಬರುತ್ತಿರುವ ಕನ್ನಡ ಪತ್ರಿಕೋದ್ಯಮವನ್ನು ಚರಂಡಿ ಪತ್ರಿಕೋದ್ಯಮಕ್ಕಿಂತ ಹೊಲಸನ್ನಾಗಿಸುತ್ತಿವೆ. ಅನಾಹುತದ ದಾರಿ ತುಳಿಯುತ್ತಿರುವ ಈ ಪತ್ರಿಕೆಗಳು ಎಲ್ಲವನ್ನೂ ಓದುಗರ ಹೆಸರಿನಲ್ಲಿ ಮಾಡುತ್ತಿರುವುದು ಎಂತಹ ಅಪಾಯಕಾರಿ ಪ್ರವೃತ್ತಿ ಮತ್ತು ಎಂತಹ ವಿಪರ್ಯಾಸ.

ಓದುಗರ ಪರವಾಗಿ ಇವರು ಬಳಸಿರುವ ಪದಪುಂಜಗಳ ಬಗ್ಗೆ ಒಮ್ಮೆ ನೋಡಿ 'ರೂಪಿಣಿ ಮತ್ತು ಏಡ್ಸ್ ಪತ್ರಕರ್ತ', 'ನಾನು ನೋಡಿ ಬಂದ ರೂಪಿಣಿ', 'ರೂಪಿಣಿ ಏಡ್ಸ್‌ಗೆ ಬಲಿ', '.....ಮುದಿ ಪಂಟರುಗಳ ಪಲ್ಲವಿ' 'ಸೀಡ್ ಲೆಸ್ ಸುಬ್ಬ' ಇತ್ಯಾದಿ ಇತ್ಯಾದಿ. ಈ ಟ್ಯಾಬ್ಲಾಯ್ಡ್ ಪತ್ರಿಕೆಯವರು 2-3 ವಾರಗಳಿಂದ ಈ ವಿಷಯದ ಬಗ್ಗೆ ಬರೆಯುತ್ತಿರುವುದನ್ನು ಗಮನಿಸಿದರೆ ಇದು ಖಂಡಿತ ಓದುಗರಿಗಾಗಿ ಅಲ್ಲ ಎನ್ನುವುದು ಸುಲಭವಾಗಿ ಗೊತ್ತಾಗುತ್ತದೆ. ಏಕೆಂದರೆ ಇವರ ಲೇಖನಗಳಿಂದ ಹೊರ ಹೊಮ್ಮುವುದು ಬರೇ ವೈಯಕ್ತಿಕ ದ್ವೇಷ, ಜಗಳ ಮತ್ತು ತೆವಲುಗಳು ಮಾತ್ರ.

ಈ ಟ್ಯಾಬ್ಲಾಯ್ಡ್‌ಗಳಲ್ಲಿ ಒಂದಾದ ಲಂಕೇಶ್ ಪತ್ರಿಕೆಯಲ್ಲಿ ಶೆಣೈ ಎಂಬ ವರದಿಗಾರರು ಬರೆದಿರುವ ಶೈಲಿ ನೋಡಿದರೆ ಯಾರಿಗಾದರೂ ಗೊತ್ತಾಗುತ್ತದೆ, ಇದು ನುಣುಚಿಕೊಳ್ಳುವ ಬರವಣಿಗೆ ಎಂದು. ಈ ಒಂದು ಪ್ಯಾರ ನೋಡಿ.

'ಈ ಮುದ್ದು ಮುಖದ ನಟಿ ಬದುಕಿರುವುದು ಸಂತೋಷ. ಆಕೆ ಸತ್ತಿದ್ದಾಳೆ.... ಇದೊಂದು ಪ್ರಮಾದವಶಾತ್ ಆದ ತಪ್ಪು ಇತ್ಯಾದಿ (ಮಾರ್ಚ್ 24).

ತಮ್ಮ ಪತ್ರಿಕೆಯ ಪ್ರಸಾರ ಹೆಚ್ಚಿಸಿಕೊಳ್ಳಲು ಇಂತಹ ರಂಗು ರಂಗಿನ ಸುದ್ದಿ ಮೂಲಕ ವ್ಯಕ್ತಿಯನ್ನು ಸಾಯಿಸುವವರೂ ಇವರೇ, ಆಮೇಲೆ ಅಮಾಯಕರಂತೆ 'ಈ ಮುದ್ದು ಮುಖದ ನಟಿ..' ಎಂದು ಅವರ ಬಗ್ಗೆ ಬೊಗಳೆ ಹೊಡೆಯುವವರೂ ಇವರೇ. ಓದುಗರನ್ನು ಎಷ್ಟು ಮುಠ್ಠಾಳರೆಂದು ಕೊಂಡಿದ್ದಾರೆ ನೋಡಿ.

ಇನ್ನೊಂದು ಟ್ಯಾಬ್ಲಾಯ್ಡ್ ಆದ 'ಹಾಯ್ ಬೆಂಗಳೂರ್'ನ ಸಂಪಾದಕರು ಇದೊಂದು ಮಹಾನ್ ತನಿಖಾ ವರದಿ ಎನ್ನುವಂತೆ ಹೆಸರು ಬದಲಾಯಿಸಿಕೊಂಡು ಸುದ್ದಿ ಮಾಡಲು ಹೋಗಿ ಕೊನೆಗೆ ತಮ್ಮ 'ಸುದ್ದಿಮೂಲ'ಕ್ಕೆ ಮೋಸ ಮಾಡಿದ್ದಾರೆಂಬ ಗುಮಾನಿ ಬರಿಸುತ್ತಾರೆ. ಅಲ್ಲದೆ

ರೂಪಿಣಿ ಮತ್ತು ಏಡ್ಸ್ ಪತ್ರಕರ್ತ

ಈ ಒಂದು ಸ್ಟೋರಿಯಲ್ಲಿ ಓದುಗರಲ್ಲಿ ತಾನೆ create ಮಾಡಿಕೊಂಡಿರುವ ಅನುಮಾನಗಳನ್ನು, ಗುಮಾನಿಗಳನ್ನು ನಿವಾರಿಸುವ ಬದಲು ನಾಜೂಕಾಗಿ ಅವೆಲ್ಲವನ್ನೂ ಓದುಗರಿಂದ ಮರೆಮಾಚುತ್ತಾರೆ.


ಉದಾ: ''ಬಂದು ಹೋದ ರೂಪಿಣಿಯ ಸುತ್ತ....'' (ಮಾರ್ಚ್ 26)ಎಂಬ ತಲೆ ಬರಹದಡಿಯಲ್ಲಿ ಇವರೇಕೆ ಹೆಸರು ಬದಲಾಯಿಸಿಕೊಂಡು ಪತ್ರಿಕಾ ಧರ್ಮವನ್ನು, ಪತ್ರಿಕಾ ನೀತಿ ಸಂಹಿತೆಯನ್ನು ಮುರಿದರು ಎಂಬ ಬಗ್ಗೆ ಚಕಾರ ಎತ್ತುವುದಿಲ್ಲ. ಇಲ್ಲಿ, ಇವರು ಓದುಗರನ್ನು, ಸಂಪೂರ್ಣ ಹಾದಿ ತಪ್ಪಿಸಿದ್ದಾರೆ.

ಹಲವು ವರುಷಗಳ ಹಿಂದಿನ ಮಾತು :ಅಶ್ವಿನಿ ಸರೀನ್ ಎಂಬ ಒಬ್ಬ ಯುವ ಪತ್ರಕರ್ತ ಬಿಹಾರ್‌ನಲ್ಲಿ ನಡೆಯುತ್ತಿದ್ದ ಹೆಣ್ಣು ಮಕ್ಕಳ ಮಾರಾಟವನ್ನು ಕೊನೆ ಗಾಣಿಸಲು ತಾನೂ ಒಬ್ಬ ವೃತ್ತಿ ನಿರತ ವ್ಯಾಪಾರಿಯಂತೆ ಹೆಸರು ಮತ್ತು ವೇಷ ಬದಲಿಸಿ, 'ಕಮಲಾ' ಎಂಬ ಒಬ್ಬ ಹೆಣ್ಣು ಮಗಳನ್ನು ರೂ. 2000ಕ್ಕೆ ಕೊಂಡು ತಂದು ಆ ಮಾರಾಟ ಕೇಂದ್ರವನ್ನು ತನ್ನ ತನಿಖಾವರದಿಯ ಮೂಲಕ ಛಿದ್ರಗೊಳಿಸಿದ್ದರು. ಅಲ್ಲದೆ ಅಂದಿನ ಬಿಹಾರ್ ಸರ್ಕಾರವನ್ನು ತಮ್ಮ ತನಿಖಾ ವರದಿಯ ಮೂಲಕ ತಲ್ಲಣಗೊಳಿಸಿದ್ದರು. ಈ ವರದಿಯಲ್ಲಿ, ತಮ್ಮ ಹೆಸರನ್ನು ಮತ್ತು ವೇಷವನ್ನು ಏಕೆ ಬದಲಾಯಿಸಬೇಕಾಯಿತು ಎನ್ನುವುದರ ಬಗ್ಗೆ ವಿವರವಾಗಿ ಬರೆದಿದ್ದರು.

ಆದರೆ ನಮ್ಮ ಕನ್ನಡ ನೆಲದ ಈ ಎರಡು ಪತ್ರಿಕೆಗಳು ಒಬ್ಬ ಬದುಕಿರುವ ಅಬಲೆ ಹೆಣ್ಣು ಮಗಳನ್ನು ಸಾಯಿಸಿ ಬದುಕಿಸಿ ತಾವೊಬ್ಬ ಮಹಾನ್ ಕೈಂಕರ್ಯದಲ್ಲಿ ತೊಡಗಿದ್ದೇವೆ, ಇದೊಂದು ಅತಿ ದೊಡ್ಡ ತನಿಖಾ ವರದಿ ಈ ಹೆಣ್ಣು ಮಗಳನ್ನು ಬದುಕಿಸುವ ಮೂಲಕ ಈ ನಾಡಿಗೆ ಪತ್ರಿಕೋದ್ಯಮದ ಮೂಲಕ ನೀಡಿರುವ ಮಹಾನ್ ಕೊಡುಗೆ ಎಂದು ಹೂಂಕರಿಸುತ್ತಿದ್ದಾರೆ. ಓದುಗ ಗಾಂಪನೆಂದುಕೊಂಡು ಮನಸ್ವೀ ಬರೆಯುತ್ತಿದ್ದಾರೆ. ಆದರೆ ಇಲ್ಲಿ ದೊಡ್ಡ ಆಘಾತವಾಗಿರುವುದು ಪತ್ರಿಕಾ ನೀತಿಗೆ, ಪತ್ರಿಕಾ ಧರ್ಮಕ್ಕೆ.

ಓದುಗ ಬಯಸುವುದು, ಒಳ್ಳೆಯ ಬರವಣಿಗೆಯನ್ನು, ಒಳ್ಳೆಯ ಲೇಖನವನ್ನು, indepth ತನಿಖಾ ವರದಿಯನ್ನು. ಇದೆಲ್ಲದರ ಜೊತೆಗೆ ಪತ್ರಿಕಾ ನೀತಿ ಸಂಹಿತೆಯನ್ನು ಪಾಲಿಸುವಂತಹ ಪತ್ರಿಕೆಗಳನ್ನು, ಪತ್ರಿಕೋದ್ಯಮವನ್ನು. ಪತ್ರಕರ್ತ 'ಸಮೂಹದ ನಾಯಕ' ನಂತೆ ಕೆಲಸ ನಿರ್ವಹಿಸಬೇಕಾಗುತ್ತದೆ. ಪತ್ರಕರ್ತನ ಮೇಲಿರುವ ಜವಾಬ್ದಾರಿ ಅತ್ಯಂತ ಗುರುತರವಾದದ್ದು. ಓದುಗ ನಿಮ್ಮ ಬರವಣಿಗೆಯನ್ನೂ; ನಿಮ್ಮ ವರದಿಯನ್ನೂ ಮೆಚ್ಚಿಕೊಂಡಿದ್ದಾನೆಂದಾಕ್ಷಣ ಆತನ ಮುಗ್ದತೆಯನ್ನು ದುರುಪಯೋಗ ಪಡಿಸಿಕೊಳ್ಳುವುದು ಅತ್ಯಂತ ಕೆಟ್ಟ ಪತ್ರಿಕಾ ಧರ್ಮವಾಗುತ್ತದೆ.

ಕನ್ನಡ ಪತ್ರಿಕೋದ್ಯಮ ಅತ್ಯಂತ ಜವಾಬ್ದಾರಿಯುತವಾದದ್ದು. ವೈಯಕ್ತಿಕ ದ್ವೇಷ; ಜಗಳ, ಪುಂಡಾಟಿಕೆಗಳಿಂದಾಗಿ ಪತ್ರಿಕೋದ್ಯಮವನ್ನು ಗಟಾರದ ಪತ್ರಿಕೋದ್ಯಮವನ್ನಾಗಿಸುವುದನ್ನು ಓದುಗ ಖಂಡಿತಾ ಇಚ್ಚಿಸುವುದಿಲ್ಲ.ಇದನ್ನು ಇಂದು ಅತ್ಯಂತ ಅಧಿಕ ಪ್ರಸಾರವುಳ್ಳ ಈ ಎರಡು ಪತ್ರಿಕೆಗಳು ಗಮನಿಸುವುದು ಸೂಕ್ತ. ■



ಮಾಧ್ಯಮ ಎನ್ನುವ 'ಮಾಯಾಮೃಗ'

ಪತ್ರಿಕೆಗಳು ಮಾರಾಟದ 'ಸರಕು' ಆಗುವುದರಿಂದ, ಹೇಗಾದರೂ ಮಾಡಿ ಅವನ್ನು ಮಾರುವುದೇ ಮುಖ್ಯವಾಗುತ್ತದೆ. ಓದುಗ 'ಗ್ರಾಹಕ'ನಾಗುತ್ತಾನೆ.

ಸ್ವಾತಂತ್ರ್ಯ ಆಂದೋಲನದಲ್ಲಿ ಜನರಿಗೆ ತನ್ನ ಸಂದೇಶಗಳನ್ನು ಮುಟ್ಟಿಸಲು ಪತ್ರಿಕೆಗಳನ್ನು ಬಳಸಿಕೊಂಡ ಗಾಂಧಿ ಹೇಳಿದ್ದರು: ಪತ್ರಿಕೆಯ ಉದ್ದೇಶ ಸಾರ್ವಜನಿಕ ಸಮಸ್ಯೆಯನ್ನು ಗ್ರಹಿಸಿ, ಅದಕ್ಕೆ ಬಲ ತುಂಬುವುದು, ಜನರಲ್ಲಿ ಅಪೇಕ್ಷಣೀಯವಾದ ಅಭಿಪ್ರಾಯಗಳನ್ನು ಮೂಡಿಸುವುದು ಹಾಗೂ ಸರ್ಕಾರದ ದೋಷಗಳನ್ನು ಮುಲಾಜಿಲ್ಲದೆ ಹೇಳುವುದು. ಇಂದಿನ ಪತ್ರಿಕೆಗಳು ಇದನ್ನು ಬಿಟ್ಟು ಉಳಿದದ್ದನ್ನೆಲ್ಲ ಮಾಡುತ್ತಿವೆ!

ಪತ್ರಿಕೆಗಳು : ನಿನ್ನೆ, ಇಂದು

ಭಾರತದ ಇಂಗ್ಲಿಷ್ ಪತ್ರಿಕೆಗಳು ವಿದೇಶಿ ಸುದ್ದಿಯ ಬಗ್ಗೆ ಮೊದಲಿನಿಂದಲೂ ಒಲವು ತೋರಿವೆ. ಈ ಸುದ್ದಿಯನ್ನು ಅವಕ್ಕೆ ಪೂರೈಸುವುದು ವಿದೇಶಿ ಮೂಲದ ಸುದ್ದಿ ಸಂಸ್ಥೆಗಳು. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಈ ಸುದ್ದಿ ಸಂಸ್ಥೆಗಳು ಹೋರಾಟವು 'ಏನೂ ಅಲ್ಲ' ಎನ್ನುವಂತೆ ಚಿತ್ರಿಸಿದ್ದವು. ಬ್ರಿಟಿಷರು ಚಳುವಳಿಯನ್ನು ಹತ್ತಿಕ್ಕುವಲ್ಲಿ ನೆರವು ನೀಡಿದ್ದವು. ಸ್ವಾತಂತ್ರ್ಯಾನಂತರ ಪಿಟಿಐ-ಯುಎನ್‌ಐಗಳು ಈ ವಿದೇಶಿ ಸುದ್ದಿ ಸಂಸ್ಥೆಗಳ ಭರಾಟೆ ತಾಳಲಾಗದೆ ಅವಕ್ಕೆ ಶರಣಾಗಿಬಿಟ್ಟಿವೆ!

ಅಭಿವೃದ್ಧಿಶೀಲ ರಾಷ್ಟ್ರಗಳಿಗೆ 'ಮಾಧ್ಯಮ ಎನ್ನುವುದು ಅನಕ್ಷರತೆ, ಬಡತನ, ನಿರುದ್ಯೋಗಗಳಂತಹ ಸಮಸ್ಯೆಗಳನ್ನು ನಿವಾರಿಸಿಕೊಂಡು, ಸಾಮಾಜಿಕ, ಆರ್ಥಿಕ ಪ್ರಗತಿ ಸಾಧಿಸಲು ಇರುವ ಊರುಗೋಲು' ಎನ್ನುವುದು ಯುನೆಸ್ಕೋ ನೇಮಿಸಿದ್ದ ಮ್ಯಾಕ್‌ಬ್ರೈಡ್ ಆಯೋಗದ ವರದಿಯ ನಿಲುವು. ಆದರೆ ಭಾರತದಲ್ಲಿ ಪತ್ರಿಕೋದ್ಯಮ ಉದ್ಯಮಗಳೊಂದಿಗೆ ಮೊದಲಿನಿಂದಲೂ ಚಕ್ಕಂದವಾಡುತ್ತಲೇ ಬಂದಿದೆ. ಇದಲ್ಲದೆ ಭಾರತದಲ್ಲಿ ಮಾಧ್ಯಮ ವಿಮರ್ಶೆ ಇನ್ನೂ ಅಂಬೆಗಾಲಿಕ್ಕುತ್ತಿದೆ. ಮಾಧ್ಯಮಗಳು ಮನಸ್ಸಿಗೆ ಬಂದಂತೆ ವರ್ತಿಸಿದಾಗ ಅವುಗಳನ್ನು ತಡೆಯುವ, ಬುದ್ಧಿಹೇಳುವ, ಭಾರತದಂತಹ ದೇಶದಲ್ಲಿ ಪತ್ರಿಕೆಗಳ ಕರ್ತವ್ಯವೇನು ಎನ್ನುವುದನ್ನು ಕಲಿಸಬಲ್ಲ, ಅವು ಕಲಿಯದೇ ಹೋದಲ್ಲಿ ಕಚ್ಚಲು ಹಲ್ಲಿರುವ ವಿಮರ್ಶೆಯೊಂದು ಇಲ್ಲದೆ ಹೋಗಿದ್ದರಿಂದ ಇಲ್ಲಿ ರಾತ್ರೋರಾತ್ರಿ, ನಾಯಕರು ಸೃಷ್ಟಿಯಾಗುತ್ತಾರೆ, ಸಜ್ಜನರು, ಖಳರಾಗಿ, ಖಳರು ಸಜ್ಜನರಾಗಿ ಬದಲಾಗುತ್ತಾರೆ, ಅನಕ್ಷರಸ್ಥ 'ಸಾಹಿತಿ'ಯಾಗುತ್ತಾನೆ. ಪತ್ರಿಕೆಗಳು ತಮಗೆ ಬೇಕಾದ್ದನ್ನು ಬರೆಯುವ, ಬೇಕಿದ್ದವರನ್ನು ಎತ್ತಿ ಕಟ್ಟಿ, ಬೇಡದಿದ್ದವರನ್ನು ತುಳಿಯುವ ವೇದಿಕೆಯಾಗುತ್ತವೆ. ಹಫ್ತಾ, ರೋಲ್‌ಕಾಲ್ ಪತ್ರಕರ್ತರು ಹುಟ್ಟಿಕೊಳ್ಳುತ್ತಾರೆ. ಕಂಪ್ಯೂಟರ್ ಗ್ರಾಫಿಕ್ ಬಳಸಿ ಅತ್ಯಾಚಾರವನ್ನು, ನಟ ನಟಿಯೊಬ್ಬಳ ಮಲಗುವ ಕೋಣೆಯನ್ನು ವರ್ಣಿಸುವ, ಕೋಲಾ-ಪಿಜ್ಜಾಗಳ ಬಗ್ಗೆ ಬರೆಯುವ ಪತ್ರಿಕೆಗಳಿಗೆ ಸೋಲಿಗರು- ಮಲೆಕುಡಿಯರು-ಕುಣುಬಿಗಳ ಗೋಳಿನ ಕತೆ ಹೇಗೆ ಸುದ್ದಿಯಾಗಬಲ್ಲದು?

ಪತ್ರಿಕೆಗಳು ಮಾರಾಟದ 'ಸರಕು' ಆಗುವುದರಿಂದ, ಹೇಗಾದರೂ ಮಾಡಿ ಅವನ್ನು ಮಾರುವುದೇ ಮುಖ್ಯವಾಗುತ್ತದೆ. ಓದುಗ 'ಗ್ರಾಹಕ'ನಾಗುತ್ತಾನೆ. ವಿಷಯ, ಭಾಷೆ ಮತ್ತು ವ್ಯಕ್ತಿಯ ನಡುವಿನ ಭಾವನಾತ್ಮಕ ಸಂಬಂಧ ಕುಸಿದು ಬೀಳುತ್ತದೆ. ಇಲ್ಲಿ ಹಿಂದೂ ಮುಸ್ಲಿಂ ಕೋಮುವಾದವನ್ನು ಬೆಳೆಸುವ, ಕೋಮುಜ್ವರ ತೀವ್ರವಾದಾಗ ಅದನ್ನು ಉದ್ರೇಕಿಸುವ ಪತ್ರಿಕೆಗಳಿವೆ, 'ಫ್ಯಾಷನ್ ಷೋ' ಒಂದು ಮೌಲ್ಯ ಎನ್ನುವ, ಫೆಮಿನಾದ 'ಸೌಂದರ್ಯ ಸ್ಪರ್ಧೆ'ಗಳನ್ನು ತನ್ನೆಲ್ಲ ಪುಟಗಳಲ್ಲೂ ತುಂಬಿಸಿಬಿಡುವ ಪತ್ರಿಕೆಗಳೂ ಇವೆ.

ಮೂರನೇ ಪುಟದ ಪತ್ರಿಕೋದ್ಯಮ

ಪೀತ ಪತ್ರಿಕೆಗಳನ್ನು ಕುರಿತು ಇ.ಎಲ್. ಗಾಡ್‌ಕಿನ್ ಹೇಳುವ ಮಾತಿದು - 'ಯಾಕೆ ಆ ಪೀತ ಪತ್ರಿಕೆಗಳು ಸುಳ್ಳು ಬರೆಯುತ್ತವೆ ಎಂದರೆ ಆ ಸುಳ್ಳು ಅವಕ್ಕೆ ಹಣ ಕೊಡುತ್ತದೆ. ಅದನ್ನು ಇನ್ನೊಂದು ರೀತಿ ಹೇಳಬೇಕೆಂದಲ್ಲಿ ಆ ನೀತಿಯನ್ನು ಇಷ್ಟಪಡುವವರಿಗಾಗಿ ಈ ಪತ್ರಿಕೆಗಳು ಕ್ಷುಲ್ಲಕ, ಶಿಷ್ಟಚಾರರ ಹಿತ ಹಾಗು ಹಗರಣ ಹುಟ್ಟುಹಾಕುವ ಸುದ್ದಿಗಳನ್ನು ಪ್ರಕಟಿಸುತ್ತವೆ.' ಭಾರತವೂ

> ಪತ್ರಿಕೆಯೊಂದರ ಧ್ಯೇಯಧೋರಣೆಗಳೇನೇ ಇರಲಿ, ಪ್ರಕಟಿಸುವ ಸುದ್ದಿ ಬಗ್ಗೆ ಋಜುತ್ವವನ್ನು ಕಾಪಾಡಿಕೊಳ್ಳಬೇಕು. ಸುದ್ದಿಯಾಗಬಲ್ಲ ಸುದ್ದಿಗಳನ್ನು ಪ್ರಕಟಿಸಬೇಕು ಮತ್ತು ಅದನ್ನು ತಿರುಚಬಾರದು. -ಜವಾಹರಲಾಲ್ ನೆಹರೂ
>
> ಸಾವಿರಾರು ಜನ ಒಂದೆಡೆಯಿಂದ ಹೊರ ಹೋಗಲು ಪ್ರಯತ್ನಿಸುತ್ತಿದ್ದಾಗ, ಅಲ್ಲಿಗೆ ನುಗ್ಗಲು ಪ್ರಯತ್ನಿಸುವ ಹುಚ್ಚರ ಸಣ್ಣ ಗುಂಪೇ ಪತ್ರಕರ್ತರದ್ದು - ನಿಕ್ಕರ್ ಬೋಕರ್. ಎಚ್.ಆರ್.
>
> ಆದರೆ ನಿಕ್ಕರ್‌ಬೋಕರ್‌ನ ಹುಚ್ಚು ಮಂದಿ ದೃಢ ಮನಸ್ಸಿನ - ಸಾಮರ್ಥ್ಯವುಳ್ಳ ಮಂದಿ. ಹುಚ್ಚಿರುವುದು ವ್ಯವಸ್ಥೆಯಲ್ಲಿ. - ಮಾರ್ಟ್ ರಾಸೆನ್‌ಬ್ಲಮ್

ಸೇರಿದಂತೆ ಪ್ರಪಂಚದೆಲ್ಲೆಡೆಯ ಪತ್ರಿಕೆಗಳಲ್ಲಿ ಸೆಕ್ಸ್, ಹಿಂಸೆ, ರಾಜಕೀಯ, ಅಪರಾಧ ಹಾಗೂ ಫ್ಯಾಷನ್ ಬಹುಮುಖ್ಯ ಎನ್ನಿಸಿಬಿಟ್ಟಿವೆ. ಇದೆಲ್ಲದರ ಮೂಲ - ರೂಪರ್ಟ್ ಮರ್ಡೋಕ್ ಎನ್ನುವ ಕಿರಾತಕ.

ಪ್ರತಿಷ್ಠಿತ ಫ್ಲೀಟ್ ರಸ್ತೆಯಲ್ಲಿದ್ದ 'ದಿ ಟೈಮ್ಸ್' ಕಚೇರಿಯನ್ನು ವ್ಯಾಪಿಂಗ್‌ಗೆ ಬದಲಾಯಿಸಿದ ಮರ್ಡೋಕ್ ಪತ್ರಿಕೆಯನ್ನು ಸೆಕ್ಸ್- ಹಿಂಸೆಯಿಂದ ತುಂಬಿಬಿಟ್ಟರು. ಇದಕ್ಕೆ ಮಾಧ್ಯಮ ಇಟ್ಟ ಹೆಸರು 'ವ್ಯಾಪಿಂಗ್ ಪತ್ರಿಕೋದ್ಯಮ'. ತನ್ನ ಪತ್ರಿಕೆಯನ್ನು ಹೆಚ್ಚು ಪ್ರಸಾರವುಳ್ಳ ಪತ್ರಿಕೆಯನ್ನಾಗಿಸಲು ಮರ್ಡೋಕ್ ಬಳಸಿದ ಸೂತ್ರ - ಬೆಲೆ ಇಳಿತ, ಸೆಕ್ಸ್ ಮತ್ತು ಹಿಂಸೆ. ಪತ್ರಿಕೆಯ 3ನೇ ಪುಟದಲ್ಲಿ ಬೆತ್ತಲೆ ಹುಡುಗಿಯರ ಚಿತ್ರ ಸಾಮಾನ್ಯವಾಗಿಬಿಟ್ಟಿತು. ಭಯಾನಕ ಕಥೆಗಳು, ಅಪರಾಧ ಸುದ್ದಿಗಳ ಹೆಸರಿನಲ್ಲಿ ರಸವತ್ತಾದ ಬಣ್ಣನೆ, ವಿಕೃತ ಕಾಮ ಚಿತ್ರಣ - ಇದು ಮೊದಲು ಮೂರನೇ ಪುಟದಲ್ಲಿ ಪ್ರಾರಂಭ ಆದದ್ದು ನಂತರ ಇಡೀ ಪತ್ರಿಕೆಯನ್ನು ಆವರಿಸಿಬಿಟ್ಟಿತು. ಈ ಯಶಸ್ಸಿನ ಸೂತ್ರವನ್ನು ಎಲ್ಲ ಪತ್ರಿಕೆಗಳೂ ಅನುಸರಿಸಿದವಲ್ಲದೆ, ತಮ್ಮದು 'ಫ್ಯಾಮಿಲಿ ಮ್ಯಾಗಜಿನ್' ಎಂದವು! ಕೊನೆಗೆ ಆದದ್ದಿದು: ಪತ್ರಿಕೋದ್ಯಮ ಎಂದರೆ ಇದೇ ಎನ್ನುವ ಭಾವನೆ ಸೃಷ್ಟಿಯಾಯ್ತು, ಅಶ್ಲೀಲತೆಯ ವ್ಯಾಖ್ಯಾನವೇ ಬದಲಾಗಿಹೋಯ್ತು!

ಇದನ್ನು ಭಾರತದಲ್ಲಿ ಅನುಸರಿಸಿದ್ದು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ. 'ಹಿಂದೂಸ್ತಾನ್ ಟೈಮ್ಸ್'ನ ಸೊಂಟ ಮುರಿಯಲು 'ಟೈಮ್ಸ್' ತನ್ನ ಬೆಲೆಯನ್ನು ಇಳಿಸಿತು. ಆಗ ಅನಿವಾರ್ಯವಾಗಿ 'ಹಿಂದೂಸ್ತಾನ್ ಟೈಮ್ಸ್' ಕೂಡಾ ತನ್ನ ಬೆಲೆಯನ್ನು ಇಳಿಸಬೇಕಾಯ್ತು. ಇವೆರಡರ ಸ್ಪರ್ಧೆಯಿಂದ 'ಪಯೋನಿಯರ್' 'ಸ್ಟೇಟ್ಸ್‌ಮನ್'ನಂತಹ ಒಳ್ಳೆಯ ಪತ್ರಿಕೆಗಳು ಹೊಡೆತ ತಿಂದವು. ಜಾಹೀರಾತು ಆಕರ್ಷಿಸಲು ಪತ್ರಿಕೆಗಳ ನಡುವೆ ಸ್ಪರ್ಧೆ ಹೆಚ್ಚಿತು. ಸಮೀರ್ ಜೈನ್ ಪತ್ರಿಕೆಗಳಲ್ಲಿ ಪತ್ರಕರ್ತರ ಬದಲು ಮ್ಯಾನೇಜರುಗಳನ್ನು ನೇಮಿಸಿಕೊಂಡರು. ವಿರೋಧಿಸಿದ ಪತ್ರಕರ್ತರು ಕೆಲಸ ಕಳೆದುಕೊಂಡರು. ಕನ್ನಡಪ್ರಭ - ಉದಯವಾಣಿ ನಡುವೆ ಸಿನಿಮಾ ಜಾಹೀರಾತಿಗಾಗಿ ನಡೆದ ಹೋರಾಟ ಗೊತ್ತಿರುವಂತಹದ್ದು. ತಮ್ಮ ಅಗತ್ಯ ಪತ್ರಿಕೆಗಳಿಗಿದೆ ಎನ್ನುವುದು ಗೊತ್ತಾದ ಜಾಹೀರಾತು ಸಂಸ್ಥೆಗಳು ಸಂಪಾದಕೀಯಕ್ಕೂ ಲಗ್ಗೆ ಇಟ್ಟವು.

ಪತ್ರಿಕೆಗಳ ಬೆಲೆ ಇಳಿದರೆ ಗ್ರಾಹಕನಿಗೆ ಲಾಭ ಎಂದು ನೀವು ಹೇಳಬಹುದು. ಆದರೆ ಸತ್ಯ ಅದಲ್ಲ. 'ಬೆಲೆ ಕುಸಿತವು ಓದುಗನಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ನೀಡುವುದಿಲ್ಲ' ಎಂದು ಇಂಗ್ಲೆಂಡ್‌ನಲ್ಲಿನ ಪತ್ರಿಕಾ ಸಮರ ಕುರಿತು ಅಧ್ಯಯನ ಮಾಡಿದ ಆಯೋಗ ಹೇಳಿದೆ. ಓದುಗ ತನಗಿಷ್ಟವಾದದ್ದನ್ನು ಬಿಟ್ಟು ಕೊಟ್ಟಿದ್ದನ್ನೇ ಓದಬೇಕಾಗುತ್ತದೆ. ಆಯ್ಕೆಯ ಸ್ವಾತಂತ್ರ್ಯವೆಂದರೆ ವೈವಿಧ್ಯ. ಒಂದೇ ರೀತಿಯ ಸುದ್ದಿಗಳು ವರ್ಣರಂಜಿತವಾಗಿ ಬಂದರೆ, ಓದುಗ ಅದನ್ನೇ ಓದಬೇಕಾಗುತ್ತದೆ. ಅಲ್ಲದೆ ಮಾಧ್ಯಮಗಳು ಪ್ರಚಾರ ಮಾಡುವ ಸುದ್ದಿ - ಅಭಿಪ್ರಾಯಗಳ ಹಿಂದಿರುವ ಹಿತಾಸಕ್ತಿ -ರಾಜಕೀಯದ ಬಗ್ಗೆ ಗ್ರಾಹಕರಿಗೆ ಏನೇನೂ ಗೊತ್ತಿರುವುದಿಲ್ಲ.

ಕನ್ನಡ ಪತ್ರಿಕೋದ್ಯಮ

1812ರಲ್ಲಿ ಬಳ್ಳಾರಿಯಲ್ಲಿ ಪ್ರಕಟವಾಗಿ, ನಂತರ ಮಂಗಳೂರಿಗೆ ವರ್ಗಾವಣೆಯಾಗಿ ಬಾಸೆಲ್ ಮಿಷನ್ 1842ರಲ್ಲಿ ಪ್ರಕಟಿಸಿದ ಕನ್ನಡದ ಪ್ರಥಮ ಪತ್ರಿಕೆ 'ಮಂಗಳೂರು ಸಮಾಚಾರ'ದಿಂದ ಕನ್ನಡ ಪತ್ರಿಕೋದ್ಯಮ ಬಲು ದೂರ ನಡೆದು ಬಂದಿದೆ. ಇಂದು ಕನ್ನಡದಲ್ಲಿ (ದಾಖಲೆಗಳ ಪ್ರಕಾರ) 258 ದಿನಪತ್ರಿಕೆಗಳು, 31 ವಾರಪತ್ರಿಕೆಗಳು, 458 ಮಾಸಪತ್ರಿಕೆಗಳೂ ಸೇರಿದಂತೆ 1289 ಪತ್ರಿಕೆಗಳು ಪ್ರಕಟಗೊಳ್ಳುತ್ತಿವೆ. ಪ್ರದೇಶವೊಂದರ ಅಗತ್ಯವನ್ನು ಪೂರೈಸುವ ಈ ಪತ್ರಿಕೆಗಳಲ್ಲಿ, ಬಹುಪಾಲು ಪತ್ರಿಕೆಗಳ ಒಡೆತನ ಬಲಿಷ್ಠಜಾತಿಯ, ಆರ್ಥಿಕವಾಗಿ ಬಲಾಢ್ಯರ ಹಿಡಿತದಲ್ಲಿದೆ. ಸಿದ್ಧ ಸೂತ್ರವನ್ನು ಅನುಸರಿಸುವ ಇವು ಒಂದೇ ಎರಕದಲ್ಲಿ ಅದಂತವು. ಏಕೀಕರಣ ಚಳುವಳಿ, ಸ್ವತಂತ್ರ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ಪತ್ರಿಕೆಗಳೂ ಇದೇ ಎನ್ನುವುದು ಗಮನಾರ್ಹ.

ಕನ್ನಡದಲ್ಲಿ ಇತರರ ಖಾಸಗಿ ಬದುಕನ್ನು ಕದ್ದು ನೋಡುವ 'ಪೀಪಿಂಗ್ ಟಾಂ ಪತ್ರಿಕೋದ್ಯಮ' ಬಲಿಷ್ಠವಾಗಿಲ್ಲ. ಆದರೆ ಪ್ರಕಟವಾಗುವ ಸುದ್ದಿಗಳು ಪಕ್ಷಪಾತದಿಂದ ಕೂಡಿರುತ್ತವೆ. ಇದರಿಂದಾಗಿಯೇ ರಾಜಕುಮಾರಿ ಡಯಾನಾಳ ಸಾವು ಮುಖ್ಯ ಸುದ್ದಿಯಾಗುತ್ತದೆಯೇ ಹೊರತು, 'ಭಾರತದಲ್ಲಿ ನಿಮಿಷಕ್ಕೆ ಇಬ್ಬರು ಮಕ್ಕಳು ಸಾವನ್ನಪ್ಪುತ್ತಾರೆ' ಎನ್ನುವ ಯುನಿಸೆಫ್ ವರದಿ ಸುದ್ದಿಯಾಗುವುದಿಲ್ಲ. ಇದನ್ನು ಕಂಡೇ ವಾಲ್ಟರ್ ಲಿಪ್‌ಮನ್ ಹೇಳಿದ್ದು- 'ನಾವು ಕಾಣುವ ಸತ್ಯವು ನಮ್ಮ ಕಣ್ಣಿನ ಸ್ವಭಾವವನ್ನು ಹಾಗೂ ನಾವು ಎಲ್ಲಿ ನಿಂತಿದ್ದೇವೆ ಎನ್ನುವುದನ್ನು ಅವಲಂಬಿಸಿದೆ'.

ಮಾಹಿತಿಯ ಕಂದರ

ಬಹಳ ಹಿಂದೆ 'ಭಾರತದ ಪತ್ರಿಕೋದ್ಯಮ ಎಂದರೆ ಶೇ. 5ರಷ್ಟು ಜನರ ಪತ್ರಿಕೋದ್ಯಮ' ಎಂದು ಇಂದಿರಾಗಾಂಧಿ ಹೇಳಿದ್ದರು. ಆ ಪರಿಸ್ಥಿತಿ ಇಂದು ಬದಲಾಗಿದೆ. ಹೊಸ ಪತ್ರಿಕೆಗಳು ಬಂದಿವೆ. ಅಕ್ಷರಸ್ಥರ ಪ್ರಮಾಣ ಹೆಚ್ಚಾಗಿದೆ. ಆದರೂ 'ಸಂವಹನದ ಅಂತರ' ಆಶಾದಾಯಕವಾಗಿಲ್ಲ. ಯುನೆಸ್ಕೋ ವರದಿ ಪ್ರಕಾರ-ಒಂದು ದೇಶದಲ್ಲಿ ಸಂವಹನದ ಅಂತರ ಇಲ್ಲವಾಗಬೇಕೆಂದರೆ 100 ಜನರಲ್ಲಿ 10 ಜನರಿಗಾದರೂ ಪತ್ರಿಕೆಗಳು ತಲುಪಬೇಕು. ಭಾರತದಲ್ಲಿ ಈಗ ನೂರರಲ್ಲಿ 1.3 ಜನರಿಗೆ ಮಾತ್ರ ಪತ್ರಿಕೆ ತಲುಪುತ್ತಿವೆ. ಈ ಪ್ರಮಾಣ ಇಂಗ್ಲೆಂಡ್‌ನಲ್ಲಿ 48.8, ಜಪಾನ್‌ನಲ್ಲಿ 45.6, ಅಮೆರಿಕಾದಲ್ಲಿ 30.9, ಶ್ರೀಲಂಕಾದಲ್ಲಿ 4.4., ಪಾಕಿಸ್ತಾನದಲ್ಲಿ 1.8 ಇದೆ. ಅಂತರವನ್ನು ಕನಿಷ್ಠ ಮಟ್ಟದಲ್ಲಿ ನಿವಾರಿಸಿಕೊಳ್ಳಲು ನಮ್ಮ ಪತ್ರಿಕೆಗಳ ಪ್ರಸರಣ ಕನಿಷ್ಠ 10 ಪಟ್ಟು ಹೆಚ್ಚಬೇಕು. ಇರುವ ಪತ್ರಿಕೆಗಳ ಪ್ರಸರಣ ಹೆಚ್ಚಬೇಕಲ್ಲದೆ, ಹೊಸ ಪತ್ರಿಕೆಗಳು ಅರಳಬೇಕು. ಆದರೆ, ಪತ್ರಿಕೆ ತನ್ನ ಪ್ರಸರಣ ಹೆಚ್ಚಿಸಿಕೊಳ್ಳಲು ಬಳಸುವ ದಾರಿ ಮಾತ್ರ ಸಾಧ್ಯವಾದಷ್ಟು ಶುದ್ಧವಾಗಿರಬೇಕು.

ಪತ್ರಿಕಾ ಸ್ವಾತಂತ್ರ್ಯದ ಹೆಸರಿನಲ್ಲಿ ಮನಸ್ಸಿಗೆ ತೋಚಿದ್ದು ಬರೆಯುವುದನ್ನು ಸಂವಿಧಾನ ಒಪ್ಪುವುದಿಲ್ಲ ಎನ್ನುವುದನ್ನು ಮರೆಯಬಾರದು. ಭಾರತದ ಸಂವಿಧಾನ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ನೇರವಾಗಿ ಏನನ್ನೂ ಹೇಳಿಲ್ಲ. ಸಂವಿಧಾನದ ಪರಿಚ್ಛೇದ 19 (1) (ಎ) ನಾಗರಿಕರ ಮೂಲ ಭೂತ ಹಕ್ಕುಗಳನ್ನು ಕುರಿತು ಹೇಳುತ್ತದೆ. ಪತ್ರಿಕಾ ಸ್ವಾತಂತ್ರ್ಯ ಎನ್ನುವುದು ವಾಕ್ ಸ್ವಾತಂತ್ರ್ಯದಿಂದ ನಿಷ್ಪನ್ನವಾದ ಹಕ್ಕು ಮಾತ್ರ. ಅದು ಅವಿಚ್ಛಿನ್ನ ಸ್ವಾತಂತ್ರ್ಯವಲ್ಲ.

ಸೂಕ್ತವಾಗಿ ಬಳಸಲ್ಪಟ್ಟರೆ ಮಾಧ್ಯಮವು ಬದಲಾವಣೆಯ ಹರಿಕಾರನಾಗಬಲ್ಲುದು. ಪ್ರಸ್ತುತ ನಮ್ಮ ಅಗತ್ಯ- 'ಅಭಿವೃದ್ಧಿ ಪತ್ರಿಕೋದ್ಯಮ'. ಭಾರತದಂತಹ ದೇಶ ಅನುಭವಿಸುತ್ತಿರುವ ಆರ್ಥಿಕ, ಸಾಮಾಜಿಕ, ಮಾನಸಿಕ ತಲ್ಲಣಗಳನ್ನು ಯಥಾವತ್ ಚಿತ್ರಿಸುವ ಬರಹ ನಮಗೆ ಇಂದು ಬೇಕಾಗಿದೆ. ಕನ್ನಡಕ್ಕೆ ಬೇಕಿರುವುದು ಥರ್ಡ್ ವರ್ಲ್ಡ್ ನೆಟ್‌ವರ್ಕ್, ವುಮೆನ್ಸ್ ಫೀಚರ್ಸ್ ನೆಟ್‌ವರ್ಕ್, 'ಇಬ್ಬನಿ', ಭರತ್ ಡೋಗ್ರಾನ 'ವಾಯ್ಸಸ್ ಫ್ರಂಮ್ ದಿ ಸ್ಲಮ್', ಪಿ. ಸಾಯಿನಾಥ್ ಅವರ 'ಎವೆರಿಬಡಿ ಲವ್ಸ್ ಎ ಗುಡ್ ಡ್ರಾಟ್' ನಂತಹ ಬರಹಗಳು. ಆದರೆ ಅಂತಹ ಬರಹಕ್ಕೆ ಕನ್ನಡದಲ್ಲಿ ಕೊರತೆ ಇದೆ. ಈ ಕೊರತೆಯನ್ನು ತುಂಬುವ ಕೆಲಸವಾಗಬೇಕು. ■

ಕ್ವಿಜ್-21ರ ಬಹುಮಾನ ವಿಜೇತರು

ಎನ್.ನಾಗರತ್ನ
D/o ಎನ್.ಲಿಂಗಣ್ಣ ಟೀಚರ್
ತುರುವನೂರು ಅಂಚೆ
ಚಿತ್ರದುರ್ಗ (ತಾ) ಜಿಲ್ಲೆ - 577 517

ರವೀಂದ್ರ ಗ.ದೊಡಮನಿ
C/o ಜಿ.ಹೆಚ್.ದೊಡಮನಿ
ಮನಿಹಾಳ-ಸುರೇಬಾನ
ರಾಮದುರ್ಗ ತಾಲ್ಲೂಕು,
ಬೆಳಗಾವಿ ಜಿಲ್ಲೆ - 591 127

ಚೇತನ ಕೆ.ಎಸ್.
D/o ಕೆ.ಆರ್.ಸುಬ್ಬರಾವ್
'ಶ್ರೀಮುಖ', ಕೈತೋಟ,
ಸಸರವಳ್ಳಿ ಅಂಚೆ, ಸಾಗರ ತಾಲ್ಲೂಕು
ಶಿವಮೊಗ್ಗ - 577 401

ಉಮೇಶ್ ಜಿ.ಎಚ್.
ಎಸ್.ಕೆ. ಎಂಟರ್‌ಪ್ರೈಸಸ್
ಆರ್.ವಿ.ರಸ್ತೆ,
ಸೌತ್ ಎಂಡ್ ಸರ್ಕಲ್, ಬಸವನಗುಡಿ
ಬೆಂಗಳೂರು - 560 004

ಅಮೀರ ಆಲಿ ಬಿ.ಎ.
C/o ಮರಿಯಂಬೀ ಪ್ರಾ.ಆ.ಕೇಂದ್ರ
ತಾವರಗೇರಾ
ಕುಷ್ಟಗಿ ತಾಲ್ಲೂಕು
ಕೊಪ್ಪಳ ಜಿಲ್ಲೆ - 584 131

ಈ ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.

ಕ್ವಿಜ್ - 21ರ ಸರಿಯುತ್ತರ

1. ಪ್ರೊ.ಟಿ.ಗೋವಿಂದಯ್ಯ
2. ಜಿಮ್ ಲೇಕರ್
3. ಟಾಟಾ-ಇಂಡಿಕಾ
4. ಜೆ.ಬಿ.ಪಟ್ನಾಯಕ್
5. ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್

ಸೂಚನೆಗಳು

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು. ಐದು ಜನ ಬಹುಮಾನ ವಿಜೇತರಿಗೆ ತಲಾ 100 ರೂ. ಮೌಲ್ಯದ ಪುಸ್ತಕಗಳನ್ನು ಬಹುಮಾನವಾಗಿ ನೀಡಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **15 -4 - 1999**

ವಿಜೇತರಿಗೆ 500 ರೂ. ಮೌಲ್ಯದ ಬಹುಮಾನ

ಕ್ವಿಜ್ - 22

ಪ್ರವೇಶ ಪತ್ರ

ಹೆಸರು..

ವಿಳಾಸ..

....

....

ಪಿನ್ ಕೋಡ್.......................... ದೂರವಾಣಿ..........................

1. 'ಬಿಸಿಲ ಬದುಕು' ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ "ಮತಾಂತರ ಒಂದು ಸಮಸ್ಯೆಯೇ?" ಲೇಖನ ಬರೆದವರು ಯಾರು?

   ....

2. ಈ ಬಾರಿ ವಿಶ್ವಕಪ್ ಕ್ರಿಕೆಟ್ ಪ್ರಾರಂಭವಾಗುವ ದಿನಾಂಕ ಯಾವುದು?

   ....

3. ರೈಲ್ವೇ ವಲಯವನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸುವುದು ಬೇಡ ಎಂದು ವಾದಿಸಿದ ಮಾಜಿ ಪ್ರಧಾನಿ ಯಾರು?

   ....

4. ರಾಬ್ರಿದೇವಿ ಯಾವ ರಾಜ್ಯದ ಮುಖ್ಯಮಂತ್ರಿ?

   ....

5. NMDC ವಿಸ್ತೃತ ರೂಪವೇನು?

   ....

ಪ್ರವೇಶ ಪತ್ರವನ್ನು 15.4.99ರೊಳಗೆ ಕಳುಹಿಸಬೇಕಾದ ವಿಳಾಸ :
ಸಂಪಾದಕರು, **ಬಿಸಿಲ ಬದುಕು**, ಅಂಚೆ ಪೆಟ್ಟಿಗೆ 7951,
ಬಸವೇಶ್ವರನಗರ, ಬೆಂಗಳೂರು-79.



■ ನಾರಾಯಣ ಎಂ.ಭಟ್



ಸಚಿನ್ ಹ್ಯಾಪಿ ಬರ್ತ್‌ಡೇ

ಸಂಪೂರ್ಣ ಹೆಸರು - **ಸಚಿನ್ ರಮೇಶ್ ತೆಂಡೂಲ್ಕರ್**

ಗೆಳೆಯರ ಪಾಲಿನ ಆತ್ಮೀಯ ಹೆಸರು - **'ತೆಂಡ್ಲ್ಯಾ', 'ಸಚ್ಚು'.**

ಜನ್ಮ ದಿನಾಂಕ - **24 ಏಪ್ರಿಲ್ 1973**

ಭಾರತೀಯ ಕ್ರಿಕೆಟ್ ರಂಗಕ್ಕೆ ಪದಾರ್ಪಣೆ - **15 ನವೆಂಬರ್ 1989 (16 ವರ್ಷ 205 ದಿನಗಳು)**

ಇದೇ ಏಪ್ರಿಲ್ 24ರಂದು ಸಚಿನ್ ಹುಟ್ಟುಹಬ್ಬ, ಅಂದು ಆತನಿಗೆ 26 ವರ್ಷ ತುಂಬುತ್ತದೆ. ಈ ಸಂದರ್ಭದ ವಿಶೇಷ, ವಿಸ್ತೃತ ಲೇಖನ ಇಲ್ಲಿದೆ.

ಕವಿತೆ ಬರೆಯುವುದು ಸುಲಭವೆನಿಸುವುದು. ಆದರೆ 'ಸಚಿನ್' ಬಗ್ಗೆ ಲೇಖನ ಬರೆಯುವುದು ಕಠಿಣವಾದ ಕೆಲಸ. ಉಪಮೇಯಗಳ ಕೊರತೆ ಉಂಟಾಗುತ್ತದೆ! ಹೊಸ ಪದಪುಂಜಗಳನ್ನು ಸೃಷ್ಟಿಸಬೇಕಾಗುತ್ತದೆ!

ಉತ್ಪ್ರೇಕ್ಷೆ ಎನಿಸುತ್ತಿದೆಯೇ?

'ಸಚಿನ್' ಭರ್ಜರಿ ಬ್ಯಾಟಿಂಗ್ ಮಾಡಿದ ಮಾರನೆಯ ದಿನ ಶಾರ್ಜಾದ ದಿನ ಪತ್ರಿಕೆಯೊಂದು ಹೀಗೆ ಪ್ರಕಟಿಸಿತ್ತು. ರಾತ್ರಿ - ಬೆಳಕು ಬೇಕಿಲ್ಲ! ಸಚಿನ್‌ನ ಬ್ಯಾಟಿಂಗ್ ಆರಂಭ ಆಕ್ರಮಣದ ಸ್ಥಿತಿ ತಲುಪಿದರೆ ಸಾಕು; ಇಡೀ ದೇಶದ ಸಾಮಾನ್ಯ ಜನ ಜೀವನವೇ ಏರುಪೇರಾಗುತ್ತದೆ. ಟ್ರಾಮ್, ಬಸ್ಸುಗಳಲ್ಲಿ ಜನಸಂದಣಿ ಕಮ್ಮಿಯಾಗುತ್ತದೆ. ಲಾಭ-ನಷ್ಟಗಳನ್ನು ಮರೆತು ಅಂಗಡಿಯವರು ಟ.ಪಿ.ಯ ಎದುರು ಕೂತು ಬಿಡುತ್ತಾರೆ. 'ಸಚಿನ್'ನ ಅಭಿಮಾನಿಗಳು ಪಟಾಕಿ ಹೊತ್ತಿಸುವ ತರಾತುರಿಯಲ್ಲಿರುತ್ತಾರೆ.

ಅಜ್ಜ-ಅಜ್ಜಿಯರು ಸಹ 'ಪಿರಿಪಿರಿ'



ಮಾಡುವುದನ್ನು ಬಿಟ್ಟು ಇತರರೊಂದಿಗೆ ನಕ್ಕು ನಲಿದಾಡುತ್ತಾರೆ. ಕಂಪನಿಗಳ ಎಕ್ಸಿಕ್ಯುಟಿವ್‌ಗಳು ತಮ್ಮೆಲ್ಲಾ ಅಪಾಯಂಟ್‌ಮೆಂಟ್‌ಗಳನ್ನು ಬದಿಗೊತ್ತಿ ಬಿಡುತ್ತಾರೆ. ಸದಾ ಸೀರಿಯಲ್ ಬೇಕೆನ್ನುವ ಅಕ್ಕ, ಹಾಡು ಬೇಕೆನ್ನುವ ಅಣ್ಣ, ನ್ಯೂಸ್ ಬೇಕೆನ್ನುವ ಅಪ್ಪ, ಆ್ಯಕ್ಷನ್ ಬೇಕೆನ್ನುವ ತಮ್ಮ, Channel Surfing ಮರೆತು ಸಚಿನ್‌ನ ಬ್ಯಾಟಿಂಗ್ ನೋಡಲು ಒಮ್ಮತದಿಂದ ಒಪ್ಪಿ ಬಿಡುತ್ತಾರೆ. ಇಡೀ ರಾಷ್ಟ್ರವೇ ಉಲ್ಲಾಸದ ಅಲೆಯಲ್ಲಿ ಮಿಂದು ಬಿಡುತ್ತದೆ.

ಆದರೆ, ಕ್ರಿಕೆಟ್ ಮೈದಾನದಲ್ಲಿನ ಎದುರಾಳಿಯ ಸ್ಥಿತಿ ತೀರಾ ಭಿನ್ನವಾಗಿರುತ್ತದೆ. ಸಚಿನ್ ತಮ್ಮ ಮಾನವನ್ನು ಅಷ್ಟೋ ಇಷ್ಟೋ ಉಳಿಸಿಕೊಳ್ಳಲು ಬಿಟ್ಟರೇ ಅಷ್ಟೇ ಸಾಕು! ಎಂದು ಕಾಣದ ದೇವರಲ್ಲಿ ಮೊರೆಯಿಡುತ್ತಾರೆ. ಇನ್ನು 'ಬೌಲರ್'ಗಳಂತು ತಮ್ಮ ಜೀವನದ ಅತ್ಯಂತ ಅವಮಾನದ

ಕ್ಷಣಗಳು ಆದಷ್ಟೂ ಬೇಗನೆ ಮುಗಿಯಲಿ ಎಂದು ತುಸುವೂ ವಿಳಂಬ ಮಾಡದೆ 'ಬೌಲ್' ಮಾಡುತ್ತಾರೆ.

'ಸಚಿನ್' ತೆಗೆದ ಪ್ರತಿಯೊಂದು 'ರನ್ನಿ'ಗೂ ಪ್ರತಿಯೊಬ್ಬ ಭಾರತೀಯನ ಎದೆಯನ್ನು ಒಂದು ಇಂಚಿನಷ್ಟಾದರೂ ಉಬ್ಬಿಸುವ ಸಾಮರ್ಥ್ಯ ವಿರುತ್ತದೆ!. ಆತ ಬಾರಿಸಿದ ಪ್ರತಿಯೊಂದು 'ಬೌಂಡರಿ'ಗೂ ಲಕ್ಷಾಂತರ ಪಟಾಕಿಗಳ ಮಾರ್ದನಿ ಮೊಳಗುತ್ತದೆ. ಆತ 'ಸಿಕ್ಸರ್' ಹೊಡೆದ ಕ್ಷಣವಂತು, ಇಡೀ ದೇಶವೇ ಭಾಷೆ, ವೇಷ, ಮತ, ಧರ್ಮಗಳ ಭೇದಭಾವವನ್ನು ಮರೆತು, ತಾನು ಭಾರತದಲ್ಲಿ ಜನಿಸಿರುವುದಕ್ಕೆ ಸಾರ್ಥಕತೆ ಮೂಡಿಸುತ್ತದೆ. ಇದು ಕೇವಲ ನಮಗಷ್ಟೇ ಸೀಮಿತವಲ್ಲ. ಹೊರನಾಡಿನಲ್ಲಿ ತಮ್ಮೆಲ್ಲಾ ಆಪ್ತರಿಂದ ದೂರವಿರುವ ಅನಿವಾಸಿ ಭಾರತೀಯರು ಸಹ, ಊರಿನಿಂದ ಬರುವವರಿಗೆ ಹಪ್ಪಳ, ಸಂಡಿಗೆ, ಉಪ್ಪಿನ ಕಾಯಿಯ ಜೊತೆ 'ಸಚಿನ್'ನ ಭರ್ಜರಿ ಬ್ಯಾಟಿಂಗ್‌ನ ಕ್ಯಾಸೆಟ್ ತರುವಂತೆ ದಪ್ಪ ಅಕ್ಷರಗಳಲ್ಲಿ ಬರೆಯುತ್ತಾರೆ.

ಸಚಿನ್ ಎಂಬ 'ಝೆನ್'ಗುರು'!

'ಝೆನ್' (Zen) ಎನ್ನುವುದು, ಧ್ಯಾನ ಮತ್ತು ಅಂತಃ ದೃಷ್ಟಿಯಿಂದಲೇ ಜ್ಞಾನ ಬರುತ್ತದೆ ಎಂದು ನಂಬಿರುವ ಪಂಗಡ. ಇವರ ಛಲ ಹಾಗೂ ಆತ್ಮವಿಶ್ವಾಸಕ್ಕೆ ಎಂತಹ ಕಠಿಣ ಕಾರ್ಯವೂ ಅಸಾಧ್ಯವಲ್ಲ.

'ಸಚಿನ್ ತೆಂಡೂಲ್ಕರ್' ಎಂಬ 'ಝೆನ್' ತಾನು ಸಾಧಿಸ ಹೊರಟಿರುವುದನ್ನು ಮೊದಲೇ ನಿಸ್ಸಂಶಯವಾಗಿ ಹೇಳಬಲ್ಲ ಎದೆಗಾರ. ಇದಕ್ಕೊಂದು ಚಿಕ್ಕ ನಿದರ್ಶನ ಇಲ್ಲಿದೆ.

ಆಸ್ಟ್ರೇಲಿಯಾದ ವಿರುದ್ಧ ಪಂದ್ಯದಲ್ಲಿ ನಮ್ಮ ಮೊದಲ ನಾಲ್ಕು ಜನ 'ಟಾಪ್ ಲೈನ್' ಆಟಗಾರರು 'ಪೆವಿಲಿಯನ್'ಗೆ ಮರುಳಿಬಿಟ್ಟಿದ್ದರು. ಇನ್ನುಳಿದ 94 ರನ್ ಗಳಿಸಲು ಕೇವಲ 87 ಬಾಲ್‌ಗಳು ಮಾತ್ರವೇ ಉಳಿದಿದ್ದವು. ಭಾರತೀಯ ಡ್ರೆಸ್ಸಿಂಗ್ ರೂಂನಲ್ಲಿ ವಿಷಾದದ ಹಾಗೂ ನೋವಿನ ಛಾಯೆ


ಬಾಲ್ಯ ಹಾಗೂ ಬ್ಯಾಟಿಂಗ್





ಸಚಿನ್‌ಗೆ ಹೊಡೆಯುವ ಗುಣ ಬಾಲ್ಯದಿಂದಲೇ ಬಂದದ್ದು. ಅಂದು ಕ್ಲಾಸ್‌ಮೇಟ್‌ಗಳನ್ನು ಹೊಡೆಯುತ್ತಿದ್ದ. ಇಂದು ಬಾಲ್‌ನ್ನು, ಅಷ್ಟೇ ವ್ಯತ್ಯಾಸ!

ಆತನ ಸ್ಕೂಲಿಗೆ ಬಂದ ಹೊಸ ವಿದ್ಯಾರ್ಥಿಯ ಬಗ್ಗೆ ಮಾಡುತ್ತಿದ್ದ ಮೊದಲ ವಿಚಾರಣೆಯೆಂದರೆ ಆ ಹೊಸಬ ಯಾರ್ಯಾರನ್ನು ಹೊಡೆಯಬಹುದು ಎಂದು! ಸಚಿನ್‌ನಲ್ಲಿ 'ಜಿದ್ದು' ಎನ್ನುವುದು, ಬಾಲ್ಯದಿಂದಲೇ ಮೂಡಿಬಂದದ್ದು. ಆದ್ದರಿಂದಲೇ ಇಂದಿಗೂ ಆತ ಗೆಲ್ಲಬೇಕೆಂಬ 'ಜಿದ್ದಿ'ನಿಂದಲೇ ಪ್ರತಿಬಾರಿ ಆಡುತ್ತಾನೆ. ಚಿಕ್ಕಂದಿನಲ್ಲಿ ಒಮ್ಮೆ 'ಕ್ರಿಕೆಟ್ ಕೋಚ್' ಹೆಚ್ಚು ಹೊತ್ತು ಬ್ಯಾಟ್ ಮಾಡಿದವರಿಗೆ 1 ರೂಪಾಯಿ ನಾಣ್ಯ ಕೊಡುತ್ತೇನೆ ಎಂದು ಆಮಿಷ ಒಡ್ಡಿದ. ಆದರೆ, ಪ್ರತಿಬಾರಿಯೂ ಸಚಿನ್ ನಾಣ್ಯ ಗೆಲ್ಲುತ್ತಿದ್ದರಿಂದ ಕೋಚ್ ಆ ಯೋಜನೆಯನ್ನೇ ಕೈಬಿಟ್ಟರು!



ಪ್ರಥಮಗಳು

ದಿಲೀಪ್ ಹಾಗೂ ಇರಾನಿ ಟ್ರೋಫಿ ಮತ್ತು ರಣಜಿ ಪಂದ್ಯಗಳಲ್ಲಿ ಪದಾರ್ಪಣೆಯಲ್ಲಿಯೇ ಶತಕ ಬಾರಿಸಿದ ಪ್ರಥಮನು.

ಪ್ರಥಮ ಬಾರಿಗೆ ಗಮನ ಸೆಳೆದ ಆಟ

ಗೆಳೆಯನಾದ ವಿನೋದ ಕಾಂಬ್ಳಿಯೊಂದಿಗೆ ತಮ್ಮ ಸ್ಕೂಲಿನ (ಶಾರದಾಶ್ರಮ) ಪರವಾಗಿ 664 ರನ್‌ಗಳ ಅಜೇಯ ಆಟ. ತೆಂಡೂಲ್ಕರ್ 326 ನಾಟ್‌ಔಟ್ ಹಾಗೂ ವಿನೋದ್ ಕಾಂಬ್ಳಿ 349 ನಾಟ್‌ಔಟ್!

ವಿಶ್ವ ದಾಖಲೆ

ಇಲ್ಲಿಯ ತನಕ ಅತೀ ಹೆಚ್ಚಿನ ಶತಕಗಳನ್ನು (ಒಂದು ದಿನದ ಪಂದ್ಯಗಳಲ್ಲಿ) ಬಾರಿಸಿದ ದಾಖಲೆ.

ನಾಲ್ಕು ಕ್ಯಾಲೆಂಡರ್ ವರ್ಷಗಳಲ್ಲಿ ಸತತವಾಗಿ ಸಾವಿರ ರನ್‌ಗಳನ್ನು ಗಳಿಸಿದ ಖ್ಯಾತಿ.

ಭಾರತದ ಬ್ರಾಡ್‌ಮನ್?

Cricinfo ಎಂಬ ಸಂಸ್ಥೆ ನಡೆಸಿದ ಸಮೀಕ್ಷೆಯಂತೆ ಶೇ 64 ಜನ ಹೌದು ಎಂದು ಒಪ್ಪಿಕೊಂಡರು.

ಅತ್ಯಂತ ಸ್ಮರಣೀಯ ದಿನ

1998ರ (Barbados) ಪಾಕಿಸ್ತಾನವನ್ನು ಸೋಲಿಸಿದ್ದು.

ಅತ್ಯಂತ ಕೆಟ್ಟ ದಿನ

1998ರಲ್ಲಿ ಬಾರಬಾಡೋಸ್ ಟೆಸ್ಟ್‌ನಲ್ಲಿ ವೆಸ್ಟ್ ಇಂಡೀಸ್‌ಗೆ ಸೋತ ದಿನ.

ಸ್ಮರಣೀಯ ಮ್ಯಾಚ್

ಪಾಕಿಸ್ತಾನದ ವಿರುದ್ಧದ ಮ್ಯಾಚ್ (1996ರ ವರ್ಲ್ಡ್‌ಕಪ್)

ಫೇವರೇಟ್ ಒಂದು ದಿನದ ಆಟ

1993ರಲ್ಲಿ ದಕ್ಷಿಣ ಆಫ್ರಿಕದ ವಿರುದ್ಧ (ಕಲ್ಕತ್ತಾದಲ್ಲಿ)

ಫೆವರೇಟ್ ಮೈದಾನ

ಸಿಡ್ನಿ (ಆಸ್ಟ್ರೇಲಿಯಾ)

ಮೆಚ್ಚಿನ ಹೀರೋಗಳು

ಸುನೀಲ್ ಗವಾಸ್ಕರ್, ಸಂದೀಪ್ ಪಾಟೀಲ್, ವಿವ್ ರಿಚರ್ಡ್ಸ್ ಹಾಗೂ ಇಮ್ರಾನ್ ಖಾನ್.

ಇನ್ನಿತರ ಮೆಚ್ಚಿನ ಆಟಗಾರರು

ಪಿಟ್ ಸಾಂಪ್ರಸ್, ಬೋರಿಸ್ ಬೇಕರ್, ಡಿಯೊಗ್ ಮರಡೋನ.

ಮೆಚ್ಚಿನ ನಾಯಕ/ನಾಯಕಿಯರು

ಅಮಿತಾಭ ಬಚ್ಚನ್, ನಾನಾ ಪಾಟೇಕರ್, ಮಾಧುರಿ ದೀಕ್ಷಿತ್.

ಮೆಚ್ಚಿನ ಗಾಯಕ

ಕಿಶೋರ್ ಕುಮಾರ

ಮೆಚ್ಚಿನ ಉಡುಪು

ಜಾಕೆಟ್, ಟೈ, ಜೀನ್ಸ್ ಮತ್ತು ಟೀ ಶರ್ಟ್.

ಮನದಾಸೆ

ಅಬ್ಬರದ ಸಂಗೀತ ಕೇಳುವುದು, ಚಿತ್ರಗಳನ್ನು ನೋಡುವುದು ಕಾರನ್ನು ಬಹುದೂರಕ್ಕೆ ಓಡಿಸಿಕೊಂಡು ಹೋಗುವುದು.

'ಮಿಡ್ಲ್ ಕ್ಲಾಸ್' ಮಾಣಿಕ್ಯ


ಭಾರತದಲ್ಲಿ ಮಿಡ್ಲ್‌ಕ್ಲಾಸ್ ಎನ್ನುವ ವರ್ಗಕ್ಕೆ ಅತ್ಯಂತ ಆತ್ಮೀಯವಾದ ಹೆಸರು ಸಚಿನ್. ಇದಕ್ಕೆ ಕಾರಣವೆಂದರೆ ಆತ ಅವರೆಲ್ಲರ ಪ್ರತಿನಿಧಿ. ಅವರ ಆಸೆ, ಕನಸುಗಳನ್ನು ನನಸು ಮಾಡಬಲ್ಲ ಮಾಂತ್ರಿಕ. ಈರುಳ್ಳಿ ಬೆಲೆ ಏರಿರಲಿ ಅಥವಾ ಡ್ರಾಪ್ಸಿ ರೋಗ ಊರಲ್ಲಿ ಹರಡಿರಲಿ ಜನ ಮಾತ್ರ ಸಚಿನ್ ಬ್ಯಾಟಿಂಗ್‌ನ್ನು ನೋಡಿ ತಮ್ಮ ದೈನಂದಿನ ಕಷ್ಟವನ್ನು ಮರೆತು ಬಿಡುತ್ತಾರೆ. ಅಂತಹ ಮನೋಸ್ಪರ್ಶಿ ಚಿಕಿತ್ಸಕ ಗುಣವಿದೆ ಈ 'ಮಿಡ್ಲ್‌ಕ್ಲಾಸ್' ಮ್ಯಾಜಿಶಿಯನ್ ಬಳಿ!

ಸಚಿನ್ ಹುಟ್ಟಿ ಬೆಳೆದದ್ದು ಮಧ್ಯಮ ವರ್ಗದ ಕುಟುಂಬದಲ್ಲಿ. ತಂದೆ ಬಾಂಬೆ ವಿಶ್ವ ವಿದ್ಯಾಲಯದ ಚಿನ್ನದ ಪದಕ ಪಡೆದ ಸಾಹಿತ್ಯಾಭ್ಯಾಸಿ, ತಾಯಿ ಎಲ್.ಐ.ಸಿ.ಯಲ್ಲಿ ಕ್ಲರ್ಕ್. ಅವನ ಅಜ್ಜ ದೈವಭಕ್ತ. ಮೊಮ್ಮಗ ಕ್ರಿಕೆಟ್ ಟೀಮಿಗೆ 'ಸೆಲೆಕ್ಟ್' ಆದ ದಿನ ದೇವರಿಗೆ ಸಿಹಿ ನೈವೇದ್ಯ ಅರ್ಪಿಸಿದ.

ಸಚಿನ್‌ಗೆ 3 ಜನ ಸಹೋದರರು ಹಾಗೂ ಇಬ್ಬರು ಸಹೋದರಿಯರು. ಒಟ್ಟು 7 ಜನರ ಈ ಸಂಸಾರ ಎರಡು ರೂಮಿನ ಕಿಚನ್ ಕಮ್ ಹಾಲ್ ಹೊಂದಿದ ಫ್ಲಾಟ್‌ನಲ್ಲಿ ವಾಸಿಸುತ್ತಿತ್ತು.

ಅಣ್ಣ 'ಅಜಿತ್'ನ ಬಗ್ಗೆ ಸಚಿನ್‌ಗೆ ತುಂಬಾ ಅಭಿಮಾನ. ಬಾಲ್ಯದ ಗುರು ಹಾಗೂ ಮಾರ್ಗದರ್ಶಕ ಎಂದು ಇಂದಿಗೂ ಹೇಳಿ ಕೊಳ್ಳುತ್ತಾನೆ ಸಚಿನ್. ಆಟದಲ್ಲಿ ಸದಾ ಮುಂದಿದ್ದ ಸಚಿನ್, ಹೈಯರ್ ಸೆಕೆಂಡರಿಯಲ್ಲಿ ಡುಮುಕಿ ಹೊಡೆದ!

ತನಗಿಂತಲೂ ವಯಸ್ಸಿನಲ್ಲಿ ಹಿರಿಯಳಾದ, ವೃತ್ತಿಯಿಂದ ವೈದ್ಯೆಯಾಗಿರುವ 'ಅಂಜಲಿ'ಯ ಪ್ರೇಮ ಪಾಶಕ್ಕೆ ಸಿಲುಕಿ, ಅವಳನ್ನೇ ಮದುವೆ ಯಾಗಿ ಈಗ ಮುದ್ದಿನ ಮಗಳೊಂದಿಗೆ ಆದಷ್ಟು ಹೆಚ್ಚಿನ ಸಮಯ ಕಳೆಯಲು ಇಚ್ಛಿಸುತ್ತಾನೆ. ಸಚಿನ್‌ಗೆ ತಾನು ಬೆಳೆದು ಬಂದಿರುವ ಮಿಡ್ಲ್‌ಕ್ಲಾಸಿನ ಬಗ್ಗೆ ತುಂಬಾ ಅಭಿಮಾನವಿದೆ. ಅದುವೇ ತನ್ನಲ್ಲಿನ ಜಿಗುಟುತನ, ಲೆಕ್ಕಾಚಾರದ ಪ್ರವೃತ್ತಿ ಹಾಗೂ ಸವಾಲನ್ನು ಎದುರಿಸುವ ಗುಣಗಳಿಗೆ ಕಾರಣ ಎಂದು ಸಚಿನ್ ವಿಶ್ಲೇಷಿಸುತ್ತಾನೆ.



ಸಚಿನ್ ಬಗ್ಗೆ ಇತರರು

ಭಾರತ ಕಂಡ ಮಹಾನ್ ಬ್ಯಾಟ್ಸ್‌ಮನ್‌ಗಳ ಪೈಕಿ ಪ್ರಥಮ ಸ್ಥಾನ ಸಚಿನ್‌ಗೇ ಸಲ್ಲಬೇಕು

-ರವಿ ಶಾಸ್ತ್ರಿ

ಸಚಿನ್ ಬ್ಯಾಟಿಂಗ್ ಮಾಡ ಹೊರಟ ಕ್ಷಣ ಇಡೀ ರಾಷ್ಟ್ರವೇ ಅವನ ಬೆಂಗಾವಲಿಗೆ ನಿಲ್ಲುತ್ತದೆ. ಇದು ಎಂತಹವರಿಗೂ ಅಸೂಯೆ ಉಂಟು ಮಾಡುವಂತಹದ್ದು.

- ಅಜಯ್ ಜಡೇಜಾ

ಸಚಿನ್‌ನನ್ನು ತಡೆಗಟ್ಟುವ ಒಂದೇ ವಿಧಾನವೆಂದರೆ ಆತನನ್ನು ಬ್ಯಾಟ್ ಮಾಡದಿರುವಂತೆ ಬೇಡಿಕೊಳ್ಳುವುದು.

- ವೆಸ್ಲೆಹಾಲ್ (ವೆಸ್ಟ್‌ಇಂಡೀಸ್)

ಆತ ಕ್ರಿಕೆಟ್‌ಗೆ ತನ್ನದೇ ಆದ ವ್ಯಾಖ್ಯಾನ ನೀಡಿದ್ದಾನೆ

- ರಿಚಿ ಬೆನೋ (ಆಸ್ಟ್ರೇಲಿಯಾ)

ಅವನೊಬ್ಬ ಜೀನಿಯಸ್!

- ಬ್ರಿಯಾನ್ ಲಾರಾ

ಅವನು 99.5 ಪ್ರತಿಶತದಷ್ಟು ಪರ್‌ಫೆಕ್ಟ್

- ವಿವ್ ರಿಚರ್ಡ್ಸ್



ಭಾರತಕ್ಕೆ ದೇವರು ನೀಡಿದ ಕಾಣಿಕೆ ಸಚಿನ್!

- ಸ್ಕೂಲ್ ಹುಡುಗರು,

'ಸಚಿನ್'ನನ್ನು ನಾವು ಪೂಜಿಸುತ್ತೇವೆ.

- ಕಾಲೇಜು ಹುಡುಗಿಯರು

ಆವರಿಸಿಕೊಂಡಿತ್ತು. ಬಂದ ಪ್ರೇಕ್ಷಕರಲ್ಲಿ ಸುಮಾರು ಜನ ದೇಶದ ಸೋಲು ಖಚಿತ ಎಂದುಕೊಂಡು ಹೊರನಡೆದರು. ಅವರೆಲ್ಲರ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. ಭಾರತೀಯ ತಂಡದ ಕೋಚ್ ಆಗಿದ್ದ ಅಂಷುಮನ್ ಗಾಯಕವಾಡರು ಸಚಿನ್ ಬಳಿ ಹೋಗಿ ತಮ್ಮ ಆತಂಕ ವ್ಯಕ್ತಪಡಿಸಿದರು. ಆದರೆ ಸಚಿನ್ ಮಾತ್ರ ಎಳ್ಳಷ್ಟು ವಿಚಲಿತ ನಾಗಿರಲಿಲ್ಲ. 'Dont worry I will be there till the end!' ಎಂತಹ ಆತ್ಮ ವಿಶ್ವಾಸದ ನುಡಿಗಳು!

ಸಚಿನ್ ಮೈದಾನಕ್ಕೆ ಇಳಿದ ಮೇಲೆ ಕ್ರಿಕೆಟ್ ಎಂಬ ರಣರಂಗದ ಕಾದಾಟದ ಸೂತ್ರಗಳೇ ಬದಲಾಗುತ್ತವೆ. ಇಡೀ ಆಸ್ಟ್ರೇಲಿಯ ತಂಡ ಒಬ್ಬನ ಸುತ್ತ ಚಕ್ರವ್ಯೂಹ ಹೆಣೆಯತೊಡಗಿತು.

ಎಲ್ಲಾ 11 ಜನ ಆಟಗಾರರ ಏಕೈಕ ಲಕ್ಷ್ಯ ಒಬ್ಬನೇ ಒಬ್ಬ, ಆತನೇ ಸಚಿನ್! ಆತನಿದ್ದರೆ ತಮಗೆ ಸೋಲು! ಆತ ಹೋದರೆ ಭಾರತಕ್ಕೆ ಸೋಲು!. ಆದರೆ ಸಚಿನ್ ಎಂಬ 'ಝಿನ್'ಗುರು'ವನ್ನು ಸೋಲಿಸುವ ಗಂಡೆದೆಯುಳ್ಳವರು ಬಹಳ ವಿರಳ. ಇದನ್ನು ಅರಿಯಲು ಆಸ್ಟ್ರೇಲಿಯ ತಂಡಕ್ಕೆ ಹೆಚ್ಚು ಹೊತ್ತು ಹಿಡಿಯಲಿಲ್ಲ, 'ಸಚಿನ್' ಏಕಾಂಗಿ ಯಾಗಿಯೇ ಹೋರಾಡಿದ. ಕೊನೆಗೂ ಸೋಲಿನ ದವಡೆಯಿಂದ 'ವಿಜಯಶ್ರೀ'ಯನ್ನು ಹೊರ ಗೆಳೆದು ವರಿಸಿಯೇಬಿಟ್ಟ!

ಪಂದ್ಯದ ನಂತರ ಸಚಿನ್ ನುಡಿದ ಮಾತೆಂದರೆ "I dont think anything is impossible'.

ಇದುವೇ, ಸಚಿನ್ ಮತ್ತು ಇತರರಿಗೆ ಇರುವ ವ್ಯತ್ಯಾಸ. ಇತರ ಆಟಗಾರರೆಲ್ಲ ಸೋಲನ್ನು ಖಚಿತವೆಂದು ಒಪ್ಪಿಕೊಂಡಾಗ ಸಚಿನ್ ಗೆಲುವನ್ನು ಸಾಧಿಸುವ ಛಲದಿಂದ ಆಡುತ್ತಾನೆ!

ಸಚಿನ್ ಎಂಬ ಬ್ಯಾಟಿಂಗ್ ಶಕ್ತಿಗೆ ಮಿತಿ ಹಾಕಲು ಸಾಧ್ಯವಿಲ್ಲ. ಅದಕ್ಕೆ ಕಡಿವಾಣ ಹಾಕಬೇಕು ಎಂಬ ಹಂಬಲ ಉಳ್ಳವರಿಗೆ ಬರುವ ದುರ್ಗತಿಗೆ ಜಿಂಬಾಬ್ವೆಯ ಬೌಲರ್ ಓಲೂಂಗಾನೇ ಒಂದು ಸಜೀವ ಉದಾಹರಣೆ. ಒಮ್ಮೆ ಶಾರ್ಜಾದ ಮ್ಯಾಚೊಂದರಲ್ಲಿ ಸಚಿನ್ ಬಹಳ ಸುಲಭ ರೀತಿಯಲ್ಲಿ ಓಲೂಂಗಾನಿಗೆ ಬಲಿಯಾದಾಗ ಆತ ತುಂಬಾ ಹೆಮ್ಮೆಯಿಂದ ಬೀಗಿದ್ದ. ಆ ಪಂದ್ಯದಲ್ಲಿ ಜೊತೆಯಾಟಗಾರನಾಗಿದ್ದ 'ಜಡೇಜ' ಸಚಿನ್‌ನನ್ನು ರೇಗಿಸುತ್ತಾ 'ಇದೇನೋ ತುಂಬಾ ಬಾಲಿಶವಾಗಿ ಔಟ್ ಆಗಿಬಿಟ್ಟೆ' ಎಂದು ತಮಾಶೆ ಮಾಡಿದ. ಅಷ್ಟೇ ಸಾಕಾಯಿತು, ಸಚಿನ್ ಎಂಬ ಜ್ವಾಲಾಮುಖಿ ಸ್ಫೋಟಿಸಲು!. ಮುಂದಿನ ಮ್ಯಾಚ್‌ನಲ್ಲಿ 'ಸ್ಟೇಡಿಯಂ'ನ ಎಲ್ಲಾ ಕಡೆಗಳಲ್ಲೂ ಸಚಿನ್ ರನ್‌ಗಳ ಸುರಿಮಳೆಗೈದ. ಕೇವಲ 92 ಬಾಲ್‌ಗಳಲ್ಲಿ 124 ರನ್ ಪೇರಿಸಿದ! ದಿಕ್ಕೇ ತೋಚದ ಓಲೂಂಗಾ ಕೂಡಲೇ ಟ್ರಾವೆಲ್

'ವಡಾಪಾವ್'

ಬ್ರೆಡ್ ಹಾಗೂ ಪಲ್ಯದಿಂದ ತಯಾರಾದ ಮುಂಬೈನ ಜನಪ್ರಿಯ ತಿನಿಸಾದ ವಡಾಪಾವ್ 'ಸಚ್ಚು'ವಿಗೂ ಪ್ರಿಯವಾದ ತಿಂಡಿಯಾಗಿತ್ತು. 'ಸಚಿನ್'ನ ಬ್ಯಾಟಿಂಗ್ ಪವರ್‌ಗೆ ಕಾರಣ 'ವಡಾ ಪಾವ್' ಎಂದು ಗೆಳೆಯರು ತಮಾಶೆ ಮಾಡುತ್ತಿದ್ದರು. ಸಚಿನ್‌ಗೆ ಒಂದೆರಡು ವಡಾಪಾವ್‌ನಿಂದ ಹೊಟ್ಟೆ ತುಂಬುತ್ತಿರಲಿಲ್ಲ. ಆದ್ದರಿಂದ ಆತ ಪಂದ್ಯ ಕಟ್ಟಿ 10–12 ವಡಾಪಾವ್‌ಗಳನ್ನು 'ಗುಳುಂ' ಮಾಡುತ್ತಿದ್ದ. ಹೀಗೆ 'ಆಟ ಮತ್ತು ಊಟ'ದ ಸ್ಪರ್ಧೆಯಲ್ಲಿ ಸದಾ ಮುನ್ನುಗ್ಗುವ ಪ್ರವೃತ್ತಿಯನ್ನು ರೂಢಿಸಿಕೊಂಡ.

ಸಚಿನ್ ಬಾಲ್ಯವು ಮಧ್ಯಮ ವರ್ಗದ ಪರಿಸರದಲ್ಲಿ ಬೆಳೆದು ಬಂದಿದ್ದರಿಂದ; ಆ ವರ್ಗದಲ್ಲಿನ ಟ್ರೇಡ್ ಮಾರ್ಕ್‌ಗಳಾದ ರೇಶನ್ ಹಾಗೂ ಬಸ್‌ಗಾಗಿ ಕ್ಯೂ ನಿಲ್ಲುವುದು, ಗಣಪತಿ ಉತ್ಸವದಲ್ಲಿ ಪಾಲ್ಗೊಳ್ಳುವುದು, ಆಗೊಮ್ಮೆ ಈಗೊಮ್ಮೆ ಅಕ್ಕ-ಪಕ್ಕದವರೊಂದಿಗೆ ಕಾದಾಡುವುದು, ಹೀಗಾದ ಮಾರನೆಯ ದಿನವೇ ಎಲ್ಲವನ್ನು ಮರೆತು ಪುನಃ ಒಟ್ಟಾಗುವುದು, ತುಸು ಪುಂಡಾಟಿಕೆ, ಸ್ವಲ್ಪ ಚೆಲ್ಲಾಟ, ಒಂದಿಷ್ಟು ದ್ವೇಷ ಹಾಗೂ ಅಸೂಯೆಗಳನ್ನು ತನ್ನಲ್ಲಿ ಮೈಗೂಡಿಸಿಕೊಂಡ.

ಬಾಲ್ಯದಲ್ಲಿ ಸಚಿನ್‌ನಿಗೆ ಪ್ರಿಯವಾದ ಒಂದು ಹವ್ಯಾಸವೆಂದರೆ ಮೀನು ಸಾಕುವುದು! ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ 'ಗಟಾರ್' ದಿಂದ ಕಪ್ಪುಬಣ್ಣದ ಮೀನುಗಳನ್ನು ಹಿಡಿದು ಬಾಟಲಿಯ ಶುದ್ಧ ನೀರಿನಲ್ಲಿ ಸಾಕುವ ಚಟ್ಟ ಆತನಿಗಿತ್ತು.

ಎಳೆಯ ಮಕ್ಕಳಿಗೆ ಬೇಸಿಗೆ ರಜೆ ಬಂತೆಂದರೆ ಎಲ್ಲಿಲ್ಲದ ಖುಶಿ. ಬೇಸಿಗೆ ರಜೆಯಲ್ಲಿ ಟೂರ್ ಹಾಗೂ ಹೊಸ ಹೊಸ ವಸ್ತುಗಳನ್ನು ಕೊಳ್ಳುವ ಭರದಲ್ಲಿ ಇತರರಿದ್ದರೆ, ಸಚಿನ್ ಮಾತ್ರ ದಿನದಲ್ಲಿ ಎಷ್ಟು ಹೆಚ್ಚಿನ ಹೊತ್ತು ಕ್ರಿಕೆಟ್ ಮೈದಾನದಲ್ಲಿ ಕಳೆಯಲು ಸಾಧ್ಯ ಎಂದು ಲೆಕ್ಕ ಹಾಕುತ್ತಿದ್ದ. ಬೇಸಿಗೆ ರಜೆಯಲ್ಲಿ ಅವನ ದಿನಚರಿ ಹೀಗಿತ್ತು ಬೆಳಿಗ್ಗೆ 7 ರಿಂದ 10ರ ವರೆಗೆ ಪ್ರಾಕ್ಟೀಸ್, 10 ಗಂಟೆಯಿಂದ 4 ಗಂಟೆಯವರೆಗೆ ಕ್ರಿಕೆಟ್ ಮ್ಯಾಚ್ ಮತ್ತೇ ಸಂಜೆ 4 ಗಂಟೆಯಿಂದ 7 ಗಂಟೆಯವರೆಗೆ ಪುನಃ ಪ್ರಾಕ್ಟೀಸ್ ಈ ಮಧ್ಯೆ ಬಿಡುವುಮಾಡಿಕೊಂಡು 'ವಡಾಪಾವ್' ಸೇವನೆ!

ಮುಂಚಿನಿಂದಲೂ ಸಚಿನ್‌ಗೆ ಬಲ, ಶಕ್ತಿ ಹಾಗೂ ವೇಗದಲ್ಲಿ ನಂಬಿಕೆ. ಒಮ್ಮೆ ಮುಂಬಯಿಯ ಕ್ರಾಸ್ ಮೈದಾನದಲ್ಲಿ ನಡೆದ ಮ್ಯಾಚ್‌ನಲ್ಲಿ ತನ್ನ ಕಡು ವಿರೋಧಿ ತಂಡವಾದ ಬಾಂದ್ರ ಉರ್ದು ತಂಡದ ವಿರುದ್ಧ ಆಡುತ್ತಾ ಬಾಲ್‌ಗಳನ್ನು ಶಕ್ತಿಯುತವಾಗಿ ಬಾರಿಸಿ ಒಟ್ಟು 12 ಬಾಲ್‌ಗಳು ಒಂದೇ ಮ್ಯಾಚಿನಲ್ಲಿ ಕಳೆದು ಹೋಗುವಂತೆ ಮಾಡಿದ!. ಕೊನೆಗೆ ಮ್ಯಾಚಿನ ಅಂಪೈರುಗಳು ಮಧ್ಯಸ್ಥಿಕೆ ವಹಿಸಿ, ಇನ್ನು ಮೇಲೆ 'ಬಾಲ್'ಗಳನ್ನು ಅಷ್ಟು ಜೋರಾಗಿ ಹೊಡೆಯಬೇಡ ಎಂದು ಹೇಳಬೇಕಾಯಿತು!

ಏಜೆನ್ಸಿಗೆ ಫೋನ್ ಮಾಡಿ ಜಿಂಬಾಬ್ವೆಗೆ ತಕ್ಷಣದ ಫ್ಲೈಟ್‌ಗೆ ತನಗೊಂದು ಟಿಕೇಟು ಬೇಕೆಂದ!

ಸಚಿನ್‌ನನ್ನು ಮೈದಾನದ ಮೇಲೆ ಕೆರಳಿಸುವ ತಪ್ಪನ್ನು ಯಾವ ಬೌಲರ್ ಸಹ ಮಾಡಲಾರ. ಹಾಗೆ ಮಾಡಿದವನಿಗೆ ಮಣ್ಣು ಮುಕ್ಕುವುದೊಂದೇ ಕೊನೆಗೆ ಉಳಿಯುವುದು. ಬೇಕಾದರೆ ಪಾಕಿಸ್ತಾನದ 'ಸ್ಪಿನ್' ಬೌಲರ್ ಅಬ್ದುಲ್ ಕಾದಿರ್ ಅವರನ್ನು ಕೇಳಿ ನೋಡಿ. ಭಾರತಕ್ಕೆ ಮ್ಯಾಚ್ ಗೆಲ್ಲಲು 2 ಓವರಗಳಲ್ಲಿ 40 ರನ್ ಬೇಕಿತ್ತು. ಉಳಿದದ್ದು ಕೇವಲ ಸಚಿನ್ ಮಾತ್ರ. ಆತನ ಹತ್ತಿರ ಬಂದ ಅಬ್ದುಲ್ ಕಾದಿರ್ 'Have guts hitme' (ಧೈರ್ಯವಿದ್ದರೆ ನನ್ನನ್ನು ಹೊಡಿ) ಎಂದು ಕೆಣಕಿದ. ಇದರ ಪರಿಣಾಮ ಏನೆಂದು ಬಹುಶಃ ಅಬ್ದುಲ್ ಕಾದಿರ್ ಊಹಿಸಿರಲಿಲ್ಲ. ಆ ಒಂದು ಓವರ್‌ನಲ್ಲಿ 'ಸಚಿನ್' 27 ರನ್‌ಗಳನ್ನು ಬಾರಿಸಿಯೇಬಿಟ್ಟ! ಅಬ್ದುಲ್ ಕಾದಿರ್‌ನ ಪಾಲಿಗೆ ಪಶ್ಚಾತ್ತಾಪ ಮಾತ್ರವೇ ಉಳಿಯಿತು! ಪಾಕಿಸ್ತಾನ ಮ್ಯಾಚ್‌ನ್ನು ಸೋತಿತು!! ಇದು ಸಚಿನ್ ಪ್ರಥಮ ಟೆಸ್ಟ್ ಸರಣಿಯಲ್ಲಿ ನಡೆದ ಘಟನೆ!

'ಝೀನ್'ಗಳು ಹಠವಾದಿಗಳು, ತಾವು ಅಂದುಕೊಂಡಂತೆಯೇ ಎಲ್ಲವೂ ನಡೆಯಬೇಕೆಂದು ಹಠ ತೊಡುತ್ತಾರೆ. ಇದರಿಂದ ಯಾರಿಗೆ ಏನಾದರೂ ಪರವಾಗಿಲ್ಲ, ತಮ್ಮ ಗುರಿ ಸಾಧನೆಯಾದರೆ ಸಾಕು. ಒಂದು ವೇಳೆ ಎದುರಾಳಿಯು 'ಝೀನ್'ಗಳ ಈ ಸಾಧನೆಗೆ ಅಡ್ಡಿ ತರುತ್ತಾನೆ ಎಂದಾದರೆ, ಅದಕ್ಕೆ 'ಝೀನ್'ಗಳ ಅಭ್ಯಂತರವಿರುವುದಿಲ್ಲ! ಇದುವೇ ಅವರ ಹಠಗುಣದ ಮೂಲ ಮಂತ್ರ. ಎದುರಾಳಿಯನ್ನು ತಮ್ಮ ಬಲೆಗೆ ಬೀಳಿಸಲು ಇವರು ತಮ್ಮನ್ನು ತಾವೇ ದುರ್ಬಲರು ಎಂದು ತೋರಿಸಿಕೊಳ್ಳುತ್ತಿರುತ್ತಾರೆ. ಪಾಪ ಇದನ್ನು ನಿಜವೆಂದು ನಂಬಿದ ಎದುರಾಳಿ ತನ್ನ ಅರಿವಿಗೆ ಬಾರದಂತೆಯೇ ಇವರ ಜಾಲದಲ್ಲಿ ಸಿಕ್ಕು ವಿಲವಿಲ ಒದ್ದಾಡುತ್ತಾನೆ. ಇದುವೇ 'ಸಚಿನ್' ಎಂಬ 'ಝೀನ್ ಗುರು'ವಿನ



ಸಚಿನ್ ವಿಶೇಷಗಳು

ಚಿಕ್ಕಮೂರ್ತಿ

ಸಚಿನ್ ದೇಹದ ಎತ್ತರ ಅವನ ಅತೀ ವಿಶಿಷ್ಟ ಆಟಕ್ಕೆ ಕಾರಣ.

ಎತ್ತರ 5 ಅಡಿ 4 ಇಂಚು. ಈ ಪುಟ್ಟ ಆಕಾರದಿಂದ ದೇಹದ ಬ್ಯಾಲೆನ್ಸಿಂಗ್ ಅತೀ ಸುಲಭ.

ಕಣ್ಣುಗಳು

'ಬಾಲ್'ನ್ನು ತುಂಬಾ ದೂರದಿಂದಲೇ ಗುರುತಿಸಿ ಅದರ 'ಪಥ'ವನ್ನು ಅಂದಾಜು ಹಾಕಬಲ್ಲ ಶಕ್ತಿ ಪಡೆದಿವೆ.

ಮೆದುಳು

'ಬ್ಯಾಟ್' ಮಾಡುವ ಮಾಸ್ಟರ್ ಪ್ಲಾನ್ ಅದರಲ್ಲಿ ಸದಾಸಿದ್ಧ. ಇಡೀ ಮೈದಾನದ ಚಿತ್ರಣವೇ ಅಲ್ಲಿರುತ್ತದೆ.

ತೊಡೆಗಳು

ಆ್ಯಂಡ್ರೋ ಕೋಕಿನ್ಸ್ ಎಂಬ ಕೋಚ್‌ನ ಪ್ರಕಾರ, ಅತ್ಯಂತ ತ್ವರಿತವಾಗಿ ವಿಕೆಟ್‌ಗಳ ಮಧ್ಯೆ ರನ್ ತೆಗೆಯಲು ಸಚಿನ್‌ಗೇ ಹೇಳಿ ಮಾಡಿಸಿದಂತಿವೆ.

ಮುಗುಳ್ನಗೆ

ಇದೊಂದು ಸಚಿನ್‌ನ ಮಾರಕ ಅಸ್ತ್ರ. ಆತ ಬ್ಯಾಟ್ ಮಾಡುವಾಗ ಸದಾ ನಗುತ್ತಿರುವಂತಹ ಮುಖ ಚಹರೆ ಇರುತ್ತದೆ. ಆದರೆ, ನಿಜಕ್ಕೂ ಆತ ನಗುತ್ತಿರುವುದಿಲ್ಲ. ಆತನ ಮುಖದ ಸ್ನಾಯುಗಳ ವಿನ್ಯಾಸವೇ ಹಾಗಿದೆ. ಆದರೆ ಪಾಪ ಬೌಲರುಗಳು ಇದನ್ನು ತಪ್ಪಾಗಿ ತಿಳಿದು ಆತ ತಮ್ಮ ಬಾಲ್‌ಗಳ ಬಗ್ಗೆ ತಾತ್ಸಾರದ ನಗೆ ಬೀರುತ್ತಿದ್ದಾನೆ ಎಂದೆಣಿಸಿ ರೊಚ್ಚಿಗೆದ್ದು 'ಬೌಲ್' ಮಾಡುತ್ತಾರೆ. ಅದಕ್ಕೆ ಉತ್ತರವಾಗಿ ಸಚಿನ್ ಅಂತಹ ಬೌಲ್‌ಗಳನ್ನು ಸ್ಟೇಡಿಯಂ ಪೆವಿಲಿಯನ್‌ಗೆ ಹೊಡೆದು, 'ಬೌಲರ್'ಗಳನ್ನು ಇನ್ನಷ್ಟು ಕೆರಳಿಸಿ ಬಿಡುತ್ತಾನೆ!

ಸಚಿನ್ ಆಯುಧಗಳು

'ಕ್ರಿಕೆಟ್'ನಲ್ಲಿ ಗೆಲ್ಲಲು ಕೇವಲ ಮನೋಬಲ, ಚಾಣಾಕ್ಷತನ ಇದ್ದರಷ್ಟೇ ಸಾಲದು. ನೀವು ಬಳಸುವ ಪರಿಕರಗಳು ಬಹುಮುಖ್ಯ.

ಪ್ಯಾಡ್ಸ್

ಲೈಟ್ ವೆಯಿಟ್ ಪ್ಯಾಡ್ಸ್ ಬಳಸುತ್ತಾನೆ. ಈ ಪ್ಯಾಡಿಗೆ ಬಡೆದ ಚೆಂಡು ಜಾರಿಕೊಳ್ಳುತ್ತದೆ. ಭಾರವಾದ ಪ್ಯಾಡಿಗೆ ತಗುಲಿದ ಚಂಡು ನೆಲಕ್ಕೆ ಬೀಳುತ್ತದೆ.

ಫುಟ್‌ವೇರ್


ಆಫ್ ಸ್ಟೈಕರ್ ಹೊಂದಿರುವ ಶೂಸ್.

ಬ್ಯಾಟ್

ಭಾರವಾದ ಬ್ಯಾಟ್! (2 ಪೌಂಡ್ ಹಾಗೂ 12 ಔನ್ಸ್ ತೂಕ) ಎತ್ತರಕ್ಕೆ ಬರುವ ಬಾಲ್‌ಗಳನ್ನು ಶಕ್ತಿಯುತವಾಗಿ ಹೊಡೆಯಲು ಇದು ಪ್ರಯೋಜನಕಾರಿ.

ಗ್ರಿಪ್ಸ್


ಹ್ಯಾಂಡಲ್‌ಗೆ 3 ಗ್ರಿಪ್ಸ್‌ಗಳನ್ನು ನೀಡುತ್ತಾನೆ.



ಬ್ರಹ್ಮ ರಹಸ್ಯ.

ಸಚಿನ್ ತಮ್ಮ ಬೌಲಿಂಗ್‌ನ್ನು ತುಂಬಾ ಮರ್ಯಾದೆ ಕೊಟ್ಟು ಆಡುತ್ತಿದ್ದಾನೆ ಎಂದು ಬೌಲರ್‌ಗಳು ನಂಬಿ ಬಿಟ್ಟಿರುತ್ತಾರೆ.

ಆದರೆ, ನಿಜಕ್ಕೂ ಇದು ಆ 'ಬೌಲರ್'ಗಳ ಬಗೆಗೆ ಸಚಿನ್‌ಗೆ ಇರುವ ಗೌರವವಲ್ಲ. ಮೊದಲೆರಡು ಓವರ್‌ಗಳಲ್ಲಿ ಆತನು ಬೌಲರ್‌ನಿಗೆ ಈ ರೀತಿ ಹುಸಿ ನಂಬಿಕೆ ಮೂಡಿಸಿ ಬಿಟ್ಟು, ತನಗೆ ಅನುಕೂಲವಾಗುವ ರೀತಿಯಲ್ಲಿಯೇ ಅವರು ಬೌಲಿಂಗ್ ಮಾಡುವಂತೆ ಮಾಡಿಬಿಡುತ್ತಾನೆ. ಆನಂತರ ನಡೆಯುವುದು ನಿಮಗೆ ಗೊತ್ತೇ ಇದೆ. ಇಂತಹ ಬೌಲರ್‌ಗಳ 'ಬಾಲ್'ಗಳು ಸೂರ್ಯಮಂಡಲದ ಗ್ರಹಗಳಂತೆ ಗಾಳಿಯಲ್ಲಿಯೇ ತಿರುಗುತ್ತಾ ಇರುತ್ತದೆ! ಇಲ್ಲಿ ಬೌಲರ್‌ನ್ನು ಕಪಟ ನಾಟಕದಿಂದ ವಂಚಿಸುವ ಜಾಣ ತಂತ್ರವಿದೆ. 'ಕ್ರಿಕೆಟ್' ಆಟದ ರಹಸ್ಯ ಸೂತ್ರಗಳು ಇಲ್ಲಿ ಅಡಕವಾಗಿವೆ.



'ಸಚಿನ್' ಆಟದಲ್ಲಿ ಒಂದು ತರಹದ 'ಸೊಕ್ಕು' ಇದೆ. ಇದು ಎದುರಾಳಿಯ ಮೈಯಲ್ಲಿ ನಡುಕ ಹುಟ್ಟಿಸುವ ಸಲುವಾಗಿ ಮೂಡಿಸಿಕೊಂಡ 'ಸೊಕ್ಕು'. ಇದರ ಬಲದಿಂದಲೇ ಸಚಿನ್ ಎದುರಾಳಿಯು ಎಷ್ಟೇ ಅನುಭವಸ್ಥ ಆಟಗಾರನಾಗಿದ್ದರೂ ಆತನ ಮನೋಸ್ಥೈರ್ಯಕ್ಕೆ ಕೊಡಲಿ ಪೆಟ್ಟು ಹಾಕುತ್ತಾನೆ. ಇದಕ್ಕಾಗಿ ಆತ ಬಹಳ ಶ್ರಮ ವಹಿಸಿಕೊಂಡು ಹಗಲು ರಾತ್ರಿ ಅಭ್ಯಾಸ ಮಾಡುತ್ತಾನೆ. ಆಸ್ಟ್ರೇಲಿಯಾ ತಂಡದ ಭಾರತ ಪ್ರವಾಸ ಆರಂಭವಾಗುವ ಮುನ್ನವೇ ಸಚಿನ್ ನೆಟ್ ಪ್ರಾಕ್ಟಿಸ್‌ನಲ್ಲಿ 'ಶೇನ್‌ವಾರ್ನೆ' ಯಾವ ರೀತಿಯಲ್ಲಿ ಬೌಲ್ ಮಾಡಬಹುದು, ಪಿಚ್‌ನ ಯಾವ ಜಾಗದಲ್ಲಿ ಬಿದ್ದರೆ ಚಂಡು ಯಾವ ರೀತಿ ಪುಟಿಯಬಹುದು ಎಂದು ಕೂಲಂಕಷವಾಗಿ ಪರೀಕ್ಷೆ ಮಾಡುತ್ತಾನೆ. ಈ ಎಲ್ಲಾ ತಯಾರಿಗಳ ನಂತರವೇ 'ಶೇನ್ ವಾರ್ನೆ'ಯ ಸೊಕ್ಕು ಮುರಿಯಲು ಆತ ಸನ್ನದ್ಧನಾಗಿಬಿಡುತ್ತಾನೆ. ರವಿಶಾಸ್ತ್ರಿಯ ಪ್ರಕಾರ ''ವಿವ್ ರಿಚರ್ಡ್ಸ್ ನಂತರ ಬೌಲರ್‌ಗಳ ವಿರುದ್ಧ ಇಷ್ಟೊಂದು ಸೊಕ್ಕು ತೋರುವ ಕ್ರಿಕೆಟ್ ಆಟಗಾರನನ್ನು ನಾನು ನೋಡಿಯೇ ಇಲ್ಲಾ!''

ಈ 'ಝುನ್ ಗುರು'ವಿನ ಹೆಲ್ಮೆಟ್‌ನೊಳಗೆ, ಗುಂಗುರು ಕೂದಲಿನ ತಲೆಯೊಳಗೆ ಏನೇನು ಪ್ಲಾನ್‌ಗಳು ನಡೆಯುತ್ತಿವೆಯೋ ಎನ್ನುವುದನ್ನು ತಿಳಿಯುವುದು ಇಲ್ಲಿಯ ತನಕ ಯಾರಿಗೂ ಸಾಧ್ಯವಾಗಿಲ್ಲ. ಬಹುಶಃ ಅಂದಿನ ಮ್ಯಾಚಿನಲ್ಲಿ ಯಾರನ್ನು ದಂಡಿಸಬೇಕು, ಯಾವ ಕಡೆಗೆ 'ಬಾಲ್'ನ್ನು ಹೊಡೆದರೆ ಬುಲೆಟ್ ವೇಗದಲ್ಲಿ ಅದು ಬೌಂಡರಿ ಸೇರುತ್ತದೆ, ಮುಂದಿನ 'ಬೌಲ್'ನ್ನು ನೆಲಕ್ಕೆ ಅಂಟಿಕೊಂಡಂತೆ ಆಡಿದರೆ ಸಾಕೇ ಅಥವಾ ಗಾಳಿಯಲ್ಲಿ ಆಡಲೇ... ಹೀಗೆ ನೂರಾರು ಯೋಜನೆಗಳು ರೂಪುಗೊಳ್ಳುತ್ತಿರಬಹುದು. ಈ ರೀತಿ ಯಾವ ವೈಜ್ಞಾನಿಕ ವಿಶ್ಲೇಷಣೆಗೂ ನಿಲುಕದ 'ಸಚಿನ್'ನ ಇಂತಹ ಯೋಜನೆಗಳಿಂದಲೇ ಎದುರಾಳಿಯು ಅನಿರೀಕ್ಷಿತ ದಾಳಿಗೆ ಈಡಾಗುತ್ತಾನೆ.

ಒಮ್ಮೆ 'ಲಾರ್‌ಸನ್' ಸಚಿನ್‌ಗೆ ತುಸು 'ಶಾರ್ಟ್' ಪಿಚ್‌ನಲ್ಲಿ ಬೌಲ್ ಮಾಡಿದ. ಅದನ್ನು ಸಚಿನ್ ಫ್ರಂಟ್‌ಫುಟ್‌ನಲ್ಲಿ ಆಡಿದ. ಇದನ್ನು ನೋಡಿದ 'ಜಡೇಜ'ನಿಗೆ ಆಶ್ಚರ್ಯವಾಯಿತು. ''ಯಾಕೆ ಸಚಿನ್ ನೀನು ಹೀಗೆ ಆಡುತ್ತಿರುವೆ?'' ಎಂದು ಕೇಳಿದ. ಅದಕ್ಕೆ ಸಚಿನ್ ''ತಾಳು, ಈ ಒವರ್ ನಂತರ ಹೇಳುತ್ತೇನೆ......'' ಎಂದ. ಲಾರ್‌ಸನ್‌ನು ಒವರಿನ ಕೊನೆಯ ಬಾಲನ್ನು ಪುನಃ ಶಾರ್ಟ್ ಫಿಚ್‌ನಲ್ಲಿ ಹಾಕಿದ. ಅವನ ಎಣಿಕೆ ಪ್ರಕಾರ ಈ ಬಾರಿಯೂ ಸಚಿನ್ ಫ್ರಂಟ್ ಫುಟ್‌ನಲ್ಲಿ ಆಡಬೇಕಿತ್ತು. ಆದರೆ ಸಚಿನ್‌ನು ಮಾಡಿದ್ದೇ ಬೇರೆ, ಅವನ ಮೆದುಳಿನಲ್ಲಿ ಈ 'ಬಾಲ್'ಗೆ ನೀಡಬೇಕಾದ ತಕ್ಕ ಶಾಸ್ತ್ರಿಯ ಲೆಕ್ಕಚಾರ ತಯಾರಾಗಿತ್ತು. ಸಚಿನ್ 'ಬ್ಯಾಕ್‌ಫುಟ್'ಗೆ ಹೋಗಿ ಭರ್ಜರಿ ಸಿಕ್ಸರ್ ಹೊಡೆದ! ಎದುರುಗಡೆ ನಿಂತಿದ್ದ 'ಜಡೇಜ'ನಿಗೆ ಉತ್ತರ ದೊರಕಿತ್ತು!

ಸಚಿನ್‌ನ ಕ್ರಿಕೆಟ್ ಕಲೆಯನ್ನು ಸಂಪೂರ್ಣವಾಗಿ ಅರ್ಥೈಸಲು ಸಾಧ್ಯವಿಲ್ಲ. ಯಾಕೆಂದರೆ ವಿವ್ ರಿಚರ್ಡ್ಸ್‌ನ ಬ್ಯಾಟಿಂಗ್‌ನಲ್ಲಿ ಒಂದು ಥರದ ಹುಚ್ಚಿರುವಂತೆಯೇ ಸಚಿನ್‌ನ ಬ್ಯಾಟಿಂಗ್‌ನಲ್ಲಿ ಎದುರಾಳಿಯ ದುರ್ಬಲತೆಯನ್ನು ಎಲ್ಲರೆದುರು ಹರಾಜು ಹಾಕುವ ಉನ್ಮಾದಕತೆಯಿದೆ. ಸುನಿಲ್ ಗಾವಸ್ಕರ್‌ನ ಬ್ಯಾಟಿಂಗ್‌ನಲ್ಲಿ ಕ್ರಮಬದ್ಧವಾದ ಯೋಜನೆ ಇರುವಂತೆಯೇ ಸಚಿನ್' ಬ್ಯಾಟಿಂಗ್‌ನಲ್ಲಿ ಯೋಜನಾಬದ್ಧವಾಗಿ ಎದುರಾಳಿಯ ಬೆನ್ನೆಲುಬು ಮುರಿಯುವ ಕ್ರಮವಿದೆ!

Dominance ಎಂದರೆ ಮೇಲ್ಮೈ ಸಾಧಿಸುವುದು ಎಂಬರ್ಥವಿದೆ. ಸಚಿನ್ ಬಗ್ಗೆ ಈ ಪದದ ಬಳಕೆಯಾದರೂ, ಆತನ ಮೇಲ್ಮೈಗೆ ಕಾರಣವಿಲ್ಲದಿಲ್ಲ. ಆತನ ವಿಕೆಟ್ ಹೋದ ನಂತರ ನಮ್ಮ ಇಡೀ ಟೀಮು ಇಸ್ಪೇಟ್ ಎಲೆಯ ಮನೆಯಂತೆ ಕುಸಿದು ಬೀಳುವುದನ್ನು ನಾವೆಲ್ಲ ಅನೇಕ ಬಾರಿ ನೋಡಿದ್ದೇವೆ. ಇತ್ತೀಚೆಗೆ ಮದ್ರಾಸಿನಲ್ಲಿ ಪಾಕಿಸ್ತಾನಕ್ಕೆ ಭಾರತ ತಂಡ ಸೋತ ನಂತರ ಸುನೀಲ್ ಗಾವಸ್ಕರ್ ಹೇಳಿದ್ದೇನೆಂದರೆ ''ಕೇವಲ ಸಚಿನ್ ಪಾಲಿಗೆ ಎಲ್ಲರೂ ಹೊಣೆ ಹೊರಿಸಿ ಬಿಟ್ಟರೆ ಹೇಗೆ? ಇತರ ಆಟಗಾರರು ತಮ್ಮ ಕರ್ತವ್ಯವನ್ನು ಎಂತು ಮಾಡಿದಂತಾಯಿತು! ಆದರೆ, ಸಚಿನ್‌ಗೆ ಇದೆಲ್ಲದರ ಬಗ್ಗೆ ತಲೆಕೆಡಿಸಿಕೊಳ್ಳುವ ಸಣ್ಣತನವಿಲ್ಲ. ಆತನ ಪಾಲಿಗೆ 'ಕ್ರಿಕೆಟ್' ಎಂದರೆ ಭಾರತ. ಭಾರತವೆಂದರೆ ಗೆಲುವು, ಅಷ್ಟೇ ಗೊತ್ತು. ಕೇವಲ ಅಷ್ಟಕ್ಕಾಗಿಯೇ ಆತ ಆಡುತ್ತಾನೆ, ಗೆಲ್ಲುತ್ತಾನೆ! ■

ಹೊಸ ಪುಸ್ತಕ



ಸಾಕ್ಷರತೆಯ ಸುತ್ತಮುತ್ತ

(ವಿಮರ್ಶಾ ಲೇಖನಗಳ ಸಂಕಲನ)

ಲೇ: ಹೆಚ್.ಶೇಷಗಿರಿರಾವ್,
ಬಿ.ಪೀರ್‌ಬಾಷಾ
ಪ್ರ: ಮಲ್ಲಿಗೆ ಪ್ರಕಾಶನ
ಬಿಚ್ಚುಗತ್ತಿ, ಬೀದಿ 6/81,
ಹೂವಿನ ಹಡಗಲಿ (ಬಳ್ಳಾರಿ ಜಿಲ್ಲೆ)
ಪುಟ: 124, ಬೆಲೆ: 30/-



ಹಟವಾದಿ ಮತ್ತು ಹುಡುಗಿ

(ಕವನ ಸಂಕಲನ)


ಲೇ: ಬೂದುಗುಪ್ಪ ಪ್ರಹ್ಲಾದ ರೆಡ್ಡಿ
ಪ್ರ: ಲೋಹಿಯಾ ಪ್ರಕಾಶನ
'ಕ್ಷಿತಿಜ' ಕಪ್ಪಗಲ್ಲು ರಸ್ತೆ, ಗಾಂಧಿನಗರ,
ಬಳ್ಳಾರಿ - 583 103
ಪುಟ: 124, ಬೆಲೆ: 60/-



ಕಲ್ಲಂಗಡಿ ಹಣ್ಣಿನ ಕಂಕನರಿ

(ಜನಪದ ಕಥೆಗಳ ಸಂಕಲನ)

ಲೇ: ಜೀನಹಳ್ಳಿ ಸಿದ್ದಲಿಂಗಪ್ಪ
ಪ್ರ: ಪ್ರೇಮ ಪ್ರಕಾಶನ
ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ
ಶಿವಮೊಗ್ಗ ಜಿಲ್ಲೆ - 577 223
ಪುಟ: 200, ಬೆಲೆ: 80/-



ಮಾಗಿ ಮೂವತ್ತೈದು

(ಕಥಾ ಸಂಕಲನ)

ಲೇ: ಕೇಶವ ಮಳಗಿ
ಪ್ರ: ಅಭಿನವ ಪ್ರಕಾಶನ
ಸಂ.4148/ಎ, 3ನೇ ಮುಖ್ಯರಸ್ತೆ,
ರಾಜಾಜಿನಗರ, 2ನೇ ಹಂತ,
ಬೆಂಗಳೂರು - 560 021.
ಪುಟ: 212, ಬೆಲೆ: 65/-



ಜನಪದ ಜಾಣ ಗಣಿತ ಮತ್ತು ಭಾಷಾ ಚಮತ್ಕಾರ

(ಭಾಗ-1)

ಲೇ: ಜೀನಹಳ್ಳಿ ಸಿದ್ದಲಿಂಗಪ್ಪ
ಪ್ರ: ಪ್ರೇಮ ಪ್ರಕಾಶನ
ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ
ಶಿವಮೊಗ್ಗ ಜಿಲ್ಲೆ - 577 223
ಪುಟ: 56, ಬೆಲೆ: 18/-



ಕಾಳ ಬೆಳುದಿಂಗಳ ಸಿರಿ

(ಕಥಾ ಸಂಕಲನ)


ಲೇ: ರಾಜಶೇಖರ ಹತಗುಂದಿ
ಪ್ರ: ಲೋಹಿಯಾ ಪ್ರಕಾಶನ
'ಕ್ಷಿತಿಜ' ಕಪ್ಪಗಲ್ಲು ರಸ್ತೆ, ಗಾಂಧಿನಗರ,
ಬಳ್ಳಾರಿ - 583 103
ಪುಟ: 92, ಬೆಲೆ: 45/-



ಹೇಳು ಹೇಳು ನಾನು ಯಾರು?

(ಮಕ್ಕಳ ಒಗಟಿನ ಸಂಕಲನ)

ಲೇ: ಜೀನಹಳ್ಳಿ ಸಿದ್ದಲಿಂಗಪ್ಪ
ಪ್ರ: ಶ್ರುತಿ ಪ್ರಕಾಶನ
ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ
ಶಿವಮೊಗ್ಗ ಜಿಲ್ಲೆ - 577 223
ಪುಟ: 72, ಬೆಲೆ: 25/-



ಅಭಿವ್ಯಕ್ತಿ

(ಉದಯೋನ್ಮುಖ ಕವಿ-ಕವಯಿತ್ರಿಯರ ಕವನಗಳು ಮತ್ತು ಚುಟುಕುಗಳು)

ಸಂ: ಮಾಸ್ಟರ್ ಶಂಕರ್ ವಿ.
ಪ್ರ: ದಶಮಿತ್ರ ಪ್ರಕಾಶನ
114, 'ವೆಂಕಟರಮಣ ಕೃಪ'
ವಿನೋಬ ನಗರ, ಸಾಗರ - 577 401.
ಪುಟ: 44, ಬೆಲೆ: 25/-

ಧೂಮಾಯಣ

■ ಪ್ರೊ. ಎಸ್. ಜಿ. ವೈದ್ಯ
ಬಿ. ಇ. ಎಸ್. ಎಮ್. ಪದವಿ ಕಾಲೇಜು
ಬ್ಯಾಡಗಿ - 561 106.

''ಓಂ ಧೂಮದೇವಾಯನಮಃ ನವಚೈತನ್ಯಂ ದೇಹಿಮೇ ಚುಟ್ಟವಾಹನ'' ಎಂದು ಗುಂಡ ದೇವಾಲಯದಲ್ಲಿರುವ ಶಿವಲಿಂಗದ ಹಿಂದೆ ಅವಿತು ಕುಳಿತು ನಿಧಾನವಾಗಿ ಕೊರೆ ಚುಟ್ಟಾವನ್ನು ತೆಗೆದು ಸೇದಹತ್ತಿದ. ಅವನು ಅಲ್ಲಿಗೆ ಬರುವ ಸಮಯವನ್ನೆ ಕಾಯುತ್ತಿದ್ದ ಅವನ ಗೆಳೆಯರ ಬಳಗವೆಲ್ಲವೂ ಅಲ್ಲಿ ಕಲೆಯಿತು. ಬಳಗವೆನ್ನಲೇನು ಕಾಗೆಯ ಬಳಗವೆ? ಮೂವರೇ ''ಎಂಕ, ನೋಣ, ಸೀನ''. ಕಲ್ಲು ಗೋಡೆಯ ಕಲ್ಲ, ಮಣ್ಣು ಮನೆಯ ಮಲ್ಲ, ಇವರೆಲ್ಲರಿಗೂ ಮಕುಟ ಮಣಿ ಗುಂಡ. ಎಲ್ಲರೂ ತಮತಮಗೆ ಪವಿತ್ರವಾದ ಸ್ಥಳಗಳಲ್ಲಿ ಅಂದರೆ ದಲಾಲಿ ಅಂಗಡಿಗಳ ವಠಾರದಲ್ಲಿ ಸಿನೇಮಾ ಟಾಕೀಜಿನಲ್ಲಿ, ಪಾನ್ ಬೀಡಾ ಅಂಗಡಿಯ ಮುಂದೆ ಇಂತಹವೇ ಇನ್ನೂ ಹಲವಾರು ಸ್ಥಳಗಳಲ್ಲಿ ದೊರೆತಂತಹ ತಮ್ಮ ಅವಿರತ ಅತ್ಯಮೂಲ್ಯ ಶ್ರಮದ ಫಲಗಳನ್ನು (ಕೊರೆ ಚುಟ್ಟಾಗಳನ್ನು) ಹೊರತೆಗೆದು ಹೃತ್ಪೂರ್ವಕವಾಗಿ ಅವುಗಳನ್ನು ಪ್ರಾರ್ಥಿಸಿದರು. ಪ್ರಾರ್ಥನೆಯು ಸ್ವಲ್ಪ ಏರುಪೇರಾದರೂ ಅವರ ಈ ಅಗ್ನಿ ಕಾರ್ಯವು ಸುಗಮವಾಗಿ ಸಾಗಲು ಸಾಧ್ಯವೇ ಇಲ್ಲ. ಯಾವನಾದರೂ ಒಬ್ಬ ರಾಕ್ಷಸನ ಬಾಧೆ ಆಗಿಯೇ ತೀರುತ್ತದೆ.

ಕಾರಣ ಈ ಕೊರೆ ಚುಟ್ಟ ಯಜ್ಞದಲ್ಲಿ ಒಬ್ಬರು

ಇಬ್ಬರು ಚುಟ್ಟಾ ಅಥವಾ ಸಿಗರೇಟು ಸೇದುವಾಗ ಒಂದೇ ಕಡ್ಡಿ ಗೀರಿ ಇಬ್ಬರೂ ಒಂದೇ ಕಡ್ಡಿಯಲ್ಲಿ ಹಚ್ಚಿಕೊಳ್ಳುವಲ್ಲಿ ಕಾಣುವ ಸಹಕಾರ, ಪರ ಸೇವೆ, ಉಳಿತಾಯಗಳಂತಹ ಮೌಲ್ಯಗಳ ಪರಿಪಾಲನಾ ಚಾತುರ್ಯ, ಕಾತುರ್ಯ ಇನ್ನಿತರ ಕಡೆ ದೃಷ್ಟಿ ದುರ್ಲಭ.



ಹೋತೃ (ಯಜ್ಞ ಮಾಡುವವ) ಉಳಿದಿಬ್ಬರು ಸರದಿಯ ಪ್ರಕಾರ ರಕ್ಷೋಘ್ನ, ಸೂಕ್ತಪಾಠಕ ಹಾಗೂ ಋತ್ವಿಜರಾಗುತ್ತಾರೆ. ಕಾರಣ ಒಬ್ಬ ರಾಕ್ಷಸನೂ ಅವರ ಸಮೀಪ ಸುಳಿಯಬಾರದು. ಹೀಗೆ ನಿಧಾನವಾಗಿ ಅಗ್ನಿ ಕಾರ್ಯವು ಮುಂದುವರಿಯುತ್ತಿದ್ದಂತೆ ಅವರ ಮುಖಮಂದಾರಗಳಿಂದ ವಿಸರ್ಜಿತ ಧೂಮಸ್ತೋಮ ನಿಧಾನವಾಗಿ ವೋಮದಲ್ಲಿ ಹರಡ ಹತ್ತುತ್ತದೆ ಎನ್ನುವುದಕ್ಕಿಂತಲೂ ಅಡರ ಹತ್ತುತ್ತದೆ ಅದು ಅವರ ಮುಂದಿರುವ ಶಿವಲಿಂಗಕ್ಕೆ ಮುತ್ತಿ ಅವನ ಉಸಿರು ಗಟ್ಟಿಸುತ್ತದೆ. ಹೀಗೆ ಇವರು ಕದ್ದು, ಎದ್ದದ್ದು ಬಗ್ಗಿ ನೋಡುತ್ತ ಚುಟ್ಟಾ ಸೇದುವುದು ಸಾಮಾನ್ಯವೇ? ಕದ್ದು ಚುಟ್ಟಾ ಸೇದುವುದು ಕಾಳಜಿ ಪೂರ್ವಕವಾಗಿ ಕಲಿಯಬೇಕಾದ ಕಲೆಯೇ. ಇವರ ಈ ವ್ಯವಹಾರದ ತಾಣಗಳೂ ಅಷ್ಟೇ. ಮಹತ್ವದವುಗಳು - ಹಾಳು ಗೋಡೆಯ ಹಿಂದೆ, ಅಲಕ್ಷ್ಯಕ್ಕೆ ಗುರಿಯಾದ ದೇವಾಲಯಗಳು, ಅಷ್ಟೇ ಏಕೆ ಬಚ್ಚಲು ಮನೆ, ಇನ್ನು ಹೇಳಲೇಬೇಕಾದ ಅತಿ ಪ್ರಶಸ್ತ ಸ್ಥಳವೆಂದರೆ ಪಾಯಖಾನೆ. ಕೆಲವರಿಗಂತೂ ಪಾಯಖಾನೆಯನ್ನು ನೋಡಿದ ತಕ್ಷಣ ಚುಟ್ಟಾ ಬೇಕೇ ಬೇಕು. ಇಂತಹ ಮಹಾಶಯರಿಗೆ ಚುಟ್ಟಾ ಸೇದದಿದ್ದರೆ ಮಲವಿಸರ್ಜನೆ ದುಃಸಾಧ್ಯವಾದ ಕೆಲಸ. ಅದೇನು ಸಾಮರ್ಥ್ಯವೊ ಆ ಧೂಮಕ್ಕೆ! ಧೂಮಕ್ಕೂ ಮಲವಿಸರ್ಜನೆಗೂ ತುಂಬಾ ನಂಟೋ ಹಗೆತನವೊ ಎಂಬ ಸಂಗತಿ ಇನ್ನೂ ನನಗೆ ಯಕ್ಷ ಪ್ರಶ್ನೆಯಾಗಿಯೇ ಕಾಡುತ್ತಿದೆ. ಧೂಮವು ದೇಹವನ್ನು ಪ್ರವೇಶಿಸುವುದೇ ತಡ, ಅದರ ಅಂಜಿಕೆಯಿಂದಲೊ, ಅದಕ್ಕೆ ಕೊಡಲೇಬೇಕಾದ ಘನತೆ ಗೌರವಗಳಿಂದಲೋ ಮಲವು ನಿಧಾನವಾಗಿ ದೇಹದಿಂದ ಜಾರಿಕೊಳ್ಳುವ ಪ್ರಯತ್ನ ನಿರತವಾಗುತ್ತದೆ. ಹಿರಿಯರನ್ನು ಕದ್ದು ಚುಟ್ಟಾ ಸೇದುವ ಚಟವಿದ್ದವರು ಹಲವಾರು ಬಾರಿ ಈ ವಿಷಯಕ್ಕೋಸ್ಕರವಾಗಿಯೇ ಸಿಕ್ಕಿಹಾಕಿಕೊಳ್ಳುತ್ತಾರೆ. ಏಕೆಂದರೆ ಅವರು ಬಂದನಂತರ ಶೌಚಕೂಪಕ್ಕೆ ಹೋಗುವ ಹಿರಿಯರು ತಮ್ಮ ಕಿರಿಯರು ಮಾಡಿದ ಸಾಹಸವನ್ನು ಅರಿಯುತ್ತಾರೆ. ಒಂದು ವೇಳೆ ಅವರೂ ಅದೇ ಗುಂಪಿಗೆ ಸೇರಿದವರಾಗಿದ್ದರೆ ಇನ್ನೂ ಗಾಳಿಯಲ್ಲಿ ತೇಲಾಡುತ್ತಿರುವ ಹೊಗೆಯನ್ನು ಹೀರಿ ತಮ್ಮದೊಂದು ಅಮೂಲ್ಯವಾದ ಚುಟ್ಟಾ ಉಳಿದುದಕ್ಕೆ ಸಂತೋಷ ಪಡುತ್ತಾರೆ. ಹೀಗೆ ಕದ್ದು ಚುಟ್ಟಾ ಸೇದುವವರು ಇವುಗಳಿಗೆ ಕೊಟ್ಟ ಹೆಸರುಗಳು ತುಂಬಾ ಸ್ವಾರಸ್ಯಕರವಾದವುಗಳು. ಖಾಕಿ-ಚುಟ್ಟಾ, ಖಾದಿ-ಸಿಗರೇಟು, ಜವಾರಿ-ಚುಟ್ಟಾ, ಹೈಬ್ರಿಡ್-ಸಿಗರೇಟು, ಕಟ್ಟಿಗೆಯ ಕೊಳಲು-ಚುಟ್ಟಾ, ಬೆಳ್ಳಿಯ ಕೊಳಲು-ಸಿಗರೇಟು ಇತ್ಯಾದಿ. ಹೀಗೆ ತಮ್ಮದೇ ಆದ ಪಾರಿಭಾಷಿಕ ಶಬ್ದಕೋಶವನ್ನು ಈ ಮಹಾಶಯರು ದೇಶ, ಕಾಲ ಪರಿಸ್ಥಿತಿಗಳಿಗನುಸಾರವಾಗಿ ಸೃಷ್ಟಿಸಿದ್ದಾರೆ.

ಇನ್ನು ಗ್ರಾಮವಾಸಿಗಳಲ್ಲಿ ಸಾಮಾನ್ಯವಾಗಿ ಬಹುಜನರು ಚುಟ್ಟಾದ ದಾಸರು. ಸಿಗರೇಟು ಹಳ್ಳಿಗಳಲ್ಲಿ ಕೇವಲ ಗೌಡರು, ಶಾನುಭೋಗರಿಗೆ, ಅವರಂತವರಿಗೆ ಎಟಕುವಂತಹುದು. ಆದರೂ ಕೆಲವು ಶಾನುಭೋಗ ಅಥವಾ ಗೌಡರ ಚೇಲಾಗಳು ಮೂಲತಃ ಚುಟ್ಟಾ ಪ್ರೇಮಿಗಳಾದರೂ ಸಿಗರೇಟು ಕಾಮಿಗಳಾಗದೇ ಇರಲು ಸಾಧ್ಯವೆ? ಅವರ ಒಡೆಯರು ಸೇದಿ ನೀಡಿದ ಸಿಗರೇಟನ್ನೇ ಇನಿಯನು ಅರ್ಧ ತಿಂದು ಬಿಟ್ಟ ಸೇಬನ್ನು ಇನಿಯಳು ಸ್ವೀಕರಿಸುವಷ್ಟೇ ಆನಂದದಿಂದ ಸ್ವೀಕರಿಸುವುದನ್ನು ನೋಡಿದರೆ ಅವರ ಪ್ರೀತಿ (ಸಿಗರೇಟನೊಂದಿಗೆ) ಎಷ್ಟು ಗಾಢ ಎಂಬುದನ್ನು ಕಾಣಬಹುದು. ಅದಕ್ಕೇ ಹೇಳುವುದು ''Love is blind'' ಎಂದು. ಇಲ್ಲಿ ಇವರ ಸಿಗರೇಟನ ಲವ್ ಉ ಕೇವಲ ಅಂಧ ಮಾತ್ರವಲ್ಲ ''ಗಾಢಾಂಧ''. ಇನ್ನು ಕೆಲವರು ಮೇಲೆ ಹೇಳಿದ ಮಹಾನ್ ವ್ಯಕ್ತಿಗಳೊಂದಿಗೆ, ಅವರೆದುರಿಗೆ ಸೇದುವುದು ಮಾತ್ರವಲ್ಲದೆ ಒಂದೆರಡನ್ನು ಕಿಸೆಗೆ ಇಳಿಸುವುದೂ ವಾಡಿಕೆ. ಪಾಪ ಅಭ್ಯಾಸಬಲ! ಇನ್ನು ಕೆಲವರು ಚುಟ್ಟಾ ಸೇದುವವರು ಸಿಕ್ಕರೆ ಅವರ ಚುಟ್ಟಾ ಕಟ್ಟನ ಜುಟ್ಟನ್ನು ತಾವೇ ಹರಿದು ಅದನ್ನು ಪೂರ್ಣ ಖಾಲಿಯಾಗಿಸುವವರೆಗೂ ಸಮಾಧಾನ ತಾಳಲಾರರು. ನಮ್ಮ ಎದುರು ಮನೆಯ ಶಾನುಭೋಗ ಶೀನಪ್ಪನವರು ಚಿಕ್ಕವರಿದ್ದಾಗ ಅವರ ಕೆಲಸದಾಳಿನಿಂದ ಸೋಂಕಿಸಿಕೊಂಡ ಚುಟ್ಟಾ ಚಟವನ್ನು ಅವಿಚ್ಛಿನ್ನವಾಗಿ, ಸಿಗರೇಟಿನ ಚಟಕ್ಕೆ ಪ್ರೊಮೋಟಿಸದೆ, ಮುಂದುವರೆಸಿಕೊಂಡು ಬಂದವರಾದ್ದರಿಂದ, ಅವರು ಊಟ ಮಾಡಿ ಕೈ ತೊಳೆಯುವುದನ್ನೇ ಕಾಯುತ್ತ ಕುಳಿತ ಚಾವಡಿಯ ಚೆನ್ನಪ್ಪನನ್ನು ಹೆಡ್ (ಡ್ಡ)ನನ್ನಾಗಿಸಿಕೊಂಡ ಹಿಂದು ''ಊಟೀಽ ಆತನ್ರೀಽ ಸಾವಕಾರ'' ಎಂದು ಕೇಳುತ್ತ ಸ್ವಯಂ ಆಮಂತ್ರಿತರಾಗಿ ಅವರ ಮನೆಯನ್ನು ಪ್ರವೇಶಿಸಿಯೇ ಬಿಡುತ್ತಾರೆ. ಶಿವಪ್ಪನವರು ಚುಟ್ಟಾ ಹೊತ್ತಿಸುವುದೇ ತಡ ಇವರು ತಾವಾಗಿಯೇ ಒಂದು ಚುಟ್ಟಾ ತೆಗೆದುಕೊಂಡು ಇನ್ನೆರಡನ್ನು ತಮ್ಮ ಕಿವಿಗಳಲ್ಲಿ ಆ-ಚೆ(ಛೆ) ಈ-ಚೆ(ಛೆ) ಕರ್ಣಕುಂಡಲಗಳಂತೆ ಧರಿಸಿಕೊಂಡು ಸಾಧ್ಯವಾದರೆ ಕಡ್ಡಿ ಪೆಟ್ಟಿಗೆಗೆ ತಮ್ಮ ಕಿಸೆಯಲ್ಲೇ ಅನುವು ಮಾಡಿಕೊಟ್ಟು ನಿಧಾನವಾಗಿ ಹೊರಗೆ ಹಾರುತ್ತಾರೆ.

ಈ ಮಹಾಶಯರು ಯಾವಾಗಲೂ ಬೆಂಕಿ ಹಚ್ಚುವ ತವಕದಲ್ಲಿಯೇ ಇರುತ್ತಾರೆ. ಇಬ್ಬರು ಚುಟ್ಟಾ ಅಥವಾ ಸಿಗರೇಟು ಸೇದುವಾಗ ಒಂದೇ ಕಡ್ಡಿ ಗೀರಿ ಇಬ್ಬರೂ ಒಂದೇ ಕಡ್ಡಿಯಲ್ಲಿ ಹಚ್ಚಿಕೊಳ್ಳುವಲ್ಲಿ ಕಾಣುವ ಸಹಕಾರ, ಪರ ಸೇವೆ, ಉಳಿತಾಯಗಳಂತಹ ಮೌಲ್ಯಗಳ ಪರಿಪಾಲನಾ ಚಾತುರ್ಯ, ಕಾತುರ್ಯ ಇನ್ನಿತರ ಕಡೆ ದೃಷ್ಟಿಗೆ ದುರ್ಲಭ. ಕಾರಣ ಈ ಒಂದು ಭಂಗಿಯನ್ನು ನಾನು ತುಂಬಾ ಮೆಚ್ಚಿಕೊಂಡಿದ್ದೇನೆ ಮಾತ್ರವಲ್ಲ ಹಲವಾರು ಕಡೆ (ಸಾರ್ವಜನಿಕ ತಾಣಗಳಲ್ಲಿ) ತೆರೆದ ಕಂಗಳಿಂದ ಹುಡುಕುತ್ತೇನೆ. ಒಂದೇ ಕಡ್ಡಿಯಲ್ಲಿ ತಾನು ಹಚ್ಚಿಕೊಂಡು ತನ್ನೆದುರಿಗೆ ಇರುವವನಿಗೆ ಹಚ್ಚುವುದು ಸೇವೆಯಲ್ಲವೆ? ಪ್ರೀತಿಯ ದ್ಯೋತಕವಲ್ಲವೇ? ಯಾರ ಅರ್ಧಾಂಗಿಯು ತನ್ನ ಇನ್ನರ್ಧಾಂಗನ ಚುಟ್ಟಾ ಸಿಗರೇಟುಗಳಿಗೆ ಅಗ್ನಿ ಸ್ಪರ್ಶ ಮಾಡಿಸಲು ಮುಂದೆ ಬರುತ್ತಾಳೆ? ಇವರು ನಿಜವಾಗಿಯೂ ಧನ್ಯರು. ಇವರು ಎಷ್ಟೋ ಬಾರಿ ತಾವು ತಮ್ಮ ಚುಟ್ಟಾ ಮತ್ತು ಸಿಗರೇಟುಗಳನ್ನು ಗದ್ದಲದಲ್ಲಿಯಾದರೂ ಸೇದುವುದನ್ನು ಬಿಡುವುದಿಲ್ಲ. ಗೀರಿದ ಕಡ್ಡಿಯನ್ನು ನೋಡದೇ ಪಕ್ಕದಲ್ಲಿದ್ದವರ ಮೇಲೆ ಚೆಲ್ಲುವುದು ಅಥವಾ ಬಾಯಲ್ಲಿಟ್ಟು ಉರಿಯುವ ಚುಟ್ಟಾ ಸಿಗರೇಟುಗಳನ್ನು ಹೊರ ತೆಗೆಯುವಾಗ ಬರೆಹಾಕುವುದು, ಬಟ್ಟೆಗೆ ತಾಗಿಸುವುದು ಉಸಿರಾಟದಷ್ಟೇ ಸರಳ. ಹೀಗೆ ತಂಬಾಕದ ಮೂರು ರೂಪಗಳಾದ - ಉಗುಳುವುದು, ಸೇದುವುದು ಮತ್ತು ನಸ್ಯ ಏರಿಸುವುದು- ಈ ಮೂರು ವಿಧದ ತಂಬಾಕಿನ ಆರಾಧಕರು ಪರ ಪೀಡಕರು. ಹೊಸದಾಗಿ ನಸ್ಯ ಏರಿಸುವವರು, ಮುಂದಿನವರನ್ನು ನೋಡದೆ ಸೀನಿಬಿಡುವುದು. ತಂಬಾಕು ಅಗಿಯುವವರು ಉಗುಳುವುದು, ಉಗುಳುವದೊಂದೇ ಅವರಿಗೆ ಗೊತ್ತು ಪಾಪ! ಸೇದುವವರು, ಸುಡುವವರು, ಶೀನುವವರು, ಉಗುಳುವವರು ನಮ್ಮ ಸುತ್ತ ನಿತ್ಯ ಕಾಣಸಿಗುವರು. ಇವರ ಆರಾಧ್ಯದೈವವೋ ಅಪೂರ್ವ, ಅಪ-ರೂಪ. ಈ ದೇವತೆಯಿದ್ದ ಸ್ಥಳದಲ್ಲಿ ಕತ್ತ ಕಾರ್ಕೋಟಕಗಳೂ ಸುಳಿಯಲಾರವು. ಇಂತಹುದನ್ನು ಉಪಾಸಿಸಿ, ಉಪಯೋಗಿಸಿ, ಯೋಜಿಸಿ, ಪ್ರಯೋಗಿಸಿ, ಅರಗಿಸಿ ಆಟವಾಡುವ ಇವರು ಸ್ಮರಣೀಯರು! ■



ISI RDX

ಡೆಡ್ಲಿ ಜೋಡಿ





ವಶಪಡಿಸಿಕೊಂಡ ಆರ್‌ಡಿಎಕ್ಸ್ ಬೆರಳು ತೋರಿಸುವುದು ಪಾಕಿಸ್ತಾನದ ಕಡೆಗೆ. ಪಾಕಿಸ್ತಾನ ತನ್ನೆಲ್ಲಾ ಕರಾಳ ಕೃತ್ಯ ಎಸಗುವುದು ಐಎಸ್‌ಐ ಮೂಲಕ. ಐಎಸ್‌ಐ ಎಂದ ತಕ್ಷಣ ಪ್ರತ್ಯಕ್ಷನಾಗುತ್ತಾನೆ ದಾವೂದ್ ಇಬ್ರಾಹಿಂ!

■ 700 ಗ್ರಾಂ ತೂಕದ ಆ ವಸ್ತು ರಾಜೀವ್‌ಗಾಂಧಿ ಸೇರಿದಂತೆ 17 ಜನರನ್ನು ಕೊಂದಿತು. ಪಂಜಾಬಿನ ಮುಖ್ಯಮಂತ್ರಿ ಬಿಯಾಂತ್‌ಸಿಂಗ್ ಅವರನ್ನು ಗುಂಡುನಿರೋಧಿ ಕಾರ್ ಕೂಡಾ ಉಳಿಸಲಾಗಲಿಲ್ಲ. ಕಾರು ಸ್ಫೋಟಗೊಂಡು ಅವರು ಚೂರುಚೂರಾಗಿ ಹೋದರು.

■ ಮುಂಬೈನಲ್ಲಿ ನೂರಾರು ಕಟ್ಟಡಗಳು ಬೆಂಕಿಪೊಟ್ಟಣಗಳಂತೆ ಕುಸಿದು ಬಿದ್ದವು.

■ ಜನವರಿಯಲ್ಲಿ ಅಸ್ಸಾಂನ ಮುಖ್ಯಮಂತ್ರಿ ಮಹಾಂತ ಅವರ ಕಾರಿನ ಇಂಧನ ಸಂಗ್ರಾಹಕದ ಕೆಳಗಿದ್ದ ಆ ವಸ್ತು ಸ್ಫೋಟಿಸಿತು. ಮಹಾಂತ ಉಳಿದುಕೊಂಡರು. ಕಾರು ಛಿದ್ರವಾಗಿ ಹೋಯಿತು.

ಆ ವಸ್ತು......

ಆರ್‌ಡಿಎಕ್ಸ್ -ರೀಸರ್ಚ್ ಆ್ಯಂಡ್ ಡೆವೆಲಪ್‌ಮೆಂಟ್ ಎಕ್ಸ್‌ಪ್ಲೋಸಿವ್. ಇತಿಹಾಸ ಕಂಡ ಭೀಕರ ಸ್ಫೋಟಕ. ಉಗ್ರಗಾಮಿಗಳ ಕೈಗೆ ಸಿಕ್ಕಿ ದೇಶವನ್ನು ಹೈರಾಣ ಮಾಡುತ್ತಿದೆ.

ಶಿಲಾಯುಗದ ಮನುಷ್ಯ ಕಲ್ಲನ್ನೇ ಆಯುಧವಾಗಿರಿಸಿಕೊಂಡಿದ್ದ. ತಂತ್ರಜ್ಞಾನ ಬೆಳೆದಂತೆ ಶಸ್ತ್ರಾಸ್ತ್ರಗಳೂ ಬೆಳೆದು ನಾಗರಿಕತೆಗಳು ಜರಿದು ಬೀಳುತ್ತವೆ. Ak-47ರ ಆವಿಷ್ಕಾರವು 80ರ ನಂತರ ಭಯೋತ್ಪಾದನೆಯ ದಿಕ್ಕನ್ನೇ ಬದಲಿಸಿತು. ದೆಹಲಿಯಂತಹ ನಗರಗಳಲ್ಲಿ ರೇಡಿಯೋ ಬಾಂಬ್‌ಗಳು ಜನಜೀವನವನ್ನು ಅಸ್ತವ್ಯಸ್ತಗೊಳಿಸಿಬಿಟ್ಟಿದ್ದವು.

ಸೈನಿಕರು, ನಾಗರಿಕರ ಬಲಿ

ಉಗ್ರಗಾಮಿಗಳು ಬಳಸುವ RDX ನಿಂದ ಸಾಯುತ್ತಿರುವವರ ಸಂಖ್ಯೆ ವರ್ಷೇವರ್ಷೇ ಹೆಚ್ಚುತ್ತಿದೆ. 1997ರಲ್ಲಿ 26 ಜನ ಸೈನಿಕರು, 68 ಜನ ನಾಗರಿಕರು ಆರ್‌ಡಿಎಕ್ಸ್‌ಗೆ ಬಲಿಯಾಗಿದ್ದರು. 98ರಲ್ಲಿ ಆ ಪ್ರಮಾಣ ಕುಸಿಯಿತು. ಆದರೆ ಸೇನೆ-ಪೊಲೀಸ್ ಪಡೆ ವಶಪಡಿಸಿಕೊಂಡ ಆರ್‌ಡಿಎಕ್ಸ್ ಪ್ರಮಾಣ ತುಂಬಾ ಹೆಚ್ಚಿದೆ. ಮೊದಲು ಕಾಶ್ಮೀರದ ಮೂಲಕ ದೇಶ ಪ್ರವೇಶಿಸುತ್ತಿದ್ದ ಸ್ಫೋಟಕಗಳು ಈಗ ಗುಜರಾತ್ ಮತ್ತು ಮಹಾರಾಷ್ಟ್ರದ ಮೂಲಕವೂ ಬರುತ್ತಿದೆ. 93ರಲ್ಲಿ ಮುಂಬೈ ಸ್ಫೋಟಕ್ಕೆ ಬಳಸಲ್ಪಟ್ಟ 3000 ಕೆ.ಜಿ.ಗೂ ಹೆಚ್ಚು ಪ್ರಮಾಣದ ಆರ್‌ಡಿಎಕ್ಸ್ ಮಹಾರಾಷ್ಟ್ರದ ಕರಾವಳಿಗೆ ದೋಣಿ ಮೂಲಕ ಬಂದು, ನಂತರ ಮುಂಬೈ ಪ್ರವೇಶಿಸಿತು.

ಜನವರಿ 19 ರಂದು ದೆಹಲಿಯಲ್ಲಿ ಬಂಧನಕ್ಕೊಳಗಾದ ಬಾಂಗ್ಲಾದ ಪ್ರಜೆ ಸೈಯದ್ ಅಬ್ದುಲ್ ನಾದಿರ್ ಭಯೋತ್ಪಾದಕ ನಾಯಕ ಒಸಾಮಾ ಬಿಲ್ ಲೇಡನ್ ಗುಂಪಿಗೆ ಸೇರಿದಾತ. ಈತನ ಬಳಿ 2 ಕೆ.ಜಿ. ಆರ್‌ಡಿಎಕ್ಸ್ ಹಾಗೂ 5 ಸ್ಫೋಟಕಗಳಿದ್ದವು. ನೇಪಾಳವನ್ನು ಸ್ಫೋಟಕ ಸಾಗಾಣಿಕೆಯ ಮಾರ್ಗವಾಗಿ ಬಳಸಲಾಗುತ್ತಿದೆ ಎನ್ನುವುದು ಗೊತ್ತಾಗಿದ್ದು ನೇಪಾಳಿ ಪೋಲಿಸರು ಕಟ್ಮಂಡುವಿನಲ್ಲಿ ಖಲಿಸ್ತಾನ್ ಜಿಂದಾಬಾದ್ ಫೋರ್ಸ್‌ನ ಲಖ್‌ಬೀರ್‌ಸಿಂಗ್‌ನನ್ನು ಬಂಧಿಸಿದಾಗ. ಆತನ ಬಳಿ 18.75 ಕೆ.ಜಿ. ಆರ್‌ಡಿಎಕ್ಸ್ ಇದ್ದಿತು. ಆತ ತನ್ನ ತಪ್ಪೊಪ್ಪಿಗೆಯಲ್ಲಿ ಹೇಳಿದ್ದು: ಪಾಕಿಸ್ತಾನ ರಾಯಭಾರಿ ಕಚೇರಿಯ ಅಧಿಕಾರಿಯೊಬ್ಬ ನನಗೆ ಮಾಲನ್ನು ಪೂರೈಸಿದ. ಇದಕ್ಕೂ ಮೊದಲು ದೆಹಲಿಯ ಲಜಪತ್ ನಗರದಲ್ಲಿ ಬಂಧಿತರಾದ ಉಗ್ರಗಾಮಿಗಳು 'ನೇಪಾಳದ ಮೂಲಕ ಆರ್‌ಡಿಎಕ್ಸ್ ರವಾನೆಯಾಗುತ್ತಿದೆ' ಎಂದು ಬಾಯಿ ಬಿಟ್ಟರು. ಅನಂತರ ಜೂನ್ 96ರಲ್ಲಿ 30 ಕೆ.ಜಿ., ಡಿಸೆಂಬರ್‌ನಲ್ಲಿ 20 ಕೆ.ಜಿ. ಆರ್‌ಡಿಎಕ್ಸ್ ಪೊಲೀಸರಿಗೆ ಸಿಕ್ಕಿತು. ಇದು ಸಾಧ್ಯವಾದದ್ದು ಬಂಧಿತನಾದ ಜಮ್ಮು ಮತ್ತು ಕಾಶ್ಮೀರ ಇಸ್ಲಾಮಿಕ್ ಫ್ರಂಟ್‌ನ ಮನುಕ್ಯಾರ್ ಅಹ್ಮದ್ ನೀಡಿದ ಸುಳಿವಿನಿಂದ.

18, ಅಕ್ಟೋಬರ್ 98ರಲ್ಲಿ ಕಾಶ್ಮೀರದ ಬಾರಾಮುಲ್ಲಾ ಪ್ರದೇಶದಲ್ಲಿ 3 ಅಡಿ ಆಳದ ಗುಂಡಿಗಳಲ್ಲಿ ಹೂತಿಟ್ಟಿದ್ದ 800 ಕೆ.ಜಿ. ಸ್ಫೋಟಕಗಳು ಸಿಕ್ಕವು. ನಾಯಿ ಡೆಲ್ಟಾ ಸಹಾಯದಿಂದ ಸಾಧ್ಯವಾದ ಈ ಶೋಧದಲ್ಲಿ ಸಿಕ್ಕ

RDX ಪ್ರಮಾಣ 240 ಕೆ.ಜಿ. 1998ರಲ್ಲಿ 1200 ಕೆ.ಜಿ.ಗೂ ಹೆಚ್ಚಿನ ಪ್ರಮಾಣದ RDX ಪೊಲೀಸರ ವಶವಾಗಿದೆ. ಇದೇನಾದರೂ ಸೇರಬೇಕಾದ ಜಾಗ ಸೇರಿದ್ದಲ್ಲಿ ಆಗಬಹುದಾಗಿದ್ದ ಅಪಘಾತವನ್ನು ಊಹಿಸುವುದೂ ಅಸಾಧ್ಯ ಎನ್ನಬಹುದು.



ಇತ್ತೀಚೆಗೆ ಹೈದರಾಬಾದ್‌ನಲ್ಲಿ ಬಂಧಿತರಾದ ಶಂಕಿತ ಐಎಸ್‌ಐ ಏಜೆಂಟರು

ಪ್ರೇರಣೆ

ಭಯೋತ್ಪಾದನೆಯೆಂಬುದು ಮೂಲತಃ ರಾಜಕೀಯ ಕಾರಣಗಳಿಂದಾಗುವಂತಹದ್ದು. ಅದರ ಜೊತೆ ಸಾಮಾಜಿಕ ಕಾರಣಗಳೂ ಇರುತ್ತವೆ. ಪ್ರಸ್ತುತ ಇಂಡಿಯಾದಲ್ಲಿ ನಡೆಯುತ್ತಿರುವುದು ಪ್ರೇರಿತ ಭಯೋತ್ಪಾದನೆ. ರಾಜಕೀಯ ವ್ಯವಸ್ಥೆಯ ಹೊರಗೆ ಉಳಿದುಕೊಂಡಿರುವ, ಶೋಷಿತ, ಬದಿಗೊತ್ತಲ್ಪಟ್ಟ ಜನರಿಗೆ ಬೇರೆ ಮೂಲಗಳಿಂದ ಬೆಂಬಲ ಸಿಕ್ಕಿ ಭಯೋತ್ಪಾದನೆ ದಿನೇ ದಿನೇ ಹೆಚ್ಚುತ್ತಿದೆ.

ಉಗ್ರಗಾಮಿ ಸಂತ್ರಸ್ತ ಪಂಜಾಬ್‌ನ ಶಾಂತಿಯ ದಿನಗಳು ಹೆಚ್ಚು ಕಾಲ ಇರುವುದಿಲ್ಲವೇನೋ ಎನ್ನುವ ಶಂಕೆ ಮೂಡುತ್ತಿದೆ. ಪಂಜಾಬ್‌ನ ರಾಜಕೀಯ ಛಿದ್ರತೆ, ತೋಹ್ರಾ, ಬಾದಲ್‌ರ ತಿಕ್ಕಾಟದಲ್ಲಿ ಮತ್ತೆ ಉಗ್ರಗಾಮಿಗಳು ಒಂದಾಗುತ್ತಿದ್ದಾರೆ. ಪಂಜಾಬ್, ಕಾಶ್ಮೀರದ ಹಾದಿಯನ್ನು ಆಂಧ್ರಪ್ರದೇಶದಲ್ಲಿ ಪೀಪಲ್ಸ್ ವಾರ್ ಗ್ರೂಪ್ ಹಾಗೂ ನೈಋತ್ಯ ರಾಜ್ಯಗಳ ಉಗ್ರಗಾಮಿಗಳು ಹಿಡಿದಿದ್ದಾರೆ. ಡಿ. 19ರಂದು ಅಸ್ಸಾಂನ ಲಾಕೋವಪಾರಾದ ಮರದ ಸೇತುವೆ

ರಾಕ್ಷಸ ಶಕ್ತಿಯ ಆರ್‌ಡಿಎಕ್ಸ್!

ಆರ್‌ಡಿಎಕ್ಸ್ ಪರಿಶುದ್ಧ ರೂಪದಲ್ಲಿ ಬಿಳಿಯ ಪುಡಿ. ರಾಸಾಯನಿಕ ಹೆಸರು ಸೈಕ್ಲೋಟ್ರೈಮಿಥಲೀನ್ ಟ್ರೈನೈಟ್ರಮೈನ್ ಇದನ್ನು ಶೋಧಿಸಿದ ವಿಜ್ಞಾನಿ ಹ್ಯಾನ್ಸ್ ಹೆನ್ನಿಂಗ್. 1899ರಲ್ಲಿ ಇದನ್ನು ಶೋಧಿಸಿದರೂ, ದ್ವಿತೀಯ ಯುದ್ಧದ ಸಮಯದಲ್ಲಷ್ಟೇ ಇದನ್ನು ಸ್ಥಾಯಿ ರಸಾಯನಿಕವನ್ನಾಗಿಸಲಾಯ್ತು. ಆಗ ಸ್ಫೋಟಕವಾಗಿ ಪ್ರಚಲಿತವಿದ್ದ ಡಿಎನ್‌ಟಿ (ಡೈನೈಟ್ರೋಟಾಲಿನ್) ಅನ್ನು ಆರ್‌ಡಿಎಕ್ಸ್ ಸ್ಥಳಾಂತರಿಸಿಬಿಟ್ಟಿತು.

ಸೈಕ್ಲೋನೈಟ್ ಎಂದು ಕರೆಯಲ್ಪಡುವ ಆರ್‌ಡಿಎಕ್ಸ್ ಸಂಕೀರ್ಣವಾದ ರಸಾಯನಿಕ ರಚನೆಯುಳ್ಳದ್ದು ಮತ್ತು ತಯಾರಿಕೆಯಲ್ಲಿ ಆಗಬಹುದಾದ ತೀವ್ರ ಅಪಘಾತಗಳಿಂದಾಗಿ ಅದನ್ನು ಸೇನೆಯ ಕಾರ್ಖಾನೆಗಳಲ್ಲಿ ಮಾತ್ರ ತಯಾರಿಸಬಹುದು. ಅದನ್ನು ರಾಕೆಟ್, ಬಾಂಬ್ ಮತ್ತು ಟಾರ್ಪೆಡೋಗಳಲ್ಲಿ ಬಳಸುತ್ತಾರೆ.

ಶುದ್ಧ ಆರ್‌ಡಿಎಕ್ಸ್ ಅನ್ನು ಪಾಲಿಯುರಿಥೇನ್ ಅಥವಾ ಮೇಣದ ಜೊತೆ ಮಿಶ್ರಗೊಳಿಸಿ ಅಥವಾ ಅಗತ್ಯಕ್ಕೆ ತಕ್ಕಂತೆ ಡಿಎನ್‌ಟಿ ಅಥವಾ ಪಿಇಟಿಎನ್ ಜೊತೆ ಸೇರಿಸಿ ಬಳಸಲಾಗುತ್ತದೆ. ಹೆಚ್ಚು ಬಳಕೆಯಲ್ಲಿರುವ ಮತ್ತು ಅಪಾಯಕಾರಿ ಸಂಯೋಜನೆ ಸಿ 1 ರಿಂದ ಸಿ 3. ಇವುಗಳಲ್ಲಿ ಶೇ. 80 ರಷ್ಟು ಆರ್‌ಡಿಎಕ್ಸ್, ಶೇ.10 ರಷ್ಟು ಪಾಲಿಮರ್ ಹಾಗೂ ಶೇ. 10 ರಷ್ಟು ಪಿಇಟಿಎನ್ ಇರುತ್ತದೆ. ಇದರ ಹೆಸರು ಸೆಮ್‌ಟೆಕ್ಸ್. ಆರ್‌ಡಿಎಕ್ಸ್, ಅಲ್ಯೂಮಿನಿಯಂ ಮತ್ತು ಪಿಇಟಿಎನ್ ಅಥವಾ ಡಿಎನ್‌ಟಿ ಯನ್ನುಳ್ಳ ಸ್ಫೋಟಕವು ಅಣುಬಾಂಬ್ ಅಲ್ಲದ ಅತ್ಯಂತ ಪರಿಣಾಮಕಾರಿ ಸ್ಫೋಟಕವಾಗಿದ್ದು, ಇದನ್ನು ಅಣುಸ್ಫೋಟವನ್ನು ಸಾಧಿಸಲು ಬಳಸುತ್ತಾರೆ. ಆರ್‌ಡಿಎಕ್ಸ್ ಸೆಕೆಂಡಿಗೆ 8180 ಮೀ. ವೇಗದಲ್ಲಿ ಸ್ಫೋಟಿಸಿ 3300° ಸೆ. ಉಷ್ಣತೆಯನ್ನು ಉತ್ಪಾದಿಸಿದರೆ, ಪಿಇಟಿಎನ್ ಸೆಕೆಂಡಿಗೆ 8300



ಮೀ. ವೇಗದಲ್ಲಿ ಸ್ಫೋಟಿಸಿ 4230° ಸೆ. ಉಷ್ಣತೆಯನ್ನು ಉತ್ಪಾದಿಸುತ್ತದೆ. 10 ಅಡಿ ತ್ರಿಜ್ಯದಲ್ಲಿನ ಎಲ್ಲ ವಸ್ತುಗಳನ್ನು ಸೀದು ಹಾಕಿ, ಸೃಷ್ಟಿಯಾಗುವ ಆಘಾತದ ಅಲೆಗಳು ಕಟ್ಟಡಗಳನ್ನು ಬುಡ ಮೇಲು ಮಾಡಿಬಿಡುತ್ತದೆ. ಪತ್ರವೊಂದರಲ್ಲಿರುವ 50 ಗ್ರಾಂ, ಆರ್‌ಡಿಎಕ್ಸ್ ವ್ಯಕ್ತಿಯೊಬ್ಬನನ್ನು ಕೊಲ್ಲುತ್ತದೆ. ಆಯಕಟ್ಟಿನ ಜಾಗ ನೋಡಿ ಇಟ್ಟಲ್ಲಿ, ಇಡೀ ರಾಷ್ಟ್ರಪತಿ ಭವನ ಪುಡಿ ಮಾಡಲು 60 ಕೆ.ಜಿ. ಆರ್‌ಡಿಎಕ್ಸ್ ಸಾಕು.

ಆರ್‌ಡಿಎಕ್ಸ್ ಸೆಮ್‌ಟೆಕ್ಸ್ ಮತ್ತು ಪಿಇಡಿಎನ್‌ಗಳನ್ನು ಸುಲಭವಾಗಿ ಹಾಳೆಗಳನ್ನಾಗಿ ಪರಿವರ್ತಿಸಬಹುದು. ಸುಲಭವಾಗಿ ಆವಿಯಾಗುವುದಿಲ್ಲ, ಇದನ್ನು ಬಳಸಿ ಸೊಂಟಪಟ್ಟಿ ಅಥವಾ ಲೆಟರ್ ಬಾಂಬ್‌ಗಳನ್ನು, ಗಡಿಯಾರ ರೇಡಿಯೋ ಬಾಂಬ್‌ಗಳನ್ನು ಮಾಡುತ್ತಾರೆ. ಪಂಜಾಬಿನ ಉಗ್ರಗಾಮಿಗಳು ಆರ್‌ಡಿಎಕ್ಸ್ ಬಾಂಬ್‌ನ ಮಧ್ಯಭಾಗದಲ್ಲಿ ಪಿಇಟಿಎನ್ ಇಟ್ಟಿರುತ್ತಾರೆ. ಇದರಿಂದಾಗಿ ಉಂಟಾಗುವ ಸ್ಫೋಟವು ತೀವ್ರವಾದದ್ದಾಗಿರುತ್ತದೆ. ಕಡಿಮೆ ಅನಿಲ ಒತ್ತಡ ಇರುವ ವಸ್ತುವಾದ ಆರ್‌ಡಿಎಕ್ಸ್ ಅನ್ನು ಎಲೆಕ್ಟ್ರಾನಿಕ್ ಅನಿಲ ಶೋಧಕಗಳು ಪತ್ತೆ ಹಚ್ಚುವುದು ಕಷ್ಟ, ರೇಡಿಯೋ ತರಂಗಗಳು, ನಿರ್ದಿಷ್ಟ ಅವಧಿಯಲ್ಲಿ ಒತ್ತಡ ಅಥವಾ ಶಬ್ದದ ಮೂಲಕ ಬ್ಯಾಟರಿ ಕೋಶ ಬಳಸಿ ಬಾಂಬ್ ಅನ್ನು ಸ್ಫೋಟಿಸಬಹುದು.

ಈ ತೀವ್ರ ವಿನಾಶಿ ಸ್ಫೋಟಕ ಕುರಿತ ವ್ಯಂಗ್ಯವೊಂದಿದೆ. ಇದನ್ನು ಸ್ಥಾಯಿ ರಸಾಯನಿಕವನ್ನಾಗಿಸಿದ ಕೇಂಬ್ರಿಜ್‌ನ ಎಂಐಟಿಯ ವಿಜ್ಞಾನಿ ಜಾನ್.ಸಿ. ಶೀಹನ್ ಜೀವರಕ್ಷಕ ಪೆನ್ಸಿಲಿನ್‌ನ ತಯಾರಿಕೆ ಕುರಿತ ಸಂಶೋಧನೆಯಿಂದ ಹೆಸರುಗಳಿಸಿದ್ದ! ಪ್ರಕೃತಿಯಲ್ಲಿ ಸೃಷ್ಟಿ ಮತ್ತು ವಿನಾಶ ಎರಡೂ ಜೊತೆ ಜೊತೆಗೆ ಸಾಗುವಂತದ್ದು ಎನ್ನುವುದಕ್ಕೆ ಇದಕ್ಕಿಂತ ಉದಾಹರಣೆ ಬೇಕೇನು?



ಬಾಂಬ್ ಪತ್ತೆ ಹಚ್ಚುತ್ತಿರುವ ಪೋಲಿಸ್ ಸ್ಕ್ವಾಡ್

ಸ್ಫೋಟಿಸಿ 6 ಜನ ಪೊಲೀಸರು ಸೇರಿದಂತೆ 10 ಜನ ಸತ್ತಿದ್ದರು. ಅದರ ಹಿಂದಿನ ದಿನ ಗುವಾಹತಿಯ ಟೀ ಹರಾಜು ಕೇಂದ್ರದ ಬಳಿ ಪಂಜಾಬ್ ಗಡಿಯ ಮೂಲಕ ಸಾಗಿ ಬಂದಿದ್ದ 18 ಕೆ.ಜಿ. ಆರ್‌ಡಿಎಕ್ಸ್‌ನ್ನು ಬಬ್ಬರ್ ಖಲ್ಸಾ ಉಗ್ರಗಾಮಿಗಳಿಂದ ಪೊಲೀಸರು ಫಿರೋಜ್‌ಪುರದ ಬಳಿ ವಶಪಡಿಸಿಕೊಂಡರು. ಸ್ಫೋಟಕಗಳಿಲ್ಲದ ಸ್ಥಳವೇ ಇಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಅದನ್ನು ಸಾಗಿಸುವ ವಿಧಾನಗಳು ಆಶ್ಚರ್ಯ ಹುಟ್ಟಿಸುತ್ತವೆ. ಚಂಡೀಗಢದ ಜೈಲಿನಲ್ಲಿದ್ದ ಬಬ್ಬರ್ ಖಲ್ಸಾದ ಉಗ್ರಗಾಮಿಗಳಿಗೆ ಒಮ್ಮೆ ರಬ್ಬರ್ ಚಪ್ಪಲಿಯ ರೂಪದಲ್ಲಿ, ಇನ್ನೊಮ್ಮೆ ಲಾಡುವಿನ ರೂಪದಲ್ಲಿ ಆರ್‌ಡಿಎಕ್ಸ್ ಸರಬರಾಜು ಮಾಡಲಾಗಿತ್ತು!

ಪಂಜಾಬ್‌ನಲ್ಲಿ ಬೆಂಕಿ ಹೊತ್ತಿದರೆ ಅದರ ಝಳ ದೆಹಲಿಗೆ ತಗಲಲು ಹೆಚ್ಚು ಕಾಲ ಹಿಡಿಯುವುದಿಲ್ಲ. 1996-97ರ ದೆಹಲಿ ಸ್ಫೋಟಕ್ಕೆ ಐಎಸ್ಐ ಪ್ರೇರಿತ ಕಾಶ್ಮೀರಿ ಉಗ್ರಗಾಮಿಗಳು ಕಾರಣ ಎಂದು 98ರ ಮೊದಲ ಭಾಗದಲ್ಲಿ ಸಿಕ್ಕಿ ಬಿದ್ದ ಅಬ್ದುಲ್ ಕರೀಂ ತಂಡಾ ಗುಂಪು ಸಾಬೀತು ಮಾಡಿತ್ತು. ಈಗಿನ ವರದಿಗಳ ಪ್ರಕಾರ ಪಂಜಾಬ್‌ನ ಉಗ್ರಗಾಮಿಗಳು ದೆಹಲಿ ಸೇರಿದ್ದಾರೆ ಹಾಗೂ ಸಿಕ್ಕಿ ಬೀಳದ ಉಗ್ರಗಾಮಿಗಳು ಪಾಕಿಸ್ತಾನ, ಇಂಗ್ಲೆಂಡ್ ಮತ್ತು ಕೆನಡಾದಲ್ಲಿರುವ ತಮ್ಮ ಬೆಂಬಲಿಗರ ನೆರವಿನಿಂದ ಮತ್ತೆ ಗುಂಪಾಗುತ್ತಿದ್ದಾರೆ. ಪಂಜಾಬ್‌ನ ಜನ ಬಹಳ ಬೆಲೆತೆತ್ತು ಶಾಂತಿಯನ್ನು ಪಡೆಕೊಂಡರು, ಆದರೆ ಅಲ್ಲಿನ ರಾಜಕೀಯ ಬಿಕ್ಕಟ್ಟು ಶಾಂತಿಯ ಭವಿಷ್ಯ ದೂರ ನಡೆಯದು ಎನ್ನುವುದನ್ನು ನಿಜ ಮಾಡುವ ಸಾಧ್ಯತೆಗಳಿವೆ.

ಕಾಶ್ಮೀರದಲ್ಲಿ ಆರ್‌ಡಿಎಕ್ಸ್‌ನ ಬಳಕೆ ದಿನೇ ದಿನೇ ಹೆಚ್ಚುತ್ತಿದೆ. ನಿರಂತರ ಯುದ್ಧ ನಡೆಸುವ ಭಾರತೀಯ ಸೈನಿಕರು ಕಾಶ್ಮೀರದಲ್ಲಿ ತಮ್ಮ ಜೀವಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಪ್ರತಿದಿನ ವಾಹನಗಳು ಮೇಲುಸ್ತುವಾರಿಗೆ ಹೋಗುವ ಮೊದಲು ರಸ್ತೆಗಳನ್ನು ಪರೀಕ್ಷಿಸಲೇಬೇಕು. ಉಗ್ರಗಾಮಿಗಳು ಪ್ರತಿದಿನ ಹೊಸ ತಂತ್ರ ಹೂಡಿ ಸೈನಿಕರ ಜೀವ ತೆಗೆಯಲು ಕಾಯುತ್ತಿರುತ್ತಾರೆ. ಕಳೆದ ವರ್ಷ ಕಾರ್ಗಿಲ್‌ನಲ್ಲಿ ರಸ್ತೆಗೆ ಅಡ್ಡ ಇಟ್ಟಿದ್ದ ಕಲ್ಲನ್ನು ಸರಿಸಿದ ಅಧಿಕಾರಿ ಬಾಂಬ್ ಸ್ಫೋಟಿಸಿ ಸತ್ತ. ಆರ್‌ಡಿಎಕ್ಸ್ ಮೇಲೆ ಹೇರಿಡಲಾಗಿದ್ದ ಕಲ್ಲಿನ ಒತ್ತಡ ಬಿಡುಗಡೆಯಾದ ತಕ್ಷಣ ಬಾಂಬ್ ಸ್ಫೋಟಿಸಿತು. ತೀರಾ ಇತ್ತೀಚೆಗೆ ಬೆಂಗಳೂರಿನ ಇಬ್ಬರು ಭಯೋತ್ಪಾದಕರ ಗುಂಪಿಗೆ ಬಲಿಯಾಗಿದ್ದಾರೆ. ಅಮೂಲ್ಯ ಪ್ರಾಣಗಳು ವ್ಯರ್ಥವಾಗಿ ನಾಶವಾಗುತ್ತಿರುವ ದುರಂತ ಇದು.

ಸೇನೆಯ ಮೂಲಗಳ ಪ್ರಕಾರ ಆರ್‌ಡಿಎಕ್ಸ್ ವಶಪಡಿಸಿಕೊಂಡ ನಂತರ ತನಿಖೆ ನಡೆಸಿದರೆ, ಅದು ಬೆರಳು ತೋರಿಸುವುದು ಪಾಕಿಸ್ತಾನದ ಕಡೆಗೆ, ಗಡಿ ರಕ್ಷಣಾ ಪಡೆ 1995-98ರ ಅವಧಿಯಲ್ಲಿ ವಶಪಡಿಸಿಕೊಂಡ 450 ಕೆ.ಜಿ. ಸ್ಫೋಟಕಗಳಲ್ಲಿ, 340 ಕೆ.ಜಿ. ಆರ್‌ಡಿಎಕ್ಸ್ ಸಿಕ್ಕಿದ್ದು ಪಾಕಿಸ್ತಾನ ಗಡಿಯ ಬಳಿ. ಐಎಸ್ಐ ಪೂರೈಸುವ ಆರ್‌ಡಿಎಕ್ಸ್ ಜೊತೆ ಇಂಗಾಲ (ಇದ್ದಲು, ಕಲ್ಲಿದ್ದಲು) ಮೊಬಿಲ್ ತೈಲ ಅಥವಾ ಕಪ್ಪು ಸ್ಫೋಟಕವನ್ನು ಸೇರಿಸುವುದರಿಂದ ಅದರ ಮೂಲವನ್ನು ಗುರುತಿಸುವುದು ಸಾಧ್ಯವಿಲ್ಲ. ಪಾಕಿಸ್ತಾನ ತನ್ನೆಲ್ಲ ಕರಾಳ ಕೃತ್ಯಗಳನ್ನು ಮಾಡಿಸುವುದು ಐಎಸ್ಐನ ನೆರವಿನಿಂದ. ಐಎಸ್ಐ ಎಂದ ತಕ್ಷಣ ಬರುವ ಇನ್ನೊಂದು ಚಿತ್ರ ದಾವೂದ್ ಇಬ್ರಾಹಿಂನದ್ದು.

ಕರಾಳ ಹಸ್ತ

ಕೊಪ್ಪೋಲಾನ 'ಗಾಡ್ ಫಾದರ್' ಪಾತಕಿಗಳ ಬೈಬಲ್ ಇದ್ದಂತೆ. ಇದನ್ನು 43 ವರ್ಷ ವಯಸ್ಸಿನ ದಾವೂದ್ ಇಬ್ರಾಹಿಂ ಅನೇಕ ಸಲ ಓದಿದ್ದಾನೆ. ಪಾಕಿಸ್ತಾನದ ಐಎಸ್ಐ (Inter Services Intelligence) ಆತನ ಅಂಗಗಳಲ್ಲೊಂದು. ಮಾರ್ಚ್ 93ರ ಮುಂಬೈ ಬಾಂಬ್ ಸ್ಫೋಟದ ನಂತರ ಭಾರತ ಬಿಟ್ಟ ಈತನು ದುಬ್ಯಾ, ಕರಾಚಿ

ಕೋಷ್ಟಕ - 1

ವಶಪಡಿಸಿಕೊಂಡ ಆರ್‌ಡಿಎಕ್ಸ್ (ಕೆ.ಜಿ.ಗಳಲ್ಲಿ)


ರಾಜ್ಯ	1995	96	97	ಡಿಸೆಂಬರ್ 15, 98ರ ತನಕ
ಹರಿಯಾಣ	47	-	-	-
ಜಮ್ಮು ಮತ್ತು ಕಾಶ್ಮೀರ	129	173	827	1109
ಪಂಜಾಬ್	57	163	122	68
ರಾಜಾಸ್ತಾನ	13	63	15	-
ದೆಹಲಿ	-	-	10	23
ಒಟ್ಟು	246	399	974	1200

ಕೋಷ್ಟಕ - 2

ಸ್ಫೋಟ ನಡೆದ ಸ್ಥಳ	ಸಾವಿನ ಸಂಖ್ಯೆ	ಉದ್ದೇಶಿತ ಗುರಿಗಳು
ಮಾರ್ಚ್ 93, ಮುಂಬೈ	6	ಬನಿಹಾಲ್ ಸುರಂಗ (ಜಮ್ಮು ಮತ್ತು ಕಾಶ್ಮೀರ) ಚೀನಾಬ್ ಸೇತುವೆ, ರಾವಿ ಸೇತುವೆ (ಪಠಾಣ್ ಕೋಟೆ) ಭಾಕ್ರಾ ಜಲಾಶಯ, ಪಾರ್ಲಿಮೆಂಟ್ ಸದನ ಮತ್ತು ಪಾಲಿಕಾ ಬಜಾರ್ (ದೆಹಲಿ), ಭಾಭಾ ಅಣು ಸಂಶೋಧನಾ ಕೇಂದ್ರ ಮತ್ತು ಸ್ಟಾಕ್ ವಿನಿಮಯ ಕೇಂದ್ರ, ಮುಂಬೈ
ಮಾರ್ಚ್ 94, ಶ್ರೀನಗರ	12	
ಮೇ 96, ದೌಸಾ,	14	
ದೆಹಲಿ	25	
ಜುಲೈ 97, ಭಟಿಂಡಾ	38	
ನವೆಂಬರ್ 98, ಅನಂತನಾಗ್	6	

ಎರಡೂ ಪ್ರದೇಶಗಳಲ್ಲಿ ನೆಲೆವೂರಿದ್ದಾನೆ. ಭಾರತದಲ್ಲಿ ಐಎಸ್ಐ ಮತ್ತು ದಾವೂದ್ ಈ ಇಬ್ಬರ ಕೈವಾಡವಿಲ್ಲದೆ ನಡೆದ ದುಷ್ಕೃತ್ಯಗಳ ಸಂಖ್ಯೆ ಬಹಳ ಕಡಿಮೆ.


ಜಮ್ಮು ಮತ್ತು ಕಾಶ್ಮೀರ ಮಾತ್ರ ಐಎಸ್ಐ



ಅರುಣ್ ಗಾವ್ಳಿ


ಕಾಟದಿಂದ ನರಳುತ್ತಿಲ್ಲ. ಪಂಜಾಬ್, ತಮಿಳು ನಾಡು, ಕೇರಳಕ್ಕೂ ಅದರ ಹಸ್ತ ಚಾಚಿಬಿಟ್ಟಿದೆ. ಶಾಂತವಾಗಿದ್ದ ಕರ್ನಾಟಕದ ಕರಾವಳಿ ಪ್ರದೇಶಗಳು ಮತ್ತೆ ಮತ್ತೆ ಕೋಮುಗಲಭೆಗೆ ತುತ್ತಾಗುತ್ತಿವೆ. ಕೇರಳದಲ್ಲಿ ಮದನಿ ನಡೆಸುತ್ತಿರುವ ಕುಕೃತ್ಯಗಳಿಗೆ ಐಎಸ್ಐನ ಬೆಂಬಲ ಇದೆ. ಪುತ್ತೂರು, ಭಟ್ಕಳದಲ್ಲಿ ಹಿಂದೂ ಮತೀಯವಾದಿಗಳೊಡನೆ ಮುಸ್ಲಿಂ ಮತೀಯವಾದಿಗಳು ತೋಳೇರಿಸಿ ನಿಂತಿದ್ದಾರೆ. ಗುಜರಾತ್ ಮತ್ತು ಈಶಾನ್ಯ ಭಾರತಕ್ಕೂ ಐಎಸ್ಐನ ಜಾಲ ಹರಡಿದೆ. ಪಾಕಿಸ್ತಾನ ಅಫ್ಘಾನಿಸ್ತಾನಕ್ಕೆ ಯುವಕರನ್ನು ತರಬೇತಿಗೆ ಕಳಿಸುವ ಹರ್ಕತ್ ವುಲ್ ಅನ್ಸರ್ ಫಿರೋಜಾಬಾದ್, ಹಾಪುರ್, ಆಗ್ರಾದಂತಹ ಮುಸ್ಲಿಮರಿರುವ ಪ್ರದೇಶದಲ್ಲಿ ಬೇರೂರಿಬಿಟ್ಟಿದೆ.

ಗೃಹಖಾತೆಯ ಸಾಂಸದಿಕ ಸಮಿತಿಯ ವರದಿ



ಚೋಟಾ ರಾಜನ್

ಪ್ರಕಾರ ಸರ್ಕಾರವು ಕಳೆದ 10 ವರ್ಷಗಳಲ್ಲಿ ಆಂತರಿಕ ಸುರಕ್ಷತೆಗಾಗಿ 64,500 ಕೋಟಿ ರೂ.ಗಳನ್ನು ಖರ್ಚು ಮಾಡಿದೆ. ಇದು ಒಂದರ್ಥದಲ್ಲಿ ಐಎಸ್ಐ ಮಾಡಿದ ಅಪಘಾತಗಳನ್ನು ತಡೆಯಲು ಸರ್ಕಾರ ಮಾಡಿದ ವೆಚ್ಚ. ಈ ದಾವೂದನೆಂಬ ದುಷ್ಟಗ್ರಹದ ಪ್ರಭಾವ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ನೇಪಾಳ, ದುಬೈಯಲ್ಲೂ ಆತನ ಅನುಯಾಯಿಗಳಿದ್ದಾರೆ. ಮುಂಬೈ ಸ್ಫೋಟದ ನಂತರ 24 ಗಂಟೆಗಳೊಳಗೆ ದಾವೂದನ ತಾಯಿ ಅಮೀನಾಬಿಗೆ ಪಾಸ್‌ಪೋರ್ಟ್ ನೀಡಲಾಯಿತು. ಆ ಕುರಿತ ವಿವರಗಳಿದ್ದ ಕಡತ ನಾಪತ್ತೆಯಾಗಿದ್ದು, ಅಮೀನಾಬಿಗೆ ಪಾಸ್‌ಪೋರ್ಟ್ ನೀಡಲು ಕಾರಣನಾದ ಅಧಿಕಾರಿ ಅಥವಾ ರಾಜಕಾರಣಿ ಯಾರು ಎಂದು ಖಚಿತವಾಗಿ ಗೊತ್ತಾಗಿಲ್ಲ. ನವೆಂಬರ್‌ನಲ್ಲಿ ಬಂಧನಕ್ಕೊಳಗಾದ ರಮೇಶ್ ಶರ್ಮಾ ಎಂಬ ಘಾತಕನ ಉದ್ಯೋಗಿಯಾಗಿದ್ದ



ಬಬ್ಲೂ ಶ್ರೀವಾಸ್ತವ

ಅರವಿಂದ್ ಬಾಲಿಯು ವಿಳಾಸವನ್ನು ಅಮೀನಾಬಿ ಕೊಟ್ಟಿದ್ದಳು.

ದಾವೂದನ ರಾಜ್ಯ ದುಬೈನಲ್ಲೇ ಶರ್ಮಾಗೆ ಅಸಂಖ್ಯಾತ ಸಂಪರ್ಕಗಳಿದ್ದವು. ದುಬೈನ ಭಾರೀ ಶಕ್ತಿಶಾಲಿ ಮನುಷ್ಯ ನಾಸೆರ್ ಅಬ್ದುಲ್ಲಾನಿಗೆ ಪೂನಾದಲ್ಲಿ ಸ್ಟಡ್ ಫಾರಂ ಕೊಳ್ಳಲು ಶರ್ಮಾ ನೆರವಾಗಿದ್ದ. ಇದಕ್ಕಾಗಿ ತಾನು ರಾಜೀವ್ ಗಾಂಧಿ ನೆರವು ಪಡೆದುಕೊಂಡೆ ಎಂದು ಶರ್ಮಾ ಹೇಳಿದ್ದಾನೆ. ದಾವೂದನ ಶಿಷ್ಯ ಶರದ್ ಶೆಟ್ಟಿಗೆ ನಾಸೆರ್ ಅಬ್ದುಲ್ಲಾನ ಅಸ್ನಾ ಪ್ಯಾಲೇಸ್ ಹೋಟೆಲಿನಲ್ಲಿ ಮದ್ಯ ಸರಬರಾಜು ಲೈಸನ್ಸ್ ಕೊಡಿಸಿದ್ದ. ದಾವೂದನ ಗುಂಟಾರ ಅಬ್ದುಲ್ ಸಲೆಮ್‌ನ ಸಂಪರ್ಕದಿಂದ ಬೆಲೆ ಬಾಳುವ ಮನೆಗಳಿಂದ ಅವುಗಳ ಒಡೆಯರನ್ನೇ ಓಡಿಸಿಬಿಟ್ಟ. ಮೊದಲು ದಾವೂದನ ಜೊತೆ ಇದ್ದು ನಂತರ ಚೋಟಾರಾಜನ್ ಜೊತೆ ಸೇರಿದ್ದ ಬಬ್ಲೂ ಶ್ರೀವಾಸ್ತವನ ಕೊಲೆಗೆ ಇದೇ ತಂಡ ಪ್ರಯತ್ನಿಸಿತ್ತು. ಈ ತಂಡದ ಇನ್ನೊಬ್ಬ ಮುಖ್ಯ ವ್ಯಕ್ತಿ ರಿಲೆಯನ್ಸ್ ಸಂಸ್ಥೆಯ ಹಿರಿಯ ಅಧಿಕಾರಿ ಆರ್. ಬಾಲಸುಬ್ರಮಣ್ಯಂ. ಈತನ ಪಾತಕತನಕ್ಕೆ ಕೊನೆ ಮೊದಲಿಲ್ಲ. ಈತ ಸೂಟ್ ಹಾಕುವ ಸುಸಂಸ್ಕೃತ ವೀಲರ್ ಡೀಲರ್. ಬಜೆಟ್‌ಗೆ ಮೊದಲೇ ಅದರ ಪ್ರತಿ ಈತನಿಗೆ ಸಿಗುತ್ತಿತ್ತು. ಸಂಪುಟದ ಸಭೆಯ ಗಂಭೀರ ವಿಷಯಗಳು ಈತನ ಕೈಗೆ ಸುಲಭವಾಗಿ ಸಿಕ್ಕುತ್ತಿದ್ದವು. ಈತನ ಬಂಧನದ ನಂತರ ಅದ್ಭುತ

(30ನೇ ಪುಟ ನೋಡಿ)

10 ವರ್ಷಗಳ ಐ ಎಸ್ ಐ ಹಾವಳಿ (1988 -98)

ಸತ್ತವರ ಸಂಖ್ಯೆ	ಸೈನಿಕರು	5101
	ನಾಗರಿಕರು	29151
ಸೂರು ಕಳಕೊಂಡವರು		2.78 ಲಕ್ಷ
ಹಾನಿಗೊಳಗಾದ ಆಸ್ತಿಯ ಮೊತ್ತ		2000 ಕೋಟಿ ರೂ.
ಆಂತರಿಕ ಭದ್ರತೆಗೆ ಆದ ವೆಚ್ಚ		64,500 ಕೋಟಿ ರೂ.
ಕಳ್ಳ ಸಾಗಣೆ ಮೂಲಕ ಬಂದ ಶಸ್ತ್ರಾಸ್ತ್ರ		61,900
ಐಎಸ್ಐ ನೇಮಿಸಿದ ಭಾರತೀಯ ಏಜೆಂಟರು		19,000
ದೇಶ ಪ್ರವೇಶಿಸಿದ ವಿದೇಶಿ ಪಾಕ್ ಉಗ್ರಗಾಮಿಗಳು		7125

(ಮೂಲ: ಗೃಹ ಖಾತೆ ವರದಿ)

ಸಾಧನೆಯತ್ತ ಚಿಗುರು ಪ್ರತಿಭೆಗಳು



ಅಂಗವಿಕಲರು ತಾವು ಯಾವುದಕ್ಕೂ ವಿಕಲತೆಯನ್ನು ಹೊಂದಿಲ್ಲ. ಅಲ್ಲದೇ, ನಾವೂ ಎಲ್ಲರಂತೆ ಸಾಧನೆಯನ್ನು ಮಾಡಬಹುದು. ಛಲದಿಂದ ಮನಸ್ಸು ಮಾಡಿದರೇ, ಯಾವುದೂ ಅಸಾಧ್ಯವಿಲ್ಲವೆಂದು ಅರಿತ ಈ ಮೂವರು ವಿದ್ಯಾರ್ಥಿಗಳು ಅಂಗವಿಕಲರಾದರೂ ಓದಿನೊಂದಿಗೆ ಇನ್ನಿತರ ಪಠ್ಯೇತರ ಚಟುವಟಿಕೆಗಳಲ್ಲಿ ಕೂಡಾ ಗಮನಾರ್ಹ ಸಾಧನೆ ಮಾಡಿದ್ದಾರೆ.

ಮಲ್ಲಿಕಾರ್ಜುನ ಹುಟ್ಟುವಾಗಲೇ ಅಂಧನಾಗಿದ್ದ, ಮುಂದೆ ಶಾಲೆಗೆ ಸೇರಿ ಪಿ. ಯು. ಸಿ. ಪರೀಕ್ಷೆಯಲ್ಲಿ 6ನೇ ರ್‍ಯಾಂಕ್ ಗಳಿಸಿರುತ್ತಾನೆ. ಈತನಿಗೆ ಒಡನಾಡಿಯಾಗಿ ಇಜಾಸ್ ಅಹ್ಮದ್ ಎಂಬ ಗೆಳೆಯನಿದ್ದಾನೆ. ಈತನು ಅಂಧ ವಿದ್ಯಾರ್ಥಿ. ಪಿ.ಯು.ಸಿ.ಯಲ್ಲಿ ಶೇ. 70ರಷ್ಟು ಅಂಕಗಳನ್ನು ಪಡೆದಿರುತ್ತಾನೆ. ಪ್ರಸ್ತುತ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್, ಉಜಿರೆಯಲ್ಲಿ ಇಬ್ಬರೂ ಬಿ.ಎ. ವಿದ್ಯಾರ್ಥಿಗಳಾಗಿ ವ್ಯಾಸಂಗ ಮಾಡುತ್ತಿದ್ದಾರೆ. ಹಾಗೆಯೇ ಬಣ್ಣ-ಬಣ್ಣದ ಬಟ್ಟೆ ತೊಟ್ಟು ಎಲ್ಲ ಹುಡುಗಿಯರಂತೆ ತಲೆ ಬಾಚಿ ಶಾಲೆಗೆ ಹೋಗುವ ಹುಡುಗಿ ಸಬಿತಾ ಮೋನಿಸ್. ಎರಡೂ ಕೈಗಳನ್ನು ಹುಟ್ಟಿನಿಂದಲೇ ಕಳೆದುಕೊಂಡರೂ ಕಲಿಯಬೇಕೆಂಬ ಉತ್ಸಾಹದಿಂದ ಕಾಲಿನ ಮೂಲಕ ಬರೆಯುವುದಲ್ಲದೇ,



ಇನ್ನಿತರ ಚಟುವಟಿಕೆಗಳನ್ನು ಕಾಲಿನ ಮೂಲಕ ರೂಢಿ ಮಾಡಿಕೊಂಡ ಇವಳಿಗೆ ಎರಡು ಕಾಲ್ಗಳೇ ಎರಡು ಕೈಗಳು.

ಶಿವಮೊಗ್ಗದ ಹೊನ್ನಾಳಿಯ ಹೊಸಮಳು ಗ್ರಾಮದ ಮಲ್ಲಪ್ಪ ಮುನಿಯಮ್ಮ ಎಂಬ ಕೃಷಿಕ ದಂಪತಿಗಳ ನಾಲ್ಕನೆಯ ಮಗನಾದ ಮಲ್ಲಿಕಾರ್ಜುನ ಎಸ್.ಎಸ್.ಎಲ್.ಸಿ.ಯಲ್ಲಿ ಶೇ. 80 ರಷ್ಟು ಅಂಕಗಳನ್ನು ಪಡೆದು, ಉನ್ನತ ವಿದ್ಯಾಭ್ಯಾಸ ಮಾಡಬೇಕೆಂಬ ಆಸೆ ಪಟ್ಟು ತಬಲದಲ್ಲಿ ಸೀನಿಯರ್ ಪದವಿ ಪಡೆದಿದ್ದಾರೆ. ರಸಪ್ರಶ್ನೆ, ಭಾಷಣ, ಯಕ್ಷಗಾನ ಮುಂತಾದ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಬಾಚಿಗೊಂಡಿದ್ದಾರೆ. ಚದುರಂಗ ಆಟವಾಡುವುದು, ಸಂಗೀತ ಆಲಿಸುವುದು, ಕ್ರಿಕೆಟ್ ವೀಕ್ಷಕ ವಿವರಣೆ ಕೇಳುವುದಲ್ಲದೇ, ಸ್ವರ ಆಧಾರದ ಮೂಲಕ ಗುರುತು ಪರಿಚಯ ಹಿಡಿಯಬಲ್ಲರು.

ಇವರ ಆತ್ಮೀಯ ಗೆಳೆಯ ಇಜಾಸ್ ಅಹ್ಮದ್ ಕೂಡಾ ಇವರೊಂದಿಗೆ ನಾಲ್ಕನೆಯ ತರಗತಿಯಿಂದ ಒಟ್ಟಿಗೆ ಓದಿ ಪಿ.ಯು.ಸಿ.ಯಲ್ಲಿ ಅಧಿಕ ಅಂಕಗಳನ್ನು ಗಳಿಸಿದ್ದಾರೆ. ಯಕ್ಷಗಾನದಲ್ಲಿ ಅಭಿನಯಿಸುವುದು, ಜಾನಪದ ಪದ್ಯ ಹಾಡುವುದಷ್ಟೇ ಅಲ್ಲದೇ ಇವರು ಕ್ರಿಕೆಟ್ ಪ್ರಿಯರಾಗಿದ್ದಾರೆ. 1974ರಲ್ಲಿ ದಕ್ಷಿಣ ಕನ್ನಡದ ಆಗಿನ ಜಿಲ್ಲಾಧಿಕಾರಿಯಿಂದ ವಿಶೇಷ ಪ್ರಶಸ್ತಿ ಪಡೆದಿದ್ದಾರೆ. ಈ ಇಬ್ಬರು ವಿದ್ಯಾರ್ಥಿಗಳು ಇತರರೊಂದಿಗೆ ಸ್ಪರ್ಧಿಸುವುದು ಗಮನಾರ್ಹವಾಗಿದೆ.

ಬೆಳ್ತಂಗಡಿಯ ಗರ್ಡಾಡಿ ಗ್ರಾಮದ ಬಜಿಲ್ ಮತ್ತು ಬೆನ್ಡಿಕ್ಟ್‌ಮೋನಿಸ್ ದಂಪತಿಗಳ ಮೂರನೆಯ ಪುತ್ರಿ ಸಬಿತಾ ಪ್ರಸ್ತುತ ಪಡಂಗಡಿ ಪ್ರೌಢಶಾಲೆಯಲ್ಲಿ ಎಂಟನೇ ತರಗತಿ ಓದು ಕಲಿಯುತ್ತಿದ್ದಾಳೆ. ಒಂದನೆಯ ತರಗತಿಯಿಂದಲೂ ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ

■ ಉಮಾ ಬೆಳ್ತಂಗಡಿ

ತಾನು ಇತರರಿಗಿಂತ ಭಿನ್ನವಲ್ಲವೆಂದು ತೋರ್ಪಡಿಸಿದ್ದಾಳೆ. ತನ್ನ ಅಗತ್ಯಕ್ಕೆ ತಕ್ಕಂತೆ ಕಾಲುಗಳನ್ನು ಮಾರ್ಪಡಿಸುತ್ತಾಳೆ. ಉತ್ಸಾಹದ ಬುಗ್ಗೆಯಿಂದ ಕಲಿಯಬೇಕೆಂಬ ಉಲ್ಲಾಸದಲ್ಲಿ ಹೆಣ್ಣಾಗಿ ಕೂಡಾ ಹಲವಾರು ಆಸೆ ಆಕಾಂಕ್ಷೆಗಳನ್ನು ಹೊಂದಿದ್ದಾಳೆ.

ಅಂಧ ವಿದ್ಯಾರ್ಥಿಗಳಾದ ಮಲ್ಲಿಕಾರ್ಜುನ ಮತ್ತು ಇಜಾಸ್ ಅಹ್ಮದ್ ತಮ್ಮ ಕಾಲೇಜಿನ ಕಿರಿಯ ವಿದ್ಯಾರ್ಥಿಗಳ ಮೂಲಕ ಇತ್ತೀಚೆಗೆ ಪ್ರಥಮ ಪರೀಕ್ಷೆಯನ್ನು ಮುಗಿಸಿದ್ದು, ಹೆಚ್ಚಿನ ಅಂಕಗಳನ್ನು ಗಳಿಸಿದ್ದಾರೆ. ಟೇಪ್ ರೆಕಾರ್ಡ್‌ರ್ ಮೂಲಕ ಕಾಲೇಜಿನ ಪಾಠಗಳನ್ನು ರೆಕಾರ್ಡ್ ಮಾಡಿ ತಮ್ಮ ವ್ಯಾಸಂಗ ಕೊಠಡಿಯಲ್ಲಿ ಪುನರಪಿ ಆಲಿಸಿ ವ್ಯಾಸಂಗ ಮಾಡುತ್ತಿದ್ದಾರೆ. ಸಹ ಧರ್ಮದ

ಭಾವೈಕ್ಯತೆಯನ್ನು ತೋರುವ ಈ ಅಂಧ ವಿದ್ಯಾರ್ಥಿಗಳಿಂದ ನಾವು ಕಲಿಯಬೇಕಾದ್ದು ಸಾಕಷ್ಟಿದೆ. ಅಂಧರಿಗೆ ಬಣ್ಣದ ಬೆಳಕಿನ ಲೋಕವು ಕಾಣದಿದ್ದರೂ, ಜ್ಞಾನವು ಇವರಿಗೆ ಬಣ್ಣದ ಲೋಕದ ಕೊರತೆಯನ್ನು ನಿವಾರಿಸಿದೆ.

ಅಂಧತ್ವದಿಂದ ಇವರಿಗೆ ಯಾವುದೇ ತೊಂದರೆಯಾಗಿಲ್ಲ. ಇದನ್ನು ಸವಾಲಾಗಿ ಸ್ವೀಕರಿಸಿರುವ ಇವರು ತಮ್ಮ ನೋಟ್ಸ್‌ಗಳನ್ನು ಬ್ರೈಲ್ ಲಿಪಿಯಲ್ಲಿ ಬರೆಯುತ್ತಾರೆ. ಧರ್ಮಸ್ಥಳ ಧರ್ಮಾಧಿಕಾರಿ ಪೂಜ್ಯ ಡಿ. ವೀರೇಂದ್ರ ಹೆಗ್ಗಡೆಯವರು ಮತ್ತು ಕಾಲೇಜಿನ ಪ್ರಾಂಶುಪಾಲ ಬಿ. ಯಶೋವರ್ಮ ಇವರ ಸಹಕಾರಗಳನ್ನು ನೆನೆಯುವ ಇವರು, ಕಾಲೇಜು ಅಧ್ಯಾಪಕ ವೃಂದದವರನ್ನು ಸ್ಮರಿಸುತ್ತಾರೆ. ಈ ವಿದ್ಯಾರ್ಥಿಗಳ ಪ್ರತಿಭೆಯನ್ನು ಕಂಡು ಉಜಿರೆ ಜೇಸಿ ಸಂಸ್ಥೆ ಇವರನ್ನು ಪ್ರೋತ್ಸಾಹಿಸುತ್ತಿದೆ.

ಎರಡು ಕೈ ಸರಿಯಿರುವ ಮಕ್ಕಳಂತೆ ಉತ್ಸಾಹದಿಂದ ಮಾತನಾಡುವ, ಕೈಯಿಲ್ಲದ ಕ್ರೈಸ್ತ ಸಬಿತಾಗೆ ಕ್ರೈಸ್ತ ಸೋದರಿ (ಸಿಸ್ಟರ್) ಆಗಿ ಸಮಾಜ ಸೇವೆ ಮಾಡುವಾಸೆ. ಬೆಳ್ತಂಗಡಿಯ ಹಲವಾರು ಸಂಘ-ಸಂಸ್ಥೆಗಳು ಇವಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿವೆ. ಇವಳು ಏಳನೆಯ ತರಗತಿಯಲ್ಲಿ ಶೇ. 80 ರಷ್ಟು ಅಂಕಗಳನ್ನು ಪಡೆದು ಶಾಲೆಗೆ ಒಳ್ಳೆಯ ಹೆಸರನ್ನು ತಂದಿದ್ದಾಳೆ.

ಅಣ್ಣ - ತಮ್ಮಂದಿರಂತೆ ಒಟ್ಟಿಗೆ ಶಾಲೆಯಲ್ಲಿ ಓಡಾಡಿಕೊಂಡು ದೈನಂದಿನ ಚಟುವಟಿಕೆಗಳನ್ನು ನಡೆಸುತ್ತಿರುವ ಮಲ್ಲಿಕಾರ್ಜುನ ಮತ್ತು ಇಜಾಸ್ ಅಹ್ಮದ್‌ರು ಸಹಧರ್ಮದ ಯುವಕರು. ಇವರೊಂದಿಗೆ ಕೈ ಇದ್ದು, ಸೋಮಾರಿತನದಿಂದ ಕಾಲಕಳೆಯುವವರಿಗೆ ಸಬಿತಾ ಒಂದು ಅನುಕರಣೀಯ. ಜಾತಿಯ ಹೆಸರಿನಲ್ಲಿ ಕಚ್ಚಾಡುವ ಇಂದಿನ ಜನಾಂಗದವರು ಈ ವಿದ್ಯಾರ್ಥಿಗಳ ಅನ್ಯೋನ್ಯ ಜೀವನವನ್ನು ಅರಿಯಬೇಕು.

ಸಾಧನೆಯತ್ತ ಧಾವಿಸುತ್ತಿರುವ ಈ ಅಂಗವೈಕಲ್ಯರ ಚಿಗುರು ಪ್ರತಿಭೆಗಳಾದ ಮಲ್ಲಿಕಾರ್ಜುನ, ಇಜಾಸ್ ಅಹ್ಮದ್, ಸಬಿತಾ ಮೋನಿಸರು ಉತ್ತಮ ವಿದ್ಯಾರ್ಥಿಗಳಾಗಿ ಸಾಮಾನ್ಯರೊಂದಿಗೆ ಇವರ ಪ್ರತಿಭೆ ಬೆಳಕಿಗೆ ಬರಲಿ. ಇವರ ಶಿಕ್ಷಣ ಉನ್ನತಮಟ್ಟದಲ್ಲಿ ಮುನ್ನಡೆದು ಇವರು ಇತರರಿಗೆ ಮಾದರಿಯಾಗಲಿ. ಜನಪದ ಕಾರ್ಯದಲ್ಲಿ ಈ ಸಾಧಕರು ತೊಡಗಿ ತಾವು ಅಂಕವಿಕಲರೆಂಬ ಭೀತಿ ಮಾಯವಾಗಿ ಇತರರ ಮನದಲ್ಲಿ ಗೌರವಾಭಿಮಾನವನ್ನು ಮೂಡಿಸುವ ಕಲೆಯು ಹೊರಹೊಮ್ಮಿ ಈ ಮೂವರು ತಮ್ಮತಮ್ಮ ಕ್ಷೇತ್ರಗಳಲ್ಲಿ ಸಾಧನೆ ಮಾಡಲಿ. ■

ಕರ್ನಾಟಕದ ಹೊಸ ಜಿಲ್ಲೆಗಳು ಮತ್ತು ಸಾಕ್ಷರತೆ

ಕರ್ನಾಟಕ ರಾಜ್ಯದ ಜಿಲ್ಲೆಗಳನ್ನು ಪುನರ್ ಸಂಘಟಿಸಿ 1997ರಲ್ಲಿ ಏಳು ಹೊಸ ಜಿಲ್ಲೆಗಳನ್ನು ರಚಿಸಲಾಗಿದೆ. ಜಿಲ್ಲೆಗಳ ಗಾತ್ರ ಚಿಕ್ಕದಾದಷ್ಟು ಆಡಳಿತವು ಜನರ ಸನಿಹಕ್ಕೆ ಬರುತ್ತದೆ ಮತ್ತು ಅಭಿವೃದ್ಧಿಯ ಕಾರ್ಯ ಕ್ಷಮತೆ ಉತ್ತಮ ಗೊಳ್ಳುತ್ತದೆ ಎಂದು ಭಾವಿಸಲಾಗಿದೆ. ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು ಪರಿಮಿತವಾಗಿದ್ದರೆ ಅದರ ಯಾವುದೇ ಮೂಲೆ ಕಟ್ಟಿನ ಹಳ್ಳಿಯಿಂದಲಾದರು ಜನರು ಜಿಲ್ಲಾ ಕೇಂದ್ರಕ್ಕೆ ಬೆಳಿಗ್ಗೆ ಬಂದು, ಕೆಲಸ ಮುಗಿಸಿಕೊಂಡು ಸಂಜೆಯ ವೇಳೆಗೆ ತಮ್ಮ ಊರು ಸೇರಿಕೊಳ್ಳಬಹುದು. ಇದರಿಂದಾಗಿ ಜಿಲ್ಲಾಕೇಂದ್ರಕ್ಕೆ ಎಡತಾಕಲು ತಗುಲುವ ವೆಚ್ಚವು ಕಡಿಮೆಯಾಗುತ್ತದೆ ಎಂದು ಹೇಳಲಾಗಿದೆ. ಹೊಸ ಜಿಲ್ಲೆಗಳ ರಚನೆಯಿಂದಾಗಿ ಆಡಳಿತವು ಜನರ ಸನಿಹಕ್ಕೆ ಬರುತ್ತದೆ ಮತ್ತು ಅಭಿವೃದ್ಧಿಯು ಜನಸ್ಪಂದಿಯಾಗುತ್ತದೆ ಎಂದು ತಿಳಿಯಲಾಗಿದೆ.

ಹೊಸ ಜಿಲ್ಲೆಗಳು

ದಕ್ಷಿಣ ಕನ್ನಡ, ಬಿಜಾಪುರ, ಮೈಸೂರು ಮತ್ತು ರಾಯಚೂರು ಜಿಲ್ಲೆಗಳನ್ನು ವಿಭಜಿಸಿ ಕ್ರಮವಾಗಿ ಉಡುಪಿ, ಬಾಗಲಕೋಟೆ, ಚಾಮರಾಜನಗರ ಮತ್ತು ಕೊಪ್ಪಳ ಜಿಲ್ಲೆಗಳನ್ನು ರಚಿಸಲಾಗಿದೆ. ಧಾರವಾಡ ಜಿಲ್ಲೆಯನ್ನು ವಿಭಜಿಸಿ ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು ಹೊಸದಾಗಿ ರಚಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯ ಮೂರು ತಾಲ್ಲೂಕುಗಳು (ಜಗಳೂರು, ದಾವಣಗೆರೆ ಮತ್ತು ಹರಿಹರ), ಶಿವಮೊಗ್ಗ ಜಿಲ್ಲೆಯ ಎರಡು ತಾಲ್ಲೂಕುಗಳು (ಚನ್ನಗಿರಿ ಮತ್ತು ಹೊನ್ನಾಳಿ) ಮತ್ತು ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು (ಹರಪನಹಳ್ಳಿ) ಸೇರಿಸಿ ದಾವಣಗೆರೆ ಜಿಲ್ಲೆಯನ್ನು ರೂಪಿಸಲಾಗಿದೆ. ಇದರಿಂದಾಗಿ ರಾಜ್ಯದಲ್ಲಿ 7 ಹೊಸ ಜಿಲ್ಲೆಗಳು ನಿರ್ಮಾಣವಾದುದಲ್ಲದೆ ಹಳೆಯ ಎಂಟು ಜಿಲ್ಲೆಗಳ ಭೌಗೋಳಿಕ ವಿಸ್ತೀರ್ಣ ಹಾಗೂ ಜನಸಂಖ್ಯೆಗಳ ಪ್ರಮಾಣಗಳು ಬದಲಾದವು.

ಹೊಸ ಜಿಲ್ಲೆಗಳಲ್ಲಿ ಸಾಕ್ಷರತೆ

ಹೊಸದಾಗಿ ರಚಿಸಲಾದ ಏಳು ಜಿಲ್ಲೆಗಳು ಹಾಗೂ ಇದರಿಂದ ಭೌಗೋಳಿಕ ಹಾಗೂ ಜನಸಂಖ್ಯೆ ಪ್ರಮಾಣಗಳಲ್ಲಿ ಬದಲಾವಣೆ ಅನುಭವಿಸಿದ 8 ಜಿಲ್ಲೆಗಳ ಸಾಕ್ಷರತೆ ಪ್ರಮಾಣವನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಅಭಿವೃದ್ಧಿ ಮೀಮಾಂಸೆಯಲ್ಲಿ ಸಾಕ್ಷರತೆಯನ್ನು ಕೇವಲ ಒಂದು ಸಾಧನವೆಂದು, ಅಭಿವೃದ್ಧಿಯ ಉಪಾಧಿಯೆಂದು ಪರಿಭಾವಿಸಿಕೊಂಡು ಬರಲಾಗಿದೆ. ಆದರೆ ಅಮರ್ತ್ಯಸೇನ್ ಅವರು ಸಾಕ್ಷರತೆಯನ್ನು ಅಭಿವೃದ್ಧಿಯ ಅಂತಸ್ಥ ಗುಣವೆಂದು, ಅದಕ್ಕೆ ತನ್ನದೇ ಆದ ಮಹತ್ವವಿದೆಯೆಂದು ತೋರಿಸಿಕೊಟ್ಟಿದ್ದಾರೆ. ಅಭಿವೃದ್ಧಿಯು ಹರಿದು ಬರುವ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವ ಸಾಮರ್ಥ್ಯವನ್ನು ಹಾಗೂ ಹರಿದು ಬರುವ ಅವಕಾಶಗಳಲ್ಲಿ ಜನರು ತಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಸಾಕ್ಷರತೆಯು ಒದಗಿಸುತ್ತದೆ ಎಂದು ಸೇನ್ ವಾದಿಸುತ್ತಾರೆ. ಜನರ ಶ್ರಮ ಶಕ್ತಿಯನ್ನು, ಉತ್ಪಾದನಾ ಸಾಮರ್ಥ್ಯವನ್ನು, ಕಾರ್ಯಕ್ಷಮತೆಯನ್ನು ಉತ್ತಮ ಪಡಿಸುತ್ತದೆ ಎಂಬ ಕಾರಣಕ್ಕೆ ಮಾತ್ರ ಸಾಕ್ಷರತೆ ಮಹತ್ವವಾಗಬೇಕಾಗಿಲ್ಲ, ಅದು ತನ್ನಷ್ಟಕ್ಕೆ ತಾನು ಮಹತ್ವವಾದುದು. ಸೇನ್ ಪರಿಭಾಷೆಯಲ್ಲಿ ಹೇಳುವುದಾದರೆ ಸಾಕ್ಷರತೆಯು ಅಭಿವೃದ್ಧಿಯ ಸಾಧನವು (means) ಹೌದು

ಕೋಷ್ಟಕ – 1

ಹೊಸ ಜಿಲ್ಲೆಗಳ ಹಾಗೂ ವಿಭಜಿತ ಜಿಲ್ಲೆಗಳ ಸಾಕ್ಷರತೆ ಪ್ರಮಾಣ

	ಒಟ್ಟು ಸಾಕ್ಷರತೆ ಪ್ರಮಾಣ : 1991ರಂತೆ ಶೇಕಡಾವಾರು			
ಜಿಲ್ಲೆಗಳು	ಅವಿಭಜಿತ	ರಾಜ್ಯದಲ್ಲಿ ಸ್ಥಾನ	ವಿಭಜಿತ	ರಾಜ್ಯದಲ್ಲಿ ಸ್ಥಾನ
ಚಿತ್ರದುರ್ಗ	55.48	9	50.17	17
ಬಳ್ಳಾರಿ	45.57	17	45.89	22
ಶಿವಮೊಗ್ಗ	61.53	5	63.90	6
ದಾವಣಗೆರೆ	-	-	55.97	12
ದಕ್ಷಿಣಕನ್ನಡ	75.86	2	76.73	1
ಉಡುಪಿ	-	-	74.47	3
ಧಾರವಾಡ	58.68	7	62.72	7
ಗದಗ	-	-	55.88	13
ಹಾವೇರಿ	-	-	56.09	11
ಬಿಜಾಪುರ	55.13	10	56.11	10
ಬಾಗಲಕೋಟೆ	-	-	53.34	15
ಮೈಸೂರು	47.32	16	50.88	18
ಚಾಮರಾಜನಗರ	-	-	38.18	26
ರಾಯಚೂರು	35.96	20	34.34	27
ಕೊಪ್ಪಳ	-	-	38.23	25
ರಾಜ್ಯ	56.04	20 ಜಿಲ್ಲೆಗಳು	56.04	27 ಜಿಲ್ಲೆಗಳು

ಮತ್ತು ಸಾಧ್ಯವೂ (end) ಹೌದು.

ಕೋಷ್ಟಕ - 1ರಲ್ಲಿ ಕರ್ನಾಟಕದ ಹೊಸ ಜಿಲ್ಲೆಗಳು ಹಾಗೂ ಹಳೆಯ ಅವಿಭಜಿತ ಜಿಲ್ಲೆಗಳು ಸಾಕ್ಷರತೆಗೆ ಸಂಬಂಧಿಸಿದಂತೆ ಸಾಧಿಸಿಕೊಂಡಿರುವ ಸ್ಥಾನಮಾನಗಳನ್ನು ತೋರಿಸಿದೆ. ಹೊಸದಾಗಿ ಜಿಲ್ಲೆಗಳನ್ನು ರಚಿಸಿದ್ದರಿಂದಾಗಿ ಕರ್ನಾಟಕದ ಹಳೆಯ 8 ಜಿಲ್ಲೆಗಳ ಸಾಕ್ಷರತೆ ಪ್ರಮಾಣವು ಬದಲಾವಣೆಯಾಗಿದೆ. ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಗಳನ್ನು ಬಿಟ್ಟು ಉಳಿದ 6 ಜಿಲ್ಲೆಗಳ ಸಾಕ್ಷರತೆ ಪ್ರಮಾಣವು ಅವಿಭಜಿತ ಸಂದರ್ಭದಲ್ಲಿ ಇದ್ದುದಕ್ಕಿಂತ ವಿಭಜನೆ ನಂತರ ಅಧಿಕಗೊಂಡಿದೆ. ಆದರೆ ಅವಿಭಜಿತ ಚಿತ್ರದುರ್ಗ ಜಿಲ್ಲೆಯ ಸಾಕ್ಷರತೆ ಪ್ರಮಾಣ ಶೇ 55.48 ಇದ್ದುದು ವಿಭಜನೆ ನಂತರ ಅದು ಶೇ. 50.17ಕ್ಕೆ ಇಳಿದಿದೆ. ಅವಿಭಜಿತ ರಾಯಚೂರು ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ. 35.96 ಇದ್ದುದು ಈಗ ಶೇ. 34.34 ಕ್ಕೆ ಇಳಿದಿದೆ. ಇದರ ತಥ್ಯವೆಂದರೆ ಇವೆರಡು ಜಿಲ್ಲೆಗಳಲ್ಲಿ ಸಾಕ್ಷರತೆ ದೃಷ್ಟಿಯಿಂದ ಮುಂದುವರಿದಿದ್ದ ತಾಲ್ಲೂಕುಗಳು ಹೊಸ ಜಿಲ್ಲೆಗಳಿಗೆ ಸೇರಿಕೊಂಡಿವೆ. ಬಳ್ಳಾರಿ, ಶಿವಮೊಗ್ಗ, ದಕ್ಷಿಣ ಕನ್ನಡ, ಧಾರವಾಡ, ಬಿಜಾಪುರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಾತ್ರ ಅವಿಭಜಿತ ಸಂದರ್ಭದಲ್ಲಿ ಇದ್ದ ಸಾಕ್ಷರತೆ ಪ್ರಮಾಣವು ವಿಭಜನೆ ನಂತರ ಉತ್ತಮಗೊಂಡಿದೆ. ಇದರ ಅರ್ಥವೇನೆಂದರೆ ಈ ಜಿಲ್ಲೆಗಳಲ್ಲಿ ಸಾಕ್ಷರತೆ ದೃಷ್ಟಿಯಿಂದ ಹಿಂದುಳಿದ ತಾಲ್ಲೂಕುಗಳು ಹೊಸ ಜಿಲ್ಲೆಗಳಿಗೆ ಸೇರಿ ಹೋಗಿವೆ.

ಸಾಕ್ಷರತೆಗೆ ಹೆಚ್ಚಿನ ಆದ್ಯತೆ

ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಿ ಉಡುಪಿಯನ್ನು, ಧಾರವಾಡವನ್ನು ವಿಭಜಿಸಿ ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು, ಬಿಜಾಪುರವನ್ನು ವಿಭಜಿಸಿ ಬಾಗಲಕೋಟೆಯನ್ನು ಮತ್ತು ಮೈಸೂರು ಜಿಲ್ಲೆಯನ್ನು ವಿಭಜಿಸಿ ಚಾಮರಾಜನಗರ ಜಿಲ್ಲೆಯನ್ನು ಹೊಸದಾಗಿ ರೂಪಿಸಿದಾಗ, ಅವುಗಳ ಸಾಕ್ಷರತೆ ಪ್ರಮಾಣವು ತಮ್ಮ ತಾಯಿ ಜಿಲ್ಲೆಗಳ ಸಾಕ್ಷರತೆ ಪ್ರಮಾಣಕ್ಕಿಂತ ಕಡಿಮೆ ಇರುವುದು ಕೋಷ್ಟಕದಿಂದ ತಿಳಿಯುತ್ತದೆ. ರಾಯಚೂರು ಜಿಲ್ಲೆಯು ಜಿಲ್ಲೆಗಳ ಪುನರ್ ಸಂಘಟನೆ ಪೂರ್ವದಲ್ಲಿ ಸಾಕ್ಷರತೆ ಪ್ರಮಾಣದಲ್ಲಿ ರಾಜ್ಯದಲ್ಲಿ ಕಟ್ಟಕಡೆಯ ಸ್ಥಾನದಲ್ಲಿತ್ತು (20) ಮತ್ತು ಈಗಲೂ ಅದು ಕಟ್ಟಕಡೆಯ ಸ್ಥಾನದಲ್ಲಿದೆ (27). ಹೊಸ ಜಿಲ್ಲೆಯಾದ ಕೊಪ್ಪಳದ ಇಂದಿನ ಸ್ಥಾನ 25. ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಜಿಲ್ಲೆಗಳೆಲ್ಲವೂ ತಮ್ಮ ತಾಯಿ ಜಿಲ್ಲೆಗಳ (ಕೊಪ್ಪಳವನ್ನು ಬಿಟ್ಟು) ಸಾಕ್ಷರತೆ ಪ್ರಮಾಣವನ್ನು ಸಾಧಿಸಿಕೊಳ್ಳಲು ವಿಶೇಷವಾಗಿ ಶ್ರಮಿಸಬೇಕಾಗಿದೆ. ಈ ಜಿಲ್ಲೆಗಳೆಲ್ಲವೂ (ಕೊಪ್ಪಳವನ್ನು ಸೇರಿಸಿಕೊಂಡು) ಸಾಕ್ಷರತೆಯನ್ನು ಉತ್ತಮ ಪಡಿಸುವ ಕಡೆಗೆ ಹೆಚ್ಚಿನ ಗಮನ ನೀಡಬೇಕಾಗಿದೆ. 'ಸಾಕ್ಷರತೆಯೇ ಅಭಿವೃದ್ಧಿ' ಎಂದಾದರೆ ಈ ಹೊಸ ಜಿಲ್ಲೆಗಳು ತಮ್ಮ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಾಕ್ಷರತೆಗೆ ಆದ್ಯತೆ ನೀಡಬೇಕಾಗುತ್ತದೆ.

ಉಡುಪಿ, ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳನ್ನು ಬಿಟ್ಟರೆ ಉಳಿದ ನಾಲ್ಕು ಹೊಸ ಜಿಲ್ಲೆಗಳು ತಾವು ರಾಜ್ಯದ 7 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟು ವಯೋಮಾನದ ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದ್ದಾವೋ ಅದಕ್ಕಿಂತಲು ಕಡಿಮೆ ಪಾಲನ್ನು ರಾಜ್ಯದ ಅಕ್ಷರಸ್ಥರ ಸಂಖ್ಯೆಯಲ್ಲಿ ಪಡೆದಿವೆ. ಈ ದೃಷ್ಟಿಯಿಂದಲೂ ಹೊಸ ಜಿಲ್ಲೆಗಳು ಸಾಕ್ಷರತೆಯನ್ನು ಉತ್ತಮ ಪಡಿಸುವ ದಿಶೆಯಲ್ಲಿ ದಿಟ್ಟ ಹೆಜ್ಜೆಗಳನ್ನು ಇಡಬೇಕಾಗಿದೆ. ಸಾಕ್ಷರತೆ ದೃಷ್ಟಿಯಿಂದ ದಕ್ಷಿಣ ಕರ್ನಾಟಕದ ಜಿಲ್ಲೆಗಳೆಲ್ಲವು ಉತ್ತರ ಕರ್ನಾಟಕ ಜಿಲ್ಲೆಗಳಿಗಿಂತ ಉತ್ತಮವಾಗಿದ್ದವು. ಆದರೆ ಈಗ ಚಾಮರಾಜನಗರ ಜಿಲ್ಲೆಯು ಸಾಕ್ಷರತೆ ದೃಷ್ಟಿಯಿಂದ ರಾಜ್ಯದಲ್ಲಿ 26ನೆಯ ಸ್ಥಾನದಲ್ಲಿದೆ. ಇದರ ಸಾಕ್ಷರತೆ ಪ್ರಮಾಣವು ರಾಯಚೂರು ಜಿಲ್ಲೆಯ ಸಾಕ್ಷರತೆ ಪ್ರಮಾಣದ ಸನಿಹದಲ್ಲಿದೆ. ಈ ಜಿಲ್ಲೆಯು ಸಾಕ್ಷರತೆಯನ್ನು ಉತ್ತಮ ಪಡಿಸಿಕೊಳ್ಳಲು ವಿಶೇಷ ಹಾಗೂ ಗಂಭೀರ ಪ್ರಯತ್ನ ನಡೆಸಬೇಕಾಗಿದೆ.

■ ಟಿ. ಆರ್. ಚಂದ್ರಶೇಖರ್

ಕಿವಿ ಮಾತು

ತರಕಾರಿ ಆಯ್ಕೆ, ಬಳಕೆ ಹಾಗೂ ರಕ್ಷಣೆ

■ ಕ್ಯಾರೆಟ್, ಮೂಲಂಗಿ, ಬೀಟ್‌ರೂಟ್ ಮತ್ತು ಆಲೂಗೆಡ್ಡೆಗಳನ್ನು ನೀರಿನಲ್ಲಿ ತೊಳೆದಿಟ್ಟು ಮಾರುತ್ತಾರೆ. ಅಂಥ ತರಕಾರಿಗಳನ್ನು ಕೊಳ್ಳದೆ, ಮಣ್ಣು ಬೆರೆತಂತಿರುವ ತರಕಾರಿ ಕೊಂಡು ಕೊಳ್ಳಬೇಕು. ಅಂಥವನ್ನು ಮೂರು ದಿನಗಳವರೆಗೆ ಇಟ್ಟು ಬಳಸಬಹುದು. ಮನೆಗೆ ತಂದ ತಕ್ಷಣ ನೀರಿನಲ್ಲಿ ತೊಳೆಯದೆ ಹಾಗೇ ಇಟ್ಟಿರಬೇಕು. ಬೇಕಾದಾಗ ತೊಳೆದು ಬಳಸಿಕೊಳ್ಳಬಹುದು.

■ ಹೂ ಬಿಟ್ಟ ಸೊಪ್ಪುಗಳನ್ನು ಕೊಳ್ಳಬಾರದು.

■ ಕೋಸುಗಡ್ಡೆಯ ಬಣ್ಣ ಹಳದಿಯಾಗಿದ್ದರೆ ಕೊಳ್ಳಬಾರದು. ಹಸಿರು ಸಿಪ್ಪೆ ಇದ್ದರೆ ಮಾತ್ರ ಕೊಳ್ಳಬೇಕು.

■ ಈರುಳ್ಳಿ, ಬಾಳೆಕಾಯಿ ಕೊಳ್ಳುವಾಗ ಅಮುಕಿ ನೋಡಬೇಕು. ಟೊಳ್ಳಾಗಿದ್ದರೆ ಕೊಳ್ಳಬಾರದು.

■ ಮೂಲಂಗಿ, ಸೋರೆಕಾಯಿ, ಗೋರಿ ಕಾಯಿ ಮೊದಲಾದವನ್ನು ಕೊಳ್ಳುವ ಮೊದಲು ಉಗುರಿನಿಂದ ಚಿಗುಟಿ ನೋಡಬೇಕು. ಉಗುರುಕಾಯಿಯಲ್ಲಿ ಇಳಿದರೆ ಎಳಸು, ಇಲ್ಲದಿದ್ದರೆ ಬಲಿತಿದೆ ಎಂದರ್ಥ.

■ ಬಾಳೆ ದಿಂಡನ್ನು ಕೊಳ್ಳುವುದಕ್ಕೆ ಮುಂಚೆ ಒಂದು ಚೂರನ್ನು ಚಿಗುಟಿ ನೋಡಬೇಕು. ನಾರು ಕಂಡರೆ ಬಲಿತಿದೆ ಎಂದರ್ಥ. ನೂಲಿನಂತೆ ಕಂಡರೆ ಕೊಳ್ಳಬಹುದು.

■ ಅವರೆಕಾಯಿಯ ಕಾಳು ಉಬ್ಬಿದಂತಿದ್ದರೆ ಅದು ಬಲಿತಕಾಯಿ ಎಂದರ್ಥ.

■ ಬೂದುಗುಂಬಳ ಕಾಯಿ ಕೊಳ್ಳುವಾಗ ಕಾಯಿಯ ಮೇಲೆ ಬೂದು ಬಣ್ಣವಿರುವುದನ್ನು ಖಚಿತಪಡಿಸಿಕೊಳ್ಳಿ

■ ಸಾಧ್ಯವಾದಷ್ಟು ಮಟ್ಟಿಗೆ ತಾಜಾ ತರಕಾರಿ ಕೊಳ್ಳಬೇಕು.

ಬಳಕೆ

ನಿಂಬೆರಸವನ್ನು ನೀರಿನಲ್ಲಿ ಬೆರೆಸಿ, ಬಾಡಿದ ತರಕಾರಿಯನ್ನು ಹಾಕಿಡಿ. ಸ್ವಲ್ಪ ಸಮಯದ ನಂತರ ತರಕಾರಿ ಹಚ್ಚಿ, ಬಳಸಲು ತೊಂದರೆಯಾಗುವುದಿಲ್ಲ.

■ ಹಾಗಲಕಾಯಿಯನ್ನು ಬಳಸಿ ಅಡಿಗೆ ಮಾಡುವುದಕ್ಕೆ ಮುಂಚೆ ಅದರ ಹೋಳುಗಳನ್ನು ಉಪ್ಪು ಬೆರೆಸಿದ ನೀರಿನಲ್ಲಿ ಹಾಕಿಡಿ. ಹೀಗೆ ಮಾಡುವುದರಿಂದ ಅದರ ಕಹಿ ಉಳಿಯುವುದಿಲ್ಲ.

■ ಪುದೀನಾ ಸೊಪ್ಪನ್ನು ತಂದರೆ ಆದಷ್ಟು ಬೇಗ ಉಪಯೋಗಿಸಿ ಬಿಡಬೇಕು.

■ ಕರಿಬೇವಿನ ಸೊಪ್ಪನ್ನು ಅದರ ಬೇರಿನ ಭಾಗವನ್ನು ನೀರಿನಲ್ಲಿ ಅದ್ದಿಟ್ಟರೆ ಅದು ಬಾಡುವುದಿಲ್ಲ.

■ ಕ್ಯಾರೆಟ್, ಬೀಟ್‌ರೂಟ್ ಬಾಡಿದರೆ ತುಂಡು ಮಾಡಲು ಶ್ರಮವಾಗುವುದು, ಎಂತಲೇ ಅವನ್ನು ಉಪ್ಪು ನೀರಿನಲ್ಲಿ ಅರ್ಧ ಗಂಟೆ ನೆನೆಸಿಟ್ಟರೆ ಅದು ಗಟ್ಟಿಗೊಳ್ಳುತ್ತದೆ, ಹೆಚ್ಚಲೂ ಸುಲಭ.

■ ಯಾವುದೇ ತರಕಾರಿಯಾಗಿರಲಿ, ಅಡಿಗೆಗೆ ಬಳಸುವುದಕ್ಕೆ ಮುಂಚೆ ಸ್ವಲ್ಪ ಹೊತ್ತು ಉಪ್ಪು ಬೆರೆಸಿದ ನೀರಿನಲ್ಲಿ ನೆನೆಸಿ, ಬಳಿಕ ಚೆನ್ನಾಗಿ ತೊಳೆದು ಬಳಸಿದರೆ, ತರಕಾರಿಗಳ ಮೇಲೆ ಹತ್ತಿರುವ ಕೀಟನಾಶಕ ಔಷಧಗಳ ಬಾಧೆ ಇರದು.

■ ತರಕಾರಿಗಳನ್ನು ಒದ್ದೆ ಬಟ್ಟೆಯಿಂದ ಮುಚ್ಚಿಟ್ಟರೆ ಅವು ಬಾಡುವುದಿಲ್ಲ. ಫ್ರಿಡ್ಜ್‌ನಲ್ಲೂ ಇಡಬಾರದು.

■ ತರಕಾರಿಯನ್ನು ಹೆಚ್ಚುವುದಕ್ಕೆ ಮುಂಚೆಯೇ ಅದನ್ನು ತೊಳೆಯಿರಿ. ಹೆಚ್ಚಿದ ನಂತರ ತೊಳೆದರೆ ಅದರ ಸಾರ ಹೋಗಿ ಬಿಡುತ್ತದೆ.

■ ತರಕಾರಿಯನ್ನು ಹೆಚ್ಚುವಾಗ ಹೋಳು ದಪ್ಪವಾಗಿರಲಿ, ಹೀಗೆ ಮಾಡುವುದರಿಂದ ಜೀವಸತ್ವ ಉಳಿಯುತ್ತದೆ.

■ ಭೂಮಿಯ ಒಳಗೆ ಬೆಳೆಯುವ ಕ್ಯಾರೆಟ್ ಮತ್ತು ಗೆಡ್ಡೆಗಳ ಸಿಪ್ಪೆ ತೆಗೆದು, ಅಡಿಗೆ ಮಾಡುವುದು ಉತ್ತಮ, ಸಿಪ್ಪೆ ಸಹಿತ ಬೇಯಿಸಿದರೆ ಅದರಲ್ಲಿ ರೋಗದ ಕ್ರಿಮಿಗಳು ಇರುವ ಸಾಧ್ಯತೆ ಇರುತ್ತದೆ.

■ ಕೆಲವು ಹಸಿ ತರಕಾರಿಗಳನ್ನು ಚೆನ್ನಾಗಿ ತೊಳೆದು, ಹಾಗೆಯೇ (ಬೇಯಿಸದೆ) ಸೇವಿಸುವುದು ಒಳ್ಳೆಯದು.

■ ಈರುಳ್ಳಿಯನ್ನು ಸ್ವಲ್ಪ ಹೊತ್ತು ನೀರಿನಲ್ಲಿ ನೆನೆ ಹಾಕಿ ನಂತರ ಹೆಚ್ಚಿದರೆ, ಕಣ್ಣೀರು ಕಡಿಮೆ. ಕಣ್ಣುರಿಯೂ ಕಡಿಮೆ.

■ ನಿಂಬೆ ಹಣ್ಣನ್ನು ಮರಳಿನಲ್ಲಿ ಹುದುಗಿ ಸಿಟ್ಟರೆ ಹಣ್ಣು ಒಣಗುವುದಿಲ್ಲ.

■ ಬಾಳೆಕಾಯಿ ದಿಂಡು ಹಚ್ಚುವುದಕ್ಕೆ ಮೊದಲು ಹುಳಿಯಾದ ಮಜ್ಜಿಗೆಯನ್ನು ಪಾತ್ರೆಯಲ್ಲಿ ಹಾಕಿ ಅದರಲ್ಲಿ ಹೆಚ್ಚಿದ ಬಾಳೆಕಾಯಿ, ಹೂ, ದಿಂಡಿನ ಹೋಳು ಹಾಕಿದರೆ, ಹೆಚ್ಚುವಾಗ ಆಗುವ ಕಪ್ಪು ಹೋಗುತ್ತದೆ.

■ ಟೊಮೆಟೊ ಹಣ್ಣು ಕೆಡದಿರಲು ಅದನ್ನು ಉಪ್ಪಿನ ನೀರಿನಲ್ಲಿ ಮುಳುಗಿಸಿಡಿ.

■ ಬಾಳೆಕಾಯಿಯನ್ನು ನೀರಿನಲ್ಲಿ ನೆನಸಿಟ್ಟರೆ, ಮೂರು ನಾಲ್ಕು ದಿನಗಳವರೆಗೆ ಅದು ಹಣ್ಣಾಗದೆ, ಬಾಡದೆ ಇರುತ್ತದೆ.

■ ಈರುಳ್ಳಿಯನ್ನು ಮುಚ್ಚಿಡಬೇಕು. ಗಾಳಿಗಿಟ್ಟರೆ ವಾತಾವರಣದಲ್ಲಿರುವ ಕ್ರಿಮಿಗಳು ಈರುಳ್ಳಿಯನ್ನು ಹಸಿರು ಬಣ್ಣಕ್ಕೆ ತಿರುಗಿಸಿಬಿಡುತ್ತದೆ. ಈ ಹಸಿರುಗೊಂಡ ಈರುಳ್ಳಿ ವಿಷಪೂರಿತವಾದದು.

■ ನಿಂಬೆಹಣ್ಣನ್ನು ಸ್ವಲ್ಪ ಹೊತ್ತು ಕುದಿಯುವ ನೀರಿನಲ್ಲಿ ಹಾಕಿಟ್ಟು ನಂತರ ಹಿಂಡಿದರೆ ಅಪ್ಪು ರಸ ಹೊರಬರುತ್ತದೆ.

■ ಟಿ.ವಿ.ವಿ.




ಸರ್... ಆ ಬೋರ್ಡ್ ನೋಡಿ ಯಾಕೆ ಹೆದರುತ್ತೀರಾ... ಅದು ನಿಮ್ಮಂಥ ವರನ್ನುದ್ದೇಶಿಸಿ ಬರೆದದ್ದಲ್ಲ. ಅದು ಸಣ್ಣ ಪುಟ್ಟ ಕಳ್ಳರಿಗಾಗಿ ಬರೆಸಿದ್ದು......

ಸಂವೇದನೆ

■ ಎಂ. ಎಸ್. ಮೂರ್ತಿ

'ವಿನ್ಯಾಸ', ನಂ. 132, 1ನೇ ಮಹಡಿ, ಗಾಂಧಿ ಬಜಾರ್ ಸರ್ಕಲ್, ಬಸವನಗುಡಿ, ಬೆಂಗಳೂರು-4.

ಬದುಕಿಲ್ಲದ 'ಚಿತ್ರ'



ಇತ್ತೀಚೆಗೆ ನನ್ನ ಆತ್ಮೀಯರೊಬ್ಬರು ಫೋನ್ ಮಾಡಿ ತಮ್ಮ ಗೆಳೆಯರೊಬ್ಬರ ತಂಗಿ ಕಲಾ ವ್ಯಾಸಂಗ ಮುಗಿಸಿ ಸೂಕ್ತ ಉದ್ಯೋಗದ ನಿರೀಕ್ಷೆಯಲ್ಲಿದ್ದಾರೆಂದು ಅದಕ್ಕಾಗಿ, ತಮ್ಮ ಸಲಹೆ ನೀಡಬೇಕೆಂದು ನನ್ನಲ್ಲಿ ವಿನಂತಿಸಿಕೊಂಡರು. ಈ ವಿಷಯದಲ್ಲಿ ನನ್ನ ಸಲಹೆ ಉಪಯೋಗವಾಗುತ್ತದೆ ಎಂಬ ಭರವಸೆ ನನಗಿಲ್ಲದಿದ್ದರೂ ಆ ಹುಡುಗಿಯ ಭೇಟಿಗಾಗಿ ಒಪ್ಪಿದೆ.

ಒಂದು ದಿನ ಸಂಜೆ ನಾನು ಹೇಳಿದ್ದ ಸ್ಥಳದಲ್ಲಿ ಆ ಹುಡುಗಿ ಮತ್ತು ಆಕೆಯ ಅಣ್ಣ ನನಗಾಗಿ ಕಾಯುತ್ತಿದ್ದರು. ತೆಳ್ಳಗಿನ ಸುಮಾರು 30 ವರ್ಷದ ಆ ಹುಡುಗಿ ಗ್ರಾಮೀಣ ಪರಿಸರದಿಂದ ಬಂದವಳು; ಸಾಹಿತ್ಯದಲ್ಲಿ ಪದವಿ ಪಡೆದು ಕಲೆಯಲ್ಲಿ ಐದು ವರ್ಷದ ಡಿಪ್ಲೋಮಾ ಪಡೆದವಳು. ನಾನೂ ಮೊದಲೇ ಸೂಚಿಸಿದಂತೆ ಇದುವರೆಗೂ ತಾನು ರಚಿಸಿದ ಕೃತಿಗಳ ಫೋಟೊಗಳನ್ನು ನನಗೆ ತೋರಿಸಲು ತಂದಿದ್ದಳು. ತುಂಬಾ ಬಾಲಿಶವಾಗಿದ್ದ ಕೃತಿಗಳ ಫೋಟೋಗಳನ್ನು ಕೆಲವೇ ನಿಮಿಷಗಳಲ್ಲಿ ನೋಡಿ ಮುಗಿಸಿ ಕೆಲವು ಪ್ರಶ್ನೆಗಳ ಮುಖಾಂತರ ಆಕೆಯ ಬಗ್ಗೆ ಮತ್ತು ಆಕೆಯ ಆಸಕ್ತಿ, ಅರಿವುಗಳ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದೆ.

''ನಿಮ್ಮ ಕಲಾಭ್ಯಾಸದ ನಂತರ ಏನು ಮಾಡಿದಿರಿ?''

''ಒಂದು ಶಾಲೆಯಲ್ಲಿ ಆರ್ಟ್ ಟೀಚರ್ ಆಗಿದ್ದೆ, ಈಗ ಬಿಟ್ಟಿದ್ದೇನೆ.''

''ಯಾಕೆ?''

''ಇಷ್ಟವಾಗಲಿಲ್ಲ!''

''ಯಾಕಿಷ್ಟವಾಗಲಿಲ್ಲ?''

''ಸುಮ್ಮನೆ''

''ಈಗ ಏನು ಮಾಡಬೇಕೆಂದಿದ್ದೀರಿ?''

''ಪೇಂಟಿಂಗ್''

''ಓದುವ ಅಭ್ಯಾಸ....?''

''ಇಲ್ಲ''

''ಯಾಕೆ?''

''ಸಾಹಿತ್ಯ ಇಷ್ಟವಿಲ್ಲ''

''ಸಂಗೀತ ಕೇಳುತ್ತೀರಾ?''

''ಇಲ್ಲ''

ಹೀಗೆ ನೆಗೆಟಿವ್ ಉತ್ತರಗಳನ್ನೇ ನೀಡುತ್ತಿದ್ದ ಆ ಹುಡುಗಿಗೆ ಹಾಗಾದರೆ ನಿಮ್ಮ ಬೌದ್ಧಿಕ ಬೆಳವಣಿಗೆಯ ಪ್ರೇರಣೆ ಯಾವ ಮೂಲದಿಂದ ಪಡೆಯುತ್ತೀರಿ ಎಂದದ್ದಕ್ಕೆ ಆ ಹುಡುಗಿ ಸುಮ್ಮನೆ ನಕ್ಕಳು. ಆಕೆಯ ಬಗ್ಗೆ ನನ್ನ ಮನಸ್ಸಿನಲ್ಲೇ ಬೇಸರ ಮತ್ತು ಅನುಕಂಪ ಉಂಟಾಯಿತು.

ಸ್ವಲ್ಪ ಹೊತ್ತಿನ ನಂತರ ಆಕೆಯೇ ಮುಂದುವರೆದು ಹೇಳಿದಳು. ''ಸಂಜೆ ಐದರವರೆಗೆ ನಾನು ಕೆಲಸ ಮಾಡಬಹುದು. ಆದರೆ ಜರ್ನಲಿಸಂ ಫೀಲ್ಡ್, ಜಾಹೀರಾತು ಸಂಸ್ಥೆಯ ಕೆಲಸ ಇಷ್ಟವಿಲ್ಲ.'' ಎಂದೂ ಸೇರಿಸಿದಳು. ಯಾವುದಾದರೂ ಪತ್ರಿಕೆಯಲ್ಲೋ, ಜಾಹೀರಾತು ಸಂಸ್ಥೆಯಲ್ಲೋ ಸಹಕಲಾವಿದೆ ಕೆಲಸಕ್ಕೆ ಸೂಚಿಸೋಣವೆಂದರೆ ಈಕೆಗೆ ರೇಖೆಗಳ ಬಗ್ಗೆ ಅರಿವು, ಅನುಭವ ಎರಡೂ ಇಲ್ಲವಲ್ಲ ಎಂದು ನಾನು ಯೋಚಿಸುತ್ತಿರುವಾಗಲೇ ಆಕೆ ನೀಡಿದ ಈ ಉತ್ತರದಿಂದ ಆಶ್ಚರ್ಯವಾಗಿತ್ತು. ನನಗೆ ಸಿಟ್ಟು ಬಂದರೂ ತೋರಗೊಳ್ಳದೆ ಹೇಳಿದೆ, ''ಮತ್ತೆಲ್ಲಿ ಕೆಲಸ ಮಾಡಬಲ್ಲಿರಿ?''

''ಎಲ್ಲಾದರೂ ಸರಿ, ಆದರೆ ನನಗೆ ಪೇಂಟಿಂಗ್ ಮಾಡಲು ತೊಂದರೆಯಾಗಬಾರದು!'' ನನಗೆ ಒಂದು ನಿಮಿಷ ಏನೂ ಉತ್ತರಿಸಲಾಗಲಿಲ್ಲ.

ಕಲಾಕೃತಿ ರಚಿಸಿ ಕಲಾವಿದರಾಗಲು ಡಿಪ್ಲೋಮಾ, ಡಿಗ್ರಿಗಳ ಅರ್ಹತೆಗಳಿದ್ದರೆ ಸಾಲದು; ಈ ಪದವಿಗಳು ಕೂಡ ಇತರ ವಿಷಯಗಳ ಪದವಿಗಳಂತೆ; ಯಾರೂ ಪಡೆದುಕೊಂಡು

ಬಿಡಬಹುದಾದ ಒಂದು ಸರ್ಕಾರಿ ಕಾಗದ. ಕಲಾಕ್ಷೇತ್ರದಂತೆ ವಿಶಿಷ್ಟ ಮಾಧ್ಯಮದಲ್ಲಿ ಬದುಕುಳಿಯಬೇಕಾದರೆ ಕಲಾಭ್ಯಾಸದ ತಾಲೀಮಿನ ನಂತರ ವಸ್ತು, ವಿಷಯಗಳ ಪರಿಜ್ಞಾನ, ಇತರ ಸೃಜನಶೀಲ ಮಾಧ್ಯಮಗಳ ಬಗ್ಗೆ ಆಸಕ್ತಿ, ಬದುಕಿನ ಸಂಕೀರ್ಣ ಅನುಭವಗಳನ್ನು ಕೃತಿಯಾಗಿಸುವ ಬೌದ್ಧಿಕ ತಾಕತ್ತು ಬೆಳೆಸಿಕೊಂಡಿರಬೇಕು. ಇಷ್ಟೂ ಹಂತಗಳನ್ನು ಎಲ್ಲಾ ರೀತಿಯಲ್ಲೂ ಸ್ವಾವಲಂಬಿಯಾಗಿ ದಾಟಿದ್ದರೆ ಮಾತ್ರ ಕಲಾವಿದ ಹಣ್ಣಿನಂತೆ ಮಾಗುತ್ತಾನೆ. ಒಂದು ಕಲಾಕೃತಿ ಸೃಷ್ಟಿಯಾಗಬೇಕಾದರೆ ಇಷ್ಟೆಲ್ಲಾ ಸಾಮಗ್ರಿ ಹೊಂದಿಸಿಕೊಳ್ಳಬೇಕೆಂದು ಈ ಹುಡುಗಿಗೆ ಹೇಗೆ ಹೇಳಿದರೆ ಮನವರಿಕೆಯಾಗಬಹುದೆಂದು ಯೋಚಿಸಿ ಕೊನೆಗೆ ಹೇಳಿದೆ;

''ನೋಡಿ, ಮನುಷ್ಯ ದೈಹಿಕವಾಗಿ ಸ್ವಾವಲಂಬಿಯಾದ ನಂತರ; ಬೌದ್ಧಿಕವಾಗಿ, ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು. ಅದಕ್ಕಾಗಿ ನಾವು ಶ್ರಮ ಪಡುವುದನ್ನು ಕಲಿಯಬೇಕು. ಯಾವುದೇ ಜ್ಞಾನವಾಗಲಿ ಬದುಕಿನ ಮೂಲಭೂತ ಸಮಸ್ಯೆಗಳನ್ನು ಮೊದಲು ಪರಿಹರಿಸುವಲ್ಲಿ ಉಪಯೋಗವಾಗಬೇಕು ನಂತರ ಸಾಧನೆಯ ಗುರಿಯತ್ತ ಸಾಗಬೇಕು. ಒಂದು ಹೊತ್ತಿನ ಊಟ ನೀಡದ ಜ್ಞಾನ, ಜ್ಞಾನವೇ ಅಲ್ಲ. ನನ್ನ ದೃಷ್ಟಿಯಲ್ಲಿ ನಮ್ಮಲ್ಲಿರುವ ಅರ್ಹತೆಗಿಂತ ನಮ್ಮ ಬದುಕಿನ ನಿರೀಕ್ಷೆಗಳು ದೊಡ್ಡದಾದಾಗ ಸಮಸ್ಯೆಗಳು ಉದ್ಭವಿಸುತ್ತವೆ.'' ಎಂದು ಒಂದೇ ಸಮನೆ ನಾನು ಆಡಿದ ದೊಡ್ಡ ದೊಡ್ಡ ಮಾತುಗಳಿಂದ ಆಕೆಗೆ ಮಾನಸಿಕವಾಗಿ ದಣಿವಾಯಿತೇನೋ ಎಂದು ನಿಲ್ಲಿಸಿದೆ. ಆಕೆ ಗೊಂದಲಗೊಂಡಂತೆ ಅನಿಸಿದರೂ ಕೇಳುತ್ತಿದ್ದಳು. ಆಕೆಯ ಅಣ್ಣ ಕೂಡ ನನ್ನ ಮಾತನ್ನು ಸಮರ್ಥಿಸುವಂತೆ ಮುಗುಳುನಕ್ಕರು. ನಾನು ಮತ್ತೆ ಮುಂದುವರಿದು '' ನನ್ನ ದೃಷ್ಟಿಯಲ್ಲಿ ನೀವು ಮೊದಲಿನ ಕೆಲಸ ಬಿಡದೆ ಮುಂದುವರಿದು ಅದರಿಂದ ಬಂದ ಗಳಿಕೆಯ ಸಾಮರ್ಥ್ಯದಿಂದ ನಿಮ್ಮ ಪೇಂಟಿಂಗ್ ಮಾಡುವ ಕಲ್ಪನೆಯನ್ನು ವಾಸ್ತವಗೊಳಿಸಬಹುದಿತ್ತು. ಈಗ ನಿಮಗೆ 'ಪೇಂಟಿಂಗ್'ನ್ನೇ ಮಾಡುವ ಭ್ರಮೆ ಇದೆ. ಅದಕ್ಕೆ ಬೇಕಾದ ಬೌದ್ಧಿಕ ಸಾಮರ್ಥ್ಯ ನಿಮಗೆ ಇಲ್ಲ. ಜೊತೆಗೆ ಈಗಿರುವ ನಿಮ್ಮ ಕುಶಲತೆ (ಕ್ರಾಫ್ಟ್) ಯಲ್ಲಿ, ಕಲೆಯ ವ್ಯಾಕರಣವಾದ ರೇಖೆಗಳ ಮೇಲೆ ನೀವು ಹಿಡಿತ ಸಾಧಿಸಿಲ್ಲ, ಇವುಗಳ ಕಟ್ಟುನಿಟ್ಟಾದ ಅಭ್ಯಾಸವಿಲ್ಲದೆ ಯಾವ ಕೃತಿಯನ್ನೂ ರೂಪಿಸಲಾರಿರಿ, ಮೊದಲು ನಿಮ್ಮ ಅಭ್ಯಾಸ ಮುಂದುವರಿಸಿ. ಯಶಸ್ವಿ ಕಲಾವಿದರ ಯಶಸ್ಸಿನ ದಿನಗಳನ್ನು ಮಾತ್ರ ನೀವು ಕಾಣಬಾರದು ಅದರ ಹಿಂದಿನ ದಿನಗಳಲ್ಲಿರುವ ಕಷ್ಟಗಳು, ನಿರೀಕ್ಷೆಗಳು, ಬೌದ್ಧಿಕ ಕಸರತ್ತುಗಳನ್ನು ಒಮ್ಮೆ ನೋಡಿ. ಆಗ ನಿಮಗೆ ನಿಮ್ಮ ದಾರಿ ಕಾಣಬಹುದು. ಓದುವುದು ಆಲಿಸುವುದು, ನೋಡುವುದನ್ನೂ ಹೆಚ್ಚಾಗಿ ನೀವು ಮಾಡಬೇಕು. ಅದಾವುದನ್ನೂ ಮಾಡದೆ ಕೇವಲ ಕಲಾವಿದೆಯಾಗುವ ಕನಸು ಕಾಣಬೇಡಿ. ನಿಮ್ಮ ಬಗ್ಗೆ ನೀವೇ ಯೋಚಿಸಿ, ಆಗ ನಿಮಗೇ ಅರಿವಾಗಬಹುದು ಕಲೆಗಿಂತಲೂ 'ಬದುಕು' ಮುಖ್ಯ ನಂತರ 'ಕಲೆ' ಎಂದು. ಈ ಸ್ಥಿತಿಯಲ್ಲಿ ಯಾವ ಕೆಲಸಕ್ಕೂ ನಾನು ಶಿಫಾರಸ್ಸು ಮಾಡಲಾರೆ ಯಾಕೆಂದರೆ ಕಲಾವಿದರಾದವರಿಗೆ ಯಾವ ಶಿಫಾರಸ್ಸು ಬೇಕಾಗುವುದಿಲ್ಲ ಅವರ ಜೀವಂತ ಕೃತಿಗಳೇ ಅವರ ಶಿಫಾರಸ್ಸು ಪತ್ರಗಳು. ಅವುಗಳ



ಅಗತ್ಯ ಇರುವವರು ನಿರೀಕ್ಷೆಯಲ್ಲಿರುತ್ತಾರೆ.'' ಎನ್ನುತ್ತಾ ''ಇನ್ನೂ ಸಾಕು'' ಎಂದು ನನ್ನ ದೀರ್ಘವಾದ ಮಾತನ್ನು ಮುಗಿಸಿದೆ. ಆಕೆಗೆ ಅಸಮಾಧಾನವಾದಂತೆ ಆಕೆಯ ಅಣ್ಣನಿಗೆ ಸಮಾಧಾನವಾದಂತೆ ತೋರಿತು.

ಈ ಪ್ರಸಂಗವನ್ನು ಇಷ್ಟು ದೀರ್ಘವಾಗಿ ಪ್ರಸ್ತಾಪಿಸಿದ ಉದ್ದೇಶ ಇಷ್ಟೇ: ಇವತ್ತು ಈ ಬೆಂಗಳೂರು ನಗರದಲ್ಲಿ ಇರುವ, ಹೊರಗಿನಿಂದ ಆಸೆ, ಕನಸುಗಳ ಮೂಟೆ ಹೊತ್ತು ಬರುವ ಯುವ ಜನರು ಶ್ರಮವಿಲ್ಲದ ಬದುಕಿನ ನಿರೀಕ್ಷೆಯಲ್ಲಿ ಕಾಲಕಳೆಯುತ್ತಿದ್ದಾರೆ. ತಾವು ಕಲಿತ ವಿದ್ಯೆಯಲ್ಲೂ ಪಕ್ವವಾಗಿರುವುದಿಲ್ಲ. ಇತರ ವಿದ್ಯೆಗಳ ಬಗ್ಗೆ ಯಾವ ಸಾಮಾನ್ಯ ಜ್ಞಾನವೂ ಇರುವುದಿಲ್ಲ. ನಿರೀಕ್ಷೆ ಮಾತ್ರ ಬೆಟ್ಟದಷ್ಟಿರುತ್ತದೆ. ವಾಸ್ತವದಲ್ಲಿ ಸಾಧ್ಯವಾಗುವುದು ಹೇಗೆ? ವೇಗದ ತಂತ್ರಜ್ಞಾನ ಬೆಳೆದಿದೆ ಯಾರಿಗೂ ಸಾವಧಾನವಿಲ್ಲ ಎನ್ನಬಹುದೇ, ಹಿರಿಯರು ಹೇಳುವ 'ಕಾಲ'ವೇ? ಅಲ್ಲ. ಯುವಕ, ಯುವತಿಯರನ್ನು ಮುಂದಿನ ಸಮಾಜಕ್ಕೆ ನೀಡುವ ಅವರ ತಂದೆ ತಾಯಿಗಳು ತಮ್ಮ ಮಕ್ಕಳ ಬೆಳವಣಿಗೆಯ ಕೆಲವು ಹಂತಗಳಲ್ಲಿ ಸರಿಯಾದ ಮಾರ್ಗದರ್ಶನ ನೀಡಬೇಕು. ಶಿಸ್ತಿನ ನಡವಳಿಕೆಯಲ್ಲಿ ಬದುಕು ರೂಪುಗೊಳ್ಳಲು ಸಾಧ್ಯವಾಗಿಸಬೇಕು. ಶ್ರೀಮಂತ ವರ್ಗದ ತಂದೆ, ತಾಯಿಗಳು ತಮ್ಮ ಅಂತಸ್ತಿಗೆ ತಕ್ಕಂತೆ ಮಕ್ಕಳ ಬೌದ್ಧಿಕ ಮಟ್ಟವನ್ನು ವ್ಯವಹಾರಿಕವಾಗಿ ಬೆಳೆಸಿದರೆ, ಮಧ್ಯಮ ಬಡ ತಂದೆ, ತಾಯಂದಿರು ತಮ್ಮ ಮಕ್ಕಳ ಬಗ್ಗೆ ಅನಾಥವಾದ ಕನಸುಗಳನ್ನು ಸೃಷ್ಟಿಸಿಕೊಂಡು ಅದಕ್ಕಾಗಿ ತಾವು ಬದುಕಿನಲ್ಲಿ ಪಡುವ ಕಷ್ಟಗಳನ್ನು, ಶ್ರಮಜೀವನದ ಚಿತ್ರಗಳನ್ನು ತೋರದೆ ಇರುವುದರಿಂದ ಮಕ್ಕಳು ತಮ್ಮ ತಂದೆ ತಾಯಂದಿರು ಪಡುವ ಕಷ್ಟಗಳ ಬಗ್ಗೆ ಯಾವ ಅರಿವೂ ಇಲ್ಲದೇ ಬೆಳೆದು ಬದುಕಿನಲ್ಲಿ ಬೇಗ ಸೋಲುತ್ತಾರೆ. ಕೊನೆಯದಾಗಿ ಇದಕ್ಕೆ ಸಂಬಂಧಿಸಿದಂತೆ ವೈಯುಕ್ತಿಕವಾದ ಒಂದು ಸಣ್ಣ ಪ್ರಸಂಗ ಹೇಳಿ ಮುಗಿಸುತ್ತೇನೆ.

ನನ್ನ 9 ವರ್ಷದ ಮಗ ಸಿದ್ಧಾರ್ಥ ಓದುವ ಶಾಲೆಯಲ್ಲಿ ಹೆಚ್ಚಿನವರು ಶ್ರೀಮಂತರ, ಸೃಜನಶೀಲರ, ಬುದ್ಧಿವಂತರ ಮಕ್ಕಳು. ಅದು ಹೇಗೋ ಅಂತಹ ಶಾಲೆಯಲ್ಲಿ ಏನೂ ಅಲ್ಲದ 'ನನ್ನ' ಮಗ ಓದುತ್ತಿದ್ದಾನೆ. ಅಲ್ಲಿನ ಪರಿಸರದಿಂದಲೋ ಏನೋ ಒಮ್ಮೊಮ್ಮೆ ತನ್ನ ಸ್ನೇಹಿತರ ಥಳುಕಿನ ವಸ್ತುಗಳ ಬಗ್ಗೆ ನನ್ನ ಗಮನವನ್ನು ತಿರುಗಿಸಲು ಅನೇಕ ತಂತ್ರಗಳನ್ನು ಬಳಸುತ್ತಾನೆ. ಯಾವುದಕ್ಕೂ ಜಗ್ಗದ ನನ್ನಲ್ಲಿಗೆ ಒಮ್ಮೆ ತನ್ನ ಸಮಸ್ಯೆಯನ್ನು ತಂದ. ಶ್ರೀಮಂತ ಮಕ್ಕಳು ತರುವ ಚೀಲದ ಮೇಲೆ ಈತನ ಕಣ್ಣು ಬಿದ್ದು ಅಂತಹುದೊಂದು ಇವನು ಪಡೆದುಕೊಳ್ಳುವ ಕನಸಿನಲ್ಲಿ ತನ್ನ ಚೀಲವನ್ನು ತಿರುಗಿಸಿ ಸ್ವಲ್ಪವೇ ಹರಿದ ಭಾಗ ತೋರಿಸಿ ''ಹಾಳಾಗಿದೆ, ಹೊಸದು ಬೇಕು'' ಎಂದು ಅರ್ಜಿ ಹಾಕಿದ. ನಾನು ಸೂಕ್ಷ್ಮವಾಗಿ ನೋಡಿ ಸಂಜೆ ಮಾತನಾಡುವ ಎಂದೆ. ರಾತ್ರಿ ಊಟವಾದ ನಂತರ ಬ್ಯಾಗನ್ನು, ಸೂಜಿ, ದಾರ ತರಿಸಿ ನಿಧಾನವಾಗಿ ಹೊಲಿದು ಪುಸ್ತಕ ತುಂಬಿ ''ಈಗ ಪುಸ್ತಕ ಕೆಳಗೆ ಬೀಳುವುದಿಲ್ಲವಲ್ಲ!'' ಎಂದೆ. ಅವನು ಅದುವರೆಗೂ ನಾನು ಬ್ಯಾಗನ್ನು ಹೊಲಿಯುವ ಸಮ್ಮೋಹನಕ್ಕೆ ಒಳಗಾಗಿದ್ದೂ ವಾಸ್ತವಕ್ಕೆ ಬಂದ ನಂತರ ನಿರಾಶೆಯಾಗಿದ್ದೂ ನನಗೆ ತಿಳಿಯಿತು. ನಂತರ ಹಣ್ಣು ಹೆಚ್ಚುತ್ತಾ ವಿವರಿಸಿ ಹೇಳಿದೆ. ಅಸಮಾಧಾನದಿಂದಲೇ ಒಪ್ಪಿಕೊಂಡು ಹಾಸಿಗೆಗೆ ಹೋದ. ಈಗ ಅದೆಲ್ಲಾ ಮರೆತು ಕೆಲ ವರ್ಷಗಳೇ ಆಗಿವೆ. ಪೂರ್ತಿ ಹಾಳಾದ ಬ್ಯಾಗು ಹೋಗಿ ಹೊಸದು ಬಂದಿದೆ. ಆದರೆ ಅವನಿಗೆ ನಾನು ಬ್ಯಾಗನ್ನು ಹೊಲಿದು ಕೊಟ್ಟಿದ್ದು ಯಾಕೆಂದು ಮನವರಿಕೆಯಾಗಿದೆ. ಅದು ನನಗೆ ಮುಖ್ಯ.

■


ಜೀರಿಗೆ ರೈಸ್

ಬೇಕಾಗುವ ಸಾಮಗ್ರಿಗಳು :

1 ಕೆ.ಜಿ. ಅಕ್ಕಿ, 1 ಪಾವು ಜೀರಿಗೆ, 1 ಪಾವು ತುಪ್ಪ, 1 ಪಾವು ಅಡುಗೆ ಎಣ್ಣೆ, ರುಚಿಗೆ ತಕ್ಕಂತೆ ಉಪ್ಪು, ಸ್ವಲ್ಪ ಮಸಾಲೆ ಪುಡಿ, 8 ಅಥವಾ 10 ಹಸಿಮೆಣಸಿನಕಾಯಿ.

ಮಾಡುವ ವಿಧಾನ :

ಅಕ್ಕಿಯನ್ನು ಅನ್ನ ಮಾಡಿ ಇಟ್ಟುಕೊಂಡಿರಬೇಕು. ಮೆಣಸಿನಕಾಯಿಯನ್ನು ಕತ್ತರಿಸಿ ಇಟ್ಟುಕೊಳ್ಳಬೇಕು. ಆನಂತರ ತುಪ್ಪ ಮತ್ತು ಎಣ್ಣೆಯನ್ನು ಒಂದು ಪಾತ್ರೆಯಲ್ಲಿ ಸೇರಿಸಿ ಕಾಯಿಸಬೇಕು. ಅದಕ್ಕೆ ಮೇಲೆ ತಿಳಿಸಿದ ಎಲ್ಲಾ ಸಾಮಾನುಗಳನ್ನು ಸೇರಿಸಿ ಒಗ್ಗರಣೆ ಹಾಕಿರಿ. ತದನಂತರ ಅನ್ನವನ್ನು ಅದರಲ್ಲಿ ಹಾಕಿ ಕಲಸಿ, 1 ನಿಮಿಷ ಕಾಯಿಸಬೇಕು. ಇದು ತಿನ್ನಲು ಬಹಳ ರುಚಿಯಾಗಿರುತ್ತದೆ.



-ಗಿರೀಶ ಗಂಟೀರ, ಹಿರೇಕೆರೂರು.

ಮಾವಿನಕಾಯಿ ಚಿತ್ರಾನ್ನ

ಬೇಕಾಗುವ ಸಾಮಗ್ರಿಗಳು :

ಮಾವಿನಕಾಯಿ ಒಂದು, ಒಂದು ಪಾವು ಅಕ್ಕಿ, ಅರ್ಧ ಚಮಚ ಸಾಸಿವೆ, ಇಂಗು, ಅರಿಶಿಣ, 5 ಹಸಿಮೆಣಸು, ಒಂದು ಕಪ್ ಕಾಯಿ ತುರಿ, ಒಂದು ಚಮಚ ಕಡಲೆಬೇಳೆ, ಒಂದು ಚಮಚ ಉದ್ದಿನಬೇಳೆ, ಸ್ವಲ್ಪ ಕಡಲೆಕಾಯಿ ಬೀಜ, 2 ಒಣಮೆಣಸು, ಎಣ್ಣೆ, ಉಪ್ಪು.

ಮಾಡುವ ವಿಧಾನ :

ಅಕ್ಕಿ ತೊಳೆದು ಅನ್ನಮಾಡಿ (ಉದುರಾಗಿರಬೇಕು). ಮಾವಿನಕಾಯಿ ಸಿಪ್ಪೆ ತೆಗೆದು ಹೆಚ್ಚಿ ಅದರೊಂದಿಗೆ ಸಾಸಿವೆ, ಅರಿಶಿಣ, ಹಸಿ ಮೆಣಸು, ತೆಂಗಿನತುರಿ, ಉಪ್ಪು ಸೇರಿಸಿ ಗಟ್ಟಿಯಾಗಿ ರುಬ್ಬಿಡಿ. ಬಾಣಲೆಯಲ್ಲಿ ಎಣ್ಣೆ ಕಾದ ಮೇಲೆ ಸಾಸಿವೆ, ಇಂಗು, ಉದ್ದಿನಬೇಳೆ, ಕಡಲ ಬೇಳೆ, ಕಡಲೆಬೀಜ, ಒಣಮೆಣಸು, ಕರಿಬೇವು ಹಾಕಿ ಒಗ್ಗರಣೆ ಮಾಡಿ. ನಂತರ ರುಬ್ಬಿದ ಮಿಶ್ರಣವನ್ನು ಹಾಕಿ ಹುರಿದು ತಣ್ಣಗಾದ ಅನ್ನ ಹಾಕಿ ಬೆರೆಸಿ, ಇಳಿಸಿ. (ಮಾವಿನಕಾಯಿ ಹೆಚ್ಚು ಹುಳಿ ಇದ್ದರೆ ಒಂದು ಇಡಿ ಬೇಕಾಗುವುದಿಲ್ಲ ನೋಡಿ ಮಾಡಬೇಕು)

-ಜಿ.ಎ. ರುಕ್ಮಿಣಿಮಾಲಾ, ಮೈಸೂರು.

ಗೋಧಿ ಮಾಲ್ದಿ (ಸಿಹಿ)

ಬೇಕಾಗುವ ಸಾಮಗ್ರಿಗಳು :

ಗೋಧಿ ಅರ್ಧ ಕೆ.ಜಿ, ಹುರಿಗಡಲೆ 1/4 ಕೆ.ಜಿ., ಬೆಲ್ಲ 1/4 ಕೆ.ಜಿ., ಎಳ್ಳು 200 ಗ್ರಾಂ, ಕೊಬ್ಬರಿ 1/4 ಹೋಳು, ಏಲಕ್ಕಿ 3-4.

ಮಾಡುವ ವಿಧಾನ :

ಗೋಧಿ ಮತ್ತು ಎಳ್ಳನ್ನು ಕೆಂಪಗೆ ಘಂ ಎನ್ನುವಂತೆ ಬೇರೆ ಬೇರೆಯಾಗಿ ಹುರಿದುಕೊಳ್ಳಿ, ಮಿಕ್ಸಿಯಲ್ಲಿ ಎಲ್ಲವನ್ನು ಹಾಕಿ ಪುಡಿ ಮಾಡಿದ ನಂತರ ಏಲಕ್ಕಿ ಪುಡಿಯೊಂದಿಗೆ ಎಲ್ಲವನ್ನು ಒಟ್ಟಿಗೆ ಸೇರಿಸಿ ಬೆರೆಸಿ. ಡಬ್ಬಿಯಲ್ಲಿ ತುಂಬಿಡಿ. ಬೇಕೆನಿಸಿದಾಗ ಸ್ವಲ್ಪ ತೆಗೆದು ತೆಂಗಿನಕಾಯಿ (ಹಸಿ ತುರಿ) 2-3 ಚಮಚ ತುಪ್ಪ ಬಿಸಿ ಮಾಡಿ ಹಾಕಿ ಕಲೆಸಿ. 2-3 ಚಮಚ ಹಾಲು (ಬೇಕಾದರೆ) ಹಾಕಿ ಉಂಡೆ ಮಾಡಬಹುದು ಅಥವಾ ಪುಡಿ ಇಷ್ಟ ಪಡುವವರು ಹಾಲು ಹಾಕದೆ ತಿನ್ನಬಹುದು. ತುಪ್ಪ ತೆಂಗಿನ ತುರಿ ಹಾಕದಿದ್ದರೆ 15-20 ದಿನಗಳವರೆಗೆ ಇಡಬಹುದು. ಜಿಡ್ಡು ಇಲ್ಲದ ಈ ಸಿಹಿ ಮುಖ್ಯವಾಗಿ ಮಕ್ಕಳಿಗೆ ಅತ್ಯಂತ ಪುಷ್ಟಿಕರವಾದುದು.




- ಟಿ.ಪಿ. ನಾಗರತ್ನ, ಬೆಂಗಳೂರು.

ಗೋಧಿ ಉಂಡೆ

ಬೇಕಾಗುವ ಸಾಮಗ್ರಿಗಳು :

ಅರ್ಧ ಕೆ.ಜಿ. ಗೋಧಿ, ಅರ್ಧ ಕೆ.ಜಿ. ಸಕ್ಕರೆ, 300 ಗ್ರಾಂ ತುಪ್ಪ, 12 ಗೋಡಂಬಿ, 50 ಗ್ರಾಂ ದ್ರಾಕ್ಷಿ, 4 ಏಲಕ್ಕಿ.

ಮಾಡುವ ವಿಧಾನ :




ಗೋಧಿಯನ್ನು ಹುರಿದು ಹಿಟ್ಟು ಮಾಡಿಕೊಳ್ಳಿ. ಸಕ್ಕರೆಯನ್ನು ಪುಡಿ ಮಾಡಿಕೊಳ್ಳಿ, ಬಾಣಲೆಯಲ್ಲಿ ತುಪ್ಪ ಅಥವಾ ಡಾಲ್ಡ ಹಾಕಿ ಕಾಯಿಸಿ, ನಂತರ ಗೋಧಿ ಹಿಟ್ಟನ್ನು ಹಾಕಿ ಚೆನ್ನಾಗಿ ಕೆಂಪು ಬಣ್ಣ ಬರುವಂತೆ ಹುರಿಯಿರಿ. ಈ ರೀತಿ ಹುರಿದ ಹಿಟ್ಟು ಆರಿದ ನಂತರ ಪುಡಿ ಮಾಡಿದ ಸಕ್ಕರೆಯನ್ನು ಸೇರಿಸಿ ಚೆನ್ನಾಗಿನಾದಿ. ಗೋಡಂಬಿ, ದ್ರಾಕ್ಷಿ ಹಾಗು ಏಲಕ್ಕಿ ಗೋಡಂಬಿ ಸೇರಿಸಿ ಬೇಕಾದ ಸೈಜಿನ ಉಂಡೆಗಳನ್ನು ಕಟ್ಟಿಕೊಳ್ಳಿ. ತಿಂಗಳುಗಟ್ಟಲೆ ಡಬ್ಬಿಯಲ್ಲಿಟ್ಟು ತಿನ್ನಬಹುದು.

-ಕೆ.ಜಿ. ರಾಮಪ್ರಸಾದ್, ಕಡೂರು.

ಪಿಸ್ತಾ ಬರ್ಫಿ

ಬೇಕಾಗುವ ಸಾಮಗ್ರಿಗಳು :

ಕವಾ 1/2 ಕೆ.ಜಿ., ಸಕ್ಕರೆ 400 ಗ್ರಾಂ, ಬಾದಾಮಿ 200 ಗ್ರಾಂ, ಏಲಕ್ಕಿ ಪೌಡರ್ 1 ಟೀ ಸ್ಪೂನ್, ಸ್ವಲ್ಪ ತುಪ್ಪ.



ಮಾಡುವ ವಿಧಾನ :

ಕವಾವನ್ನು ಸ್ವಲ್ಪ ದಪ್ಪ ತಳ ಇರುವ ಬಾಣಲೆಯಲ್ಲಿ ಸ್ವಲ್ಪ ಕಾದು ಬಣ್ಣ ಬರುವವರೆಗೆ ಹುರಿದು ಸಕ್ಕರೆ ಪೌಡರ್ ಮಾಡಿ ಹಾಕಿ. ಸ್ವಲ್ಪ ಹುರಿದು ಇದರಲ್ಲಿ ಬಾದಾಮಿ, ಏಲಕ್ಕಿ ಪೌಡರ್ ಹಾಕಿ ಕಲಿಸಿ. ತುಪ್ಪ ಸವರಿದ ಪಾತ್ರೆಯಲ್ಲಿ ಹಾಕಿ ಸ್ವಲ್ಪ ಆರಿದ ನಂತರ ಬೇಕಾದ ಆಕಾರಕ್ಕೆ ಕತ್ತರಿಸಿ.

-ರೇಣುಕಾ ಎಸ್. ಚವ್ಹಾಣ್,
ವಡ್ಡರಹಟ್ಟಿ.

ಬದನೆಕಾಯಿ ಬೋಂಡ

ಬೇಕಾಗುವ ಸಾಮಗ್ರಿಗಳು :

ಬದನೆಕಾಯಿ 1-2, ಈರುಳ್ಳಿ 4, ಸಣ್ಣ ಕಟ್ಟು ಕೊತ್ತಂಬರಿ ಸೊಪ್ಪು, ಒಂದೆರಡೆಸಳು ಕರಿಬೇವಿನ ಸೊಪ್ಪು, 4-5 ಬಲಿತ ಹಸಿಮೆಣಸು, ರುಚಿಗೆ ತಕ್ಕಷ್ಟು ಉಪ್ಪು, ಚಿಟಿಕೆ ಸೋಡಾ, ಅಕ್ಕಿ ಹಿಟ್ಟು 2-3 ಕಪ್, ಕರಿಯಲು ಕೊಬ್ಬರಿ ಎಣ್ಣೆ 2 ಕಪ್.

ಮಾಡುವ ವಿಧಾನ :

ಬದನೆಕಾಯಿ, ಕೊತ್ತುಂಬರಿ ಸೊಪ್ಪು, ಹಸಿಮೆಣಸು, ಕರಿಬೇವಿನ ಸೊಪ್ಪು, ಈರುಳ್ಳಿ ಇವುಗಳನ್ನು ಸಣ್ಣ ಸಣ್ಣ ಹೋಳುಗಳನ್ನಾಗಿ ಹೆಚ್ಚಿ, ಅಕ್ಕಿ ಹಿಟ್ಟನ್ನು, ಉಪ್ಪು, ಸೋಡಾ ಜೊತೆ ನೀರನ್ನು ಸ್ವಲ್ಪ ಹಾಕಿ ಕದಡಿ. ಈ ಹೋಳುಗಳನ್ನು ಹಾಕಿ ಸ್ವಲ್ಪ ಗಟ್ಟಿಯಾಗಿ ಕಲಸಿಕೊಂಡು ಸಣ್ಣ ಸಣ್ಣ ಉಂಡೆಗಳನ್ನಾಗಿ ಮಾಡಿ ಕೊಬ್ಬರಿ ಎಣ್ಣೆಯಲ್ಲಿ ಕರಿದು ತೆಗೆದರೆ, ಟೀ ಟೈಮ್ ಮನೋರಂಜನೆಯ ಜೊತೆ ಇದನ್ನು ಸವಿಯಬಹುದು.

-ಸುವರ್ಣ ಚಿದಂಬರ ಸೋದೆ, ಸಾಗರ.

ಮಸಾಲೆ ವಡೆ

ಬೇಕಾದ ಸಾಮಗ್ರಿಗಳು :

ಅರ್ಧ ಸೇರು ಅಕ್ಕಿ ಹಿಟ್ಟು, ಒಂದೂವರೆ ಪಾವು ಮೈದಾಹಿಟ್ಟು, ಒಂದೂವರ ಪಾವು ರವೆ, ನಾಲ್ಕೈದು ಈರುಳ್ಳಿ, ಎಂಟು ಹಸಿಮೆಣಸಿನ ಕಾಯಿ, ಒಂದು ಚಿಟಿಕೆ ಸೋಡ, ಎರಡು ಕಂತೆ ಕೊತ್ತಂಬರಿ ಸೊಪ್ಪು, ಎರಡು ಚಮಚ ಜೀರಿಗೆ, ರುಚಿಗೆ ತಕ್ಕಷ್ಟು ಉಪ್ಪು, ಕರಿಯಲು ಎಣ್ಣೆ.

ಮಾಡುವ ವಿಧಾನ :



ಅಕ್ಕಿಹಿಟ್ಟು, ಮೈದಾಹಿಟ್ಟು, ರವೆಯೊಂದಿಗೆ ಉಪ್ಪು ಜೀರಿಗೆ, ಸೋಡಾವನ್ನು ಚೆನ್ನಾಗಿ ಕಲಿಸಿಟ್ಟಿರಬೇಕು. ನಂತರ ಈರುಳ್ಳಿ, ಹಸಿ ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪನ್ನು ಸಣ್ಣದಾಗಿ ಹೆಚ್ಚಿ ಅದಕ್ಕೆ ಸೇರಿಸಿ ಹದವಾಗಿ ಕಲಸಿ. ಒಲೆಯ ಮೇಲೆ ಬಾಣಲೆಯಲ್ಲಿ ಎಣ್ಣೆ ಕಾದ ಮೇಲೆ ವಡೆಗಳನ್ನು ಎಣ್ಣೆಗೆ ಹಾಕಿ ಕೆಂಪಗೆ ಕರಿಯಬೇಕು. ಆಗ ಮಸಾಲೆ ವಡೆ ತಿನ್ನಲು ಸಿದ್ಧವಾಗುತ್ತದೆ.

-ಅರುಣ ಎಚ್. ಎಮ್., ಚಿತ್ರದುರ್ಗ.

ಬಟಾಟೆ ದೋಸೆ

ಬೇಕಾಗುವ ಸಾಮಗ್ರಿಗಳು:

ನಾಲ್ಕು ಬಟಾಟೆ, ಎರಡು ಬಟ್ಟಲು ಅಕ್ಕಿಯ ಹಿಟ್ಟು, ಒಂದು ಲೋಟ ಮೊಸರು, ನಾಲ್ಕು ಮೆಣಸಿನಕಾಯಿ, ಒಂದು ಬಟ್ಟಲು ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು, ಉಪ್ಪು, ಎಣ್ಣೆ.

ಮಾಡುವ ವಿಧಾನ :



ಬಟಾಟೆಯನ್ನು ಕುದಿಸಿಕೊಂಡು ಹೆರು ಮಣೆಯಿಂದ ಹೆರೆಯಬೇಕು. ಇದರಲ್ಲಿ ಅಕ್ಕಿಯ ಹಿಟ್ಟು, ಉಪ್ಪು, ಹೆಚ್ಚಿದ ಕೊತ್ತಂಬರಿ ಸೊಪ್ಪು ಹಾಗು ಮೆಣಸಿನ ಕಾಯಿ ಈ ಎಲ್ಲ ಪದಾರ್ಥಗಳನ್ನು ಮೊಸರಿನಲ್ಲಿ ಹಾಕಿ ಕಲೆಸಬೇಕು. ಸ್ವಲ್ಪ ನೀರನ್ನು ಹಾಕಿ ಹಿಟ್ಟನ್ನು ತೆಳ್ಳಗೆ ಮಾಡಿಡಬೇಕು. ತಯಾರಾದ ಹಿಟ್ಟನ್ನು ಉತ್ತಪ್ಪದ ಹಾಗೆ ಹಂಚಿನ ಮೇಲೆ ಹಾಕಿ ಎಣ್ಣೆಯನ್ನು ಬಿಡಬೇಕು. ಇದರ ಜೊತೆ ಕೊಬ್ಬರಿ ಚಟ್ನಿ ಇದ್ದರೆ ತಿನ್ನಲು ಚೆನ್ನಾಗಿರುತ್ತದೆ.

-ಉಮೇಶ, ರಬಕವಿ.

ಟೊಮಾಟೊ ಸಾಸ್

ಬೇಕಾಗುವ ಸಾಮಗ್ರಿಗಳು :

ಟೊಮಾಟೊ 1 ಕೆ.ಜಿ., ಲವಂಗ 10-12, ದಾಲ್ಚಿನ್ನಿ 5-6 ತುಂಡು, ಕರಿಮೆಣಸು 1 ಟೀ ಚಮಚ, ಸ್ವಲ್ಪ ಬೆಲ್ಲ, ರುಚಿಗೆ ತಕ್ಕಷ್ಟು ಉಪ್ಪು, 2 ಈರುಳ್ಳಿ.

ಮಾಡುವ ವಿಧಾನ :

ಟೊಮಾಟೊ ಹಣ್ಣನ್ನು ಕುಕ್ಕರ್‌ನಲ್ಲಿ ನೀರು ಹಾಕದೆ ಈರುಳ್ಳಿ, ಲವಂಗ, ದಾಲ್ಚಿನ್ನಿ, ಕರಿಮೆಣಸು ಸಮೇತ 10 ನಿಮಿಷ ಬೇಯಿಸಿ ನಂತರ ಮಿಕ್ಸಿಯಲ್ಲಿ ರುಬ್ಬಿಕೊಂಡು ಸಾಣಿಗೆಯಿಂದ ಸೋಸಿಕೊಳ್ಳಬೇಕು. ಅದರಲ್ಲಿ ಉಪ್ಪು, ಖಾರದಪುಡಿ, ಸ್ವಲ್ಪ ಬೆಲ್ಲ ಹಾಕಿ ಸ್ವಲ್ಪ ಗಟ್ಟಿಯಾಗುವವರೆಗೆ ಕುದಿಸಿಕೊಂಡು, ಆರಿದ ಮೇಲೆ ಬಾಟಲಿಯಲ್ಲಿ ತುಂಬಿ ಇಟ್ಟರೆ ಕೆಲ ದಿನ ಕೆಡದಂತಿರುತ್ತದೆ. ಪೂರಿ ಅಥವಾ ಬ್ರೆಡ್ ಮೇಲೆ ಇದನ್ನು ಹಚ್ಚಿಕೊಂಡು ತಿಂದರೆ ತುಂಬಾ ರುಚಿಯಾಗಿರುತ್ತದೆ. 40-50 ರೂ.ಗೆ ಮಾರ್ಕೆಟಿನಲ್ಲಿ ಸಿಗುವ ಇದನ್ನು ಮನೇಲಿ ಕಡಿಮೆ ಖರ್ಚಿನಲ್ಲಿ ಸುಲಭವಾಗಿ ತಯಾರಿಸಬಹುದು.

-ಪುಷ್ಪಾವತಿ ಪ. ಲದವಾ

ರಸಗುಲ್ಲ

ಬೇಕಾಗುವ ಸಾಮಗ್ರಿಗಳು :

1 ಲೀಟರ್ ಹಾಲು, 1/2 ಟೀ ಚಮಚ, ಸಣ್ಣ ರವೆ, 100 ಮಿಲಿ ಲೀಟರ್ ಪನ್ನೀರು, ಕಲ್ಲು ಸಕ್ಕರೆ ಚೂರುಗಳು, 2 ನಿಂಬೇಹಣ್ಣು ದಳ ರಸ, 1/2 ಕೆ.ಜಿ. ಸಕ್ಕರೆ.

ಮಾಡುವ ವಿಧಾನ :

ಹಾಲನ್ನು ಕಲಾಯಿ ಇರುವ ಪಾತ್ರೆಯಲ್ಲಿ ಕಾಯಿಸಿ. ಕಾದ ಹಾಲಿಗೆ ನಿಂಬೆ ರಸ ಹಿಂಡಿ 1/2 ನಿಮಿಷ ಕುದಿಸಿ ಕೆಳಗಿಳಿಸಿ. ತೆಳು ಬಟ್ಟೆಯಲ್ಲಿ ಒಡೆದ ಹಾಲನ್ನು ಶೋಧಿಸಿ ಗಟ್ಟಿ ಭಾಗವನ್ನು ಬಟ್ಟೆಯಲ್ಲೇ ಸುತ್ತಿ ಅದರ ಮೇಲೆ 15 ನಿಮಿಷ ಭಾರ ಹೇರಿಡಿ. ನೀರೆಲ್ಲ ಸೋರಿ ಹೋಗಿ ಉಳಿಯುವ ಹಾಲಿನ ಗಟ್ಟಿ ಭಾಗಕ್ಕೆ ಸಣ್ಣ ರವೆ ಸೇರಿಸಿ, ಕಲಸಿ 5 ನಿಮಿಷ ನಾದಿ ಹಿಟ್ಟನ್ನು ಬೆಣ್ಣೆಯಷ್ಟು ಮೃದುವಾಗಿ ಮಾಡಿಕೊಳ್ಳಿ. ನಂತರ ಹಿಟ್ಟನ್ನು ಸಣ್ಣ ಉಂಡೆಗಳನ್ನಾಗಿ ಮಾಡಿ ಪ್ರತಿಯೊಂದರ ಮಧ್ಯೆ ಒಂದೊಂದು ಕಲ್ಲು ಸಕ್ಕರೆ ಚೂರು ಇಡಿ. ಪಾತ್ರೆಗೆ ಸಕ್ಕರೆ ನೀರು ಹಾಕಿ 6 ನಿಮಿಷ ಸಣ್ಣ ಉರಿಯಲ್ಲಿ ಕುದಿಸಿ ಎಳೆ ಪಾಕ ಮಾಡಿ ಅದರಲ್ಲಿ ಕಾಲು ಭಾಗವನ್ನು ಬೇರೆ ಪಾತ್ರೆಗೆ ಬಗ್ಗಿಸಿ. ಒಲೆಯ ಮೇಲೆ ಇರುವ ಪಾಕಕ್ಕೆ ಉಂಡೆ ಮಾಡಿದ ರಸಗುಲ್ಲ ಹಾಕಿ ಸ್ವಲ್ಪ ದೊಡ್ಡ ಉರಿಯಲ್ಲಿ ಕುದಿಸಿ. ತೆಗೆದಿಟ್ಟುಕೊಂಡಿರುವ ಪಾಕವನ್ನು ಆಗಾಗ್ಗೆ ರಸಗುಲ್ಲಾಗಳ ಮೇಲೆ ಸುರಿಯುತ್ತಿರಿ. ರಸಗುಲ್ಲಾ ಸಕ್ಕರೆ ಪಾಕದಲ್ಲೇ 1/2 ಗಂಟೆ ಬೇಯಬೇಕು. ಬೆಂದ ನಂತರ ರಸಗುಲ್ಲಾ ಉಬ್ಬುತ್ತದೆ. ನಂತರ ಅದನ್ನು ಪಾಕದ ಸಮೇತ ಇಳಿಸಿ ಪನ್ನೀರನ್ನು ಹಾಕಿ. ರಸಗುಲ್ಲಾಗಳನ್ನು 1 ದಿನ ಬಿಟ್ಟು ತಿನ್ನಬೇಕು.

-ಶೋಭಾ ಬಸವರಾಜ,
ಇಲಕಲ್ಲ.

(27ನೇ ಪುಟದಿಂದ)
ಇಮೊಂದು test case ಎಂದಿದ್ದರು. ಇಲ್ಲಿಯ ತನಕ ಏನೇನೂ ನಡೆದಿಲ್ಲ ಎನ್ನುವ ಪರಿಸ್ಥಿತಿ ಇದೆ ಎಂದರೆ ನೀವೇ ತೀರ್ಮಾನಿಸಿ.

ಶರ್ಮಾ ಮತ್ತು ಬಾಲು ದಾವೂದ್ ಐಎಸ್‌ಐ ಬಾಲದ ಸಣ್ಣ ಕೊಂಡಿಗಳಷ್ಟೆ. ಪಾತಕದ ರಾಜಕೀಕರಣ ಅಥವಾ ರಾಜಕೀಯದ ಪಾತಕೀಕರಣ ನಿಯಂತ್ರಿಸಲು ಸಾಧ್ಯವಿಲ್ಲದ ಸ್ಥಿತಿಗೆ ಬಂದು ಮುಟ್ಟಿದೆ. ಎಲ್ಲ ಪಕ್ಷಗಳು ಚುನಾವಣೆಯಲ್ಲಿ ಸ್ಪರ್ಧಿಸಲು ಪಾತಕಿಗಳಿಗೆ ಟಿಕೆಟ್ ನೀಡುತ್ತವೆ. ಗೆದ್ದ ಖೂಳರು ಮಂತ್ರಿಗಳಾಗುತ್ತಾರೆ.

ರಾಜಕೀಯಕ್ಕಿಳಿದ ಪಾತಕಿಗಳು

ನರಸಿಂಹರಾವ್ ಪ್ರಧಾನಿಯಾದ ನಂತರ ಪ್ರಭಾವಶಾಲಿಯಾಗಿ ಬೆಳೆದ ಚಂದ್ರಸ್ವಾಮಿ, ಬಹಿರಂಗವಾಗೇ ಭೂಗತ ಪ್ರಪಂಚವನ್ನು ಸಾಕಿದ. ರಾವ್ ಸಂಪುಟದಲ್ಲಿ ಗೃಹ ಖಾತೆಯ ಮುಖ್ಯ ಮಂತ್ರಿಯಾಗಿದ್ದ ರಾಮ್ ಲಾಲ್ ರಾಹಿ ಬಬ್ಲೂನ ಸ್ನೇಹಿತೆ ಪೂನಂಭಗತ್‌ಗೆ ರಕ್ಷಣೆ ನೀಡಬೇಕೆಂದು ಶಿಫಾರಸ್ಸು ಮಾಡಿದ್ದ. ಉತ್ತರಪ್ರದೇಶದ ಮುಖ್ಯ ಮದ್ಯ ಗುತ್ತಿಗೆದಾರರಾದ ಪೊಂಟಿ ಚಡ್ಡಾ ಮತ್ತು ನವೀನ್ ಖಂಡೇಲ್‌ವಾಲ್‌ಗೆ ಗೊಂಡಾದ ಮಾಜಿ ಸಂಸದ ಬಿಜೆಪಿಯ ಬ್ರಿಜ್‌ಭೂಷಣ್ ಶರಣ್ ಸಿಂಗ್‌ನ ಕೃಪಾಶ್ರಯವಿದೆ. ಈ ಬ್ರಿಜ್ ಭೂಷಣ್ ದಾವೂದನ ಆಪ್ತ, ದಾವೂದನ ಅನುಚರರು ಟಾಡಾದ ಹಿಡಿತಕ್ಕೆ ಸಿಕ್ಕದಂತೆ ತನ್ನ ಆಶ್ರಯದಲ್ಲಿರಿಸಿಕೊಂಡಿದ್ದ. ಕಲ್ಯಾಣ್‌ಸಿಂಗ್ ಸರ್ಕಾರದ ಮಂತ್ರಿಗಳಾದ ಹರಿಶಂಕರ್ ತಿವಾರಿ, ರಘುನಾಥ ಪ್ರತಾಪ್‌ಸಿಂಗ್ ಮಾಜಿ ಕ್ರಿಮಿನಲ್‌ಗಳು. ಇರ್ಫಾನ್ ಗೋಗಾ ಕಣ್ಮರೆಯಾದ ನಂತರ ಅವನ ಸ್ಥಾನಕ್ಕೆ ಬಂದಿರುವ ಸಂಜಯ್ ಖನ್ನಾ ಒಂದು ಕಾಲದಲ್ಲಿ ಚಂದ್ರಾಸ್ವಾಮಿಯ ಆಶ್ರಮದಲ್ಲಿ ಕೆಲಸ ಮಾಡಿಕೊಂಡಿದ್ದ. ಖನ್ನಾನ ಕೊಲೆಗೆ ಚಂದ್ರಸ್ವಾಮಿ ನೇಮಿಸಿದ್ದು ಬಬ್ಲೂ. ಬಬ್ಲೂ ಅದನ್ನು ಖನ್ನಾಗೆ ಹೇಳಿದ್ದರಿಂದ ಖನ್ನಾ ಈಗ ಬಬ್ಲೂನ ಮುಖ್ಯ ಹಿಟ್‌ಮ್ಯಾನ್ ಆಗಿದ್ದಾನೆ.

ಮಹಾರಾಷ್ಟ್ರದಲ್ಲಿ ಶಿವಾಜಿ ಜಯಂತಿಗಾಗಿ ಶಿವಧನ್ ಸಂಗ್ರಹಿಸಲು ಬಾಳಠಾಕರೆಯೇ ಹೇಳಿದ್ದಾನೆ. ಶಿವಸೇನೆಯ ಶಾಖಾ ಪ್ರಮುಖರು ತಮ್ಮ ಪಾಲನ್ನೂ ಸೇರಿಸಿಕೊಂಡು ಹಫ್ತಾ ವಸೂಲಿ ಮಾಡುತ್ತಾರೆ. ಮಹಾರಾಷ್ಟ್ರದ ಮಂತ್ರಿಯೊಬ್ಬನಿಗೆ ಈಗ ಮಲೇಶಿಯಾದಲ್ಲಿರುವ ಚೋಟಾ ರಾಜನ್ ಜೊತೆ ನೇರ ಸಂಬಂಧವಿದ್ದು, ಆ ಮಂತ್ರಿ ಚೆಂಬೂರಿನಲ್ಲಿ ತನ್ನದೇ ತಂಡವೊಂದನ್ನು ಸಾಕಿಕೊಂಡಿದ್ದಾನೆ. ಚೋಟಾ ರಾಜನ್ ಹಿಂದೆ ಭಾಜಪ ಶಿವಸೇನೆ ಇದ್ದರೆ, ಅರುಣ್ ಗಾವ್ಳಿ ಹಿಂದೆ ಕಾಂಗ್ರೆಸ್ ಪಕ್ಷವಿದೆ. ಅಶ್ವಿನ್ ನಾಯ್ಕ್ ಗುಂಪಿಗೂ ಶಿವಸೇನೆಯ ಬೆಂಬಲವಿದ್ದು, ಫೆಬ್ರವರಿ 97ರ ಮುಂಬೈ ಮುನ್ಸಿಪಲ್ ಚುನಾವಣೆಯಲ್ಲಿ ಅಶ್ವಿನ್ ನಾಯ್ಕ್ ಮತ್ತು ಅಮರ್ ನಾಯ್ಕ್ ಹೆಂಡತಿಯರಿಗೆ ಶಿವಸೇನೆ ಟಿಕೆಟ್ ಕೊಟ್ಟಿತ್ತು. ಅಶ್ವಿನ್ ಹೆಂಡತಿ ನೀತಾ ಚುನಾವಣೆಯಲ್ಲಿ ಗೆದ್ದಳು. ಕೆನಡಾದಲ್ಲಿರುವ ತನ್ನ ಗಂಡನ ವ್ಯವಹಾರದ ಮೇಲುಸ್ತುವಾರಿ ಈಗ ಅವಳದ್ದು.

93ರ ಮುಂಬೈ ಸ್ಫೋಟದ ಮೊದಲು ದಾವೂದನನ್ನು ಓಲೈಸುತ್ತಿದ್ದ ಕಾಂಗ್ರೆಸ್ (ಐ) ಈಗ ಗಾವ್ಳಿಯನ್ನು ಓಲೈಸುತ್ತಿದೆ. ಗಾವ್ಳಿಯ ಸೋದರ ಸಂಬಂಧಿ ಸಚಿನ್ ಅಹೇರ್ ಕಾಂಗ್ರೆಸ್‌ಗೆ ಸೇರಿದ ಕಾರ್ಮಿಕ ಸಂಘಟನೆಯ ನಾಯಕ. ಸೇನಾದ ಉಲ್ಲಾಸ್‌ನಗರದ ಕಾರ್ಪೊರೇಟರ್ ಕಿಶೋರ್ ಕೇಸ್ವಾನಿ ಮೇಲೆ ಸ್ಫೋಟಕಗಳನ್ನು ಹೊಂದಿದ್ದನೆಂದು ಮೊಕದ್ದಮೆ ಹೂಡಲಾಗಿದ್ದು, ದಾವೂದನ ಅನುಯಾಯಿ ಗೋಪಾಲ್ ರಾಜ್ವಾನಿ (ಶಿವಸೇನೆಯ ನಾಯಕ) ಜೊತೆ ಕೇಸ್ವಾನಿಗೆ ಸಂಬಂಧವಿದೆ.

ಮುಂಬೈ ದೆಹಲಿಯ ಪಾಪಿಗಳ ಲೋಕ ಈಗ ಬೇರೆ ನಗರಗಳಿಗೂ ಹರಡಿಬಿಟ್ಟಿದೆ. ಬೆಂಗಳೂರು ಇದಕ್ಕೆ ಹೊರತಾಗಿಲ್ಲ. ಜೈಪುರಿಯ ಅಪಹರಣ ಪ್ರಸಂಗ ಇದಕ್ಕೊಂದು ಉದಾಹರಣೆ. ಗ್ಯಾಂಗ್‌ವಾರ್‌ಗಳು ಬೆಂಗಳೂರಿನಲ್ಲಿ ನಿಂತಿವೆ. ಆದರೆ ಮುಂಬೈಯ ಪಾತಕ ಹಸ್ತ ಆಗೊಮ್ಮೆ ಈಗೊಮ್ಮೆ ತನ್ನ ಕೈಚಳಕ ತೋರಿಸುತ್ತಿರುತ್ತದೆ.

ನಿಯಂತ್ರಣ

1908ರ ಸ್ಫೋಟಕಗಳ ಕಾಯ್ದೆಯನ್ನು ತಿದ್ದುಪಡಿ ಮಾಡಲಾಗಿದ್ದು, ಅದರ ಪ್ರಕಾರ RDX ಹೊಂದಿದಾತನಿಗೆ ಕನಿಷ್ಠ 10 ವರ್ಷ ಗರಿಷ್ಠ ಜೀವಾವಧಿ ಶಿಕ್ಷೆ ವಿಧಿಸಬಹುದು. ಅದ್ವಾನಿ ಆರ್‌ಡಿಎಕ್ಸ್ ಹೊಂದಿದ ವ್ಯಕ್ತಿಗೆ ಮರಣದಂಡನೆ ವಿಧಿಸುವ ಕಾಯಿದೆ ತರುವ ಬಗ್ಗೆ ಮಾತನಾಡಿದ್ದರು. ಆ ವಿಧೇಯಕಕ್ಕೆ ರಾಜ್ಯಗಳು ಒಪ್ಪಲಿಲ್ಲ. ಕಾಯಿದೆಗಳು RDXನ ಪ್ರವಾಹವನ್ನು ನಿಲ್ಲಿಸುವುದಿಲ್ಲ. ಪಾಕಿಸ್ತಾನಕ್ಕೆ ಜ್ಞಾನೋದಯವಾಗುವ ಸಾಧ್ಯತೆ ಕೂಡಾ ಇಲ್ಲ. ವಾಜಪೇಯಿ ಲಾಹೋರಿಗೆ ಬಸ್ ಪ್ರಯಾಣ ನಡೆಸಿದ ದಿನವೇ ಕಾಶ್ಮೀರ ಕಣಿವೆಯಲ್ಲಿ 30 ಜನ ಕಾಶ್ಮೀರಿ ಪಂಡಿತರನ್ನು ಉಗ್ರಗಾಮಿಗಳು ಕೊಂದು ಹಾಕಿದರು. ಭಾರತ ಪಾಕಿಸ್ತಾನದ ನಡುವಿನ ಶೀತಲ ಸಮರ ಕೊನೆಗೊಳ್ಳದೆ ಭಯೋತ್ಪಾದನೆ ಕಡಿಮೆಯಾಗುವುದಿಲ್ಲ. ಪಾಕಿಸ್ತಾನದ ಮೇಲೆ ಅಂತರಾಷ್ಟ್ರೀಯ ಒತ್ತಡ ಹೆಚ್ಚುವಂತೆ ನಮ್ಮ ಸರ್ಕಾರ ಮಾಡಬೇಕು. ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಮಾತನಾಡುವವರು ನಿರಪಾಯಕಾರಿ ನಾಗರಿಕರನ್ನು ಭಯೋತ್ಪಾದಕರು ಕೊಲ್ಲುವುದನ್ನು ಖಂಡತುಂಡವಾಗಿ ವಿರೋಧಿಸಬೇಕು.

ದಾವೂದನನ್ನು ದುಬೈನಿಂದ ಹೊರಗೆಳೆಯಲು ಸರ್ಕಾರ ಪ್ರಯತ್ನಿಸಿದ ತಕ್ಷಣ ಆತ ಪಾಕಿಸ್ತಾನಕ್ಕೆ ಕಾಲ್ತೆಗೆಯುತ್ತಾನೆ. ಐಎಸ್‌ಐ ಜೊತೆಗೆ ಈಗ ನಿರುದ್ಯೋಗಿಯಾಗಿರುವ ಓಸಾಮಾಬಿಲ್ ಲೇಡನ್ ಕೂಡಾ ಭಾರತದಲ್ಲಿ ತನ್ನ ಕಾರ್ಯಪ್ರಾರಂಭಿಸುವ ಸೂಚನೆಗಳಿವೆ. ಇದು ಸಮಸ್ಯೆಯನ್ನು ಇನ್ನಷ್ಟು ಕಗ್ಗಂಟು ಮಾಡಿಬಿಡುತ್ತದೆ. ಇಂಟೆಲಿಜೆನ್ಸ್ ಬ್ಯೂರೋ ಪ್ರಕಾರ ಐಎಸ್‌ಐ 20,000 ಭಾರತೀಯ ಏಜೆಂಟರನ್ನು ನೇಮಿಸಿಕೊಂಡಿದೆ. 7,000 ಜನರನ್ನು ಕಳ್ಳತನದಿಂದ ದೇಶದ ಗಡಿಯೊಳಗೆ ಸೇರಿಸಿಬಿಟ್ಟಿದೆ. ನಿರುದ್ಯೋಗ, ಆರ್ಥಿಕ ಅನಿಶ್ಚಿತತೆ, ಜಾತಿ ದಬ್ಬಾಳಿಕೆ ಇವೆಲ್ಲ ನಮ್ಮ ಯುವಕರು ಹತ್ಯಾರ ಕೈಗೆತ್ತಿಕೊಳ್ಳಲು ಕಾರಣವಾಗುತ್ತಿವೆ.

ಭಯೋತ್ಪಾದನೆ ಮತ್ತು ಅದರ ಪೋಷಣೆ ಇವೆರಡೂ ಹುಲಿ ಸವಾರಿ ಇದ್ದಂತೆ. ಹತ್ತಿದರೆ ಮುಗಿಯಿತು, ಇಳಿಯುವುದು ಅಸಾಧ್ಯ. ಇದನ್ನು ಪ್ರೇರಿತ ಉಗ್ರಗಾಮಿಗಳು, ಐಎಸ್‌ಐ ಹಾಗೂ ಪಾಕಿಸ್ತಾನ ಅರ್ಥಮಾಡಿಕೊಳ್ಳಬೇಕು. ■



ಮುಷ್ಕರ

ನಮ್ಮ ಕಂಪನಿಯ ನೌಕರರು ಮುಷ್ಕರ ಹೂಡಿದ್ದಾರೆ
ಏಕೆ?
ಮ್ಯಾನೇಜರರು ಈ ತಿಂಗಳ ಸಂಬಳದ ಬಂಡಲ್‌ನಲ್ಲಿ ಖೋಟಾ ನೋಟು ತುರುಕಿ ಕೊಟ್ಟು ಬಿಟ್ಟಿದ್ದಾರೆ.
ನಿಮ್ಮ ಕಂಪನಿಯಲ್ಲಿ ಏನು ತಯಾರಿಸ್ತಾರೆ?
ಖೋಟಾ ನೋಟು!



ವಯಸ್ಕರಿಗಾಗಿ

■ ಡಾ. ವಸುಂಧರಾ ಭೂಪತಿ

ಅಸಭ್ಯ ವರ್ತನೆಗಳು ಸುರಕ್ಷಿತವೇ?

ನೀವು, ಸಂಭೋಗ ಮಾಡುವುದಕ್ಕಿಂತ ಮೊದಲು ಚುಂಬನ, ಆಲಿಂಗನ, ಸ್ಪರ್ಷಕ್ರಿಯೆ ಮಾಡಬೇಕೆಂದು ಹೇಳಿದ್ದೀರಿ. ಆದರೆ ಕೆಲವೊಬ್ಬರು ಶಿಶ್ನ ನೆಕ್ಕುವುದು, ಯೋನಿಯಲ್ಲಿ ನಾಲಗೆ ಹಾಕಿ ನೆಕ್ಕುವುದು ಇಂತಹ ಅಸಭ್ಯ ವರ್ತನೆಗಳು ಮಾಡುತ್ತಾರೆ ಎಂದು ಕೇಳಿದ್ದೇನೆ. ಹೀಗೆ ಮಾಡುವುದು ಎಷ್ಟರ ಮಟ್ಟಿಗೆ ಸುರಕ್ಷಿತವಾಗಿದೆ. ಅಂದರೆ ಹೀಗೆ ಮಾಡುವುದು ಸರಿಯೆ? ಇದರಿಂದ ಲೈಂಗಿಕ ರೋಗಗಳು ಬರುತ್ತವೆಯೇ? ಹೆಣ್ಣು ಅಥವಾ ಗಂಡಿನ ಜನನಾಂಗಗಳಲ್ಲಿ ಯಾವುದೇ ಗಾಯ (ರೋಗ)ವಾಗಿದ್ದರೆ ಮೇಲಿನ ವರ್ತನೆ ಮಾಡುವುದರಿಂದ ಹೆಣ್ಣಿನಿಂದ ಗಂಡಿಗೆ, ಗಂಡಿನಿಂದ ಹೆಣ್ಣಿಗೆ ರೋಗ ಬರುತ್ತದೆ ಎಂದು ಓದಿದ್ದೇನೆ. ಇದು ಸರಿಯೇ?

-ಎ.ಬಿ.ಸಿ., ಊರುಬೇಡ.

ಸಲಹೆ

ಗಂಡು/ಹೆಣ್ಣು ಇಬ್ಬರೂ ಇಷ್ಟಪಟ್ಟಲ್ಲಿ ಆ ಕ್ರಿಯೆಗಳಲ್ಲಿ ಪಾಲ್ಗೊಳ್ಳುವುದರಲ್ಲಿ ತಪ್ಪಿಲ್ಲ. ಆದರೆ ಬಾಯಿಯಲ್ಲಿ ಹುಣ್ಣಾಗಿದ್ದರೆ ಅಂತಹ ಸಮಯದಲ್ಲಿ ಆ ಕ್ರಿಯೆಗಳಲ್ಲಿ ಪಾಲ್ಗೊಂಡರೆ ಅದರ ಮೂಲಕ ಖಂಡಿತ ಕಾಯಿಲೆ ಒಬ್ಬರಿಂದೊಬ್ಬರಿಗೆ ಬರುತ್ತದೆ.

ನಿದ್ದೆಯಲ್ಲಿ ಮೂತ್ರ!

ನನಗೆ ಈಗ 19 ವರ್ಷ. ನಾನು ಸರಕಾರಿ ಕಲಾ ಕಾಲೇಜಿನಲ್ಲಿ ಪ್ರಥಮ ಬಿ.ಎ. ವ್ಯಾಸಂಗ ಮಾಡುತ್ತಿದ್ದೇನೆ. ನಾನು ರಾತ್ರಿಯ ವೇಳೆಯಲ್ಲಿ ಮೂತ್ರ ವಿಸರ್ಜನೆ ಮಾಡುತ್ತೇನೆ. ಮಾಡುವಾಗ ನಾನು ನಿದ್ದೆಯಲ್ಲಿರುವೆನು, ಇದು ನನಗೆ ತಿಳಿಯುವುದಿಲ್ಲ. ನನ್ನ ಸಮಸ್ಯೆಗೆ ದಯವಿಟ್ಟು ಉತ್ತರ ಕೊಡಿ.

-ರಾಜ, ಹಾಸನ.

ಸಲಹೆ

ನಿಮಗೆ ಚಿಕ್ಕವರಿದ್ದಾಗಿನಿಂದಲೂ ಹಾಸಿಗೆಯಲ್ಲಿ ಮೂತ್ರ ಮಾಡಿಕೊಳ್ಳುವ ಅಭ್ಯಾಸವಿದೆಯೇ ಅಥವಾ ಇತ್ತೀಚೆಗೆ ಆರಂಭವಾಗಿದೆಯೋ ಎಂಬುದನ್ನು ನೀವು ತಿಳಿಸಿಲ್ಲ. ಹಗಲೆಲ್ಲ ಎಷ್ಟೇ ನೀರು ಕುಡಿದರೂ ರಾತ್ರಿ ಹೆಚ್ಚು ನೀರು ಕುಡಿಯಬೇಡಿ. ರಾತ್ರಿ 7 ಗಂಟೆಗೇ ಊಟ ಮಾಡಿ. ಮಲಗುವ ಮುಂಚೆ ನೀರು ಕುಡಿಯಬೇಡಿ. ಮಧ್ಯರಾತ್ರಿಯಲ್ಲಿ ಒಂದು ಬಾರಿ ಎಚ್ಚರಿಸಲು ಮನೆಯವರಿಗೆ ತಿಳಿಸಿ. ಪ್ರತಿದಿನ ಹಾಗೆ ಎಚ್ಚರಗೊಳ್ಳುವುದರಿಂದ ಸ್ವಲ್ಪ ದಿನಗಳಾದ ನಂತರ ನಿಮಗೇ ಎಚ್ಚರವಾಗುತ್ತದೆ. ಈ ಎಲ್ಲ ಕ್ರಮಗಳನ್ನು ಅನುಸರಿಸಿದರೂ ಹಾಸಿಗೆಯಲ್ಲಿ ಮೂತ್ರ ಮಾಡುವ ಅಭ್ಯಾಸ ನಿಲ್ಲದಿದ್ದಲ್ಲಿ ಮನಃಶಾಸ್ತ್ರಜ್ಞರನ್ನು ಸಂಪರ್ಕಿಸಿ ಸಲಹೆ ಮತ್ತು ಚಿಕಿತ್ಸೆ ಪಡೆಯಿರಿ.

ನಿರಾಕರಿಸುವ ಗಂಡುಗಳು

ನನ್ನ ವಯಸ್ಸು 22. ನನ್ನ ಎತ್ತರ 4 ಅಡಿ 7 ಸೆಂ.ಮಿ. ತೂಕ 36 ಕೆ.ಜಿ. ನನಗೆ ಈ ವರ್ಷದಲ್ಲಿ ಮದುವೆ ಇದೆ. ನನ್ನನ್ನು ನೋಡಲು ಹಲವಾರು ಗಂಡಿನ ಕಡೆಯವರು ಬಂದಿದ್ದರು. ಆದರೆ ಅವರೆಲ್ಲರೂ ಹುಡುಗಿ ಗಿಡ್ಡವಾಗಿದ್ದಾಳೆಂದು ನಿರಾಕರಿಸಿದ್ದಾರೆ. ಆದ್ದರಿಂದ ನಾನು ಮಾನಸಿಕವಾಗಿ ತುಂಬಾ ನೊಂದಿದ್ದೇನೆ. 6 ತಿಂಗಳ ಒಳಗೆ ಸ್ವಲ್ಪ ದಪ್ಪ ಹಾಗೂ ಎತ್ತರವಾಗಲು, ನಾನೇನು ಮಾಡಬೇಕೆಂದು ತಾವು ದಯಮಾಡಿ ತಿಳಿಸಬೇಕಾಗಿ ವಿನಂತಿ ಮಾಡುತ್ತೇನೆ.

ಇತಿ ನಿಮ್ಮ ಮಗಳಿಗೆ ಸಮಾನಳಾದ.

-ದಯಾವತಿ ಶೆಟ್ಟಿ, ಊರುಬೇಡ.

ವಯಸ್ಕರ

ಸಂದೇಹ ಸಲಹೆ



ಸಲಹೆ

ಎತ್ತರ, ರೂಪ, ಬಣ್ಣ ಎಲ್ಲವೂ ಅನುವಂಶೀಯವಾಗಿ ಬರುವಂತಹುದು. ಆರು ತಿಂಗಳಿಗೆ ಪ್ರಯತ್ನಪಟ್ಟರೆ ನೀವು ಸ್ವಲ್ಪ ದಪ್ಪಗಾಗಬಹುದೇ ಹೊರತು ಎತ್ತರವಂತೂ ಬೆಳೆಯಲು ಸಾಧ್ಯವಿಲ್ಲ. ಹಾಲು, ಬಾಳೆಹಣ್ಣು, ಸಿಹಿ ಪದಾರ್ಥಗಳನ್ನು ಹೆಚ್ಚು ಸೇವಿಸುವುದರಿಂದ ಸ್ವಲ್ಪ ದಪ್ಪಗಾಗಬಹುದು. ಇನ್ನೊಂದು ವಿಷಯ ನಿಮಗೆ ಗೊತ್ತೆ? ನಿಮ್ಮೊಬ್ಬರದೇ ಅಲ್ಲ ಮನುಷ್ಯರ ಸರಾಸರಿ ಎತ್ತರವೇ ಈಗ ಮುಂಚೆಗಿಂತಲೂ ಕಡಿಮೆಯಾಗುತ್ತದೆ ಎಂದು ವೈಜ್ಞಾನಿಕ ವರದಿಗಳಿಂದ ತಿಳಿದು ಬಂದಿದೆ. ಗಂಡುಗಳು ನಿಮ್ಮನ್ನು ನಿರಾಕರಿಸುತ್ತಾರೆಂದು ಚಿಂತಿಸಬೇಡಿ. ನಿಮ್ಮನ್ನು ಒಪ್ಪಿ ಮದುವೆಯಾಗುವ ಗಂಡು ಬಂದೇ ಬರುತ್ತಾನೆ.

ಒರಟು ತುಟಿ

ನಾನೊಬ್ಬ ಯುವಕ. ನನ್ನ ತುಟಿ ತುಂಬಾ ಒರಟಾಗಿದೆ. ಮುತ್ತು ಕೊಟ್ಟಾಗ ಅಥವಾ ಬೆರಳುಗಳಿಂದ ಸವರಿದಾಗ ಸ್ಪರ್ಶ ಅನುಭವಕ್ಕೆ ಬರುವುದೇ ಇಲ್ಲ ಇದಕ್ಕೆ ಏನು ಮಾಡಬೇಕು? ಇದು ಯಾವುದಾದರೂ ರೋಗದ ಲಕ್ಷಣವೆ?

-ಹೆಸರುಬೇಡ, ಮೈಸೂರು.

ಸಲಹೆ

ನಿಮ್ಮ ತುಟಿಗಳಿಗೆ ದಿನಕ್ಕೆರಡು ಬಾರಿ ತುಪ್ಪ ಇಲ್ಲವೇ ಗ್ಲಿಸರಿನ್ ಸವರಿಕೊಳ್ಳಿ, ಒಂದು ತಿಂಗಳು ತಪ್ಪದೇ ಈ ಸುಲಭ ಚಿಕಿತ್ಸೆ ಅನುಸರಿಸಿ. ಇದರಿಂದ ಒರಟುತನ ನಿವಾರಣೆಯಾಗಿ ತುಟಿಗಳಿಗೆ ಮೃದುತ್ವ ಉಂಟಾಗುತ್ತದೆ. ಸಿಗರೇಟು ಸೇವನೆ, ಕಾಫಿ, ಟೀ ಸೇವನೆ ನಿಲ್ಲಿಸಿ ಬಿಡಿ.

ದೀರ್ಘ ಸಮಾಗಮ

ನಾನು 23 ವರ್ಷದ ವಿವಾಹಿತ ಯುವಕ. 6 ವರ್ಷಗಳಿಂದ ಹಸ್ತಮೈಥುನ ಅಭ್ಯಾಸವಿದೆ. 5 ಬಾರಿ ವೇಶ್ಯೆಯ ಸಂಗ ಮಾಡಿದ್ದೇನೆ. ಹೆಂಡತಿಯೊಂದಿಗೆ ಕೂಡುವಾಗ ಕೇವಲ 2 ಸೆಕೆಂಡಿಗೆ ವೀರ್ಯ ಸ್ಖಲನವಾಗಿ ತುಂಬಾ ನಿರಾಶೆಯಾಗುತ್ತದೆ. ನನಗೆ ಕನಿಷ್ಟ 2 ಗಂಟೆಯಾದರೂ ಸಂಭೋಗಿಸುವ ಆಸೆ. ಆದ್ದರಿಂದ ಬೇಗನೆ Out ಆಗದಂತೆ ಮಾಡಲು

ಯಾವುದಾದರೂ ಮಾತ್ರೆ ಅಥವಾ ಕ್ರೀಂ ಇದೆಯೇ? ಕ್ರೀಂ ಉಪಯೋಗದಿಂದ ಏನಾದರೂ Side Effect ಆಗುತ್ತದೆಯೇ?

-ಹೆಸರು ಬೇಡ, ಗುಲಬರ್ಗಾ.

ಸಲಹೆ

ಶೀಘ್ರ ವೀರ್ಯಸ್ಖಲನಕ್ಕೆ ನಿಮ್ಮಲ್ಲಿನ ಆತಂಕ, ಉದ್ವೇಗ ಕಾರಣವಾಗಿರಬಹುದು. ವೇಶ್ಯೆಯರ ಸಂಗದಿಂದ ದೂರವಿರಿ. ಸಂಭೋಗಕ್ಕೆ ಮುನ್ನ ಪೂರ್ವಸಿದ್ಧತೆಯಲ್ಲಿ ಹೆಚ್ಚು ಸಮಯ ವಿನಿಯೋಗಿಸಿ. ವೀರ್ಯ ಸ್ಖಲನವನ್ನು ಮುಂದೂಡಲು ನೆರವಾಗುವ ಕೆಲವು ವಿಧಾನಗಳ ಬಗ್ಗೆ ತಿಳಿದುಕೊಳ್ಳಬೇಕೆಂದಿದ್ದರೆ ಡಾ. ಸಿ.ಆರ್. ಚಂದ್ರಶೇಖರ್ ಅವರು ಬರೆದ 'ದಾಂಪತ್ಯ ಸಮಸ್ಯೆಗಳು' ಪುಸ್ತಕ ಓದಿ. ಸಂಭೋಗದ ಅವಧಿ ಕೇವಲ ನಿಮಿಷಗಳಲ್ಲಿ ಲೆಕ್ಕ ಹಾಕುವಂತಹದು. ನೀವು ಭಾವಿಸಿದಂತೆ ಗಂಟೆಗಟ್ಟಲೇ ಮಾಡಲು ಸಾಧ್ಯವಿಲ್ಲ. ಕೆಲವು ಕ್ರೀಂಗಳು ದೊರೆಯುತ್ತವೆ. ಅದನ್ನು ನಿಮ್ಮ ಕುಟುಂಬ ವೈದ್ಯರ ಸಲಹೆಯ ಮೇರೆಗೆ ಉಪಯೋಗಿಸಿ. ಆದರಿಂದ ಯಾವುದೇ side effects ಇರುವುದಿಲ್ಲ.

ತಡೆದುಕೊಳ್ಳುವುದು ಹೇಗೆ?




ನಾನು ಬಿ.ಕಾಂ. ಪ್ರಥಮ ವರ್ಗದ ವಿದ್ಯಾರ್ಥಿ. ಈಗ 3 ವರ್ಷಗಳಿಂದ ಹಸ್ತಮೈಥುನ ಮಾಡಿಕೊಳ್ಳುತ್ತಿದ್ದೇನೆ. ವೈದ್ಯರಲ್ಲಿ ತೋರಿಸಲು ಹಣಕಾಸಿನ ತೊಂದರೆಯಿದೆ. ಮೇಲಾಗಿ ನಾನೊಬ್ಬ ಹಳ್ಳಿಯ ವಿದ್ಯಾರ್ಥಿ. ಈ ಚಟದಿಂದಾಗಿ ನನಗೆ ವಿದ್ಯಾಭ್ಯಾಸ ಮಾಡಲು ತೊಂದರೆಯಾಗಿದೆ. ಮಾಸ್ಟರ್ ಡಿಗ್ರಿ ಪಡೆಯುವುದು ನನ್ನ ಗುರಿಯಾದ್ದರಿಂದ ಈಗ ಮದುವೆಯಾಗುವುದೂ ಸಾಧ್ಯವಿಲ್ಲ. ನನ್ನ ವಿದ್ಯಾಭ್ಯಾಸ ಮುಗಿಯುವವರೆಗೆ ತಡೆದುಕೊಳ್ಳುವ ಶಕ್ತಿಯನ್ನು ವೈಜ್ಞಾನಿಕ ಮಾತ್ರೆಗಳನ್ನಾಗಲಿ ತಿಳಿಸಿ.

- ಮನೋಜ, ಊರುಬೇಡ.

ಸಲಹೆ

ಹಸ್ತಮೈಥುನ ಖಂಡಿತ ಕೆಟ್ಟ ಚಟವಲ್ಲ. ಆ ಭಾವನೆಯನ್ನು ನಿಮ್ಮ ಮನಸ್ಸಿನಿಂದ ತೊಡೆದು ಹಾಕಿ. ನಿಮ್ಮ ವಯಸ್ಸಿನ ಎಲ್ಲ ಯುವಕರಲ್ಲೂ ಕಂಡು ಬರುವ ಸಹಜ ಸ್ವಾಭಾವಿಕ ಕ್ರಿಯೆ. ಅದಕ್ಕಾಗಿ ನೀವು ವ್ಯಥೆಪಟ್ಟು ವೈದ್ಯರನ್ನು ಎಡತಾಕುವ ಅವಶ್ಯಕತೆಯಿಲ್ಲ. ನೀವು ಅದರ ಬಗ್ಗೆ ಹೆಚ್ಚು ಯೋಚಿಸದೇ ವಿದ್ಯಾಭ್ಯಾಸದ ಕಡೆಗೆ ಗಮನಕೊಡಿ. ಅದನ್ನು ತಡೆಯಲು ಯಾವುದೇ ಮಾತ್ರೆಯಿಲ್ಲ. ಅಲ್ಲದೇ ತಡೆಯುವ ಅವಶ್ಯಕತೆಯೂ ಇಲ್ಲ. ಮನಸ್ಸಿನ ನೆಮ್ಮದಿಗೆ ವಿದ್ಯಾಭ್ಯಾಸದೊಂದಿಗೆ ಸಾಹಿತ್ಯ, ಸಂಗೀತ ಅಥವಾ ಯೋಗ ಹೀಗೆ ಯಾವುದಾದರೊಂದು ಚಟುವಟಿಕೆಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ.




ನಾನು 19 ವರ್ಷದ, ಬಿ.ಎ. ಪ್ರಥಮ ವರ್ಷದ ವಿದ್ಯಾರ್ಥಿ. ಕೆಟ್ಟ ಗೆಳೆಯರ ಸಹವಾಸದಿಂದ ಕಳೆದ 4 ವರ್ಷಗಳಿಂದ ಹಸ್ತಮೈಥುನ ಮಾಡಿಕೊಳ್ಳುತ್ತಾ ಬಂದಿದ್ದೇನೆ. ಇದರಿಂದ ಧಾತು ಹೊರಹೋಗಿ ಎಲ್ಲಿ ನನ್ನ ಶಕ್ತಿ ಕುಂದುವುದೆಂಬ ಅಂಜಿಕೆಯಿಂದ ಧಾತುವನ್ನು ಮರಳಿ ಕುಡಿಯುವುದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ. ಇದು ಒಳ್ಳೆಯದೊ? ಕೆಟ್ಟದ್ದೋ? ನಿಷ್ಠಾವಂತ ಪಿ.ಎಸ್.ಐ. ಆಗುವುದು ನನ್ನ ಜೀವನದ ಗುರಿ. ಆದ್ದರಿಂಗ ದಪ್ಪಗಾಗುವ ಇಂಜೆಕ್ಷನ್ ಅಥವಾ ಔಷಧಿ ತಿಳಿಸಿ.

- ಮಲ್ಲೇಶ್, ಊರು ಬೇಡ.

ಸಲಹೆ

ಹಸ್ತಮೈಥುನದಿಂದ ಶಕ್ತಿ ಕುಂದುವುದೆಂದು ನಿಮಗೆ ಯಾರು ಹೇಳಿದರು? ವೃಥಾ ಚಿಂತಿಸಬೇಡಿ. ಹಸ್ತ ಮೈಥುನ ಸಹಜವಾದುದು. ವೀರ್ಯವನ್ನು ಕುಡಿಯುವ ಅವಶ್ಯಕತೆಯಿಲ್ಲ. ಅದನ್ನು ಬಿಟ್ಟು ಬಿಡಿ. ಚೆನ್ನಾಗಿ ಓದಿ ನಿಮ್ಮ ಗುರಿ ಸಾಧನೆಯತ್ತ ಗಮನ ಹರಿಸಿ. ದಪ್ಪಗಾಗಲು ಪೌಷ್ಟಿಕ ಆಹಾರ ಸೇವಿಸಿ. ಯಥೇಚ್ಛವಾಗಿ ಹಾಲು, ಕಾಳುಗಳು, ಮೊಸರು, ಹಣ್ಣುಗಳನ್ನು ಸೇವಿಸಿ.

ಮುಟ್ಟಿನ ಸಮಸ್ಯೆ



ನಾನು 22 ವರ್ಷದ ಅವಿವಾಹಿತ ಯುವತಿ ನನ್ನ 13 ವರ್ಷದ ವಯಸ್ಸಿನಲ್ಲೇ ಋತುಚಕ್ರ ಪ್ರಾರಂಭವಾಯಿತು. ಆದರೆ ಇದುವರೆಗೆ ನಾನು ನಿಯಮಿತವಾಗಿ ಮುಟ್ಟಾಗುತ್ತಿಲ್ಲ. ಕೆಲವು ಸಲ 3 ತಿಂಗಳಿಗೊಮ್ಮೆ 5 ತಿಂಗಳಿಗೊಮ್ಮೆ ಮುಟ್ಟಾಗುತ್ತದೆ. ಕೆಲವೊಮ್ಮೆ ಮುಟ್ಟಾಗುವಾಗ ವಿಪರೀತ ಹೊಟ್ಟೆನೋವಾಗುತ್ತದೆ. ಮುಟ್ಟಾಗುವಾಗ 5 ದಿನ ಮುಟ್ಟಾಗುತ್ತದೆ. ನಾನು 6 ತಿಂಗಳ ಮುಂಚೆ ಸರಕಾರಿ ವೈದ್ಯರ ಬಳಿ ಹೋಗಿ ತಪಾಸಣೆ ಮಾಡಿಸಿದ್ದೇನೆ. ಅವರು ನನಗೆ M2-Tone ಎಂಬ 2 ಬಾಟಲ್ ಸಿರಪ್ ತೆಗೆದುಕೊಳ್ಳಲು ಹೇಳಿದರು ಅದನ್ನು ಸೇವಿಸಿದರೂ ನನಗೆ ಸರಿಯಾಗಿ ಮುಟ್ಟಾಗಲಿಲ್ಲ. ಪುನಃ ಅದೇ ವೈದ್ಯರ ಬಳಿ ಹೋದೆ. ಅವರು ನನ್ನನ್ನು ಪರೀಕ್ಷಿಸಿ Ovral L ಎಂಬ 3 ಪ್ಯಾಕೆಟ್ ಮಾತ್ರೆಯನ್ನು ದಿನಕ್ಕೆ ಒಂದರಂತೆ ಸೇವಿಸಲು ಹೇಳಿದರು ಆದರೂ ನನಗೆ ಸರಿಯಾಗಿ ಮುಟ್ಟಾಗಲಿಲ್ಲ. ಮತ್ತೆ ನಾನು ವೈದ್ಯರ ಬಳಿ ಹೋಗಲಿಲ್ಲ. ಮನೆಯಲ್ಲಿ ಹಿರಿಯರು ಬೈಯುತ್ತಾರೆ ''ದಿನಾ ಮಾತ್ರೆ ಸೇವಿಸಿದರೆ ಆರೋಗ್ಯಕ್ಕೆ ಒಳ್ಳೆಯದಲ್ಲ ಮಾತ್ರೆ ತೆಗೆದುಕೊಳ್ಳುವುದು ಬೇಡ'' ಅಂತಾರೆ ಆದ್ದರಿಂದ ತಾವು ದಯವಿಟ್ಟು ನನಗೆ ಸರಿಯಾಗಿ ಮುಟ್ಟಾಗದೆ ಇದ್ದರೆ ನನ್ನ ಆರೋಗ್ಯಕ್ಕೆ ತೊಂದರೆಯಿಲ್ಲವೆ? ಆ ತೊಂದರೆಗೆ ಏನು ಮಾಡಬೇಕೆಂದು ತಿಳಿಸಬೇಕಾಗಿ ವಿನಂತಿಸುತ್ತೇನೆ.

- ಸವಿತಾ, ಉರುಬೇಡ.

ಸಲಹೆ

ನೀವು ಒಂದು ಬಾರಿ ಸ್ತ್ರೀರೋಗ ತಜ್ಞರ (ಗೈನಕಾಲಜಿಸ್ಟ್) ಬಳಿ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆದುಕೊಳ್ಳಿ, ನಿಮಗೆ ಹಾರ್ಮೋನಿನ ತೊಂದರೆಯಿದ್ದರೆ ಮೂರು ತಿಂಗಳು ಮಾತ್ರೆಗಳನ್ನು ಕೊಡುತ್ತಾರೆ. ಅದನ್ನು ಸೇವಿಸಿದಲ್ಲಿ ಮುಟ್ಟು ನಿಯಮಿತವಾಗಿ ಆಗುತ್ತದೆ. ಇದರಿಂದ ನಿಮ್ಮ ಆರೋಗ್ಯಕ್ಕೆ ಯಾವುದೇ ರೀತಿಯ ತೊಂದರೆಯಿಲ್ಲ.

ವಿವಾಹಿತಳ ಜತೆಗಿನ ಸಂಬಂಧ



ನಾನು ಇಪ್ಪತ್ತು ವರ್ಷದ ಅವಿವಾಹಿತ ಯುವಕ. ಎಸ್‌ಎಸ್‌ಎಲ್‌ಸಿ ಅನುತ್ತೀರ್ಣನಾಗಿದ್ದೇನೆ. ಈ ಮೊದಲು ಎಸ್.ಸಿ. ಹುಡುಗಿಯ ಜೊತೆ ಅನೈತಿಕ ಸಂಬಂಧ ಹೊಂದಿದ್ದೆನು. ಹಾಗೂ ಅವಳನ್ನು ವಿವಾಹ ಮಾಡಿಕೊಳ್ಳಬೇಕೆಂದು ನಿರ್ಧರಿಸಿ ಅದಕ್ಕೆ ಅವಳು ಸಹ ಅನುಮತಿ ನೀಡಿದ್ದಳು. ಆದರೆ ಅವಳು ತನ್ನ ತಂದೆ ತಾಯಿಯ ಒತ್ತಾಯಕ್ಕೆ ಮಣಿದು ತಮ್ಮ ಜಾತಿಯವನ ಜೊತೆ ವಿವಾಹ ಮಾಡಿಕೊಂಡಳು. ವಿವಾಹವಾಗಿ ಹಲವಾರು ತಿಂಗಳುಗಳಾದರೂ ಸಹ ಅವಳು ನನ್ನನ್ನು ಲೈಂಗಿಕ ಸಂಪರ್ಕಕ್ಕೆ ಕರೆಯುತ್ತಿದ್ದಳು. ಅವಳನ್ನು ಮರೆತು ನನ್ನಿಂದ ಬದುಕುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಒಂದು ವೇಳೆ ಅವಳ ಜೊತೆ ಲೈಂಗಿಕ ಸಂಪರ್ಕ ಹೊಂದಿದರೆ, ಸಮಾಜದ ದೃಷ್ಟಿಯಿಂದ ಕೆಟ್ಟದಾಗಬಹುದೇ? ದಯವಿಟ್ಟು ಇದಕ್ಕೆ ಪರಿಹಾರ ಸೂಚಿಸಿ.

- ಹೆಸರು, ಊರುಬೇಡ.

ಸಲಹೆ

ಈ ಸಂಬಂಧ ಖಂಡಿತ ಸರಿಯಲ್ಲ. ನೀವು ಅವಳನ್ನು ಮರೆತು ದೂರವಾಗಲೇಬೇಕು. ಇದರಿಂದ ಇಬ್ಬರ ಮಾನಸಿಕ ನೆಮ್ಮದಿಯೂ ಕೆಡುವುದಲ್ಲದೆ ನಿಮ್ಮಿಬ್ಬರ ಕುಟುಂಬದ ಮೇಲೂ ಪರಿಣಾಮವಾಗುವುದು. ನೀವು ಆರ್ಥಿಕವಾಗಿ ಸ್ವಾವಲಂಬಿಯಾಗಿದ್ದರೆ ಮದುವೆಯಾಗಿ ಬಿಡಿ. ಇಲ್ಲದಿದ್ದರೆ ಮೊದಲು ಆರ್ಥಿಕ ಸ್ವಾವಲಂಬಿಯಾಗಿ ನಂತರ ಮದುವೆಯಾಗಿ.

ಆಯಿಲಿ ಸ್ಕಿನ್

ಡಾಕ್ಟರ್, ನನ್ನದು ಆಯಿಲಿ ಸ್ಕಿನ್. ನನ್ನ ಮುಖದ ಮೇಲೆ ಮೊಡವೆಗಳಿಂದಾದ ಮತ್ತು ಉಗುರಿನಿಂದಾದ ಕಲೆಗಳು ಇವೆ. ಇವುಗಳನ್ನು ಹೋಗಲಾಡಿಸಲು ಮತ್ತು ನನ್ನ ಮುಖವನ್ನು ಮೃದುವಾಗಿಸಲು ಏನು ಮಾಡಬೇಕು ಮತ್ತು ನನ್ನ ಮೂಗಿನ ಮೇಲೆಲ್ಲಾ ಬಿಳಿಯ ಪಸ್ ಯಾವಾಗಲೂ ಇರುತ್ತದೆ. ಅದನ್ನು ತಡೆಗಟ್ಟುವ ಬಗೆಯನ್ನು ತಿಳಿಸಿ ಮತ್ತು ಮೊಡವೆಗಳಿಂದಾದ ಕೆಲವು ಕರಿಯ ಕಲೆಗಳಿವೆ. ಅವುಗಳನ್ನು ಹೋಗಲಾಡಿಸಲು ಏನು ಮಾಡಬೇಕು ಮತ್ತು ನಾನು ಮುಖ ತೊಳೆಯುವಾಗ ಏನು ಬಳಸಬೇಕು ನೀವೇ ತಿಳಿಸಿ.

- ನಂದಿತಾ, ಮೈಸೂರು.

ಸಲಹೆ

ದಿನಕ್ಕೆ ಮೂರು ನಾಲ್ಕು ಬಾರಿ ಬಿಸಿನೀರಿನಿಂದ ಮುಖ ತೊಳೆಯಿರಿ. ಮುಖ ತೊಳೆಯುವುದಕ್ಕೆ ಕಡಲೆಹಿಟ್ಟು ಉಪಯೋಗಿಸಿ. ಚರ್ಮವನ್ನು ಮೃದುವಾಗಿರಿಸಲು ಆಗಾಗ ಮುಖಕ್ಕೆ ಸೌತೆರಸವನ್ನು ಹಚ್ಚಿಕೊಳ್ಳಿ. ನಿಮ್ಮದು ಎಣ್ಣೆ ಚರ್ಮವಾದುದರಿಂದ ಯಾವುದೇ ಕ್ರೀಂ ಉಪಯೋಗಿಸಬೇಡಿ. ಕಲೆಗಳನ್ನು ಹೋಗಲಾಡಿಸಲು ಈ ಮೊದಲೇ ತಿಳಿಸಿದಂತೆ Paralep ಪುಡಿಯನ್ನು ಮೊಸರಿನೊಡನೆ ಕಲಸಿ ದಿನಕ್ಕೆರಡು ಬಾರಿ ಮುಖಕ್ಕೆ ಲೇಪಿಸಿಕೊಳ್ಳಿ. ಈ ಪುಡಿ ಆಯುರ್ವೇದ ಔಷಧಿ ಅಂಗಡಿಯಲ್ಲಿ ಮಾತ್ರ ದೊರೆಯುತ್ತದೆ.

ಉದುರುವ ತಲೆಗೂದಲು

ನಾನು 9ನೇ ತರಗತಿಯಲ್ಲಿ ಓದುತ್ತಿರುವಾಗಲೇ ನನ್ನ ತಲೆಗೂದಲು ಉದುರಲು ಪ್ರಾರಂಭವಾಗಿದೆ. ಇದಕ್ಕೆ ನೀವು ಯಾವುದಾದರೂ ಚಿಕಿತ್ಸೆ ಅಥವಾ ಅದಕ್ಕೆ ಬೇಕಾದ ಔಷಧವನ್ನು ದಯವಿಟ್ಟು ತಿಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

-ಅಹಮ್ಮದ್ ಬಶೀರ್, ಊರುಬೇಡ.

ಸಲಹೆ

ಕೂದಲು ಉದುರುವುದಕ್ಕೆ ಪೌಷ್ಟಿಕಾಂಶದ ಕೊರತೆ ಇರಬಹುದು. ಆಹಾರದಲ್ಲಿ ಹೆಚ್ಚು ಸೊಪ್ಪು, ಮೊಳಕೆ ಕಾಳುಗಳು, ಹಾಲು, ಮೊಟ್ಟೆ ಹೆಚ್ಚು ಸೇವಿಸಿ. ತಲೆಗೂದಲಿಗೆ ನಿಯಮಿತವಾಗಿ ಎಣ್ಣೆ ಹಚ್ಚಿಕೊಳ್ಳಿ, ತಲೆಯಲ್ಲಿ ಹೊಟ್ಟಾಗಿದ್ದರೆ ಅದಕ್ಕೆ ಚಿಕಿತ್ಸೆ ತೆಗೆದುಕೊಳ್ಳಿ. ವಾರಕ್ಕೆರಡು ಬಾರಿ ತಲೆಗೆ ಸ್ನಾನ ಮಾಡಿ. ತಲೆಯ ಸ್ನಾನಕ್ಕೆ ಹೆಚ್ಚು ಬಿಸಿ ಇರುವ ನೀರನ್ನು ಉಪಯೋಗಿಸದೇ ಬೆಚ್ಚಗಿರುವ ನೀರನ್ನು ಉಪಯೋಗಿಸಿ.

ಗಂಟಲ ಮೇಲೆ ಕೂದಲು

ನಾನು 19 ವರ್ಷದ ಯುವತಿ ಕಳೆದ 3 ವರ್ಷಗಳಿಂದ ನನ್ನ ಮುಖದ ಕೆಳಗಡೆ ಅಂದರೆ ಗಂಟಲಿನ ಮೇಲೆ ಕೂದಲು ಬೆಳೆಯುತ್ತಿದೆ ನಾನು ಅವುಗಳನ್ನು ಪ್ಲಿಕ್ಕರ್‌ನಿಂದ ಮತ್ತು ದಾರದಿಂದ ತೆಗೆಯುತ್ತೇನೆ. ಆದರೂ ಸಣ್ಣ ಸಣ್ಣ ಕೂದಲು ಮತ್ತೆ ಮತ್ತೆ ಬೆಳೆಯುತ್ತಿದೆ. ಯಾರಿಗೂ ಮುಖ ತೋರಿಸಲು ನಾಚಿಕೆಯಾಗುತ್ತದೆ. ಯಾರಾದರೂ ನೋಡಿದರೂ ಏನಾದರೂ ಕೇಳುತ್ತಾರೆ. ಲೇಡಿ ಡಾಕ್ಟರ್‌ಗೆ ತೋರಿಸಿದ್ದೇನೆ ಅವರು ಮಾತ್ರೆ ಬರೆದು ಕೊಟ್ಟರು ಮತ್ತು ಸ್ಕ್ಯಾನಿಂಗ್ ಮಾಡಿದರು. ಅದರಲ್ಲೂ ಏನು ತೊಂದರೆ ಇಲ್ಲ ಅಂತ ಹೇಳಿದರೂ. ಮಾತ್ರೆ ತೆಗೆದುಕೊಂಡಿದ್ದೇನೆ. ಕಡಿಮೆಯಾಗಲಿಲ್ಲ.

ಈ ತೊಂದರೆ ನಿವಾರಣೆ ಮಾಡುವ ಮಾರ್ಗವನ್ನು ಸೂಚಿಸಿರಿ. ನಾನು ಎಲೆಕ್ಟ್ರಾಲಿಸ್ ಮಾಡಿಸಬೇಕು ಎಂದು ಹೇಳುವರು. ಆದರೆ ಅದೂ ಬಹಳ ನೋವು ಆಗುತ್ತದೆ ಮತ್ತು ಅದರಿಂದ ಪೂರ್ಣ ಕಡಿಮೆ ಆಗುವುದಿಲ್ಲ ಎಂದೂ ಹೇಳಿದರು. Please ಸಲಹೆ ನೀಡಿ.

-ಹೆಸರು, ಊರ ಬೇಡ.

ಸಲಹೆ

ಕೆಲವರಲ್ಲಿ ಹಾರ್ಮೋನಿನ ಹೆಚ್ಚು ಸ್ರವಿಸುವಿಕೆಯಿಂದ ಹಾಗೆ ಕೂದಲು ಬೆಳೆಯುತ್ತದೆ. ಅದನ್ನು ನೀವು ಪ್ಲಿಕ್ಕರ್‌ನಿಂದ ಕೀಳಲು ಪ್ರಾರಂಭಿಸಬಾರದಿತ್ತು. ಹಾಗೆ ಕಿತ್ತಷ್ಟೂ ಕೂದಲ ಬೆಳವಣಿಗೆ ಹೆಚ್ಚುತ್ತದೆ. ಎಲೆಕ್ಟ್ರಾಲಿಸಿಸ್ ಶಾಶ್ವತ ಚಿಕಿತ್ಸೆಯೇನೋ ನಿಜ. ಆದರೆ ಅದು ದುಬರಿಯಾಗಿರುವುದಲ್ಲದೇ ಎರಡು ಮೂರು ಬಾರಿ ಮಾಡಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಬದಲು ನೀವು ಮನೆಯಲ್ಲೇ ಬನ್ನಿಮರದ ಕಾಯಿ ಹಾಗೂ ಅರಿಶಿನ ಬೇರನ್ನು ನೀರಲ್ಲಿ ತೇಯ್ದು ದಿನಕ್ಕೆರಡು ಬಾರಿ ಕೂದಲಿರುವ ಜಾಗಕ್ಕೆ ಲೇಪಿಸಿ ಉಜ್ಜಿಕೊಳ್ಳಿ. ಈ ಚಿಕಿತ್ಸೆ ಬಹಳ ದೀರ್ಘ ಕಾಲ ತೆಗೆದುಕೊಳ್ಳುತ್ತದೆ. ತಾಳ್ಮೆ ಬಹಳ ಮುಖ್ಯ.

ಆಕೆಯನ್ನು ಸಂಪರ್ಕಿಸಲಿ ಹೇಗೆ?

ನನಗೆ 22 ವಯಸ್ಸು. ನಾನು ಒಂದು ಹುಡುಗಿಯನ್ನು ಮನಸ್ಸಿನಲ್ಲೇ ಪ್ರೀತಿಸುತ್ತಿದ್ದೇನೆ. ನಾನು ಮೈಸೂರಿನಲ್ಲಿದ್ದೇನೆ. ಆ ಹುಡುಗಿ ಬೆಂಗಳೂರಿನಲ್ಲಿದ್ದಾಳೆ. ನಮ್ಮ ಅಜ್ಜ ಮನೆಗೆ ಬೆಂಗಳೂರಿಗೆ ಹೋಗುತ್ತಿರುತ್ತೇನೆ. ನಾಲ್ಕು ಐದು ವರ್ಷಗಳಿಂದ ಗೊತ್ತು. ಒಂದು ಬಾರಿ ಕೂಡ ಮಾತನಾಡಿಸಿಲ್ಲ. ಅಕಸ್ಮಾತ್ ಗಲಾಟೆ ಯಾದರೆ ಏನು ಗತಿ? ಮೊದಲಾಗಿ ನನಗೆ ಮಾತನಾಡಿಸುವಷ್ಟು ಧೈರ್ಯ ಖಂಡಿತಾ ಇಲ್ಲ. ಅವಳು ಮನೆ ಬಿಟ್ಟು ಎಲ್ಲೂ ಹೋಗುವುದಿಲ್ಲ. ಯಾವಾಗಲೂ ಮನೆಯಲ್ಲೇ ಇರುತ್ತಾಳೆ. ಅವರು ಶ್ರೀಮಂತರೂ ಕೂಡ. ಅವರ ಮನೆಯಲ್ಲಿ ತುಂಬ ಜನರಿರುತ್ತಾರೆ. ಆಗ ನನಗೆ ಅವಳನ್ನು ನೋಡಲು ಭಯ. ಅವಳ ಅಂತರಂಗವನ್ನು ಬಲ್ಲವರ್ಯಾರು? ಅವಳಿಗೆ ನನ್ನ ಮೇಲೆ ಇಷ್ಟವಿದೆಯೋ ಇಲ್ಲವೋ? ನನಗೆ ಮದುವೆ ಅಂದರೆ ಖಂಡಿತಾ ಇಷ್ಟವಿಲ್ಲ ಆದರೆ ಒಂದೊಂದು ಬಾರಿ ಮದುವೆ ಆದರೆ ಅವಳನ್ನೇ love ಮಾಡಿ ಆಗಬೇಕು ಎಂದೆನಿಸುತ್ತದೆ. ಆದರೆ ಈಗಲ್ಲ, ಇನ್ನು ಕಾಲ ಬೇಕು.

ಅವರ ಮನೆಗೆ ಫೋನ್ ಮಾಡಲೇ, ಮಾಡಿದರೆ ಅದರಿಂದ ಅವಳಿಗೆ ತೊಂದರೆಯಾಗುವುದೆಂಬ ಭಯ. ಯಾವ ರೀತಿ ಅವಳನ್ನು contact ಮಾಡಲಿ ಅವಳಿಗೆ ನನ್ನ ಪರಿಚಯವಿಲ್ಲ. ಆದರೆ ನನ್ನನ್ನು ನೋಡಿದ್ದಾಳೆ. ಈ ಒಂದು ವಿಚಾರ ನನ್ನ ಸ್ನೇಹಿತನೊಬ್ಬನಿಗೆ ಮಾತ್ರ ತಿಳಿದಿದೆ. ಅದು ಬಿಟ್ಟರೆ ನಿಮ್ಮ ಪತ್ರಿಕೆ. ಜೀವನದಲ್ಲಿ ತುಂಬಾ ಬೇಸರವಾಗಿದೆ.


-ಕೃಷ್ಣಪ್ರಸಾದ್, ಮೈಸೂರು.

ಸಲಹೆ

ನಿಮ್ಮ ವಿಚಾರಗಳಲ್ಲಿಯೇ ಬಹಳಷ್ಟು ದ್ವಂದ್ವವಿದೆ. ಮದುವೆ ಇಷ್ಟವಿಲ್ಲ ಎಂದಿರುವಿರಿ. ಅವಳನ್ನೇ love ಮಾಡಿ ಮದುವೆಯಾಗಬೇಕು ಎಂದೂ ತಿಳಿಸಿರುವಿರಿ. ನೋಡಿದ ತಕ್ಷಣ ಪ್ರೀತಿ ಹುಟ್ಟುವುದು ಕೇವಲ ಸಿನಿಮಾದಲ್ಲಿ ಮಾತ್ರ ಸಾಧ್ಯ! ನೀವು ಒಂದು ಬಾರಿಯೂ ಮಾತಾಡಿಸದೇ ಅವಳಿಗೆ ಫೋನ್ ಮಾಡುವುದು ಖಂಡಿತ ಸರಿಯಲ್ಲ. ನೀವೇ ಒಂದರ್ಧ ಗಂಟೆ ಒಬ್ಬರೇ ಕುಳಿತು ಈ ವಿಚಾರದ ಬಗ್ಗೆ ಯೋಚಿಸಿ. ಪರಿಹಾರ ಖಂಡಿತ ಹೊಳೆಯುವುದು. ಅವಳ ಬಗ್ಗೆ ಯೋಚಿಸುವುದನ್ನು ಬಿಟ್ಟು ಬಿಡಿ. ಈ ವಯಸ್ಸಿನಲ್ಲಿ ಹೆಣ್ಣು, ಗಂಡಿನ ಮಧ್ಯೆ ಆಕರ್ಷಣೆ ಹುಟ್ಟುವುದು ಸಹಜ. ನೀವು ಮದುವೆಯಾಗಬೇಕೆಂದು ಮನಸ್ಸು ಮಾಡಿದಾಗ ಪ್ರೀತಿ, ಪ್ರೇಮದ ಬಗ್ಗೆ ಯೋಚಿಸಿ.

ಹೆಂಡತಿಯೇ ಸಮಸ್ಯೆ!

ವಯಸ್ಸು 38 ಬಿ.ಎ. ಓದಿರುತ್ತೇನೆ. ನನಗೆ ದೂರದ ಸಂಬಂಧಿಕರಲ್ಲಿ 87ರಲ್ಲಿ ಮದುವೆಯಾಯಿತು. ಮತ್ತು 1 ಗಂಡು (1 1/2 ವರ್ಷ) 1 ಹೆಣ್ಣು (7



ವರ್ಷ) ಎರಡು ಮಕ್ಕಳಿದ್ದಾರೆ. ಇತ್ತೀಚೆಗೆ ನನ್ನ ಹೆಂಡತಿಯ ತಂಗಿ ಆತ್ಮಹತ್ಯೆ ಮಾಡಿಕೊಂಡಳು. ಅಲ್ಲಿಂದ ನಮ್ಮ ದಾಂಪತ್ಯದಲ್ಲಿ ಬಿರುಕು ಬಿಡತೊಡಗಿತು. ಹೇಗೆಂದರೆ ಬೀಗರು ನನಗೆ ಮನೆ ಅಳಿಯನಾಗಿರಲು ಒತ್ತಾಯಿಸ ತೊಡಗಿದರು. ಆದರೆ ನಾನು ಒಪ್ಪಲಿಲ್ಲ. ಈಗ ನನ್ನ ಹೆಂಡತಿಯು ತವರು ಮನೆಯಲ್ಲಿಯೇ ಇದ್ದಾಳೆ. ಮಕ್ಕಳು ಮಾತ್ರ ನನ್ನಲ್ಲಿವೆ. ಜನವರಿ 98ರಲ್ಲಿ ನಮ್ಮ ಹಿರಿಯರನ್ನು ನನ್ನ ಹೆಂಡತಿಯ ಮನೆಗೆ ಕಳಿಸಿದೆ. ನನ್ನ ಹೆಂಡತಿಯು ಹಿರಿಯರ ಸಮ್ಮುಖದಲ್ಲಿ ನನ್ನ ಗಂಡ ಕರೆಯಲು ಬಂದರೆ ಮಾತ್ರ ನಾನು ಬರುತ್ತೇನೆಂದು ತಿಳಿಸಿದ್ದಳು. ಆದರಂತೆ ನಾನು 8.7.98ರಂದು ಗಂಗಾವತಿಗೆ ಹೋದೆ. ನಮ್ಮ ಮಾವನವರು ಒಳಗೆ ಕರೆದು ಕೂಡ್ರಿಸಿದರು. ಅಷ್ಟರಲ್ಲಿ ಹೆಂಡತಿಯು ಚಹಾ ತಂದುಕೊಟ್ಟಳು. ನಿನಗೆ 1 ಎಕರೆ ಗದ್ದೆಯನ್ನು ಕೊಡುತ್ತೇನೆ. ಇಲ್ಲಿಯೇ ಗಂಡ -ಹೆಂಡತಿ ದುಡಿದು ತಿನ್ನಿರಿ ಎಂದು ಪ್ರಾರಂಭಿಸಿದರು. ನಾನು ನನಗೆ 4 ಎಕರೆ ಜಮೀನಿದೆ. ಮೇಲಾಗಿ ನನ್ನ ವಯಸ್ಸಾದ ತಾಯಿ, ದೊಡ್ಡಮ್ಮ ಅಕ್ಕ ಈ ಹೆಣ್ಣುಮಕ್ಕಳನ್ನು ಬಿಟ್ಟು ಬಂದರೆ ನಮ್ಮ ಮನೆ, ಹೊಲವನ್ನು ಯಾರು ನೋಡಿಕೊಳ್ಳುವವರು. ನನಗೆ ಇಲ್ಲಿರುವುದು ಇಷ್ಟವಿಲ್ಲ ಎಂದಾಗ ಅವಳ ತಮ್ಮ ನಿಮ್ಮೌನ ತು.... ಅಲ್ಲಿ ಏನ ದುಡೀತಿ ಇಲ್ಲಿ ಬಂದು ಇರದಿದ್ದರೆ ನಮ್ಮಕ್ಕನ ಕಳಿಸುವುದಿಲ್ಲ ನೀನು ಇನ್ನೊಮ್ಮೆ ಕರಿಯೋಕೆ ಬಂದರೆ 4 ಲಕ್ಷ ಹೋದರೂ ಚಿಂತೆ ಇಲ್ಲ ಮರ್ಡರ್ ಮಾಡಿಸಿ ಹೂಳೆ ಕಾಣಸ್ತೀನಿ. ನೀನು ಬೇಕಾದರೆ ನಿನ್ನ ಮಕ್ಕಳ ಜೊಗೆ ನಿಮ್ಮೂರಾಗೆ ಇರು ಎಂದು ಇನ್ನೂ ಅನೇಕ ಅವಾಚ್ಯ ಶಬ್ದಗಳಿಂದ ಬೈದು 4 ಜನ ಸೇರಿ ನನ್ನನ್ನು ನಾಯಿಗೆ ಬಡಿದಂತೆ ಬಡಿದು ರಾತ್ರಿ 11 ಗಂಟೆಗೆ ಮನೆಯಿಂದ ಹೊರಗೆ ಹಾಕಿದರು.

ನಾನು ಅಳುತ್ತ ಹೊರಗೆ ಬರುವಾಗ ನನ್ನ ಹೆಂಡತಿ ಮತ್ತು ಅವಳ ದೊಡ್ಡಮ್ಮನ ಮಗ ಮುಗುಳ್ನಗುತ್ತ ಬಾಗಿಲಲ್ಲಿ ನಿಂತಿರುವುದನ್ನು ಕಂಡು ಇವಳು ನನ್ನನ್ನೇಕೆ ಬರ ಹೇಳಿದಳೆಂದು ಅರ್ಥವಾಯಿತು. ಹಿಂದೆ ಅವಳೇ ಹೇಳಿದುದು ಸ್ಮರಣೆಗೆ ಬಂತು. ಅದೇನೆಂದರೆ ನನ್ನ ದೊಡ್ಡಮ್ಮನ ಮಗ ಕಚ್ಚೆ ಹರುಕ ಅವನ ಜೊತೆ ನೀವು ಇಲ್ಲಿಗೆ ಬಂದಾಗ ತಿರುಗಾಡಲು ಹೋಗಬೇಡಿರಿ ಎಂದು ಅಪ್ಪಣೆ ಮಾಡಿದ ನನ್ನ ಹೆಂಡಿತಯ ಇನ್ನೊಂದು ಮುಖದ ಪರಿಚಯವಾಯಿತು.

ಇದುವರೆಗೂ ನನ್ನ ಹೆಂಡತಿಯಿಂದ ತನ್ನ ಮಕ್ಕಳ ಯೋಗಕ್ಷೇಮ ವಿಚಾರಿಸುವ ಒಂದೇ ಒಂದು ಪತ್ರವಿಲ್ಲ. ಗಂಡನ ನಿಷ್ಕಲ್ಮಶ ಪ್ರೀತಿಗೆ ಈಗ ಬೆಲೆ ಇಲ್ಲದಾಗಿದೆ. ನಾನು ಮರುಮದುವೆಯಾಗ ಬೇಕೆಂದಿದ್ದೇನೆ. ನನ್ನನ್ನು ಮತ್ತು ನನ್ನ ಮಕ್ಕಳನ್ನು ಪ್ರೀತಿಯಿಂದ ಕಾಣುವ ಹೆಣ್ಣೊಬ್ಬಳು ಮಕ್ಕಳಿಲ್ಲದ ವಿಧವೆಯಾಗಲಿ ನನ್ನನ್ನೊಪ್ಪಿದರೆ ಖಂಡಿತ ಮದುವೆಯಾಗಬೇಕೆಂದಿರುವ. ಇದಕ್ಕೆ ಪರಿಹಾರವನ್ನು ತಿಳಿಸುವಿರೆಂದು ನಂಬಿರುವೆ.

–ಹೆಸರು, ಊರ ಬೇಡ.

ಸಲಹೆ

ನಿಮ್ಮ ಸ್ಥಿತಿ ನಿಜಕ್ಕೂ ಶೋಚನೀಯವಾದುದು. ಗಂಡ, ಹೆಂಡತಿ ನಡುವಿನ ಸಂಬಂಧ ಬಹಳ ಸೂಕ್ಷ್ಮ ಹಾಗೂ ನವಿರಾದುದು. ಒಬ್ಬರನ್ನೊಬ್ಬರು ಅರಿತು ಬಾಳುವುದು ಒಂದು ಕಲೆ. ಮಕ್ಕಳನ್ನು, ನಿಮ್ಮನ್ನು ಬಿಟ್ಟು ನಿಮ್ಮ ಹೆಂಡತಿ ದೂರವಾಗಿರುವುದು ಆಶ್ಚರ್ಯದ ಸಂಗತಿಯೇ ಸರಿ. ನಿಮ್ಮ ಸಮಸ್ಯೆ ಗಂಭೀರ ವಾದುದು. ನೀವು ನಿಮ್ಮ ಮನೆ, ಹೊಲ, ತಾಯಿ, ಅಕ್ಕನನ್ನು ಬಿಟ್ಟು ಅವರ ಮನೆ ಅಳಿಯನಾಗಿ ಹೋಗುವುದು ಸ್ವಾಭಿಮಾನ ಇರುವ ಯಾವುದೇ ವ್ಯಕ್ತಿ ಒಪ್ಪತಕ್ಕಂತಹದಲ್ಲ. ನಿಮ್ಮ ಹೆಂಡತಿಗೆ ಹಾಗೂ ಆಕೆಯ ಮನೆಯವರಿಗೆ ತಾವು ಮಾಡುತ್ತಿರುವುದು ತಪ್ಪು ಎಂದೇಕೆ ಅರಿವಾಗುತ್ತಿಲ್ಲವೋ? ನೀವು ಇನ್ನೊಂದು ಬಾರಿ ಎರಡೂ ಕಡೆಯ ಹಿರಿಯರನ್ನು ಸೇರಿಸಿ ಹೆಂಡತಿಗೆ ಬುದ್ಧಿವಾದ ಹೇಳಿಸಿ ಅವಳು ನಿಮ್ಮೊಡನೆ ಬರಲು ಮನವೊಲಿಸಲು ಯತ್ನಿಸಿ. ತನ್ನ ತಪ್ಪಿನ ಅರಿವಾಗಿ ಆಕೆ ಮತ್ತೆ ನಿಮ್ಮ ಬಳಿ ಬರಬಹುದು. ಆದರೆ ಆಗಲೂ ಆಕೆ ಬರದಿದ್ದರೆ ಒಬ್ಬ ವಕೀಲರನ್ನು ಸಂಪರ್ಕಿಸಿ ಸಲಹೆ ಪಡೆದು ಮರು ಮದುವೆಯಾಗಿ. ಮರು ಮದುವೆಯಾಗುವುದಾದಲ್ಲಿ ನೀವು ತಿಳಿಸಿದಂತೆ ವಿಧವೆಯನ್ನೇ ಆಗಿ.

ಹೊಟ್ಟೆ ನೋವು



ನನಗೆ 23 ವಯಸ್ಸು. ನನಗೆ ಮದುವೆಯಾಗಿಲ್ಲ. ನಾನು ಚಿಕ್ಕ ವಯಸ್ಸಿಗೆ ಋತುಮತಿಯಾದೆ. ಈ ರೀತಿಯಾದಾಗ ನನಗೆ ಬಿಳಿ ಅಂಟು ದ್ರವದ ರೂಪದಲ್ಲಿ ಮುಟ್ಟು ಕಾಣಿಸಿಕೊಂಡಿತು. ನಂತರ ಅದು ಬರಬರುತ್ತಾ ಮುಟ್ಟಾದಾಗ ವಿಪರೀತ ಹೊಟ್ಟೆ ನೋವು ಬರುತ್ತದೆ ಅದು ಮೂರು ದಿನಗಳ ತನಕ ಇರುತ್ತದೆ. ಅಷ್ಟು ನೋವು ತಡೆಯಲಾಗದೆ ಪ್ರತಿ ಮುಟ್ಟಿಗೂ Baralgan ಮಾತ್ರೆಯನ್ನು ಉಪಯೋಗಿಸುತ್ತಿದ್ದೇನೆ. ನನಗೆ 3 ರೀತಿಯ ಮುಟ್ಟಾಗುತ್ತದೆ. ಮೊದಲನೆ ದಿನ ಕಪ್ಪು, ಜಿಡ್ಡು ಮತ್ತೆ ಒಂದು ನೀರಿನ ತರಹ ಮುಟ್ಟಾಗುತ್ತದೆ. ಅದು ಕೆಟ್ಟ ವಾಸನೆಯಿಂದ ಕೂಡಿರುತ್ತದೆ. ಆ ಸಂದರ್ಭದಲ್ಲಿ ಒಣ ವಾಂತಿ ಕೈಕಾಲು ಸುಸ್ತು. ನಂತರ ಎರಡನೆಯ ದಿನ ಅಂಟು ಬಿಳಿ ದ್ರವ ಮತ್ತು ಕೆಂಪು ಸೇರಿ ಆಗುತ್ತದೆ. 5ನೇ ದಿನ ಮಾಮೂಲಿ ಮುಟ್ಟಾಗುತ್ತದೆ. ಎಲ್ಲಾ ಡಾಕ್ಟರ್ ಹತ್ತಿರ ತೋರಿಸಿದ್ದೇನೆ. ಇದು ಎಲ್ಲಾ ಹೆಣ್ಣು ಮಕ್ಕಳಿಗೂ ಇರುತ್ತದೆ ಎಂದು ಹೇಳುತ್ತಾರೆ.

2 ಸಲ ಸ್ಕ್ಯಾನಿಂಗ್ ಮಾಡಿಸಿದ್ದೇನೆ. ಏನೂ ಇಲ್ಲ ಅಂತ ಹೇಳಿದ್ದಾರೆ. ಕೆಲವು ಡಾಕ್ಟರುಗಳು ಮದುವೆ ಆಗಿ ಒಂದು ಮಗು ಆಗುವ ತನಕ ಇದು ಹೀಗೆ ಅಂತ ಹೇಳಿದ್ದಾರೆ. ಆದರೆ ನೋವು ಮಾತ್ರ ಹಾಗೆ ಇದೆ. ಈ ರೀತಿ ಆಗುವುದರಿಂದ ನನಗೆ ಮುಂದೆ ಮದುವೆಯಾದಾಗ ಮಕ್ಕಳಾಗುವುದಕ್ಕೆನಾದರೂ ತೊಂದರೆ ಯಾಗುತ್ತದೆಯೋ ಅಥವಾ ಏನಾದರೂ ಖಾಯಿಲೆ ಬರುತ್ತದೆಯೇ? ಇದ ರಿಂದ ನಾನು ಮಾನಸಿಕವಾಗಿ ನೊಂದಿದ್ದೇನೆ. ಈಗಲೂ ಹಾಗೆ ನೋಯು ತ್ತಿದ್ದೇನೆ ಇದರಿಂದ ನನಗೆ ತುಂಬಾ ಭಯವಾಗಿದೆ. ಬಿ.ಎ. ಓದುತ್ತಿದ್ದೇನೆ. ನನಗೆ ಓದುವುದರ ಬಗ್ಗೆ ಚಿಂತೆಯಿಲ್ಲ ಇದರಿಂದ ನನಗೆ ನನ್ನ ಭವಿಷ್ಯದ ಮೇಲಿನ ನಂಬಿಕೇನೆ ಹೊರಟು ಹೋಗಿದೆ ಈಗ ನೀವುಕೊಡುವ ಉತ್ತರದ ಮೇಲೆ ನನ್ನ ಭವಿಷ್ಯ ನಿಂತಿದೆ.

–ಹೆಸರು, ಊರ ಬೇಡ.

ಸಲಹೆ

ಏನೂ ತೊಂದರೆ ಇಲ್ಲವೆಂದು ನಿಮ್ಮನ್ನು ಪರೀಕ್ಷಿಸಿದ ವೈದ್ಯರೇ ಹೇಳಿರುವಾಗ ಮತ್ತೇಕೆ ವೃಥಾ ಚಿಂತಿಸುವಿರಿ. ಇದರಿಂದ ಮದುವೆಯಾಗಿ ಮಕ್ಕಳಾಗುವುದಕ್ಕೆ ಯಾವುದೇ ತೊಂದರೆಯಿಲ್ಲ. ಯಾವುದೇ ಕಾಯಿಲೆಯೂ ಬರುವುದಿಲ್ಲ. ನಿಮ್ಮ ಮನದ ಆತಂಕ ಹೋಗಲಾಡಿಸಿಕೊಂಡು ವಿದ್ಯಾಭ್ಯಾಸದ ಕಡೆಗೆ ಗಮನ ಕೊಡಿ. ಸ್ತ್ರೀಯರಲ್ಲಿ ಮುಟ್ಟು ಸಹಜ ಕ್ರಿಯೆ. ಹೊಟ್ಟೆನೋವಿಗೆ ಯಾವುದಾದರೂ ನೋವು ನಿವಾರಕ ಮಾತ್ರ ಸೇವಿಸಿ. ಹೊಟ್ಟೆನೋವು ಮದುವೆಯ ನಂತರ ಕಡಿಮೆಯಾಗುತ್ತದೆ. ಮುಟ್ಟಿನ ಸಮಯದಲ್ಲಿ ಹೆಚ್ಚು ದ್ರವಾಹಾರ ಅಂದರೆ ಹಾಲು, ಹಣ್ಣಿನ ರಸ, ಮಜ್ಜಿಗೆ, ಎಳ ನೀರು ಸೇವಿಸಿ. ಇದರಿಂದ ಸುಸ್ತು ಕಡಿಮೆಯಾಗುತ್ತದೆ. ಇದರ ಬಗ್ಗೆ ಚಿಂತಿಸದಿರುವುದೇ ಎಲ್ಲಕ್ಕಿಂತ ಮುಖ್ಯ ಚಿಕಿತ್ಸೆ.

ನಿಮ್ಮ ಸಮಸ್ಯೆಗಳನ್ನು ಈ ವಿಳಾಸಕ್ಕೆ ಕಳಿಸಿ :

ಸಂಪಾದಕರು,
ಬಿಸಿಲ ಬದುಕು, ಅಂಕುರ ಪ್ರಕಾಶನ
ಅಂಚೆ ಪೆಟ್ಟಿಗೆ : 7951, ಬಸವೇಶ್ವರನಗರ, ಬೆಂಗಳೂರು - 560 079.

ಕಾಲ ಕಳೆಯೋಕೊಂದು ಸಮಸ್ಯೆ

ಸಂಗ್ರಹ: ರವಿರಾಜು

'ಅಲ್ಲಾ ಶ್ರೀಕಂಠಯ್ಯ.. ಈ ರಿಟೈರ್ಡ್‌ಲೈಫ್ ಸಾಕಾಗಿ ಹೋಗುತ್ತೆ... ಆಫೀಸ್‌ಗೆ ಹೋಗೋ ಹಾಗಿಲ್ಲ... ಮನೇಲಿ ಯಾವ್ದೂ ಕೆಲ್ಸ ಮಾಡೋಕೆ ಬಿಡೋಲ್ಲಾ... ಕಾಲ ಕಳೆಯೋದೇ ಕಷ್ಟ'.

'ನಂಜುಂಡಯ್ಯಾ, ಈ ಸಮಸ್ಯೆ ನಮ್ಮಿಬ್ಬರಿಗೆ ಅಲ್ಲಪ್ಪಾ.... ಎಲ್ಲಾ ರಿಟೈರ್ಡ್ ಜನಕ್ಕೂ ಹೀಗೇನಪ್ಪಾ... ಇರಲಿ, ಸಮಸ್ಯೆ ಅಂದಾಗ ಜ್ಞಾಪಕ ಬಂತು... ತಗೋ ಈ ಕಾಗದ, ಬರೆಯೋಕೆ ಶುರು ಮಾಡು'.

'ಏನಯ್ಯಾ, ಬರೆಯೋದು?'

'ಅದೇ ಹೇಳ್ತೀನೆ.........ಯಾವುದಾದರೂ ಒಂದು ಸಂಖ್ಯೆ ಬರಿ.. ಸಂಖ್ಯೆ ಅಂದ್ರೆ ಮೂರೋ, ನಾಲ್ಕೋ ಸ್ಥಾನ ಇರೋ ಸಂಖ್ಯೆ.. ನನಗೆ ಮೊದಲೇ ತೋರಿಸ್ಬೇಡ.. ಆಯ್ತೇ?'

'ಆಯ್ತು'

'ಈಗ ಆ ಸಂಖ್ಯೇಲಿ ಇರೋ ಎಲ್ಲಾ ಸ್ಥಾನಗಳ ಸಂಖ್ಯೆಗಳನ್ನು ಕೂಡಿಸು.... ಬಂದ ಮೊತ್ತವನ್ನು ನೀ ಮೊದಲೇ ಬರೆದಿದ್ದೀಯಲ್ಲ ಸಂಖ್ಯೆ, ಅದರಲ್ಲಿ ಕಳಿ... ಆಯ್ತಾ'.

'ಹೂಂ...'

'ಈಗ ಮೊತ್ತ ಕಳೆದ ಸಂಖ್ಯೆ ಇದೆಯಲ್ಲಾ ಅದರಲ್ಲಿಯೇ ಒಂದು ಸಂಖ್ಯೆಯನ್ನು ಹೊಡೆದು ಹಾಕು... ಅದ್ಯಾವ್ದೂ ಅಂತ ನಾ ಹೇಳ್ತೀನಿ'

'ಏನೂ?... ಈ ಸಂಖ್ಯೆಯಲ್ಲಿರೋ ಒಂದು ಸಂಖ್ಯೇನ ನಾನು ಹೊಡೆದು ಹಾಕಿದರೆ ನೀ ಹೇಳ್ತೀಯಾ?'

'ಹೌದಯ್ಯಾ'

'ಪರವಾಗಿಲ್ವೇ.... ಆಯ್ತು ಒಂದನ್ನು ಹೊಡೆದು ಹಾಕಿದ್ದೀನಿ... ಈಗ ಹೇಳು?'

'ತಡಿ.. ತಡೀ... ಅವಸರ ಪಡಬೇಡ... ಈ ಸಂಖ್ಯೇಲಿ ಉಳಿದಿವೆಯಲ್ಲಾ ಬೇರೆ ಬೇರೆ ಸಂಖ್ಯೆಗಳು.. ಅವುಗಳನ್ನು ಹೇಳು... ಆಗ ನೀನು ಹೊಡೆದು ಹಾಕಿದ ಸಂಖ್ಯೆ ಯಾವ್ದೂಂತ ಹೇಳ್ತೀನೆ'.

'ಹಾಗಾ?.... ಆಯ್ತು.. ಎಂದು.... ಸೊನ್ನೆ.. ನಾಲ್ಕು'

'ಎರಡು.. ಸೊನ್ನೆ.... ನಾಲ್ಕು... ಹೌದಲ್ವೇನಯ್ಯಾ?'

'ಹೌದಪ್ಪಾ'

'ಮೊತ್ತ ಆದದ್ದು ಆರು... ಇದರ ಹತ್ತಿರದ್ದು.. ಒಂಬತ್ತು.... ಅಂದರೆ ಮೂರು... ನೀನು ಹೊಡೆದು ಹಾಕಿದ ಸಂಖ್ಯೆ ಮೂರು, ಅಲ್ವೇನಯ್ಯಾ?'

'ಎಲಾ, ಇವನ?.. ನೀನು ಹೇಗಯ್ಯಾ ಕಂಡು ಹಿಡಿದೆ?'

'ನಾನು ಕಂಡು ಹಿಡಿಯೋದು ಏನು ಬಂತು... ಪುಸ್ತಕದಲ್ಲಿ ಹೇಳಿದ್ದರು ಕಂಡು ಹಿಡಿಯೋ ವಿಧಾನ.. ಅದನ್ನೇ ಬಳಸಿಕೊಂಡು ಈಗ ನಿನಗೆ ಹೇಳಿದೆ'

'ಅದ್ಯಾವ್ದಪ್ಪಾ ವಿಧಾನ?' ನನಗೂ ಸ್ವಲ್ಪ ತಿಳಿಸು... ನಾನು ಇದನ್ನು ತಿಳಿದುಕೊಂಡರೆ ಕಾಲ ಕಳೆಯೋಕೆ ಒಂದು ಸಮಸ್ಯೆ ಸಿಕ್ಕ ಹಾಗಾಗುತ್ತೆ'

'ಆಯ್ತು.... ಈಗ ಹೇಳು ನೀನು ಬರೆದ ಸಂಖ್ಯೆ ಯಾವ್ದು?'

'2318'

'ಈಗ ಇವುಗಳಲ್ಲಿರೋ ಬೇರೆ ಬೇರೆ ಸಂಖ್ಯೆಗಳು 2... 3... 1... 8'

'ಹೌದು'

'ಇವುಗಳ ಮೊತ್ತ ಎಷ್ಟು?'

'2+3+1+8 = 14 ..ಹದಿನಾಲ್ಕು'

'ಈ 2318ರಲ್ಲಿ ಹದಿನಾಲ್ಕು ಕಳೆದರೆ...'

2318 - 14 = 2304.... ಇದರಲ್ಲಿ ನೀನು ಹೊಡೆದು ಹಾಕಿದ ಸಂಖ್ಯೆ ಯಾವ್ದು?'

'ಮೂರು'

'ಅಂದರೆ 2304 ಅನ್ನು ಹೀಗೆ ಬರೆದೆ 23̶0̶4 .. ಅಲ್ವಾ?'

'ಹೌದು'

'ಉಳಿದ ಸಂಖ್ಯೆಗಳು 2.... 0 ಮತ್ತು 4.. ಇವುಗಳ ಮೊತ್ತ ಅಂದರೆ 2+0+4= 6'

'ಹೌದು'

'ಈಗ ಈ ಸಂಖ್ಯೆಗೆ ಹತ್ತಿರವಾದ ಸಂಖ್ಯೆ ಹುಡುಕಬೇಕು... ಆ ಸಂಖ್ಯೆಯನ್ನು ನಾವು ಒಂಬತ್ತರಿಂದ ಭಾಗಿಸೋದಕ್ಕೆ ಆಗ್ಬೇಕು'

'ಹೌದಾ?'

'ಹೌದು..... ಆ ಸಂಖ್ಯೆ 6ಕ್ಕೆ ಹತ್ತಿರವಾದ್ದು 9 ..... ನಿನಗೆ ಗೊತ್ತೇ ಇದೆ. ಇದನ್ನ 9 ರಿಂದ ಭಾಗಿಸಬಹುದು'

'ಹೌದು'

'ಈಗ ಈ ಹತ್ತಿರವಾದ ಸಂಖ್ಯೆ ಒಂಬತ್ತರಿಂದ ನಿನಗೆ ಬಂದ ಮೊತ್ತ 6ನ್ನು ಕಳಿ.. ಅಂದರೆ 9-6=3.. ಈ 3 ನೀನು ಹೊಡೆದು ಹಾಕಿದ ಸಂಖ್ಯೆ'

'ಈ ರೀತಿ ಯಾವ ಸಂಖ್ಯೆ ಬೇಕಾದರೂ ಬರೆದು, ಮೊತ್ತ ಕಂಡು ಹಿಡಿದು, ಹೊಡೆದು ಹಾಕಿ ಕಂಡು ಹಿಡೀಬಹುದಾ?'

'ಹೌದಯ್ಯಾ... ಒಂದ್ವಿಷಯ ಜ್ಞಾಪಕ ಇಟ್ಕೋ.. ಬಿಡೀ ಸಂಖ್ಯೆಗಳು,.. ಈಗ ನೀನು ಹೇಳಿದೆಯಲ್ಲಾ 2,0,4, ಅಂತಾ, ಅಂಥಾ ಸಂಖ್ಯೆಗಳ ಮೊತ್ತ ಪೂರ್ತಿಯಾಗಿ 9 ರಿಂದ ಭಾಗಿಸೋದಕ್ಕೆ ಆಗೋ ಸಂಖ್ಯೆ ಬಂದರೆ.... ಮತ್ತೊಮ್ಮೆ ಜ್ಞಾಪಕ ಇಟ್ಕೋ... ಹೊಡೆದು ಹಾಕಿದ 0 ಅಥವಾ 9 ಅಂತ ಹೇಳ್ಬೇಕು'

'ಸ್ವಲ್ಪ ವಿವರಿಸಯ್ಯ, ನೀನು'

'ಈಗ ನೀನು ಈ ರೀತಿ ಬರಿದಿದ್ದೀಯಲ್ಲ... 2318-14=2304 ಇದನ್ನೇ ಉದಾಹರಣೆಗೆ ತೆಗೆದುಕೋ.....

2304 ಇದರಲ್ಲಿ ಸೊನ್ನೆ ಹೊಡೆದು ಹಾಕಿದ್ದೀಯ ಅಂತ ಇಟ್ಕೊ... ಅಂದರೆ 23̶0̶4'

'ಈಗ ನಾನು ಕೇಳ್ತೀನಿ... ಸಂಖ್ಯೇಲಿ ಉಳಿದಿರುವ ಸಂಖ್ಯೆಗಳನ್ನು ಹೇಳೂಂತ.... ಆಗ ನೀನು ಹೇಳ್ತೀಯ... ಎರಡು, ಮೂರು, ನಾಲ್ಕೂಂತ. ಆಗ ನಾನು ಲೆಕ್ಕ ಹಾಕ್ತೀನಿ....

2+3+4=9

ಮೊತ್ತ ಆದದ್ದು 9... ಈಗ ಇದನ್ನು 9 ರಿಂದ ಪೂರ್ತಿಯಾಗಿ ಭಾಗಿಸೋಕ್ಕೆ ಆಗುತ್ತೆ.... ಆದ್ದರಿಂದ ನಾನು ಹೇಳ್ತೇನೆ... ನೀನು ಹೊಡೆದು ಹಾಕಿದ್ದ ಸೊನ್ನೆ ಅಥವಾ 9 ಅಂತ... ಈಗ ನಿನಗೆ ಗೊತ್ತೇ ಆಗಿದೆ. ಹೊಡೆದು ಹಾಕಿದ್ದು.... ಸೊನ್ನೆ ಅಂತ'

'ಒಳ್ಳೇದಾಯ್ತಪ್ಪ ನೀನು ಹೇಳಿದ್ದು.... ನಾನು ಕಾಲ ಕಳೆಯೋಕ್ಕೆ ಇಂತ ಸಂಖ್ಯೆಗಳನ್ನು ಬರೆದು ನೀನು ಹೇಳಿದ ರೀತಿ ಪ್ರಯತ್ನಿಸಿ ನೋಡ್ತೀನಿ' ■

ನೀವೂ ಇಂಗ್ಲಿಷ್ ಕಲಿಯಿರಿ | ಭಾಗ- 15

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

(ಹಿಂದಿನ ಸಂಚಿಕೆಯಿಂದ)

ಈಗ ಪರೀಕ್ಷೆಗಳ ಸುಗ್ಗಿ. ಅದರಿಂದಾಗಿ ವಿದ್ಯಾರ್ಥಿಗಳಲ್ಲಿ ಹೆದರಿಕೆ, ಭಯ ಮತ್ತು ಭೀತಿ. ವಿಷಯವನ್ನು ಸರಿಯಾಗಿ ತಿಳಿದು ಕೊಂಡರೆ ಹೆದರಿಕೆ ಓಡುವುದು. ಸಾಮಾನ್ಯವಾಗಿ ಇಂಗ್ಲಿಷ್, ಗಣಿತ ವಿಷಯಗಳೆಂದರೆ ಹೆಚ್ಚು ವಿದ್ಯಾರ್ಥಿಗಳಿಗೆ ಭಯ. ಹೆದರುವ ಅವಶ್ಯಕತೆ ಇಲ್ಲ. ಇಂಗ್ಲಿಷ್‌ನಲ್ಲಿ ವಾಕ್ಯ ರಚನೆ ಮಾಡಲಿಕ್ಕೆ ಕಲಿಯಿರಿ.

ಜಾನ್ : ಜಾನಕಿ, ವಾಕ್ಯಗಳಲ್ಲಿ ಬೇರೆ ಬೇರೆ ನಮೂನೆಗಳಿದ್ದು, ಮೊದಲು ಮುಖ್ಯವಾದ ಮೂರು ವಾಕ್ಯಗಳನ್ನು ಕಲಿಯೋಣ.

ಜಾನಕಿ : ಆಗಲಿ, ವಾಕ್ಯ ಅಂದರೆ ಏನು ಅನ್ನುವುದನ್ನು ಮೊದಲು ಕಲಿಸು.

ಜಾನ್ : ವಾಕ್ಯ ಅಂದರೆ ಶಬ್ದಗಳ ಸಮೂಹ ಮತ್ತು ಅದು ಅರ್ಥವನ್ನು ಕೊಡುವಂತಹದಿರಬೇಕು. A Sentence is a group of words which makes a complete sense. ಉದಾ.
i) Janaki learns English.

ಜಾನಕಿ : ಜಾನ್, ಕನ್ನಡದಲ್ಲಿ ಹೇಗೆ? ಜಾನಕಿ ಇಂಗ್ಲಿಷ್‌ಗೆ ಕಲಿಯುತ್ತಾಳೆ.

ಜಾನ್ : ಸ್ವಲ್ಪ ತಡೆಯಮ್ಮಾ! ವಾಕ್ಯ ರಚನೆ ಹೇಳ್ತೀನೆ ಕೇಳು.

ಕನ್ನಡದಲ್ಲಿ	**ಇಂಗ್ಲಿಷ್‌ನಲ್ಲಿ**
i) ಜಾನಕಿ ಇಂಗ್ಲಿಷ್ ಕಲಿಯುತ್ತಾಳೆ.	Janaki learns English
ii) ಜಾನ್ ಇಂಗ್ಲಿಷ್ ಕಲಿಸುತ್ತಾನೆ.	John teaches English

ಜಾನಕಿ : ಒಂದೊಂದೆ ವಾಕ್ಯವನ್ನು ವಿವರಿಸು, ಮಹರಾಯ.

ಜಾನ್ : ಈಗ ನೋಡೋಣ.

ಜಾನಕಿ	- ಇದು ಕರ್ತೃಪದ	(Subject)
ಇಂಗ್ಲಿಷ್	- ಇದು ಕರ್ಮಪದ	(Object)
ಕಲಿಯುತ್ತಾಳೆ	- ಇದು ಕ್ರಿಯಾಪದ	(Verb)

ಜಾನಕಿ : ಕನ್ನಡದಲ್ಲಿ
ಕರ್ತೃಪದ - ಕರ್ಮದ - ಕ್ರಿಯಾಪದ, ಹೌದಲ್ಲೊ? S.O.V.

ಜಾನ್ : ಕರೆಕ್ಟ್. ಇಂಗ್ಲಿಷ್‌ನಲ್ಲಿ Subject, Verb, Object - SVO ಇನ್ನೊಂದು ನೆನಪಿಡಬೇಕು. ಇಂತಹ ವಾಕ್ಯದಲ್ಲಿ ಒಂದೇ ಒಂದು Finite Verb ಇರಬೇಕು. ಮತ್ತು ಕರ್ತೃಪದ ಏಕವಚನದಲ್ಲಿದ್ದರೆ ಕ್ರಿಯಾಪದ ಏಕವಚನದಲ್ಲಿ ಮತ್ತು.......

ಜಾನಕಿ : ನಾನು ಹೇಳ್ತೀನಿ. Subjectವು Plural ದಲ್ಲಿದ್ದರೆ Verb ಅದಕ್ಕೆ ತಕ್ಕಂತಿರಬೇಕು. Yes!

ಜಾನ್ : Very Good. ಕ್ರಿಯಾಪದದ ಹಿಂದೆ (ಮೊದಲು) to ಹಚ್ಚಿದರೆ ಅದು Infinite Verb ಆಗುವುದು. ನೆನಪು ಇದೇನಾ!

ಜಾನಕಿ : ಉದಾಹರಣೆ ಹೇಳ್ತೀನಿ, ಕೇಳು. to go, to eat, to see ಮತ್ತು ಕ್ರಿಯಾಪದಕ್ಕೆ -ing ಹಚ್ಚಿದರೆ ಅದು participle ಅಂದರೆ.....

ಜಾನ್ : ಅದು ಕೃದ್ವಾಚಕ. ಉದಾ. going, eating, seeing ಹೀಗೆ ಒಂದು ವಾಕ್ಯದಲ್ಲಿ Infinite Verb ಮತ್ತು Participle ಎಷ್ಟೇ ಇರಬಹುದು. ಆದರ Finite Verb ಮಾತ್ರ ಒಂದು ವಾಕ್ಯದಲ್ಲಿ ಒಂದೇ ಇರಬೇಕು.

ಜಾನಕಿ : ನಿನಗೆ ಎಷ್ಟು ಸಲ ಹೇಳಬೇಕು? ಉದ್ದನ ಭಾಷಣಕ್ಕಿಂತ ಉದಾಹರಣೆ ಕೊಟ್ಟರೆ ತಿಳಿಯುವುದು....

ಜಾನ್ : I go to market **to bring** fruits
ಇಲ್ಲಿ **go** - ಇದು Finite Verb
to bring - ಇದು Infinite
ಜಾನಕಿಯವರೆ ಇಲ್ಲೊಂದು ಮಾತು ಲಕ್ಷಗೊಟ್ಟು ಕೇಳಿ.
Verb + Object = Predicate
ಅಂದರೆ ವಾಕ್ಯದಲ್ಲಿ one Subject ಮತ್ತು one Predicate (Verb + Object) ಇದ್ದರೆ ಅದು Simple Sentence.

ಜಾನಕಿ : ಎಷ್ಟು ನಮೂನೆಯ ವಾಕ್ಯ ಅಂದೆ...

ಜಾನ್ : ಮೂರು ರೀತಿಯ ವಾಕ್ಯಗಳಿವೆ.
i) Simple Sentence
ii) Complex Sentence
iii) Compound Sentence

ಜಾನಕಿ : ಒಂದೊಂದೇ ಹೇಳಪ್ಪಾ.

ಜಾನ್ : Simple Sentence is a sentence which has only **one Subject** and **one Predicate.**

i) He worked hard to get success
S V O
Predicate

He	- ಇದು Subject	Predicate
worked	- ಇದು Verb	
hard to get success	- ಇದು Object	

ಉದಾ.

i) He cannot find a place to sleep.
S V O
Predicate

ii) His courage won him honour
Subject V O
Predicate

ಜಾನಕಿ : ಉದಾಹರಣೆ ಹೇಳು ಅಂದರೆ ಬಹಳಷ್ಟು ಹೇಳ್ತಿ.....

ಜಾನ್ : ಇರಲಿ, ತಿಳಿಯಿತು. ಈಗ ಎರಡನೆಯ ನಮೂನೆಯ ವಾಕ್ಯ ನೋಡೋಣ.

II) COMPLEX SENTENCE

ಇಲ್ಲಿ ಅನೇಕ ವಾಕ್ಯಗಳಿದ್ದ ಹಾಗೆ ಅನ್ನಿಸಿದರೂ ಅದರಲ್ಲಿ ಒಂದು ಮುಖ್ಯ ವಾಕ್ಯವಿರುವುದು. ಅದನ್ನ Main Clause ಅಥವಾ Principal Clause ಎನ್ನುವರು. ಮತ್ತೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಉಪವಾಕ್ಯ ಅಥವಾ ವಾಕ್ಯಾಂಗ (Clause) ಇದ್ದು ಅವು Main Clause ಮೇಲೆ ಅವಲಂಬಿಸಿರುತ್ತವೆ. ವಾಕ್ಯಂಗ (Clause-) ಇದನ್ನು ಸ್ವತಂತ್ರವಾಗಿ ಪರಿಗಣಿಸಿದರೆ ಸರಿಯಾಗಿ ಅರ್ಥವಾಗುವುದಿಲ್ಲ.

ಉದಾ.

i) The teacher said that he should bring his father.

ಜಾನಕಿ : ನಾನು ಹೇಳ್ತೀನೆ.

The teacher said, - ಶಿಕ್ಷಕರು ಹೇಳಿದರು.

ಇದು ಪೂರ್ಣ ಅರ್ಥ ಕೊಡುವುದರಿಂದ Main or Principal Clause.

ಜಾನ್ : Correct.

.... that he should bring his father. ಅಂದರೆ ಅವನು ಅವನ ತಂದೆಯನ್ನು ಕರೆತರಬೇಕೆಂದು.... ಇಷ್ಟೇ ಅರ್ಥ ಆಗುವುದಿಲ್ಲ. ಅದಕ್ಕೆ..... 'ಶಿಕ್ಷಕ ಹೇಳಿದರು' ಅಂತ ಜೋಡಿಸಿದಾಗ ಪೂರ್ಣ ಅರ್ಥವಾಗುವುದು.

i) The teacher said - **Main Clause**

ii)....that he should bring his father - **Subordinate Clause**

A complex sentence consists of **one Main Clause** and **one or more Subordinates clauses.**

ಈ Subordinate clauseದಲ್ಲಿ ಮುಖ್ಯವಾಗಿ ಮತ್ತೆ ಮೂರು Clauseಗಳಿವೆ.

i) Noun Clause

ii) Adjective Clause

iii) Adverb Clause

ಇವುಗಳನ್ನು ವಿವರವಾಗಿ ಮುಂದಿನ ಸಲ ಅಭ್ಯಾಸ ಮಾಡುವಾ.

ಜಾನಕಿ : ಮೂರನೇ ವಾಕ್ಯ Compound Sentence ಹೇಳಲಿಲ್ಲಾ?

ಜಾನ್ : Compound Sentenceದಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಮುಖ್ಯ ವಾಕ್ಯಗಳು ಮತ್ತು ಅವುಗಳ ಜೊತೆಗೆ Subordinate Clause or Clauses ಇರಬಹುದು ಅಥವಾ ಇರಲಿಕ್ಕಿಲ್ಲ.

ನುಡಿಗಟ್ಟು

ಕನ್ನಡಿಯಲ್ಲಿ ಕರಿಯನ್ನು ತೋರಿಸಿದಂತೆ. ಕಡಿಮೆ ಶಬ್ದಗಳಲ್ಲಿ ವಿಶಾಲ, ವ್ಯಂಗ್ಯ ಇತ್ಯಾದಿ ಅರ್ಥಗಳನ್ನು ಒಳಗೊಂಡಿರುತ್ತವೆ. ಅವು ವಾಕ್ಯಗಳಿಗೆ ಅಲಂಕಾರವೂ ಹೌದು.

i) **Call for** - ಕರೆಕಳುಹಿಸು, ಬೇಡಿಕೆ
The teacher **called for** an explanation of his conduct.

ii) **Call on** - ಸಂಕ್ಷಿಪ್ತ ಭೇಟಿ ಕೊಡು
The visiting P.M. of England **called on** the President.

iii) **Cast away** - ಮುರಿದು ಬೀಳು
The Ship was **cast away** on the eastern coast of India.

iv) **Cast down** - ಎದೆಗುಂದು, ಧೈರ್ಯಹೀನನಾಗು
He was **cast down** by his failure.

v) **Cut off** - ನಿಧನನಾಗು
Sanjaya was **cut off** in his prime of life.

vi) **Cut down** - ಕಡಿಮೆ ಮಾಡು
He must **cut down** his weight to reduce blood pressure.

ಶಬ್ದ ಸಂಪತ್ತು

ಪ್ರತಿ ಶಬ್ದಕ್ಕೆ 4 ಅರ್ಥಕೊಟ್ಟಿದ್ದು, ಕೊಟ್ಟ ಶಬ್ದದ ಸಮಾನಾರ್ಥ ಪದ ಹುಡುಕಿರಿ, ನಂತರ ಉತ್ತರ ನೋಡಿ.

a. Maverick - ಅ.ಸ್ವತಂತ್ರ ವಿಚಾರವುಳ್ಳ, ಬ.ಜಾದೂ ಮಾಡುವವ ಕ. ಮನರಂಜನೆ ಡ.ಅಪಹಾಸ್ಯಗಾರ

b. Jamboree - ಅ. ಸಮಾವೇಶ ಬ. ಸ್ನೇಹ ಸಮ್ಮೇಳನ ಕ.ಜಾತ್ರೆ ಡ. ದುಃಖಪಡುವುದು

c. Idolatry - ಅ.ಆದರ್ಶವಾದಿ ಬ.ಮೂರ್ತಿ ಪೂಜೆ ಕ. ವ್ಯಕ್ತಿ ಪೂಜೆ ಡ.ಮೂರ್ತಿಭಂಜಕ

d. Uprising - ಅ.ಸರಕಾರದ ವಿರೋಧಿ ಚಟುವಟಿಕೆ ಬ. ಮೋಸಮಾಡು ಕ. ಮೇಲೆ ಏಳು ಡ.ಧೈರ್ಯ

e. Bugbear - ಅ.ಹೆದರಿಸು ಬ. ಆಹ್ವಾನಿಸು ಕ. ತಿಗಣೆ ವೈರಿ ಡ. ಭಯಾನಕ ವಸ್ತು

f. Bulwak - ಅ.ಭದ್ರತೆ ಬ. ಸ್ಥಿತಿಗತಿ ಕ. ವ್ಯಾಯಾಮಮಾಡು ಡ.ಅಭಿಪ್ರಾಯ

ಉತ್ತರಗಳು :

a. ಅ b.ಬ c. ಬ d. ಅ e.ಡ f. ಅ

ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ಹುದ್ದೆಗಳಿಗೆ ನೇಮಕಾತಿ

ಸಂಕ್ಷಿಪ್ತ ಅಧಿಸೂಚನೆ

ಕರ್ನಾಟಕ ಲೋಕ ಸೇವಾ ಆಯೋಗದ ಅರ್ಜಿ ನಮೂನೆ 1 ರಲ್ಲಿ (ಪರಿಷ್ಕೃತ) ಈ ಕೆಳಗೆ ನಮೂದಿಸಿರುವ ವಿವಿಧ ವರ್ಗದ ಹುದ್ದೆಗಳಿಗೆ ದಿನಾಂಕ 19.04.1999 ಅಥವಾ ಅದಕ್ಕೂ ಮುಂಚಿತವಾಗಿ ಕರ್ನಾಟಕ ಲೋಕ ಸೇವಾ ಆಯೋಗದ ಕಛೇರಿಗಳಿಗೆ ತಲುಪುವಂತೆ ದ್ವಿಪ್ರತಿಯಲ್ಲಿ ಎಲ್ಲಾ ಅಡಕಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಅರ್ಹ ಅಭ್ಯರ್ಥಿಗಳಿಂದ ಆಹ್ವಾನಿಸಲಾಗಿದೆ.

ಪತ್ರಾಂಕಿತ 'ಎ' ಗುಂಪಿನ ಹುದ್ದೆಗಳು

◆ **ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯ, ಕಾರವಾರ ಇಲ್ಲಿ ಬಂದರು ಅಧಿಕಾರಿ ಉಪ ನಿರ್ದೇಶಕರು 03 (ಮೂರು) ಹುದ್ದೆಗಳು.**

ವಿದ್ಯಾರ್ಹತೆ:

ಅ) ವಿದೇಶಗಾಮಿ ನೌಕೆಯ ಮೇಲೆ ನೌಕಾಪತಿ ಎಂದು ಸಮಾನಹಿತಿ ರಾಜ್ಯ ಸಮುದಾಯ ಗಳಲ್ಲಿ ನೌಕಾಯಾನದಲ್ಲಿ ದಕ್ಷತೆ ಪಡೆದ ಬಗ್ಗೆ ಪ್ರಮಾಣ ಪತ್ರ ಹೊಂದಿರಬೇಕು.

ಆ) ವಿದೇಶಗಾಮಿ ನೌಕೆಯ ಮೇಲೆ ಚೀಫ್ ಆಫೀಸರ್ ಹುದ್ದೆಯಲ್ಲಿ ಸೇವೆ ಸಲ್ಲಿಸಿದ ಅನುಭವವಿರಬೇಕು.

ಇ) ಯಾವುದೇ ದೃಷ್ಟಿ ದೋಷ ಇರಬಾರದು.

ಈ) ಹುದ್ದೆಗಳ ವರ್ಗೀಕಠಣ : ಪ.ಜಾ. 01, ಪ.ಪಂ. 02 (ಬ್ಯಾಕ್‌ಲಾಗ್).

ಪತ್ರಾಂಕಿತ 'ಬಿ' ಗುಂಪಿನ ಹುದ್ದೆಗಳು

◆ **ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ (ಪಾಲಿಟೆಕ್ನಿಕ್) ಸೆರಾಮಿಕ್ ಉಪನ್ಯಾಸಕರ 01 (ಒಂದು) ಹುದ್ದೆ (ಬ್ಯಾಕ್‌ಲಾಗ್)**

ವಿದ್ಯಾರ್ಹತೆ : ಇಂಜನಿಯರಿಂಗ್

ಅ) ತಂತ್ರಜ್ಞಾನದ ಸಮುಚಿತ ವಿಷಯ (ಸೆರಾಮಿಕ್ಸ್) ದಲ್ಲಿ ಸ್ನಾತಕ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದಿರಬೇಕು.

ಆ) ಅಖಿಲ ಭಾರತ ಪರೀಕ್ಷೆಗಳಲ್ಲಿ (ಜಿಎಟಿಇ) ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಅರ್ಹತೆ ಪಡೆದಿರಬೇಕು.

ಇ) ಹುದ್ದೆಗಳ ವರ್ಗೀಕರಣ : ಪ.ಜಾ. 01 (ಬ್ಯಾಕ್‌ಲಾಗ್)

◆ **ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ (ಪಾಲಿಟೆಕ್ನಿಕ್) ಪ್ಲಾಸ್ಟಿಕ್ ಟೆಕ್ನಾಲಜಿ ಉಪನ್ಯಾಸಕರ 01 (ಒಂದು) ಬ್ಯಾಕ್‌ಲಾಗ್ ಹುದ್ದೆ.**

ವಿದ್ಯಾರ್ಹತೆ :

ಅ) ಇಂಜಿನಿಯರಿಂಗ್ ತಂತ್ರಜ್ಞಾನದ ಸಮುಚಿತ ವಿಷಯ (ಪ್ಲಾಸ್ಟಿಕ್ ಟೆಕ್ನಾಲಜಿ) ದಲ್ಲಿ ಸ್ನಾತಕ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದಿರಬೇಕು.

ಆ) ಅಖಿಲ ಭಾರತ ಪರೀಕ್ಷೆಗಳಲ್ಲಿ (ಜಿಎಟಿ ಇ) ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಅರ್ಹತೆ ಪಡೆದಿರಬೇಕು.

ಇ) ಹುದ್ದೆಗಳ ವರ್ಗೀಕರಣ : ಪ.ಜಾ. 01, (ಬ್ಯಾಕ್‌ಲಾಗ್).

◆ **ಕರ್ನಾಟಕ ಲೋಕ ಸೇವಾ ಆಯೋಗದ ಗಣಕ ಕೇಂದ್ರದಲ್ಲಿನ 02 ಜೂನಿಯರ್ ಪ್ರೋಗ್ರಾಮರ್‌ನ ಬ್ಯಾಕ್‌ಲಾಗ್ ಹುದ್ದೆಗಳು**

ವಿದ್ಯಾರ್ಹತೆ :

ಅ) ಕಂಪ್ಯೂಟರ್ ಇಂಜಿನಿಯರಿಂಗ್‌ನಲ್ಲಿ ಯಾವುದೇ ಪದವಿ, ಕಂಪ್ಯೂಟರ್ ಸೈನ್ಸ್‌ನಲ್ಲಿನ ಪದವಿ ಯಾವುದೇ ತತ್ಸಮಾನ ಪದವಿ ಪಡೆದಿರಬೇಕು.

ಆ) ವರ್ಗೀಕರಣ : ಪ.ಜಾ. 01, ಪ.ಪಂ. 01 (ಬ್ಯಾಕ್‌ಲಾಗ್)

◆ **ಕರ್ನಾಟಕ ಲೋಕ ಸೇವಾ ಆಯೋಗದ ಗಣಕ ಕೇಂದ್ರದಲ್ಲಿನ 02 ಕನ್ಸೋಲ್ ಆಪರೇಟರ್‌ನ ಬ್ಯಾಕ್‌ಲಾಗ್‌ನ ಹುದ್ದೆಗಳು**

ವಿದ್ಯಾರ್ಹತೆ :

ಅ) ಪದವಿ ಅಥವಾ ತತ್ಸಮಾನ ಪದವಿ ಕಡ್ಡಾಯ ಹೊಂದಿರಬೇಕು.

ಆ) ಕರ್ನಾಟಕ ಪಬ್ಲಿಕ್ ಸರ್ವಿಸ್ ಕಮಿಷನ್‌ನ ಲಿಖಿತ ಪರೀಕ್ಷೆ ಕಡ್ಡಾಯವಾಗಿ ಬರೆದಿರಬೇಕು.

ಇ) 2 ವರ್ಷ ಕೆಲಸದ ಅನುಭವವಿರಬೇಕು. ವರ್ಗೀಕರಣ: ಪ.ಜಾ. 01 (ಬ್ಯಾಕ್‌ಲಾಗ್)

◆ **ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕಮರ್ಷಿಯಲ್ ಆರ್ಟ್ಸ್ ಉಪನ್ಯಾಸಕರು (ತಾಂತ್ರಿಕ) ಮುದ್ರಣ ಸಂಸ್ಥೆ, ಬೆಂಗಳೂರು 01 ಬ್ಯಾಕ್‌ಲಾಗ್ ಹುದ್ದೆ :**

ವಿದ್ಯಾರ್ಹತೆ

ಕಮರ್ಷಿಯಲ್ ಆರ್ಟ್ಸ್‌ನಲ್ಲಿ ಎರಡನೇ ದರ್ಜೆಯ ಡಿಪ್ಲೂಮಾ ಜೊತೆಗೆ ಕಮರ್ಷಿಯಲ್ ಆರ್ಟ್ಸ್ ವಿಷಯವನ್ನು ಬೋಧಿಸಿರುವ ಕನಿಷ್ಠ ಮೂರು ವರ್ಷಗಳ ಅನುಭವ ಅಥವಾ ಡಿಪ್ಲೂಮಾ ನಂತರ ಮೂರು ವರ್ಷಗಳ ವೃತ್ತಿ ಅನುಭವ.

ಟಿಪ್ಪಣಿ : ಕನಿಷ್ಠ ಅನುಭವ ಅವಧಿಯನ್ನು ಪ.ಜಾ./ಪ.ಪಂ. ಅಭ್ಯರ್ಥಿಗಳಿಗೆ ಎರಡು ವರ್ಷಗಳ ವಿನಾಯಿತಿ ನೀಡಲಾಗುವುದು. ವರ್ಗೀಕರಣ: ಪ.ಜಾ. -01 (ಬ್ಯಾಕ್‌ಲಾಗ್).

ಅಪತ್ರಾಂಕಿತ 'ಸಿ' ಗುಂಪಿನ ಹುದ್ದೆಗಳು

◆ **ಎನ್.ಸಿ.ಸಿ. ಇಲಾಖೆಯಲ್ಲಿ ಷಿಪ್ ಮಾಡಲಿಂಗ್ ಇನ್ಸ್‌ಟ್ರಕ್ಟರ್‌ನ 01 ಬ್ಯಾಕ್‌ಲಾಗ್ ಹುದ್ದೆ.**

ವಿದ್ಯಾರ್ಹತೆ :

ಅ) ಮಾಜಿ ಸೈಲರ್ಸ್‌ಗೆ ನೇರ ಆಯ್ಕೆಯ ಅವಕಾಶವುಂಟು.

ಆ) ಹಡಗು ಮಾದರಿಗಳ ಇಂಜಿನ್‌ಗಳ ಬಗ್ಗೆ ಜ್ಞಾನವಿರಬೇಕು.

ಇ) ಹಡಗು ಮತ್ತು ದೋಣಿ ಮಾದರಿಗಳ ಸೀನಿಯರ್ ಮತ್ತು ಜೂನಿಯರ್‌ಗಳಿಗೆ ಸೂಚನೆಗಳನ್ನು ಕೊಡುವವರಾಗಿರಬೇಕು.

ಈ) ಹಿಂದಿ ಮತ್ತು ಇಂಗ್ಲಿಷ್ ಬಲ್ಲವರಾಗಿರಬೇಕು.

ಉ) ನೇರ ಆಯ್ಕೆಯ ಅಭ್ಯರ್ಥಿಗಳಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸಾಗಿರುವುದು ಕಡ್ಡಾಯವಿದ್ದು. ಉಳಿದಂತೆ ಮೇಲಿನ ನಿಯಮಗಳು ಇವರಿಗೂ ಅನ್ವಯವಾಗುತ್ತದೆ.

ಊ) ಎನ್.ಸಿ.ಸಿಯ 'ಎ' 'ಬಿ' ಪ್ರಮಾಣ ಪತ್ರಗಳನ್ನು ಹೊಂದಿದ್ದು ಅದು ನಾವಲ್ ವಿಂಗ್ ದಾಗಿರಬೇಕು.

ಋ) ವರ್ಗೀಕರಣ: ಪ.ಜಾ.-1 (ಬ್ಯಾಕ್‌ಲಾಗ್).

◆ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಛಾಯಾಗ್ರಾಹಕರ ಒಂದು ಬ್ಯಾಕ್‌ಲಾಗ್ ಹುದ್ದೆ

ವಿದ್ಯಾರ್ಹತೆ

ಅ) ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು.

ಆ) ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಸಿನಿಮ ಫೋಟೋಗ್ರಫಿಯಲ್ಲಿ ಡಿಪ್ಲೋಮಾ ಹೊಂದಿರಬೇಕು.

ಇ) ಕಮರ್ಷಿಯಲ್ ಫೋಟೋಗ್ರಫಿ ಮತ್ತು ಡೆವಲಪಿಂಗ್‌ನಲ್ಲಿ ಎರಡು ವರ್ಷಕ್ಕಿಂತ ಕಡಿಮೆ ಇಲ್ಲದ ಪ್ರಾಯೋಗಿಕ ಪ್ರಿಂಟಿಂಗ್ ಮತ್ತು ಡೆವಲಪಿಂಗ್‌ನಲ್ಲಿ ಎರಡು ವರ್ಷಕ್ಕಿಂತ ಕಡಿಮೆ ಇಲ್ಲದ ಪ್ರಾಯೋಗಿಕ ಅನುಭವ ಹೊಂದಿರಬೇಕು.

ಈ) ವರ್ಗೀಕರಣ: ಪ.ಜಾ. 01 (ಬ್ಯಾಕ್‌ಲಾಗ್).

◆ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಕಿರಿಯ ತರಬೇತಿ ಅಧಿಕಾರಿಗಳ ಹೋಟೆಲ್ ಕೆಟರಿಂಗ್ ವೃತ್ತಿಯಲ್ಲಿ (ಎರಡು) 02 ಹುದ್ದೆಗಳು :

ವಿದ್ಯಾರ್ಹತೆ

ಅ) ಎಸ್.ಎಸ್.ಎಲ್.ಸಿ. ತತ್ಸಮಾನ ಪರೀಕ್ಷೆ ಪಾಸಾಗಿರಬೇಕು.

ಆ) ಎನ್.ಟಿ.ಸಿ. ಅಥವಾ ಎನ್.ಎ.ಸಿ. ಅಥವಾ ಹೋಟೆಲ್ ಕೆಟರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಡಿಪ್ಲೊಮಾ ಹೊಂದಿರಬೇಕು. 3 ವರ್ಷಗಳ ಕಡ್ಡಾಯ ಅನುಭವ ಇರಬೇಕು.

ಇ) ವರ್ಗೀಕರಣ: ಸಾ.ಅ. 01, ಪ.ಜಾ. 01, (ಬ್ಯಾಕ್‌ಲಾಗ್).

◆ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆಯಲ್ಲಿ ತಾಂತ್ರಿಕ ಸಹಾಯಕರ (1) ಬ್ಯಾಕ್‌ಲಾಗ್ ಹುದ್ದೆ :

ವಿದ್ಯಾರ್ಹತೆ

ಅ) ಫೋಟೋಗ್ರಫಿಯೂ ಸೇರಿದಂತೆ ಸಿನಿಮಟೋಗ್ರಫಿಯಲ್ಲಿ ಡಿಪ್ಲೊಮಾ ಪಡೆದಿರಬೇಕು.

ಆ) ಪದವಿ ಅಥವಾ ಅದರ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅಥವಾ ತತ್ಸಮಾನ ಅರ್ಹತೆ ಇರಬೇಕು. ಜೊತೆಗೆ ಮೈಕ್ರೋಫಿಲಮಿಂಗ್ ಸೇರಿದಂತೆ ಫೋಟೋಗ್ರಫಿಯಲ್ಲಿ ಎರಡು ವರ್ಷಗಳಿಗೆ ಕಡಿಮೆ ಇಲ್ಲದ ಪ್ರಾಯೋಗಿಕ ಅನುಭವ ಇರಬೇಕು.

ಆ) ರಾಸಾಯನಿಕ ಶಾಸ್ತ್ರ ಅಥವಾ ಭೌತ ಶಾಸ್ತ್ರವನ್ನು ಮುಖ್ಯ ವಿಷಯವಾಗಿ ತೆಗೆದುಕೊಂಡು ವಿಜ್ಞಾನದಲ್ಲಿ ಪದವಿ ಪಡೆದಿರಬೇಕು.

ಇ) ವರ್ಗೀಕರಣ: ಪ.ಜಾ. 01 (ಬ್ಯಾಕ್‌ಲಾಗ್).

◆ ಪೊಲೀಸ್ ಇಲಾಖೆಯಲ್ಲಿ ಉರ್ದು ವರದಿಗಾರರು - 02 ಹುದ್ದೆಗಳು

ವಿದ್ಯಾರ್ಹತೆ :

ಅ) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಉರ್ದು ಪ್ರೌಢ ದರ್ಜೆ ಬೆರಳಚ್ಚು ಮತ್ತು

ಆ) ಉರ್ದು ಪ್ರೌಢ ದರ್ಜೆ ಶೀಘ್ರಲಿಪಿಯಲ್ಲಿ ಉತ್ತೀಣರಾಗಿರಬೇಕು. ಉರ್ದು ಶೀಘ್ರಲಿಪಿಯಲ್ಲಿ ಪ್ರವೀಣ ದರ್ಜೆ ಹೊಂದಿದ್ದು. ಅನುಭವವಿದ್ದಲ್ಲಿ ಆದ್ಯತೆಯನ್ನು ನೀಡಲಾಗುವುದು.

ಇ) ವರ್ಗೀಕರಣ: ಪ.ಜಾ. 01 ಸಾ. ಅ.01

◆ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಗ್ರಂಥಪಾಲಕರ 05 ಹುದ್ದೆಗಳು:

ವಿದ್ಯಾರ್ಹತೆ

ಅ) ಲೈಬ್ರರಿ ವಿಜ್ಞಾನದ ಪದವಿ ಕಡ್ಡಾಯ

ಆ) ಸರ್ಕಾರದ ಅಂಗೀಕೃತ ಲೈಬ್ರರಿಯಲ್ಲಿ ಒಂದು ವರ್ಷದ ಅನುಭವ.

ಇ) ವರ್ಗೀಕರಣ: (ಮಹಿಳೆ) 01, ಪು-1- 01, ಪ್ರ-2, (ಎ) -01, ಸಾ.ಅ- 02 ಹುದ್ದೆಗಳು.

◆. ಅಬಕಾರಿ ಇಲಾಖೆಯಲ್ಲಿನ ಅಬಕಾರಿ ಉಪನಿರೀಕ್ಷಕರ 100 ಹುದ್ದೆಗಳು

ವಿದ್ಯಾರ್ಹತೆ :

ಅ) ಪದವಿ ಅಥವಾ ಅದರ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

ವಿಶೇಷ ಸೂಚನೆ :

ಈ ಮೇಲಿನ ಹುದ್ದೆಗಳಿಗೆ ವರ್ಗ ಮತ್ತು ನೇಮಕಾತಿ ನಿಯಮಗಳನ್ವಯ ದೇಹದಾರ್ಢ್ಯತೆಯನ್ನು ನಿರ್ದಿಷ್ಟ ಪಡಿಸಲಾಗಿದ್ದು, ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ನಿಯಮಗಳಲ್ಲಿ ನಿರ್ದಿಷ್ಟ ಪಡಿಸಿರುವಂತೆ, ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಯ ಶ್ರೇಣಿಗೆ ಕಡಿಮೆಯಿಲ್ಲದ ವೈದ್ಯಾಧಿಕಾರಿಯಿಂದ ದೇಹದಾರ್ಢ್ಯತೆಯ ಪ್ರಮಾಣ ಪತ್ರವನ್ನು ಪಡೆದು ಅರ್ಜಿಯೊಂದಿಗೆ ಲಗತ್ತಿಸಬೇಕು.

◆ ಔಷಧ ನಿಯಂತ್ರಣ ಇಲಾಕೆಯಲ್ಲಿನ ಕಿರಿಯ ಅಭಿಯಂತರ 02 ಹುದ್ದೆಗಳು:

ವಿದ್ಯಾರ್ಹತೆ :

ಅ) ಇಲೆಕ್ಟ್ರಾನಿಕ್ಸ್ ಅಥವಾ ಮೆಕ್ಯಾನಿಕಲ್ ಇಂಜನಿಯರಿಂಗ್‌ನಲ್ಲಿ ಪದವಿ ಗಳಿಸಿರಬೇಕು.

◆ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿನ ಸಹಾಯಕ ಉದ್ಯೋಗಾಧಿಕಾರಿ 8 ಹುದ್ದೆಗಳು :

ವಿದ್ಯಾರ್ಹತೆ


ಯಾವುದೇ ಪದವಿ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪಡೆದಿರಬೇಕು. ■

ತರಬೇತಿ

ದಿ. ನ್ಯಾಷನಲ್ ಅಸೋಸಿಯೇಷನ್ ಫಾರ್ ಬ್ಲೈಂಡ್ ಸಂಸ್ಥೆಯ ರಾಜ್ಯ ಶಾಖೆಯು 16-30 ವಯಸ್ಸಿನ ಅಂಧ ಪುರುಷರಿಗೆ ಲಘು ತಾಂತ್ರಿಕ, ಮರಗೆಲಸ, ವೈಂಡಿಂಗ್ ಮುಂತಾದ ತರಬೇತಿಗಳನ್ನು ಆಯೋಜಿಸಿದೆ. ತರಬೇತಿ ಜುಲೈ ಒಂದರಿಂದ ಆರಂಭವಾಗಲಿದೆ. ತರಬೇತಿಯ ಅವಧಿಯಲ್ಲಿ 250 ರೂಪಾಯಿ ಶಿಷ್ಯ ವೇತನ ನೀಡಲಾಗುವುದು.

ಅರ್ಜಿಗಳನ್ನು ವ್ಯವಸ್ಥಾಪಕರು, **ದಿ ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್**, ಕರ್ನಾಟಕ ಶಾಖೆ, ಪುನಶ್ಚೇತನ ಮತ್ತು ಮೂಲ ಶಿಕ್ಷಣ ಕೇಂದ್ರ, 4, ಜೀವನ ಭೀಮಾನಗರ, ಬೆಂಗಳೂರು - 75 (ದೂರವಾಣಿ 5289939) ಇವರಿಂದ ಪಡೆಯಬೇಕು. ಅರ್ಜಿ ಸಲ್ಲಿಸಲು ಏಪ್ರಿಲ್ 15 ಕೊನೆಯ ದಿನ.

ಮಾರ್ಗದರ್ಶಿ



■ ಡಾ. ಎಸ್.ಸಿ. ಶರ್ಮಾ

ಪ್ರಾಧ್ಯಾಪಕರು,
ಆರ್.ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - 59.

ವೀರಭದ್ರ ಅರಿಕೇರಿ, ಯಾದಗಿರಿ

ನಾನು ಡಿ. ಫಾರ್ಮ್ ಮುಗಿಸಿ ಕ.ರಾ.ರ.ಸಾ. ಸಂಸ್ಥೆಯ ಆಸ್ಪತ್ರೆಯಲ್ಲಿ ಫಾರ್ಮಸಿಸ್ಟ್ ಆಗಿ ಸೇವೆಸಲ್ಲಿಸುತ್ತಿದ್ದೇನೆ. ಮುಂದೆ ಉನ್ನತ ಅಧಿಕಾರಿಯಾಗಬೇಕೆಂಬ ಆಸೆ. ಆದಕ್ಕಾಗಿ ನಾನು MSW ಕೋರ್ಸ್ ಮಾಡಬೇಕು. ಅಂಚೆ ಮುಖಾಂತರ ಈ ಕೋರ್ಸ್ ಮಾಡಲು ಎಲ್ಲಿ ಅವಕಾಶವಿದೆ ತಿಳಿಸಿ.

ಎಂ.ಎಸ್.ಡಬ್ಲ್ಯು ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಲಭ್ಯ. ಇದನ್ನು ಅಂಚೆ ತೆರಪಿನ ಮೂಲಕ ಶಿಕ್ಷಣ ಮಾಡಬಹುದು.

ಹೆಸರಿಲ್ಲ

ನಾನು ಎಸ್.ಎಸ್.ಎಲ್.ಸಿ. ಉತ್ತೀರ್ಣನಾಗಿದ್ದೇನೆ. ನನಗೆ ವೈದ್ಯನಾಗಬೇಕೆಂಬ ಆಸೆ. Diploma in Nursing ಮಾಡಿದರೆ ವೈದ್ಯನಾಗಬಹುದೆ ಅಥವಾ ವೈದ್ಯನಾಗಬೇಕಾದರೆ ಬೇರೆ ಯಾವುದಾದರೂ ಕೋರ್ಸ್ ಮಾಡಬೇಕೇ?

ಡಿಪ್ಲೊಮಾ ಇನ್ ನರ್ಸಿಂಗ್ ಮಾಡಿದರೆ ವೈದ್ಯರಾಗಲು ಸಾಧ್ಯವಿಲ್ಲ. ವೈದ್ಯರಾಗಲು ಎಂ.ಬಿ.ಬಿ.ಎಸ್. ಮಾಡಬೇಕು. ಇದನ್ನು ಮಾಡಲು ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾಗಿ ಪ್ರವೇಶ ಪರೀಕ್ಷೆ ಬರೆಯಬೇಕು.

ರಾಜೇಶ ಬಿ. ಬಂಕಾಪುರ

ನಾನು ವೃತ್ತಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿದ್ದೇನೆ. ಈಗ ನನಗೆ 26 ವರ್ಷ. ಬಿ.ಕಾಂನಲ್ಲಿ ಎರಡು ವಿಷಯಗಳು ಪೂರ್ಣಗೊಂಡಿಲ್ಲ. ಈಗ ಅದನ್ನು ಪಾಸು ಮಾಡಬಹುದೇ? ಈಗ ನಾನು BBA/BBM ಮಾಡಬೇಕೆಂಬ ಆಸೆ. ಇದಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿ. ಈ ಕೋರ್ಸ್‌ಗಳನ್ನು ಮಾಡಿದರೆ KAS, IAS ಮಾಡಬಹುದೇ?

ನಿಮಗೆ 26 ವರ್ಷಗಳಾಗಿರುವುದರಿಂದ ವಯಸ್ಸಿನ ಆಧಾರದ ಮೇಲೆ ಬಿ.ಕಾಂ. ಪರೀಕ್ಷೆ ಬರೆಯಬಹುದು. ನೀವು ಬಿ.ಬಿ.ಎ. ಅಥವಾ ಬಿ.ಬಿ.ಎಂ. ಸಹ ಮಾಡಬಹುದು. ಇದರ ಆಧಾರದ ಮೇಲೆ ಕೆ.ಎ.ಎಸ್., ಐ.ಎ.ಎಸ್. ಪರೀಕ್ಷೆಗಳನ್ನು ಬರೆಯಬಹುದು.

ಸಿದ್ಧರಾಮ ಚಂದ್ರಾಮಕಾಲಿಬತ್ತೆ, ಸಲಗರ

ನಾನು ಪಿ.ಯು.ಸಿ. science ಓದುತ್ತಿದ್ದೇನೆ. ಮುಂದೆ ಯಾವುದು ಓದಿದರೆ ಒಳ್ಳೆಯದು IAS, KAS ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕು. BAMS ಮಾಡಿದ ಬಳಿಕ ಈ ಪರೀಕ್ಷೆ ಬರೆಯಬಹುದೆ, BSc in maths ಮಾಡಿದರೆ ಈ ಪರೀಕ್ಷೆಗಳನ್ನು ಬರೆಯಬಹುದೇ?

ನೀವು ಕೆ.ಎ.ಎಸ್., ಐ.ಎ.ಎಸ್. ಪರೀಕ್ಷೆಗಳನ್ನು ಬರೆಯಬೇಕಿದ್ದರೆ ಪದವಿ ಪಡೆದಿರಬೇಕು. ಬಿ.ಎಸ್ಸಿ. ಮಾಡಿದರೂ ಈ ಪರೀಕ್ಷೆ ಬರೆಯಬಹುದು.

ರಮೇಶ ಶಂ. ಮಂಟೂರ, ಮುಳವಾಡ

ನಾನು ಈಗ ದ್ವಿತೀಯ ಪಿ.ಯು.ಸಿ. ಆದ ನಂತರ ಟಿ.ಸಿ.ಎಚ್. ಮಾಡಬೇಕೆಂದಿರುವೆ. ಟಿ.ಸಿ.ಎಚ್. ಸೀಟು ಸಿಗಲು ದ್ವಿತೀಯ ಪಿ.ಯು.ಸಿಯಲ್ಲಿ ಎಷ್ಟು ಅಂಕಗಳನ್ನು ಪಡೆಯಬೇಕು.

ಟಿ.ಸಿ.ಹೆಚ್.ನ್ನು ಮಾಡಲು ಪಿ.ಯು.ಸಿ.ಯಲ್ಲಿ ಕನಿಷ್ಠ ಶೇ.50 ಅಂಕಗಳನ್ನು ಪಡೆದಿರಬೇಕು.

ಆನಂದ ಎಲ್. ಗಲಗಲಿ, ಕುಪಕಡ್ಡಿ

ನಾನು ಈಗ ಪಿ.ಯು.ಸಿ. (ವಿಜ್ಞಾನ) ಕಲಿಯುತ್ತಿದ್ದೇನೆ. ನಾನು ಎಷ್ಟು ಸಲ ಓದಿದರೂ, ಬರೆದರೂ ವಿಷಯವನ್ನು ನೆನಪಿನಲ್ಲಿಡಲು ಆಗುತ್ತಿಲ್ಲ. ಓದಲು ಕುಳಿತಾಗ ಕೆಟ್ಟ ಕೆಟ್ಟ ಸಂಗತಿಗಳು ನೆನಪಿಗೆ ಬರುತ್ತವೆ. ಮನಸ್ಸು ಚಂಚಲವಾಗುತ್ತದೆ. ಇದಕ್ಕೆ ಪರಿಹಾರ ತಿಳಿಸಿ.

ಮನಸ್ಸಿನ ಏಕಾಗ್ರತೆಯನ್ನು ಸಾಧಿಸಬೇಕು. ಹೆಚ್ಚಿನ ಪರಿಶ್ರಮ ಅಗತ್ಯ. ಓದುವುದು, ಬರೆಯುವುದು, ಅನೇಕ ಸಲ ಪುನರಾವರ್ತನೆಯಾಗಬೇಕು. ಓದಿದ ವಿಷಯವನ್ನು ಮತ್ತೆ ಮತ್ತೆ ಮನನ ಮಾಡಿಕೊಳ್ಳಬೇಕು. ವಿದ್ಯಾಭ್ಯಾಸದ ಹೊರತು ಬೇರೆ ಯೋಚಿಸಲು ಮನಸ್ಸನ್ನು ಬಿಡಬಾರದು.

ರಂಗನಾಥ ಎಸ್. ಪಲ್ಲೇದ್, ದೇವದುರ್ಗ

ನಾನು ಒಬ್ಬ ಬಿ.ಎ. ಪದವೀಧರ. ಮುಂದೆ ಎಂ.ಎ., ಬಿ.ಎಡ್., ಎಲ್.ಎಲ್.ಬಿ. ಕೋರ್ಸುಗಳಲ್ಲಿ ಯಾವುದನ್ನು ಮಾಡಿದರೆ ಬೇಗ ಕೆಲಸ ಸಿಗುತ್ತದೆ ತಿಳಿಸಿ. ನಾನು ಕೆ.ಎ.ಎಸ್. ಮಾಡಬೇಕೆಂಬ ಆಸೆ ಇದೆ. ಇದರಲ್ಲಿ ಯಾವ ವಿಷಯ ತೆಗೆದುಕೊಂಡರೆ ಸರಳವಾಗಿರುತ್ತದೆ ತಿಳಿಸಿ.

ನೀವು ಮುಂದೆ ಬಿ.ಎಡ್. ಮಾಡಿದರೆ ಶಿಕ್ಷಕರಾಗಿ ಕೆಲಸ ಮಾಡಬಹುದು. ನಂತರ ಅಂಚೆ ತೆರಪಿನ ಶಿಕ್ಷಣದ ಮೂಲಕ ಎಂ.ಎ. ಮಾಡಬಹುದು ಹಾಗು ಸಂಜೆ ಕಾಲೇಜಿನಲ್ಲಿ ಎಲ್.ಎಲ್.ಬಿ. ಮಾಡಬಹುದು. ಯಾವುದಕ್ಕೂ ನಿಮ್ಮ ಆಸಕ್ತಿಯಂತೆ ಮುಂದುವರೆಯಿರಿ. ಕೆ.ಎ.ಎಸ್.ನಲ್ಲಿ ನಿಮಗೆ ಸುಲಭವೆನಿಸುವ ವಿಷಯಗಳನ್ನು ಆಯ್ದುಕೊಳ್ಳಬಹುದು.

ಗೀರ್ಯಾನಾಯ್ಕ, ದೂಪದಹಳ್ಳಿತಾಂಡ

ನಾನು ಬಿ.ಕಾಂ. ಪದವೀಧರನಾಗಿದ್ದು, ಮುಂದೆ Marketing Management ನ್ನು ಮಾಡಲು ಇಚ್ಚಿಸುತ್ತೇನೆ. ಒಂದು ವರ್ಷದ ಈ ಕೋರ್ಸ್ ಮಾಡಿದರೆ ಖಾಸಗಿ ಕಂಪನಿಗಳಲ್ಲಿ ಉದ್ಯೋಗಾವಕಾಶಗಳು ಲಭಿಸುತ್ತವೆಯೆ ಹೇಗೆ ತಿಳಿಸಿ. ಇದು MBAಗೆ ಸಮಾನವೇ? Marketing Management ಪದವಿಯನ್ನು ರೆಗ್ಯುಲರ್ ಆಗಿ ಯಾವ ವಿಶ್ವವಿದ್ಯಾಲಯದಿಂದ ಮಾಡಿದರೆ ಉಚಿತ ಹಾಸ್ಟೆಲ್ ಸೌಲಭ್ಯ ದೊರೆಯುತ್ತದೆ.

ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮಾಡಿದಲ್ಲಿ ಮಾರ್ಕೆಟಿಂಗ್‌ನಲ್ಲಿ ಉತ್ತಮವಾದ ಉದ್ಯೋಗ ಅವಕಾಶಗಳು ಲಭ್ಯವಿರುತ್ತವೆ. ಇದು ಎಂ.ಬಿ.ಎ.ಗೆ ಸಮವಾಗುವುದಿಲ್ಲ.

ಎನ್. ಸತೀಶ್‌ಚಂದ್ರಬಾಬು, ಆನೇಕಲ್

ನಾನು ಪಿ.ಯು.ಸಿ. ಮುಗಿಸಿ ಈಗ ಸರ್ಕಾರಿ ಕೆಲಸದಲ್ಲಿದ್ದೇನೆ. ನಾನು ಮುಂದೆ ಕೆ.ಎ.ಎಸ್ ಪರೀಕ್ಷೆ ತೆಗೆದುಕೊಳ್ಳಬಹುದೇ?

ನೀವು ಕೆ.ಎ.ಎಸ್., ಐ.ಎ.ಎಸ್. ಪರೀಕ್ಷೆಗಳನ್ನು ಬರೆಯಬೇಕಿದ್ದರೆ ಪದವಿ ಪಡೆದಿರಬೇಕು. ಪಿ.ಯು.ಸಿ. ಆಧಾರದ ಮೇಲೆ ಕೆ.ಎ.ಎಸ್. ಪರೀಕ್ಷೆ ಬರೆಯಲು ಸಾಧ್ಯವಿಲ್ಲ.

ಎನ್.ಕೆ., ಧಾರವಾಡ

ನನಗೆ ಈಗ 22 ವರ್ಷ. ಪಿ.ಯು.ಸಿ. ಅನುತ್ತೀರ್ಣನಾಗಿದ್ದೇನೆ. ರಾ.ಭಾ. ವಿದ್ವಾನ್ (ಹಿಂದಿ) ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದೇನೆ. ಇದು ಬಿ.ಎ.ಗೆ ಸಮಾನ ಎಂದು ನಮೂದಿಸಿದ್ದಾರೆ.

ಮಧು, ಅರಸೀಕೆರೆ

ನನಗೆ ಈಗ 26 ವರ್ಷ. 1992ರಲ್ಲಿ ಪಿ.ಯು.ಸಿ. ಮುಗಿಸಿದ್ದೇನೆ. ಮುಂದೆ ಓದಲಿಲ್ಲ. ಈಗ ಕೆಲಸಕ್ಕೆ ಸೇರಬೇಕು.

1. ಪಿ.ಯು.ಸಿ. ಯಲ್ಲಿ ಶೇ.47 ಅಂಕಗಳು ಬಂದಿವೆ, TCH ಗೆ ಸೀಟು ಸಿಗುವುದೇ ?

2. ಕರೆಸ್ಪಾಂಡೆನ್ಸ್ ಮೂಲಕ TCH ಮಾಡಲು ಅವಕಾಶವಿದೆಯೇ?

3. ಕರೆಸ್ಪಾಂಡೆನ್ಸ್ ಮೂಲಕ ಬಿ.ಎ ಮಾಡಿದ ನಂತರ ಬಿ.ಎಡ್ ಮಾಡಲು ಕಾಲೇಜು ಸೇರಬಹುದೇ?

4. ಮಹಿಳೆಯರಿಗೆ ಸರ್ಕಾರಿ ಕೆಲಸ ದೊರೆಯಲು ಇರುವ ವಯೋಮಿತಿ ಎಷ್ಟು?

5. ಉದ್ಯೋಗಾವಕಾಶವಿರುವ ಯಾವುದಾದರೂ ಕೋರ್ಸ್‌ಗಳಿವೆಯೇ?

ಟಿ.ಸಿ.ಎಚ್. ಮಾಡಲು ಪಿ.ಯು.ಸಿಯಲ್ಲಿ ಕನಿಷ್ಠ ಶೇ. 50 ಅಂಕಗಳು ಬಂದಿರಬೇಕು. ಇದನ್ನು ಕರೆಸ್ಪಾಂಡೆನ್ಸ್ ಮೂಲಕ ಮಾಡಲು ಬರುವುದಿಲ್ಲ. ಕರೆಸ್ಪಾಂಡೆನ್ಸ್ ಮೂಲಕ ಬಿ.ಎ. ಮಾಡಿ ನಂತರ ಬಿ.ಎಡ್. ಮಾಡಬಹುದು. ನೀವು ಯಾವುದಾದರೂ ಡಿಪ್ಲೊಮಾ ಕೋರ್ಸ್‌ಗಳನ್ನು ಮಾಡಬಹುದು.

ಇದರ ಆಧಾರದ ಮೇಲೆ KAS, IAS, IPS ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದೇ? ಈ ಪದವಿಯ ಆಧಾರದ ಮೇಲೆ LLB ಮಾಡಬೇಕೆಂದಿರುವೆ ಇದು ಸಾಧ್ಯವೇ?

ನೀವು ಹಿಂದಿ ಬಿ.ಎ. ಮಾಡಿರುವುದರಿಂದ ಕೆ.ಎ.ಎಸ್., ಐ.ಎ.ಎಸ್. ಪರೀಕ್ಷೆಗಳನ್ನು ಬರೆಯಬಹುದು. ಆದರೆ ಎಲ್.ಎಲ್.ಬಿ. ಮಾಡಲು ಸಾಧ್ಯವಿಲ್ಲ.

ಈರಣ್ಣ, ಮೈಲನಹಳ್ಳಿ

ನಾನು ನಿಮ್ಮ ಕಾಲೇಜಿನಲ್ಲಿ Chemical ಇಂಜಿನಿಯರಿಂಗ್ ಮುಗಿಸಿರುತ್ತೇನೆ. ನಾನು ಈಗ MSC in Chemistry Environmental ಹಾಗೂ Mechanical Branch ಗಳಿಗೆ ಅರ್ಜಿ ಹಾಕಬಹುದೇ?

1. GATE ಮತ್ತು NETಗೆ ಯಾವಾಗ application ನೀಡುತ್ತಾರೆ. ಡಿಗ್ರಿ ಮುಗಿದ ಎಷ್ಟು ವರ್ಷಗಳವರೆಗೆ ತೆಗೆದುಕೊಳ್ಳಬಹುದು.

2. ನನಗೆ Army, Airforceಗಳಿಗೆ ಸೇರಲು ತುಂಬಾ ಇಷ್ಟ ಸೇರಬಹುದೆ?

ನೀವು ಎಂ.ಎಸ್ಸಿ ಕೆಮಿಸ್ಟ್ರಿ ಎನ್‌ವಿರಾನ್‌ಮೆಂಟ್‌ಗೆ ಅರ್ಜಿ ಹಾಕಬಹುದು. ಆದರೆ ಮೆಕಾನಿಕಲ್ ಬ್ರಾಂಚ್‌ಗೆ ಅರ್ಜಿ ಹಾಕಲು ಬರುವುದಿಲ್ಲ. ಗೇಟ್‌ಗೆ ಫೆಬ್ರವರಿಯಲ್ಲಿ ಪರೀಕ್ಷೆ ಇರುತ್ತದೆ. ಇದಕ್ಕೆ ಅಕ್ಟೋಬರ್ ತಿಂಗಳಲ್ಲಿ ಅರ್ಜಿಗಳನ್ನು ಕರೆಯುತ್ತಾರೆ.

ದೊಡ್ಡನಗೌಡ ವ್ಹಿ. ಮಾಲಿಪಾಟಿಲ್

ಈಗ ನನಗೆ 29 ವರ್ಷ. ಪಿ.ಯು.ಸಿ. ಆಧಾರದ ಮೇಲೆ ಯಾವುದಾದರೂ ಡಿಗ್ರಿಯನ್ನು ಮಾಡಬಹುದೆ? ಪದವಿ ನಂತರ IAS, KAS ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ಸಾಧ್ಯವೇ? ಇದಕ್ಕೆ ಇರಬೇಕಾದ ಕನಿಷ್ಠ, ಗರಿಷ್ಠ ವಯೋಮಿತಿ ಎಷ್ಟು?

ನಿಮಗೆ 29 ವರ್ಷಗಳಾಗಿರುವುದರಿಂದ ನೀವು ವಯಸ್ಸಿನ ಆಧಾರದ ಮೇಲೆ ಪದವಿ ಪರೀಕ್ಷೆ ಬರೆಯಬಹುದು. ಈ ರೀತಿ ಪಡೆದ ಪದವಿಯ ಆಧಾರದ ಮೇಲೆ ಐ.ಎ.ಎಸ್., ಕೆ.ಎ.ಎಸ್. ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಬಹುದು. ಐ.ಎ.ಎಸ್. ಪರೀಕ್ಷೆಗೆ ಕನಿಷ್ಠ 21 ವರ್ಷ, ಗರಿಷ್ಠ 30 ವರ್ಷ. ಕೆ.ಎ.ಎಸ್.ಗೆ ಗರಿಷ್ಠ 33 ವರ್ಷ. ಓಬಿಸಿಯವರಿಗೆ ಮೂರು ವರ್ಷ ಹಾಗೂ ಪರಿಶಿಷ್ಟ ಜಾತಿ/ವರ್ಗದವರಿಗೆ ವಯೋಮಿತಿಯಲ್ಲಿ 5 ವರ್ಷಗಳ ರಿಯಾಯಿತಿ ಇರುತ್ತದೆ.

ಗುರುರಾಜ ಎಂ. ಶಿಂಧ್ಯೆ, ಇಳಕಲ್

ನಾನು ಎಸ್.ಎಸ್.ಎಲ್.ಸಿ ನಂತರ ಮುಂದೆ ಓದಲಾಗಲಿಲ್ಲ. ಈಗ ನನಗೆ 21 ವರ್ಷ. ಹಿಂದಿ ಬಿ.ಎ. ಮಾಡಿದ್ದೇನೆ. ಇದರ ಆಧಾರದ ಮೇಲೆ KAS ಪರೀಕ್ಷೆ ಬರೆಯಬಹುದೆ? ಬಿ.ಎ. ಪರೀಕ್ಷೆಯನ್ನು ವಯಸ್ಸಿನ ಆಧಾರದ ಮೇಲೆ ಬರೆಯಬಹುದೇ ತಿಳಿಸಿ.

ಕೆ.ಎ.ಎಸ್. ಪರೀಕ್ಷೆ ಬರೆಯಲು ಬೇಕಾದ ವಿದ್ಯಾರ್ಹತೆ ಪದವಿಯಾಗಿದೆ. ನೀವು ಹಿಂದಿಯಲ್ಲಿ ಪದವಿ ಪಡೆದಿರುವುದರಿಂದ ಪರೀಕ್ಷೆ ತೆಗೆದುಕೊಳ್ಳಬಹುದು. ನಿಮಗೆ 21 ವರ್ಷಗಳಾಗಿರುವುದರಿಂದ ನೀವು ಬಿ.ಎ.ಯನ್ನು ವಯಸ್ಸಿನ ಆಧಾರದ ಮೇಲೆ ಮಾಡಬಹುದು.

ಎನ್.ಎಲ್. ವರದರಾಜ, ಚನ್ನಪಟ್ಟಣ

ಪದವಿಯಲ್ಲಿ ಶೇ. 40 ರಷ್ಟು ಅಂಕಗಳನ್ನು ಪಡೆದಿರುವೆ. ಮುಂದೆ M.A. ಮಾಡಬೇಕು. ಇದಕ್ಕೆ ಅರ್ಹನೇ ತಿಳಿಸಿ.

ಎಂ.ಎ. ಮಾಡಲು ಪದವಿಯಲ್ಲಿ ಶೇ. 50 ಅಂಕಗಳು ಬಂದಿರಬೇಕು. ಆದರೆ ವಯಸ್ಸಿನ ಆಧಾರದ ಮೇಲೆ ಹಿಂದಿನ ವಿದ್ಯಾರ್ಹತೆ ಇಲ್ಲದೆ ಎಂ.ಎ. ಮಾಡಬಹುದು. ನಿಮಗೆ 21 ವರ್ಷ ಗಳಿದ್ದರೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಎಂ.ಎ. ಮಾಡಬಹುದು.

ಆರ್.ಆರ್.ಜಿ. ಹಾವೇರಿ

ನಾನು ಪಿ.ಯು.ಸಿ. ದ್ವಿತೀಯ ವರ್ಷದ Science ಓದುತ್ತಿದ್ದೇನೆ. ಪಿ.ಯು.ಸಿ ನಂತರ Artsನಲ್ಲಿ ಮುಂದುವರಿಯಬೇಕು. ಅಲ್ಲದೇ D.Litt in Kannada ಮಾಡಬೇಕು. ಅದಕ್ಕೆ ಓನ್ಲೆಯಾಗಿ ನಾನು ಬಿ.ಎ. ಮಾಡಿದರೆ ಒಳ್ಳೆಯದೋ ಅಥವಾ B.Litt ಮಾಡಿದರೆ ಒಳ್ಳೆಯದೋ ತಿಳಿಸಿ. B.Litt ಮಾಡಬೇಕಾದರೆ, ನಾನು B.Litt ನಂತರ ಏನು ಓದಬೇಕು. ಬಿ.ಎ ಮಾಡಿದರೆ ಮುಂದೆ ಏನು ಮಾಡಬೇಕು?

ನೀವು ಪಿ.ಯು.ಸಿ. ಸೈನ್ಸ್ ಓದುತ್ತಿರುವುದರಿಂದ ಪಿ.ಯು.ಸಿ. ನಂತರ ಆರ್ಟ್ಸ್‌ನಲ್ಲಿ ಮುಂದುವರೆಯಬಹುದು. ಬಿ.ಎ. ಮಾಡುವುದು ಒಳ್ಳೆಯದು. ನಂತರ ಎಂ.ಎ. ಮಾಡಬಹುದು. ನಂತರ ಕನ್ನಡ ಕ್ಷೇತ್ರದಲ್ಲೇ ಸಂಶೋಧನೆಯನ್ನು ನಡೆಸಬಹುದು.

ಡಿ.ಎಂ. ಶುಭ, ಚಿತ್ರದುರ್ಗ

ನಾನು ಪಿ.ಯು.ಸಿ. ನಂತರ National Law school ನಲ್ಲಿ LLB ಮಾಡಬೇಕೆಂದಿದ್ದೇನೆ. ಈ ಪರೀಕ್ಷೆಗೆ ಕೂರಲು ಕನಿಷ್ಠ ಎಷ್ಟು ಅಂಕಗಳು ಇರಬೇಕು. ಪರೀಕ್ಷೆ ಎಲ್ಲಿ ಯಾವಾಗ ನಡೆಸುತ್ತಾರೆ ಎಂದು ತಿಳಿಸಿ.

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯೂನಿವರ್ಸಿಟಿಯಲ್ಲಿ ಓದಲು ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಇದು ಸಿ.ಇ.ಟಿ. ತರವೇ ಇರುತ್ತದೆ. ಇದರಲ್ಲಿ ನ್ಯೂಮರಿಕಲ್ ಆಪ್ಟಿಟ್ಯೂಡ್, ಇಂಗ್ಲಿಷ್ ಯೂಸೇಜ್ ಅಂಡ್ ಕಾಂಪ್ರೋಹೆನ್‌ಶನ್, ಜನರಲ್ ಅವೇರ್‌ನೆಸ್ ಮತ್ತು ಲೀಗಲ್ ಆಪ್ಟಿಟ್ಯೂಡ್ ಇರುತ್ತದೆ.

ದಿವಾಕರ ಶರ್ಮ, ಕಾರ್ಕಳ

ನಾನು ಬಿ.ಕಾಂ. ಪರೀಕ್ಷೆಯಲ್ಲಿ ಪಾಸಾಗಿದ್ದೇನೆ. ಈಗ ನಾನು ಮುಕ್ತ ವಿಶ್ವವಿದ್ಯಾಲಯದಲ್ಲಿ ಎಂ.ಕಾಂ ಮಾಡಬೇಕೆಂದಿರುವೆ. ಈ ರೀತಿ ಮಾಡಿದ ಪದವಿಯಿಂದ ಕೆಲಸಕ್ಕೆ ಸೇರುವಾಗ ಏನಾದರೂ ತೊಂದರೆ ಆಗುತ್ತದೆಯೇ?

ಮುಕ್ತ ವಿಶ್ವವಿದ್ಯಾಲಯದಿಂದ ಪಡೆದ ಪದವಿ ಇತರ ಪದವಿಯಷ್ಟೇ ಅರ್ಹತೆ ಹೊಂದಿದೆ. ಇದರಿಂದ ಕೆಲಸಕ್ಕೆ ಸೇರಲು ಏನೂ ತೊಂದರೆಯಿಲ್ಲ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ

ಎಂ.ಬಿ.ಎ. ಕೋರ್ಸಿಗೆ ಅರ್ಜಿ ಆಹ್ವಾನ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ಎಂಬಿಎ (MBA) ಕೋರ್ಸಿಗೆ ಅರ್ಜಿ ಆಹ್ವಾನಿಸಿರುತ್ತಾರೆ. ಈ ಕೋರ್ಸ್ ಇದೇ 1999ರ ಜೂನ್‌ನಲ್ಲಿ ಆರಂಭಗೊಂಡು 2001ರ ಜೂನ್‌ನಲ್ಲಿ ಮುಗಿಯಲಿದೆ. 2 ವರ್ಷಗಳ ಪೂರ್ಣಾವಧಿ ಕೋರ್ಸ್ ಇದಾಗಿರುತ್ತದೆ.

ಈ ಕೆಳಗಿನ ಕಾಲೇಜುಗಳಲ್ಲಿ ನೊಂದಾಯಿಸಿ ಕೊಳ್ಳುವುದು.

1. **ಕೆಐಎಂಎಸ್ ಕರ್ನಾಟಕ ವಿಶ್ವವಿದ್ಯಾಲಯ ಪಿ.ಜಿ. ಡಿಪಾರ್ಟ್‌ಮೆಂಟ್.**
2. **ಎಎಸ್ ಪಾಟೀಲ ವಾಣಿಜ್ಯ ಕಾಲೇಜು, ಬಿಜಾಪುರ.**
3. **ಬಿ.ವಿ.ವಿ. ಸಂಘದ ಬಿಸಿನೆಸ್ ಆಡ್ಮಿನಿಸ್ಟ್ರೇಷನ್ ಕಾಲೇಜು, ಬಾಗಲಕೋಟೆ.**
4. **ಜೆ.ಜಿ. ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಕಾಲೇಜು, ಹುಬ್ಬಳ್ಳಿ.**

ಇರುವ ಸೀಟುಗಳಲ್ಲಿ ಶೇ.50 ಸ್ಥಾನಗಳು ಕಿಮ್ಸ್‌ಗೆ(KIMS) ಮೀಸಲಾಗಿದ್ದು ಇನ್ನುಳಿದವು. ಈ ಕೆಳಕಂಡ ಕಾಲೇಜುಗಳಲ್ಲಿ ನೊಂದಾಯಿಸಿ ಕೊಳ್ಳಬಹುದು.

- **ಎಎಸ್‌ಪಿ ವಾಣಿಜ್ಯ ಕಾಲೇಜು, ಬಿಜಾಪುರ. - 15 ಸೀಟುಗಳು**
- **ಬಿ.ವಿ.ವಿ. ಸಂಘದ ವ್ಯವಹಾರ ಆಡಳಿತ ಕಾಲೇಜು, ಬಾಗಲಕೋಟೆ. - 30 ಸೀಟುಗಳು**
- **ಕೆಎಲ್‌ಇ ವ್ಯವಹಾರ ಆಡಳಿತ ಕಾಲೇಜು. - 30 ಸೀಟುಗಳು**

ಇಲ್ಲಿ ಅಭ್ಯರ್ಥಿಗಳು ಮೌಖಿಕ, ಕೂಟ ಚರ್ಚೆ ಅಲ್ಲದೆ ಲಿಖಿತ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬೇಕಾಗುತ್ತದೆ.

ಕನಿಷ್ಠ ಅರ್ಹತೆ

ಅ. ಯಾವುದೇ ನೊಂದಾಯಿತ ವಿಶ್ವ ವಿದ್ಯಾಲಯದ ಪದವಿ.

ಆ. ಶೇ.50 ಕನಿಷ್ಠ ಅಂಕಗಳು ಕಡ್ಡಾಯ ಯಾವುದೇ 3/4 ವರ್ಷದ ಪದವಿಗಳಲ್ಲಿ.

ಇ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಗಳಲ್ಲಿ ಕನಿಷ್ಠ ಶೇ.50 ಅಂಕಗಳನ್ನು ಹೊಂದಿರಬೇಕು.

ನೋಂದಾಯಿಸಿಕೊಳ್ಳುವ ಕ್ರಮ

ಅರ್ಹ ಅಭ್ಯರ್ಥಿಗಳಿಗೆ ಕರ್ನಾಟಕ ವಿ.ವಿ. ಧಾರವಾಡವು ಮೇ/ಜೂನ್ 1999ರಲ್ಲಿ ಲಿಖಿತ ಪರೀಕ್ಷೆಗಳಿಗೆ ಕರೆಯುವುದು.

ನೀವು ಮಾಡಬೇಕಾದ್ದೇನು?

ನಿರ್ದೇಶಕರು, ಪ್ರಸಾರರಂಗ ಕರ್ನಾಟಕ ವಿ.ವಿ. ಧಾರವಾಡ 580 003.

ಇವರೆಗೆ ದಸ್ತಾವೇಜು ಮತ್ತು ಅರ್ಜಿ ನಮೂನೆಗಳಿಗಾಗಿ ಬರೆಯಿರಿ, ಜೊತೆಗೆ 110 ರೂ.ಗಳ ಕ್ರಾಸ್ ಮಾಡಿದ ಡಿ.ಡಿ. ಅಥವಾ ಚಲನ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಸಿಂಡಿಕೇಟ್ ಬ್ಯಾಂಕ್ ಮೂಲಕ ಇವರಿಗೆ ಹಣಕಾಸು ಅಧಿಕಾರಿ ಕರ್ನಾಟಕ ವಿ.ವಿ. ಧಾರವಾಡ.

ಇದರೊಂದಿಗೆ ಸ್ವವಿಳಾಸದ (30 ಸೆಂ.ಮೀ x 25 1/2 ಸೆಂ.ಮೀ) ಲಕೋಟೆ ಇಟ್ಟದ್ದು 25/-ರೂ.ಗಳ ಅಂಚೆ ಚೀಟಿ ಲಗತ್ತಿಸತಕ್ಕದ್ದು ಇದಕ್ಕಾಗಿ ಯಾವುದೆ ಪ್ರತ್ಯೇಕ ಹಣ ಚೆಕ್ ಅಥವಾ ಎಂ.ಓ.ನ್ನು ಸ್ವೀಕರಿಸುವುದಿಲ್ಲ.

ಭರ್ತಿ ಮಾಡಿದ ಅರ್ಜಿ ಫಾರಂನ್ನು ಪರಿಷ್ಕರಣ ಶುಲ್ಕದೊಂದಿಗೆ 220/- ರೂ.ಗಳ (ಇನ್ನೂರ ಇಪ್ಪತ್ತು ಮಾತ್ರ) ಕ್ರಾಸ್ ಮಾಡಿದ ಡಿ.ಡಿ. ಅಥವಾ ಚಲನ್ ಅನ್ನು ಹಣಕಾಸು ಅಧಿಕಾರಿ ಕರ್ನಾಟಕ ವಿ.ವಿ.(ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಸಿಂಡಿಕೇಟ್ ಬ್ಯಾಂಕ್ ಮಾತ್ರ) ವಿಶ್ವವಿದ್ಯಾಲಯದ ಕ್ಯಾಂಪಸ್ ಧಾರವಾಡ ಇವರಿಗೆ ಮಾಡಿದ್ದು ಈ ಕೆಳಗಿನ ವಿಳಾಸಕ್ಕೆ ತಲುಪಿಸಿ.

ಛೇರಮೇನ್ (ಅಡ್ಮಿಷನ್ಸ್) ಕೌಸಲಿ ಸ್ಟಡೀಸ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 580 003.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **30-4-1999.** (ಪ.ಜಾ, ಪ.ಪಂ. ಮತ್ತು ಪರಿ.1 ಪ್ರೊಸೆಸಿಂಗ್ ಚಾರ್ಜ್ 100 ಮಾತ್ರ-(ನೂರು ಮಾತ್ರ)

27 ಏಪ್ರಿಲ್ 1999 ಅರ್ಜಿ ನಮೂನೆ ನೀಡುವ ಕಡೆಯ ದಿನಾಂಕ: (ಪ.ಜಾ., ಪ.ಪಂ.ಗಳಿಗೆ ಇರುವ ಆದ್ಯತೆಗಳು ಎಂದಿನಂತೆ ಪರಿಗಣಿಸಲ್ಪಡುವುದು). ■

ಕೃತಿ - ಕರ್ತೃ

- ರಾಮಚರಿತಮಾನಸ - ತುಳಸಿದಾಸ
- ರಾಮಾಯಣ ಕಲ್ಪವೃಕ್ಷಮು - ವಿಶ್ವನಾಥ ನಾರಾಯಣ
- ರಾಜತರಂಗಿಣಿ - ಕಲ್ಹಣ
- ರಾಮಾಯಣ - ವಾಲ್ಮೀಕಿ
- **ರಿಪಬ್ಲಿಕ್** - ಪ್ಲೇಟೋ
- **ರಿಸರೆಕ್ಷನ್** - ಲಿಯೋಟಾಲ್‌ಸ್ಟಾಯ್
- **ಲೇಡಿ ಆಫ್ ದಿ ಲೇಕ್** - ಸರ್ ವಾಲ್ಟರ್ ಲೇಕ್
- **ವಾರ್ ಅಂಡ್ ಪೀಸ್** - ಟಾಲ್‌ಸ್ಟಾಯ್
- **ಶರಪಂಜರ** - ತ್ರಿವೇಣಿ
- **ಶಾಕುಂತಲ** - ಕಾಳಿದಾಸ
- **ಶಿವಾಜಿ ದಿ ಗ್ರೇಟ್ ಪೆಟ್ರಿಯಟ್** - ಲಾಲ ಲಜಪತರಾಯ್
- **ಸಖಾರಾಮ್ ಬೈಂಡರ್** - ವಿಜಯ್ ತೆಂಡೂಲ್ಕರ್
- **ಸಾಕೇತ್** - ಮೈಥಿಲಿ ಶರಣಗುಪ್ತ
- **ಸತ್ಯಾರ್ಥ ಪ್ರಕಾಶ್** - ದಯಾನಂದ ಸರಸ್ವತಿ
- **ಸಾವಿತ್ರಿ** - ಅರವಿಂದ್ ಘೋಷ್
- **ಹಸಿರು ಹೊನ್ನು** - ಡಾ.ಬಿ.ಜಿ.ಎಲ್. ಸ್ವಾಮಿ
- **ಹರ್ಷಚರಿತ** - ಬಾಣಭಟ್ಟ

■ ಆರ್.ಕೆ. ಗುಂಡಸಾಗರ

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಚಾಲಕ, ನಿರ್ವಾಹಕ ಮತ್ತು ಸಹಾಯಕ - ಬ ಹುದ್ದೆಗಳಿಗೆ ಅರ್ಜಿ ಕರೆದಿದೆ

ಸಂಖ್ಯೆ : ವಾಕರಸಾ/ಕೇಕ/ಸಿ/ನೇಮಕ/415/98-99

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧೀನದಲ್ಲಿಯ ಈ ಕೆಳಕಂಡ ವಿಭಾಗಗಳಲ್ಲಿ (ಸಾಮಾನ್ಯ, ಮಹಿಳಾ ಮೀಸಲು ಮತ್ತು ಮಾಜಿ ಸೈನಿಕರು ಸೇರಿ) ಚಾಲಕ, (3ನೇ ದರ್ಜೆ) ನಿರ್ವಾಹಕ (3ನೇ ದರ್ಜೆ) ಹಾಗೂ ಸಹಾಯಕ-ಬ (4ನೇ ದರ್ಜೆ) ಹುದ್ದೆಗಳ ನೇಮಕಾತಿಗೆ ಕ.ರಾ.ರ.ಸಾ. ಸಂಸ್ಥೆಯು 1982ರ ವರ್ಗ ಮತ್ತು ನೇಮಕಾತಿ ನಿಯಮಗಳ ಅನುಸಾರ ಭಾರತೀಯ ಪ್ರಜೆಗಳಿಂದ ಅರ್ಜಿಗಳನ್ನು ಕರೆದಿದೆ. ಅಭ್ಯರ್ಥಿಗಳು ಜಾಹೀರಾತಿನಲ್ಲಿ ಪ್ರಕಟಿಸಿರುವ ಅರ್ಜಿ ನಮೂನೆಯಲ್ಲಿ ಅವಶ್ಯವಿರುವ ಎಲ್ಲಾ ಪ್ರಮಾಣ ಪತ್ರಗಳ ನಕಲುಗಳೊಂದಿಗೆ ದಿನಾಂಕ 15.4.1999 ರೊಳಗಾಗಿ ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ (ಪ್ರತಿ ಹುದ್ದೆಗೂ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕು) ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಜಿಲ್ಲೆಗಳು	ಚಾಲಕರ ಹುದ್ದೆಗಳು	ನಿರ್ವಾಹಕರ ಹುದ್ದೆಗಳು	ಸಹಾಯಕ ಹುದ್ದೆಗಳು
ಬೆಳಗಾವಿ	146	102	50
ಬಾಗಲಕೋಟೆ	90	84	78
ವಿಜಾಪೂರ	184	135	28
ಚಿಕ್ಕೋಡಿ	106	123	53
ಗದಗ	69	84	74
ಹಾವೇರಿ	57	71	62
ಹುಬ್ಬಳ್ಳಿ	235	217	104
ಉತ್ತರ ಕ. (ಶಿರಸಿ)	11		

ಆಯ್ಕೆಗೊಂಡ ಅಭ್ಯರ್ಥಿಗಳನ್ನು ಆರಂಭದಲ್ಲಿ ಎರಡು ವರ್ಷಗಳು ವೃತ್ತಿ ತರಬೇತಿಯ ಮೇಲೆ ನೇಮಿಸಿಕೊಂಡು ತರಬೇತಿ ತೃಪ್ತಿಕರವಾಗಿ ಪೂರೈಸಿದ ನಂತರ ಸಂಸ್ಥೆಯಲ್ಲಿ ಲಭ್ಯವಾಗುವ ಖಾಲಿ ಹುದ್ದೆಗಳಿಗೆ ಅನುಸಾರವಾಗಿ ಪರೀಕ್ಷಾರ್ಥ ಹುದ್ದೆಗೆ ನೇಮಕಗೊಳಿಸಲಾಗುವುದು.

ಚಾಲಕ

ಅ) ವಿದ್ಯಾರ್ಹತೆ/ಅರ್ಹತೆ : ಪ್ರಾಥಮಿಕ 4ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು.

ಆ) ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಭಾರಿ ಪ್ರಯಾಣಿಕರ ವಾಹನ ಚಾಲನಾ ಪರವಾನಿಗೆ ಮತ್ತು ಕರ್ನಾಟಕದ ಬ್ಯಾಡ್ಜನ್ನು ಹೊಂದಿರಬೇಕು.

ಇ) ಭಾರೀ ವಾಹನ (ಎಚ್‌ಟಿವಿ/ಎಚ್‌ಜಿವಿ/ಎಚ್‌ಪಿವಿ) ಚಾಲನೆಗೆ ಪರವಾನಿಗೆ ಪಡೆದ ನಂತರ ಭಾರಿ ವಾಹನ ಚಾಲನೆಯಲ್ಲಿ ಮೂರು ವರ್ಷಗಳ ಅನುಭವ ಕಡ್ಡಾಯ.

ನಿರ್ವಾಹಕ

ವಿದ್ಯಾರ್ಹತೆ/ಅರ್ಹತೆ: ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಚಾಲ್ತಿಯಲ್ಲಿರುವ ನಿರ್ವಾಹಕರ ಲೈಸನ್ಸ್ ಮತ್ತು ಕರ್ನಾಟಕದಲ್ಲಿ ನೀಡಿರುವ ನಿರ್ವಾಹಕರ ಬ್ಯಾಡ್ಜ್ ಹೊಂದಿರಬೇಕು.

ಸಹಾಯಕ - ಬ

ಅ) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

ಆ) ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸಾದ ನಂತರ ಐ.ಟಿ.ಐ./ಐ.ಟಿ.ಸಿ./ಎನ್.ಎ.ಸಿ. (ಡಿಸೇಲ್ ಮೆಕ್ಯಾನಿಕ್, ಮೋಟಾರ್ ಮೆಕ್ಯಾನಿಕ್, ಬಾಡಿ ಬಿಲ್ಡರ್, ಬ್ಲಾಕ್ ಸ್ಮಿಥ್, ಟರ್ನರ್, ಮಶೀನಿಸ್ಟ್, ಫಿಟರ್, ಆಟೋ ಇಲೆಕ್ಟ್ರೀಸಿಯನ್, ವೆಲ್ಡರ್, ಶೀಟ್ ಮೆಟಲ್ ವರ್ಕರ್, ಟಾಯರ್ ಫಿಟರ್) ಇವುಗಳಲ್ಲಿ ಯಾವುದಾದರೊಂದು ವೃತ್ತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

ಸೂಚನೆ

1) ಕನ್ನಡ ಓದಲು ಬರೆಯಲು ಮತ್ತು ಮಾತನಾಡಲು ಬಲ್ಲವರಾಗಿರಬೇಕು. ಈ ಸಂಬಂಧ ಆಯ್ಕೆ ಪ್ರಾಧಿಕಾರದ ಸೇವೆ ಹಿಡಿದು ರಿಯಾಯಿತಿ ನೀಡಲಾಗುವುದು. ಆದರೆ ಅವರ ವಯೋಮಿತಿಯಲ್ಲಿ 3 ವರ್ಷ ಮತ್ತು ಭಾರತದ ಸಶಸ್ತ್ರ ಪಡೆಗಳಲ್ಲಿ ಸೇವೆ ಹಿಡಿದು ರಿಯಾಯಿತಿ

ನೀಡಲಾಗುವುದು. ಆದರೆ ಅವರ ವಯೋಮಿತಿ 45 ವರ್ಷ ಮೀರತಕ್ಕದ್ದಲ್ಲ. ಇಲಾಖಾ ಅಭ್ಯರ್ಥಿಗಳಿಗೆ ಅವರು ಸಲ್ಲಿಸಿದ ಸೇವೆಯಲ್ಲಿ ಗರಿಷ್ಠ ಹತ್ತು ವರ್ಷ ರಿಯಾಯಿತಿ ನೀಡಿದಾಗ ಅವರ ವಯಸ್ಸು 45 ವರ್ಷ ಮೀರತಕ್ಕದ್ದಲ್ಲ.

ಅರ್ಜಿ ಸಲ್ಲಿಸುವ ವಿಧಾನ

ಅರ್ಜಿಯನ್ನು ಸಲ್ಲಿಸುವಾಗ ಸಾಮಾನ್ಯ ಅರ್ಹತೆ ಹಾಗೂ 2ಎ, 2ಬಿ, 3ಎ, 3ಬಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ರೂ.50/- ಹಾಗೂ ಪ.ಜಾ., ಪ.ಪಂ., ವ-1, ಮಾಜಿ ಸೈನಿಕರು ರೂ.25/- ಮೌಲ್ಯದ ಕ್ರಾಸ್ಡ್ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಡಿಮ್ಯಾಂಡ್ ಡ್ರಾಫ್ಟನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಾ.ಕ.ರ.ಸಾ.ಸಂಸ್ಥೆ..... (ಸಂಬಂಧಪಟ್ಟ ವಿಭಾಗ)...... ರವರ ಹೆಸರಿನಲ್ಲಿ ಪಡೆದುಕೊಂಡು ಪ್ರಕಟಿಸಲಾಗಿರುವ ಅರ್ಜಿ ನಮೂನೆಯಲ್ಲಿ ಕ್ರಮವಾಗಿ ಪೂರ್ತಿ ವಿವರಗಳನ್ನು ಭರ್ತಿ ಮಾಡಿ ಎಲ್ಲ ಅವಶ್ಯಕ ಪ್ರಮಾಣ ಪತ್ರಗಳ ಸ್ವತಃ ದೃಢೀಕರಿಸಿದ ಝೆರಾಕ್ಸ್ ಪ್ರತಿಗಳನ್ನು ಪೋಸ್ಟಲ್ ಆರ್ಡರ್ ಅಥವಾ ಡಿಮಾಂಡ್ ಡ್ರಾಫ್ಟ್‌ನ್ನು 5-00 ರೂಪಾಯಿಗಳ ಅಂಚೆ ಚೀಟಿ ಅಂಟಿಸಿದ ಸ್ವವಿಳಾಸ ಬರೆದಿರುವ ಎರಡು 11X4 ಅಳತೆಯ ಲಕೋಟೆಗಳನ್ನು ಲಗತ್ತಿಸಿ ದಿನಾಂಕ **15.4.1999ರಂದು** ಸಂಜೆ **17-00** ಘಂಟೆಯೊಳಗಾಗಿ ಸಂಬಂಧಪಟ್ಟ ವಿಭಾಗೀಯ ಕಛೇರಿಯನ್ನು ತಲುಪುವಂತೆ ಸಲ್ಲಿಸುವುದು. **ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಹುದ್ದೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.**

ವಯೋಮಿತಿ

ಚಾಲಕರ ಹುದ್ದೆಗೆ ಕನಿಷ್ಠ 24 ವರ್ಷಗಳು ಗರಿಷ್ಠ 35 ವರ್ಷಗಳು ನಿರ್ವಾಹಕ ಮತ್ತು ಸಹಾಯಕ ಹುದ್ದೆಗಳಿಗೆ - 18 ರಿಂದ 33 ವರ್ಷಗಳು. ಪ.ಜಾ.,ಪ.ಪಂ., ವ1, 2ಎ, 2ಬಿ, 3ಎ, ಮತ್ತು 3ಬಿಯವರಿಗೆ ಈಗಾಗಲೇ ಅನ್ವಯಗೊಳ್ಳುವ ಸಡಿಲತೆಗಳು ಎಂದಿನಂತೆ ಅನ್ವಯಗೊಳ್ಳುತ್ತವೆ.

ನೇಮಕಾತಿ ವಿಧಾನ

1. ಅರ್ಹ ಅಭ್ಯರ್ಥಿಗಳನ್ನು ಮಾತ್ರ ಅವರು ಅರ್ಜಿಯ ಜೊತೆಗೆ ಸಲ್ಲಿಸಿದ ಪ್ರಮಾಣ ಪತ್ರ/ ದಾಖಲೆಗಳ ಹಾಗೂ ದೈಹಿಕ ಅರ್ಹತೆಯ ಪರಿಶೀಲನೆಗೆ (ದೇಹದಾರ್ಢ್ಯತೆ ನಿಗದಿ ಪಡಿಸಿದ ಹುದ್ದೆಗಳಿಗೆ) ಕರೆಯಲಾಗುವುದು.
2) ಚಾಲಕ ಹುದ್ದೆಗೆ ಅರ್ಹರಾದ ಅಭ್ಯರ್ಥಿಗಳನ್ನು ವೃತ್ತಿ ಪರೀಕ್ಷೆಗೆ ಒಳಪಡಿಸಿ ಅದರಲ್ಲಿ ಪಡೆದ ಸರಾಸರಿ ಅಂಕಗಳ ಆಧಾರದ ಮೇಲೆ/ ನಿರ್ವಾಹಕ ಹುದ್ದೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಡೆದ ಸರಾಸರಿ ಅಂಕಗಳ ಆಧಾರದ ಮೇಲೆ ಹಾಗೂ ಸಹಾಯಕ-ಬ ಹುದ್ದೆಗೆ ಐ.ಟಿ.ಐ./ಐ.ಟಿ.ಸಿ./ಎನ್.ಎ.ಸಿ. ಪರೀಕ್ಷೆಯಲ್ಲಿ ಪಡೆದ ಸರಾಸರಿ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.
3) ಆಯ್ಕೆಯನ್ನು ಕ.ರಾ.ರ.ಸಾ.ಸಂಸ್ಥೆಯ ವರ್ಗ ಮತ್ತು ನೇಮಕಾತಿ ನಿಯಮಾವಳಿಗಳು 1982ರ ಹಾಗೂ ಕಾಲ ಕಾಲಕ್ಕೆ ರಾಜ್ಯ ಸರಕಾರವು ಹೊರಡಿಸಿದ ಆದೇಶಗಳನ್ವಯ ಮಾಡಲಾಗುವುದು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ.

ವಿಶೇಷ ಸೂಚನೆ

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಮೇಲಿನ ಹುದ್ದೆಗಳಿಗೆ ಹೆಸರನ್ನು ನೋಂದಾಯಿಸಿದ ಎಲ್ಲ ಅಭ್ಯರ್ಥಿಗಳು ಈ ವಿಶೇಷ ಸೂಚನೆಯನ್ನೇ ಅಭ್ಯರ್ಥಿಗಳಿಗೆ ಕಳುಹಿಸಲಾದ ತಿಳುವಳಿಕೆ ಪತ್ರ ಎಂದು ಪರಿಗಣಿಸಿ ನಿಗದಿತ ದಿನಾಂಕದೊಳಗೆ ಅರ್ಜಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

ವಿಳಾಸ

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಚೇರಿ, ಗೋಕುಲ ರಸ್ತೆ,
ಹುಬ್ಬಳ್ಳಿ - 580 030.

ಕೇಂದ್ರ ಕಛೇರಿಯನ್ನು ಬಿಟ್ಟು ಉಳಿದ ವಿಭಾಗಗಳಿಗೆ ಈ ಕೆಳಗಿನ ವಿಳಾಸದಲ್ಲಿ ಆಯಾಯ ಜಿಲ್ಲೆಗಳ ಹೆಸರನ್ನು ಬರೆಯಿರಿ.

ವಿಭಾಗೀಯ ನಿಯಂತ್ರಣಾಧಿಕಾರಿ
ವಾ.ಕ.ರ.ಸಾ.ಸಂಸ್ಥೆ.
(ಜಿಲ್ಲೆಯ ಹೆಸರು ನಮೂದಿಸಿ)

ಅರ್ಜಿ ನಮೂನೆಗಾಗಿ 20.3.1999ರ 'ಸಂಯುಕ್ತ ಕರ್ನಾಟಕ'ದ ಜಾಹೀರಾತು ಸಂಖ್ಯೆ 2/99ನ್ನು ನೋಡಿ. ■

ಬಣ್ಣದ ಬದುಕು

ಬದುಕು
ಬಣ್ಣದ ಚಿತ್ತಾರವು
ಕೈಯಲ್ಲಿ ಹಣವಿದ್ದಾಗ
ಬರಿಯ ಕಗ್ಗತ್ತಲು ಕೈ
ಖಾಲಿಯಾದಾಗ!

-ಕೆ.ಬಿ. ವೀರಣ್ಣ ಕಣ್ಣಾಗಾಲ, ಬನಹಟ್ಟಿ

ತಂತ್ರ

ಭಾರತದಲ್ಲಿ
ರಾಜಕಾರಣಿಗಳಿಗೆ
ಮಾತ್ರ ಸಿಕ್ಕಿದೆ
ಸ್ವಾತಂತ್ರ
ಯಾಕೆಂದರೆ,
ಅವರು ಚೆನ್ನಾಗಿ
ತಿಳಿದುಕೊಂಡಿದ್ದಾರೆ
ಸ್ವಾಹತಂತ್ರ!

-ಅಂಕೋಲಾ ದೇವಿದಾಸ ಸುವರ್ಣ

ಅರ್ಥ


ಹುಟ್ಟಿದ್ದಕ್ಕಾಗಿ
ಬದುಕುವುದಕ್ಕಿಂತ
ಬದುಕಿಗಾಗಿ
ಬದುಕ ಬಯಸುವಾತ
ಭೂ ಭಾರವಾಗಲಾರ

-ಉದಯ್ ಪುತ್ತೂರ, ಉಡುಪಿ.

ಬಲಿತಂತೆ

ಎಳಸಿರುವಾಗ
ಮಕ್ಕಳಷ್ಟೇ ಅಲ್ಲ
ಮುಳ್ಳುಗಳೂ
ಮುದ್ದಾಗಿರುತ್ತವೆ.
ಬೆಳೆದಂತೆಲ್ಲ
ಮುಳ್ಳುಗಳಷ್ಟೇ ಅಲ್ಲ
ಮಕ್ಕಳೂ ನಮ್ಮನ್ನು
ಚುಚ್ಚುತ್ತವೆ.

-ನೀ. ಶ್ರೀಶೈಲ, ಜಮಖಂಡಿ.



'ಸಂಯುಕ್ತ ಕರ್ನಾಟಕ'ದ

ಕೆ. ಶಾಮರಾವ್

ತಮಗೆ ತಾವೇ ಮಾದರಿ

ಆರು ದಶಕಗಳ ಕನ್ನಡ ಪತ್ರಿಕೋದ್ಯಮದ ಪ್ರತೀಕದಂತಿರುವ ಕೆ. ಶಾಮರಾಯರಿಗೆ ಟಿ.ಎಸ್.ಆರ್. ಪ್ರಶಸ್ತಿ ಸಂದಿದೆ. ಸದಾ ಹೊಸತನಕ್ಕಾಗಿ ಕಾತರಿಸುವ ಹಳೆ ತಲೆಮಾರಿನ ಈ ಹಿರಿಯ ಚೇತನದ ವ್ಯಕ್ತಿತ್ವ ಎಂತಹದು?

■ **ವಿಶ್ವೇಶ್ವರ ಭಟ್**
ಸಹಾಯಕ ಪ್ರಾಧ್ಯಾಪಕರು
ಏಶಿಯನ್ ಕಾಲೇಜ್ ಆಫ್ ಜರ್ನಲಿಸಂ
ಬೆಂಗಳೂರು

ಆರೇಳು ವರ್ಷಗಳ ಹಿಂದಿನ ಘಟನೆಯಿರಬಹುದು. ಕಾವೇರಿ ಜಲವಿವಾದ ನ್ಯಾಯ ಪಂಚಾಯಿತಿ ಕರ್ನಾಟಕದ ವಿರುದ್ಧ ತೀರ್ಪು ನೀಡಿದಾಗ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ರಾತ್ರಿ ಪಾಳಿಯಲ್ಲಿದ್ದ ನಾವು ಸೂಕ್ತವಾದ ಎಂಟು ಕಾಲಮ್ ತಲೆಬರಹ (ಹೆಡ್‌ಲೈನ್ಸ್) ಕ್ಕಾಗಿ ತಲೆ ಕೆಡಿಸಿಕೊಳ್ಳುತ್ತಿದ್ದೆವು. ಅದು ಅಂದಿನ ಪ್ರಮುಖ ಸುದ್ದಿಯಾಗಿತ್ತಲ್ಲದೇ ರಾಜ್ಯದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ ಮೇಲೆ ಭಾರೀ ಪರಿಣಾಮ ಬೀರುವ ಬೆಳವಣಿಗೆಯಾಗಿತ್ತು. 'ಕಾವೇರಿ: ರಾಜ್ಯಕ್ಕೆ ಮುಳುವಾದ ತೀರ್ಪು' ಎಂಬ ತಲೆಬರಹ ನೀಡಲು ನಿರ್ಧರಿಸಿದೆವು.

ರಾತ್ರಿ ಹತ್ತುಗಂಟೆ ದೂರದರ್ಶನ ವಾರ್ತೆ ಕೇಳಿ ಕಚೇರಿಗೆ ಫೋನ್ ಮಾಡಿದ 'ಸಂಯುಕ್ತ ಕರ್ನಾಟಕ'ದ ವ್ಯವಸ್ಥಾಪಕ ಸಂಪಾದಕ ಕೆ. ಶಾಮರಾಯರು ಯಾವ ಸುದ್ದಿಯನ್ನು 'ಲೀಡ್' (ಪ್ರಮುಖ ಸುದ್ದಿ) ಮಾಡಿಕೊಂಡಿದ್ದೀರಿ ಎಂದು ವಿಚಾರಿಸಿದರು.

ಅನೇಕ ಮಂದಿಗೆ ಗೊತ್ತಿರಲಿಕ್ಕಿಲ್ಲ. ಪತ್ರಿಕಾ ಸಂಪಾದಕರಾದವರು ಸಾಯಂಕಾಲ ಏಳು ಗಂಟೆಯಾದ ಬಳಿಕ ಏನೇ ಪ್ರಮುಖ ಘಟನೆ ಜರುಗಲಿ ಜಾಗ ಖಾಲಿ ಮಾಡಿಬಿಡುತ್ತಾರೆ. ಸುದ್ದಿಯ ನಿರ್ವಹಣೆ ಏನಿದ್ದರೂ ತಮ್ಮ ಕಿರಿಯ ಸಹೋದ್ಯೋಗಿಗಳಿಗೆ ಬಿಟ್ಟ ವಿಚಾರ ಎಂಬುದು ಅವರ ತೀರ್ಮಾನ.

ಶಾಮರಾಯರು ಹಾಗಲ್ಲ. ಅಂದಿನ ಪ್ರತಿ ವಿದ್ಯಮಾನದ ಮೇಲೆ ಕಣ್ಣಿಟ್ಟಿರುತ್ತಾರೆ. ಯಾವ ವಿಷಯ ಲೀಡ್ ಸುದ್ದಿಯಾಗಿ ಮಾಡಲಾಗಿದೆಯೆಂದು ತಿಳಿದುಕೊಳ್ಳುತ್ತಾರೆ. ರಾತ್ರಿ ಮಲಗುವುದಕ್ಕಿಂತ ಮೊದಲು ಪತ್ರಿಕಾ ಕಚೇರಿಗೆ ಫೋನ್ ಮಾಡಿ ಎಲ್ಲವನ್ನೂ ವಿಚಾರಿಸುತ್ತಾರೆ. ಹೀಗೆ ಮಾಡಿದಾಗಲೇ ಅವರಿಗೆ ಅಂದಿನ ಕೆಲಸ ಪೂರ್ತಿಯಾದಂತೆ. ಅವರು ಬೇರೆ ಊರಿಗೆ ಹೋದಾಗಲೂ ಕಚೇರಿಗೆ ಫೋನ್ ಮಾಡಿ ಅಂದಿನ ಪತ್ರಿಕೆಯ ಸುಧಾರಣೆಗೆ ತಮ್ಮ 'ಕಾಣಿಕೆ' ಸಲ್ಲಿಸುವುದುಂಟು.

ಅಂದು ರಾತ್ರಿ ಶಾಮರಾಯರ ಫೋನ್ ಬಂತು. ಎಂದಿನಂತೆ ತಮ್ಮ ಮಾಮೂಲು ಧಾಟಿಯಲ್ಲಿ ಸುದ್ದಿಯ ಬಗ್ಗೆ ವಿಚಾರಿಸಿದರು. ಹೇಳಿದ್ದಾಯಿತು. ಇಂಥ ಪ್ರಮುಖ ಸುದ್ದಿಗೆ ಯಾವ ತಲೆಬರಹ ನೀಡಿದ್ದೀರಿ ಎಂದು ಕೇಳಿದರು. 'ಕಾವೇರಿ: ರಾಜ್ಯಕ್ಕೆ ಮುಳುವಾದ ತೀರ್ಪು' ಎಂಬ ತಲೆಬರಹ ನೀಡಿದ್ದಾಗಿ ಅವರಿಗೆ ತಿಳಿಸಲಾಯಿತು.

ಆಶ್ಚರ್ಯವಾಗಬಹುದು. ರಾಯರು ಇಂಥ ಸಣ್ಣಪುಟ್ಟ ವಿಷಯವನ್ನೂ ಗಮನವಿಟ್ಟು ವಿಚಾರಿಸುತ್ತಾರೆ. ಯಾವ ಸುದ್ದಿಗೆ ಎಲ್ಲಿ ಜಾಗ ಕಲ್ಪಿಸಲಾಗಿದೆ ಹಾಗೂ ಯಾವ ತಲೆಬರಹ ನೀಡಲಾಗಿದೆಯೆಂಬುದನ್ನು ಅವರು ರಾತ್ರಿ ಫೋನಿನಲ್ಲಿ ವಿಚಾರಿಸಲು ಮರೆಯುವುದಿಲ್ಲ.

ಕಾವೇರಿ ಜಲವಿವಾದ ನ್ಯಾಯಪಂಚಾಯಿತಿ ಕರ್ನಾಟಕದ ವಿರುದ್ಧ ನೀಡಿದ ತೀರ್ಪಿನ ಸುದ್ದಿಗೆ ನಾವು ನೀಡಿದ ತಲೆಬರಹ ಶಾಮರಾಯರಿಗೆ ಸಪ್ಪೆಯೆನಿಸಿರಬೇಕು. ನಿರ್ದಾಕ್ಷಿಣ್ಯವಾಗಿ ಹೇಳಿದರು: 'ಅದೆಂಥ ನೀರಸ ಹೆಡ್‌ಲೈನ್ ನೀಡಿದ್ದೀರಿ. ಇಷ್ಟು ಪ್ರಮುಖ ಸುದ್ದಿಗೆ ಇಂಥ ಡಲ್ ಹೆಡ್‌ಲೈನ್ ನೀಡಬಹುದೇ? ನಿಮ್ಮ ಹೆಡ್‌ಲೈನ್ ಹೊಡೆದು ಹಾಕಿ. ನಾನು ಹೇಳುತ್ತೇನೆ. ಬರೆದುಕೊಳ್ಳಿ'

ರಾಯರು ತಟ್ಟನೆ ಒಂದು ಹೆಡ್‌ಲೈನ್ ಹೇಳಿದರು. ಅದನ್ನು ಅವರು ಬಹಳ ವಿಚಾರ ಮಾಡಿ ಹೇಳಿದ್ದಲ್ಲ. ಚಕ್ಕನೆ ನುಡಿದದ್ದು. ಅವರು ಹೆಡ್‌ಲೈನ್ ಕೊಡುವುದು ಹಾಗೇ. ಅವರು

ತಲೆಬರಹ ಕೊಟ್ಟರೆ ಸರಿಯಾಗಿ ಕಾಲಮ್‌ನಲ್ಲಿ ಫಿಟ್ ಆಗಿಬಿಡುತ್ತದೆ. ತಮ್ಮ ಆರು ದಶಕಗಳ ಪತ್ರಿಕಾ ವ್ಯವಸಾಯದಲ್ಲಿ ಅವರು ಎಷ್ಟು ತಲೆ ಬರಹ ನೀಡಿದ್ದಾರೋ?

ಈ ಸುದ್ದಿಗೆ ಶಾಮರಾಯರು ಕೊಟ್ಟ ಶೀರ್ಷಿಕೆ 'ಕಾವೇರಿ ನೀರು ಕೃಷ್ಣಾರ್ಪಣ'

ಎಂಟು ಕಾಲಮ್‌ನಲ್ಲಿ ದಪ್ಪಕ್ಷರದಲ್ಲಿ ತಲೆಬರಹ ಪ್ರಕಟವಾಯಿತು. ಕೇವಲ ಮೂರು ಪದಗಳಲ್ಲಿ ಆ ಪ್ರಮುಖ ಸುದ್ದಿಯನ್ನು ರಾಯರು ರೋಚಕವಾಗಿ ಹೇಳಿದ್ದರು. ಅಂದು ಸಂಯುಕ್ತ ಕರ್ನಾಟಕ ಉಳಿದೆಲ್ಲ ಪತ್ರಿಕೆಗಳನ್ನೂ ಮೀರಿಸಿತ್ತು!

ಅಂದಿನ ದಿನಗಳಲ್ಲಿಯೇ ಇರಬೇಕು. ಕಾವೇರಿ ಜಲವಿವಾದದ ಬಗ್ಗೆ ಸಮಗ್ರ ಲೇಖನ ಮಾಲೆಯನ್ನು ಬರೆಯುವಂತೆ ಶಾಮರಾಯರು ಸೂಚಿಸಿದ್ದರು. ನಲವತ್ತು ಮಾಲಿಕೆಗಳಲ್ಲಿ ಪ್ರಕಟಣೆಗೆ ಯೋಜಿಸಿದ ಈ ಲೇಖನಮಾಲೆಗೆ ಅಂದಿನ ಸ್ಥಾನಿಕ ಸಂಪಾದಕರು 'ಕಾವೇರಿ ಜಲವಿವಾದದ ಸಮಗ್ರ ಪರಿಚಯ' ಎಂಬ ಶೀರ್ಷಿಕೆ ಕೊಟ್ಟಿದ್ದರು. ಅದು ಪ್ರಿಂಟಾಗಿ ಪುಟ ವಿನ್ಯಾಸವಾಗುತ್ತಲಿತ್ತು. ಪುಟ ವಿನ್ಯಾಸ ಮುಗಿದು ಮುದ್ರಣಕ್ಕೆ ಕಳಿಸುವ ಮೊದಲು ರಾಯರು ಪುಟದ ಮೇಲೊಮ್ಮೆ ಕಣ್ಣಾಡಿಸುವುದು ರೂಢಿ. ಅವರೊಮ್ಮೆ ಕಣ್ಣಾಡಿಸಿದರೆ ಸಾಕು ಯಾವುದಾದರೂ ತಪ್ಪು ಅವರಿಗೆ ಕಾಣಿಸದೇ ಇರುವುದಿಲ್ಲ.

'ಕಾವೇರಿ ಜಲವಿವಾದದ ಸಮಗ್ರ ಪರಿಚಯ' ಎಂಬ ಶೀರ್ಷಿಕೆ ತೆಗೆದು ಹಾಕಿ ಅಲ್ಲಿಯೇ ಬೇರೆ ಶೀರ್ಷಿಕೆ ಬರೆದು ಅದನ್ನೇ ಮುದ್ರಿಸುವಂತೆ ರಾಯರು ಆದೇಶಿಸಿದರು. ಮೊದಲ ಶೀರ್ಷಿಕೆ ಬರೆದ ಸ್ಥಾನಿಕ ಸಂಪಾದಕರು ರಾಯರ ಪಕ್ಕದಲ್ಲಿಯೇ ಕೈಕಟ್ಟಿ ನಿಂತಿದ್ದರು. ರಾಯರು ಆ ಲೇಖನಮಾಲೆಗೆ ಶೀರ್ಷಿಕೆ ಕೊಟ್ಟರು - 'ಕಾವೇರಿ ಕಣ್ಣೀರ ಕತೆ'

ಈ ಲೇಖನಮಾಲೆ ಅನೇಕ ಮಂದಿ ಓದುಗರ ಗಮನ ಸೆಳೆದಿದ್ದರೆ ಅದಕ್ಕೆ ಈ ಶೀರ್ಷಿಕೆಯೇ ಕಾರಣವೆಂದು ಹೇಳಬೇಕಿಲ್ಲ.

ಶಾಮರಾಯರನ್ನು ಪತ್ರಿಕೋದ್ಯಮದ 'ಭೀಷ್ಮ' ಎಂದು ಬಣ್ಣಿಸುವುದುಂಟು. ಇದರಲ್ಲೇನೂ ಉತ್ಪ್ರೇಕ್ಷೆಯಿಲ್ಲ. ಎಂಬತ್ತನಾಲ್ಕರ ಇಳಿ ವಯಸ್ಸಿನಲ್ಲೂ ತರುಣರನ್ನು ನಾಚಿಸುವಂತೆ ದಿನಕ್ಕೆ ಹತ್ತು-ಹನ್ನೆರಡು ತಾಸು ಕೆಲಸ ಮಾಡುವ, ಹತ್ತು ಹನ್ನೆರಡು ದಿನಪತ್ರಿಕೆಗಳನ್ನು ಚಾಚೂ ತಪ್ಪದೆ ಓದುವ, ಎಲ್ಲ ನಿಯತಕಾಲಿಕೆಗಳನ್ನು ಓದುವ, ಪತ್ರಿಕೆಯ ನಿರ್ವಹಣೆ ಹಾಗು ಆಡಳಿತಕ್ಕೆ ಸಂಬಂಧಿಸಿದ ಕೆಲಸ ಮತ್ತು ಒತ್ತಡಗಳಲ್ಲಿ ತಮ್ಮನ್ನು ಸದಾ ಒಡ್ಡಿಕೊಳ್ಳುವ, ಪತ್ರಿಕೆಯ ಪ್ರಸಾರದ ದೃಷ್ಟಿಯಿಂದ ಊರೂರು ಸುತ್ತುವ, ಎಲ್ಲ ವಿಭಾಗಗಳ ಮೇಲೆ ಸಂಪೂರ್ಣ ಹತೋಟಿ ಹೊಂದಲು ಪ್ರತಿಯೊಂದನ್ನೂ ಕೂಲಂಕಷವಾಗಿ ಗಮನಿಸುವ, ಪ್ರಮುಖ ವಿದ್ಯಮಾನಗಳು ಘಟಿಸಿದಾಗ ಸ್ವತಃ ಸುದ್ದಿ ಬರೆಯಲು ಕುಳಿತು ಬಿಡುವ, ದಿನದ ಇಪ್ಪತ್ನಾಲ್ಕು ಗಂಟೆಯಲ್ಲೂ ಪತ್ರಿಕೆ ಬಗ್ಗೆ ಯೋಚಿಸುವ, ಪತ್ರಿಕೆಯನ್ನೇ ಉಸಿರಾಡುವ, ತಮ್ಮ ಜೀವವನ್ನೇ ಕನ್ನಡ ಪತ್ರಿಕೋದ್ಯಮಕ್ಕೆ ಸವೆಸಿದ, ಸಮರ್ಪಿಸಿದ ಶಾಮರಾಯರನ್ನು 'ಭೀಷ್ಮ'ಎಂದು ಕರೆಯದೇ ಮತ್ತೇನೆಂದು ಕರೆಯಲು ಸಾಧ್ಯ? ಶಾಮರಾಯರ ಹಾಗೆ ಪತ್ರಿಕಾ ಕೃಷಿ ಮಾಡಿದವರು ಬಹಳ ವಿರಳ. ಅವರಿಗೆ ಬೇರೆ ಹೋಲಿಕೆ ಸಿಗದು. ಅವರು ತುಳಿದದೇ ದಾರಿ. ಅದೊಂದು ಅಪರೂಪದ ಅಮೋಘವಾದ ದಾರಿ.

ಪತ್ರಿಕಾ ಕಚೇರಿಯಲ್ಲಿದ್ದಾಗ ರಾಯರನ್ನು ನೋಡಬೇಕು. ಅವರ ಚಲನವಲನ ಗಮನಿಸಬೇಕು. ಅವರಿಗೆ ದಣಿವೆಂಬುದೇ ಇಲ್ಲ. ಪ್ರತಿ ಸಲ ಅವರು ಕಚೇರಿಗೆ ಬಂದು ಪತ್ರಿಕೆಯೊಂದಿಗೆ ಉಸಿರಾಡಿದರೆ ನವತಾರುಣ್ಯ ಧರಿಸಿಬಿಡುತ್ತಾರೆ. ಹೀಗಾಗಿ ಅವರಿಗೆ ಮುಪ್ಪು ಆವರಿಸುವುದಿಲ್ಲ.

ಶಾಮರಾಯರು ತೀವ್ರ ಹಠವಾದಿ, ಛಲಗಾರ. ಬಹಳ ಸಿಟ್ಟಿನ ಸ್ವಭಾವದವರು ಎಂದು ಅನೇಕರು ಭಾವಿಸಿದ್ದಾರೆ. ಅದಕ್ಕೆ ಅನೇಕ ನಿದರ್ಶನಗಳೂ ಇಲ್ಲದಿಲ್ಲ. ಇದರಿಂದ ಅನೇಕರು ಅವರನ್ನು ತಪ್ಪಾಗಿ ಭಾವಿಸಿದ್ದುಂಟು. ಪತ್ರಿಕೆಯ ಹಿತಾಸಕ್ತಿಯ ವಿಷಯಕ್ಕೆ ಬಂದರೆ ರಾಯರು ಹಠವಾದಿ ಅಷ್ಟೇ ಅಲ್ಲ, ಕಠೋರವಾದಿ. ಪತ್ರಿಕೆಯಲ್ಲಿ ಏನಾದರೂ ತಪ್ಪು ದೋಷಗಳು ಆದಾಗ ಆ ದಿನ ರಾಯರಲ್ಲಿ ಉಕ್ಕುವ ಕೋಪವನ್ನು ನೋಡಬೇಕು. ತಮ್ಮ ಕೋಣೆಯಿಂದ ದಡದಡನೆ ಎದ್ದು ಸಂಪಾದಕೀಯ ವಿಭಾಗಕ್ಕೆ ಬಂದು ಪತ್ರಿಕೆಯನ್ನು ಸಂಪಾದಕರ ಮುಖಕ್ಕೆ ಎಸೆದು ಹೊರಟು ಹೋಗಿಬಿಡುತ್ತಾರೆ. ಆಗ ಅವರ ಕೋಪಾಗ್ನಿ ಎಷ್ಟೊಂದು ಉರಿಯುತ್ತಿರುತ್ತದೆಂದರೆ ಅವರಿಗೆ ಮಾತಾಡಲು ಸಹ ಆಗದಷ್ಟು. ಹತ್ತು ನಿಮಿಷದ ನಂತರ ಬರುವ ರಾಯರಲ್ಲಿ ಕೋಪ ಮಾಯ! ಆ ತಪ್ಪು ಹೇಗಾಯಿತು, ಏಕಾಯಿತು, ಮಾಡಿದ್ದು ಯಾರು ಎಂದು ಪರಾಮರ್ಶಿಸುವ ತಹತಹ. ಇಂಥ ತಪ್ಪು ಇನ್ನು ಮುಂದೆ ಆಗದಂತೆ ನೋಡಿಕೊಳ್ಳಿ ಎಂಬ ಎಚ್ಚರಿಕೆ ನುಡಿ. ಸಣ್ಣಪುಟ್ಟ ತಪ್ಪು ಮಾಡಿದಾಗ ರಾಯರು ಸಿಬ್ಬಂದಿಯನ್ನು ಕೆಲಸದಿಂದ ತೆಗೆದು ಹಾಕಿದ್ದುಂಟು. ಆದೇ ಸಿಬ್ಬಂದಿ ತನ್ನ ತಪ್ಪನ್ನು ಒಪ್ಪಿಕೊಂಡು, ಮುಂದೆ ಎಚ್ಚರವಹಿಸುವ ಭರವಸೆ ನೀಡಿದ ಬಳಿಕ ಪುನಃ ಕೆಲಸಕ್ಕೆ ಸೇರಿಸಿಕೊಂಡ ನಿದರ್ಶನಗಳಿಗೇನೂ ಕೊರತೆಯಿಲ್ಲ.

ಕೆಲವು ಪತ್ರಕರ್ತರು ಪತ್ರಿಕಾ ಕಚೇರಿಯಲ್ಲಿ ಇದ್ದಷ್ಟು ಹೊತ್ತು ಮಾತ್ರ ಪತ್ರಕರ್ತರು. ಅನಂತರ ಏನೇನೋ... ಆದರೆ ರಾಯರು ಮಾತ್ರ ಪತ್ರಿಕಾ ಕಚೇರಿಯಲ್ಲಿರಲಿ... ಎಲ್ಲಿಯೇ ಇರಲಿ ಅವರು ಪತ್ರಕರ್ತರೇ. ಪತ್ರಿಕಾ ಕಚೇರಿಯಲ್ಲಿ ಸಂಪಾದಕರಾದವರು ಸುದ್ದಿ ಬರೆವ ಗೋಜಿಗೆ ಹೋಗುವುದಿಲ್ಲ. ಆದರೆ ರಾಯರು ಹಾಗಲ್ಲ.

ಕೆಲವರ್ಷಗಳ ಹಿಂದೆ ಉತ್ತರ ಖಂಡದಲ್ಲಿ ಭೂಕಂಪ ಸಂಭವಿಸಿದಾಗ ಶಾಮರಾಯರು ಒಂದು ಹೊರೆ ಪಿಟಿಐ, ಯುಎನ್‌ಐ ಕಾಪಿಗಳನ್ನು ಮೇಜಿನ ಮೇಲೆ ಹರಡಿಕೊಂಡು ಸುದ್ದಿ ಬರೆದ ದೃಶ್ಯ ಕಣ್ಣಿಗೆ ಕಟ್ಟುವಂಥದ್ದು. ಬೆಳಗಿನ ಜಾವದಲ್ಲಿ ಸಂಭವಿಸಿದ ಭೂಕಂಪದಲ್ಲಿ ಸಾವಿರಾರು ಮಂದಿ ಸತ್ತ ಸುದ್ದಿ ಸಂಜೆಯಾಗುವ ವೇಳೆಗೆ ಏಜೆನ್ಸಿಯಲ್ಲಿ ಆದರ ಮಾಹಿತಿ ಒಂದು ಹೊರೆಯಾಗಿ ಬಿದ್ದಿತ್ತು. ಆ ದಿನ ಮನೆಗೆ ಹೋಗದ ರಾಯರು, ಏಜೆನ್ಸಿ ಸುದ್ದಿಯನ್ನು ಒಮ್ಮೆ ಸಂಪೂರ್ಣವಾಗಿ ಓದಿ ಬರೆಯಲು ಕುಳಿತೇಬಿಟ್ಟರು. ಆಗಷ್ಟೇ ಪತ್ರಿಕೋದ್ಯಮಕ್ಕೆ ಪದಾರ್ಪಣ ಮಾಡಿದ ನಮಗೆ ಈ ದೃಶ್ಯ ಮೈನವಿರೇಳಿಸುವಂಥದ್ದು.

ಶಾಮರಾಯರ ಬದುಕು, ತಾನೊಬ್ಬ ಉತ್ತಮ ಪತ್ರಕರ್ತನಾಗಬೇಕು ಎಂದು ಹಂಬಲಿಸುವವರಿಗೆ ವಿಶ್ವಕೋಶ. ಸಂಯುಕ್ತ ಕರ್ನಾಟಕದಲ್ಲಿ ಕೆಲಸ ಮಾಡುವಾಗ ನಾನೊಮ್ಮೆ 'ಅಭಿವ್ಯಕ್ತಿ' ಎಂಬ ಪದವನ್ನು ಬಳಸಿದ್ದೆ. ಆಗ ಅವರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಆಗಿರಲಿಲ್ಲ. ರಾಯರು ಇಡೀ ಪತ್ರಿಕೆಯನ್ನು ಓದುತ್ತಿದ್ದರು. ಅವರು ಕಣ್ಣಿನ ಆಪರೇಶನ್ ಮುಗಿಸಿ ಬಂದ ಬಳಿಕ 'ಸುದ್ದಿಯ ಒಳಗೆ ತಪ್ಪಾಗಿದ್ದರೆ ನಾನು ಓದುವುದಿಲ್ಲ. ಹೆಡ್‌ಲೈನ್ ಮಾತ್ರ ಓದುತ್ತೇನೆ. ಅದರಲ್ಲಿ ತಪ್ಪಿದ್ದರೆ ಬಿಡುವುದಿಲ್ಲ' ಎಂದು ತಮಾಷೆಯಿಂದ ಹೇಳುತ್ತಿದ್ದರು. ಅದಿರಲಿ. ರಾಯರು ಕೋಪಾವೇಶದಿಂದ 'ಅಭಿವ್ಯಕ್ತಿ' ಎಂಬ ಪದ ಬಳಸಿದವರು ಯಾರು ಎಂದು ಗುಡುಗಿದರು. ಡೆಸ್ಕ್‌ನಿಂದ ಎದ್ದು ಹೋಗಿ ಅವರ ಮುಂದೆ ಕೈಕಟ್ಟಿ ನಿಂತೆ. ರಾಯರು ಕೋಪದಲ್ಲಿ ನನ್ನನ್ನು ನುಂಗಿ ಬಿಡುತ್ತಾರೋ ಎಂದೆನಿಸಿತು. 'ನಮ್ಮ ಪತ್ರಿಕೆಯನ್ನು ವಿದ್ವಾಂಸರಿಂದ ಹಿಡಿದು, ಆಗಷ್ಟೇ ಅಕ್ಷರ ಕಲಿತವರೂ ಓದುತ್ತಾರೆ. ಅವರಿಗೆ ನೀನು ಬಳಸಿದ ಅಭಿವ್ಯಕ್ತಿ ಎಂದರೆ ಏನೆಂದು ಅರ್ಥವಾಗುವುದಿಲ್ಲ. ಪತ್ರಿಕೆ ಓದುವಾಗ ಪಕ್ಕದಲ್ಲಿ ಡಿಕ್ಷನರಿ ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಬಾರದು. ಜನಸಾಮಾನ್ಯರ ಭಾಷೆಯೇ ಪತ್ರಿಕಾ ಭಾಷೆ. ಸರಳವಾಗಿ, ಸಂಕ್ಷಿಪ್ತವಾಗಿ ಬರೆಯಬೇಕು. ನಮ್ಮ ಬರವಣಿಗೆ ಓದುವವನಿಗೆ ಹೊರೆಯಾಗ

ಬಾರದು.'' ರಾಯರು ತಮ್ಮ ನಾಲ್ಕು ಮಾತಿನಲ್ಲಿ ನನಗೊಂದು ಪಾಠವನ್ನು ತೆರೆದಿಟ್ಟಿದ್ದರು. ಸರಳವಾದ ಪ್ರಯೋಗ, ಸೂಕ್ತ ಪದ ಬಳಕೆ, ಚಿಕ್ಕವಾಕ್ಯದ ನೇರ ನಿರೂಪಣೆ ಹಾಗೂ ಪರಿಚಿತ ಪದ ಪ್ರಯೋಗದ ಬಗ್ಗೆ ರಾಯರಿಂದ ಕೇಳಿಸಿಕೊಂಡ ಮಾತುಗಳು ಅನೇಕ ಪತ್ರಕರ್ತರ ಬರವಣಿಗೆಯ ಬುನಾದಿಯಾಗಿವೆ.

ರಾಯರು ಬರವಣಿಗೆ ಬಗ್ಗೆ ನಮಗೆಲ್ಲ ಹೀಗೆ ಉಪದೇಶ ಮಾಡುತ್ತಾರೆ, ಅವರು ಹೇಗೆ ಬರೆಯಬಹುದೆಂದು ತಿಳಿಯುವ ಕುತೂಹಲದಿಂದ ಅವರು ಸಂಜಯ ಎಂಬ ಹೆಸರಿನಲ್ಲಿ ಬರೆದ ಲೇಖನಗಳನ್ನು ಹಳೆಯ ಸಂಯುಕ್ತ ಕರ್ನಾಟಕದಲ್ಲಿ ಹುಡುಕಾಡಿದಾಗ ಅವರು ಭಾಷೆಯನ್ನು ಬಳಸುವ, ಬಗ್ಗಿಸುವ, ಬಳುಕಿಸುವ ಪರಿ ಕಂಡು ನಿಬ್ಬೆರಗಾದೆ. ಅದೊಂದು ವಿಶಿಷ್ಟ ಶೈಲಿ. ಅವರ ಭಾಷೆ ಅಪ್ಪಟ ಪತ್ರಿಕೋದ್ಯಮಿಯದು. ಅದು ನಿರಾಭರಣ. ಪದಗಳ ಬುಡಬುಡಕೆ ಇಲ್ಲ; ಕೇವಲ ವಿಷಯದ ಘರ್ಜನೆ. ಅವರ ನಡೆ, ನುಡಿಯಂತೆ ಲೇಖನಿಯೂ ನೇರ.

ಕಚೇರಿಯಲ್ಲಿ ಉತ್ಸಾಹದಿಂದ ಠಳಾಯಿಸುವ ರಾಯರನ್ನು ಅವರ ಮನೆಯಲ್ಲಿ ನೋಡಬೇಕು. ಯಾವುದೋ ಪುಸ್ತಕದೊಳಗೆ ಹೂತು ಹೋಗಿರುತ್ತಾರೆ. ಸದಾ ಅಧ್ಯಯನ ಶೀಲ. ಹೊಸ ಪುಸ್ತಕವೊಂದು ಮಾರುಕಟ್ಟೆಯಲ್ಲಿ ಬಿಡುಗಡೆಯಾಗಿದ್ದರೆ ಕೆಲ ದಿನಗಳಲ್ಲಿ ರಾಯರ ಮೇಜಿನ ಮೇಲೆ ಕುಳಿತಿರುತ್ತದೆ. ರಾಯರು ಅದನ್ನು ಒಂದೇ 'ಟೇಕ್'ಗೆ ಓದಿ ಪತ್ರಿಕೆಯಲ್ಲಿ ಅದರ ಸಾರವನ್ನು ಇಳಿಸಲು ಸಾಧ್ಯವೇ ಎಂದು ತಮ್ಮ ಸಹೋದ್ಯೋಗಿಗೆ ಕೊಡುತ್ತಾರೆ. ಅವರ ಮನೆಯಲ್ಲಿ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕಂಡು ದಂಗಾಗಿ ಹೋಗಿದ್ದೆ. ಪುಟ ವಿನ್ಯಾಸಕ್ಕೆ ಸಂಬಂಧಿಸಿದ ಪುಸ್ತಕವೊಂದನ್ನು ಅವರು ತೋರಿಸುತ್ತ ಅದನ್ನೆಲ್ಲ ತಮ್ಮ ಪತ್ರಿಕೆಯಲ್ಲಿ ಅಳವಡಿಸುವ ಬಗ್ಗೆ ಚಿಂತಿಸುತ್ತಿದ್ದರು. ಆ ಪುಸ್ತಕವನ್ನು ರಾಯರು ಅಮೆರಿಕಾದಿಂದ ತರಿಸಿಕೊಂಡಿದ್ದರು. ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಪುಸ್ತಕ, ನಿಯತಕಾಲಿಕೆಗಳಿಗೆ ಅವರು ಹಪಹಪಿಸುತ್ತಿರುತ್ತಾರೆ. ಯಾವುದಾದರೂ ಒಳ್ಳೆಯ ಲೇಖನವನ್ನು ಓದಿದರೆ ತಮ್ಮ ಪತ್ರಿಕೆಯ ಓದುಗರಿಗೆ ಉಣ ಬಡಿಸಲು ಯೋಚಿಸುತ್ತಿರುತ್ತಾರೆ. ಕೆಲ ವರುಷಗಳ ಹಿಂದೆ ನಗರದ ಪುಸ್ತಕ ಮಳಿಗೆಯೊಂದರಲ್ಲಿ ಫೂಲನ್ ದೇವಿ ಜೀವನಚರಿತ್ರೆಯನ್ನು ಕಂಡು ಅವರು ಅದನ್ನು ಖರೀದಿಸಿ ತಕ್ಷಣ ಓದಿ, ಕರ್ಮವೀರ ಪತ್ರಿಕೆಯಲ್ಲಿ ಅದರ ಸಾರವನ್ನು ನೀಡುವಂತೆ ತಮ್ಮ ಸಹೋದ್ಯೋಗಿಗೆ ಹೇಳಿದರು. ಇಂಗ್ಲಿಷ್ ಪತ್ರಿಕೆ ಓದುಗರಿಗೆ ಸಿಗುವುದಕ್ಕಿಂತ ಮೊದಲೇ ಕನ್ನಡದ ಓದುಗರಿಗೆ ತಿಳಿಸುವ ಉತ್ಸುಕತೆ ಅವರದು.


ರಾಯರು ಮೂರ್ನಾಲ್ಕು ವರ್ಷಗಳ ಹಿಂದೆ ಅಮೆರಿಕಕ್ಕೆ ಮಗ-ಮಗಳ ಮನೆಗೆ ಹೋದಾಗಲೂ ಪ್ರತಿದಿನ ಸಂಯುಕ್ತ ಕರ್ನಾಟಕ ಕಚೇರಿಗೆ ಫೋನ್ ಮಾಡಿ ಲೀಡ್ ಯಾವುದೆಂದು ವಿಚಾರಿಸಲು ಮರೆಯುತ್ತಿರಲಿಲ್ಲವಂತೆ. ದಿನವೂ ಪತ್ರಿಕೆಯನ್ನು ಅಮೆರಿಕಕ್ಕೆ ತರಿಸಿಕೊಳ್ಳುತ್ತಿದ್ದರು ಎಂದು ಅವರ ಕಚೇರಿಯ ಮಿತ್ರರು ಸಿಕ್ಕಾಗ ಹೇಳುತ್ತಿದ್ದರು. ರಾಯರು ಅಮೆರಿಕಕ್ಕೆ ಹೋದರು, ನಾವು ಕೆಲ ಕಾಲ ನಿಶ್ಚಿಂತೆಯಿಂದ ಇರಬಹುದು ಎಂದು ಭಾವಿಸಿದ್ದರೆ ತಪ್ಪು ಎಂದು ಅವರು ಪ್ರೀತಿಯಿಂದಲೇ ಗೊಣಗುತ್ತಿದ್ದರು. ರಾಯರು ಅಮೆರಿಕದಲ್ಲಿ ಕುಳಿತೇ ಪತ್ರಿಕೆಯ ಆಗು ಹೋಗುಗಳನ್ನು ನಿರ್ವಹಿಸುತ್ತಿದ್ದರು, ನಿಯಂತ್ರಿಸುತ್ತಿದ್ದರು. ಅವರಿಗೆ ಸಂಯುಕ್ತ ಕರ್ನಾಟಕವೇ ಸರ್ವಸ್ವ.

ಮುಳುಗಿ ಹೋಗುತ್ತಿದ್ದ 'ಸಂಯುಕ್ತ ಕರ್ನಾಟಕ' ಎಂಬ ಹಡಗನ್ನು ಸಂರಕ್ಷಿಸಿದ ರಾಯರು ಅದರ ಅಭಿವೃದ್ಧಿಗೆ ತಮ್ಮನ್ನು ಮುಡಿಪಾಗಿರಿಸಿದ್ದು ಎಲ್ಲರಿಗೂ ಗೊತ್ತಿದೆ. ರಾಯರು ಸರ್ವಾಧಿಕಾರಿಯಂತೆ ವರ್ತಿಸುತ್ತಾರೆಂಬ ಆರೋಪವೂ ಅವರ ಮೇಲಿದೆ. ಹಾಗಿರದಿದ್ದರೆ ಸಂಯುಕ್ತ ಕರ್ನಾಟಕ ಪತ್ರಿಕೆ ಈಗಿನ ಉಚ್ಛ್ರಾಯ ಸ್ಥಿತಿಯಲ್ಲಿರುತ್ತಿರಲಿಲ್ಲ ಎಂದು ಅವರ ವಿರೋಧಿಗಳೂ ಒಪ್ಪುತ್ತಾರೆ. ಅನೇಕ ಮಂದಿಗೆ ಗೊತ್ತಿರಲಿಕ್ಕಿಲ್ಲ. ರಾಯರು ಮೇಲಿನಿಂದ ಕಠೋರವಾದಿಯಾಗಿ ಸಿಡುಕಿನವರಾಗಿ ಕಾಣಬಹುದು. ಆದರೆ ಅವರ ಅಂತರಂಗ, ಅಂತಃಕರಣ ಆರ್ದ್ರವಾದುದು. ಆತ್ಮೀಯ ಮಾತು, ಅಕ್ಕರೆಯ ನುಡಿ ಹಾಗೂ ಹಿತವಾದ ನಗುವಿನಿಂದ ಪ್ರೀತಿಯನ್ನು ಎತ್ತಿಕೊಡಬಲ್ಲರು. ನಮ್ಮನ್ನು ತಮ್ಮ ಪ್ರೀತಿಯಿಂದ ಕದಲಿಸಬಲ್ಲರು. ಒಬ್ಬ ವ್ಯಕ್ತಿ ಕೇವಲ ಶ್ರದ್ಧೆ, ಪರಿಶ್ರಮ, ಛಲ ಹಾಗೂ ತಪಸ್ಸಿನಿಂದ ಏನೆಲ್ಲ ಸಾಧಿಸಬಹುದು ಎಂಬುದಕ್ಕೆ ರಾಯರು ಒಂದು ಉಜ್ವಲ ನಿದರ್ಶನವಾಗಬಲ್ಲರು. ರಾಯರು ತಮ್ಮ ಸಾಮೀಪ್ಯಕ್ಕೆ ಬಂದಾಗ ಮೌನದಲ್ಲೂ ಅನಂತ ಸ್ವರೂಪವನ್ನು ತೋರಿಸುವ ವ್ಯಕ್ತಿ ಎಂಬುದು ಅವರ ಅಂತರಂಗ ಅರಿತವರ ನುಡಿ.

ರಾಯರು ಈ ದೀರ್ಘ ಅವಧಿಯಲ್ಲಿ ಸವೆಸಿದ ಪಥದಲ್ಲಿ ಗುಲಾಬಿ ಹೂವಿಗಿಂತ ಮುಳ್ಳುಕಲ್ಲುಗಳೇ ಜಾಸ್ತಿ. ಅವರು ಕಳೆದ ಕಷ್ಟದ ದಿನಗಳು, ಪತ್ರಕರ್ತರಾಗಿ ಅನುಭವಿಸಿದ ವಿವಿಧ ಅನುಭವಗಳು, ರೋಚಕವಾಗಿ ಮೈನವಿರೇಳುವಂತೆ ಒಂದು ಸಂಸ್ಥೆಯನ್ನು ಕಟ್ಟಿ ಬೆಳೆಸಿದ್ದೆಲ್ಲವನ್ನೂ ನೋಡಿದರೆ ಒಂದು 'ಕತೆ'ಯೇನೋ ಎಂದು ಅನಿಸುವುದುಂಟು. ತಮ್ಮ ಎಂಭತ್ತನಾಲ್ಕರ ವಯಸ್ಸಿನಲ್ಲೂ ರಾಯರಿಗೆ ದಣಿವೆಂಬುದೇ ಇಲ್ಲ. ಈಗಲೂ 'ಸಂಯುಕ್ತ ಕರ್ನಾಟಕ' ಎಂಬ ಹೆಸರು ಇಪ್ಪತ್ತರ ಯೌವನವನ್ನು ಅವರಲ್ಲಿ ಉಕ್ಕಿಸೀತು. ಹೀಗಾಗಿ ರಾಯರಿಗೆ ದಣಿವೂ ಇಲ್ಲ, ಮುಪ್ಪು ಕೂಡ ಇಲ್ಲ. ಸಂಯುಕ್ತ ಕರ್ನಾಟಕಕ್ಕೆ ತಾವು ಮಾಡಬೇಕಾಗಿರುವುದು ಇನ್ನೂ ಸಾಕಷ್ಟಿದೆ ಎಂಬ ಭಾವನೆ ಅವರಲ್ಲಿ ಮನೆ ಮಾಡಿರುವುದರಿಂದಲೇ ಪ್ರತಿಬೆಳಗು ಸರಿದಾಗಲೂ ರಾಯರು ಟೊಂಕ ಕಟ್ಟಿ ನಿಲ್ಲುತ್ತಾರೆ. ಅಕ್ಷರ ಕಾರ್ಖಾನೆಯಲ್ಲಿ ಕಾರ್ಮಿಕರಾಗುತ್ತಾರೆ.

ಶಾಮರಾಯರಿಗೆ ಪ್ರತಿಷ್ಠಿತ ಟಿಯೆಸ್ಸಾರ್ ಪ್ರಶಸ್ತಿ ಬಂದಿದೆ. ಈ ಪ್ರಶಸ್ತಿಯಿಂದ ಖಂಡಿತವಾಗಿಯೂ ಶಾಮರಾಯರು ದೊಡ್ಡವರಾಗಿಲ್ಲ. ಆ ಪ್ರಶಸ್ತಿಗೆ ಬೆಲೆ ಬಂದಿದೆ. ಪ್ರಶಸ್ತಿಯ ಮೌಲ್ಯ ಹೆಚ್ಚಿದೆ.

ಶಾಮರಾಯರಿಗೆ ಸಂದ ಈ ಪ್ರಶಸ್ತಿಯಲ್ಲಿ ನಮ್ಮೆಲ್ಲರ ನಗು, ಸಂತೋಷ, ಹೆಮ್ಮೆಯೂ ಅಡಗಿದೆ. ■



ಉಚಿತ ವರ್ಗೀಕೃತ ಜಾಹೀರಾತು

ವಿವಾಹ

ಮೇ 2 ರಂದು ಚತುರ್ಭುಜರಾಗುತ್ತಿರುವ ಕವಿ ಗೋಪಾಲಕೃಷ್ಣ ವಂಡ್ಸೆ ಅವರ ವೈವಾಹಿಕ ಬದುಕು ಸುಮಧುರವಾಗಿರಲೆಂದು ಹಾರೈಸುತ್ತೇವೆ.

- ಹಿತೈಷಿಗಳು, ಬೆಂಗಳೂರು.

ಅಭಿನಂದನೆಗಳು

ಪ್ರೀತಿಯ ಮಾವನವರಾದ ಸಿದ್ದಲಿಂಗ ಎಸ್. ಪಾಟೀಲ ಇವರು ಬಿ.ಎ.ಎಂ.ಎಸ್. ಫೈನಲ್ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಪಾಸಾಗಿದ್ದಕ್ಕೆ ಅಭಿನಂದನೆಗಳು.

- ಅಪೂರ್ವ ಹರೀಶ, ಹಿರೂರ, ಹುಣಸಗಿ.

ಹುಟ್ಟುಹಬ್ಬ

ನನ್ನ ಪ್ರೀತಿಯ ತಮ್ಮನಾದ ಹೆಚ್.ಹೆಚ್. ಶಿವರಾಜ್‌ಗೆ ಅವನ ಹುಟ್ಟು ಹಬ್ಬದ ಶುಭಾಶಯಗಳೊಂದಿಗೆ ಆಯುರಾರೋಗ್ಯವಿರಲೆಂದು ಹಾರೈಸುವ

ನಿನ್ನ ಪ್ರೀತಿಯ ಅಣ್ಣ

-ಹೆಚ್.ಹೆಚ್. ಬಸವಲಿಂಗೇಗೌಡ, ಹೊಸಗೆರೆ.

ಯುಗಾದಿಯ ಶುಭಾಶಯ

ಪ್ರೀತಿಯ ಅಕ್ಕ ಮಹಾದೇವಿ ಹೆಳವರ ಸಾ. ಬಾಗಲಕೋಟೆ, ಯೋಗೆಪ್ಪನ ಮಾವ, ರಾಯಪ್ಪಾಸ್ವಾಮಿ, ಉಮೇಶ, ಶಿಂಧ್ಯೆ ಮೇಡಂ, ನೀಲಮ್ಮ ಅಕ್ಕ, ಅಕ್ಕಮಹಾದೇವಿ, ಮಧುಮತಿ, ಶಾಂತಾ ಗುರು, ಸರ್ವರಿಗೆ ಚಂದ್ರಮಾನ ಯುಗಾದಿಯು ಸುಖ ನೆಮ್ಮದಿ ಸಂತೋಷವನ್ನು ನೀಡಲಿ ಎಂದು ಹಾರೈಸುವ

- ಶ್ರೀ ಗುರು ಎಸ್. ಹೆಳವರ, ತಾಳಿಕೋಟೆ.

ಶುಭಾಶಯಗಳು

ಸಂಭ್ರಮದ ಸಡಗರದಲ್ಲಿ ಮೀನಿನಂತೆ ಚುರುಕಾಗಿ ನಕ್ಷತ್ರಗಳಂತೆ ಮೋಹಕವಾಗಿ ಮಾರ್ಚ್ 28 ರಂದು ಪ್ರೀತಿಯ ಸಮೀನಾಗೆ ಹುಟ್ಟು ಹಬ್ಬದ ಶುಭಾಶಯಗಳು.

-ಮಂಜುನಾಥ, ಚಿತ್ರದುರ್ಗ.

ಹುಟ್ಟು ಹಬ್ಬ

ಪ್ರೀತಿಯ ಪುತ್ರಿಯಾದ ಸವಿತಾಳಿಗೆ ಏಪ್ರಿಲ್ 5 ರಂದು ಬರುವ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು

-ಶ್ರೀಶೈಲ, ಬೆಳಗಲಿ.

ಹಾರೈಕೆ

ನಮ್ಮ ಪ್ರೀತಿಯ ಅರುಂಧತಿ ನಿನ್ನ ಬದುಕು ಸದಾ ಹಸಿರಾಗಿರಲಿ ಎಂದು ದೇವರಲ್ಲಿ ಪ್ರಾರ್ಥಿಸುವ

-ಬಿ.ಆರ್. ಪ್ರಕಾಶ್, ಬೆಸ್ತಮಾನಹಳ್ಳಿ.

ಅಭಿನಂದನೆಗಳು

1999ರ ಏಪ್ರಿಲ್ ಮೊದಲ ವಾರ ನಡೆವ ರೋಣ ತಾಲೂಕಾ ಪ್ರಾಥಮಿಕ ಪ್ರೌಢಶಾಲಾ ಶಿಕ್ಷಕ ಶಿಕ್ಷಕಿಯರ ಶೈಕ್ಷಣಿಕ ಸಮ್ಮೇಳನಕ್ಕೆ ರಾಜ್ಯದ ಎಲ್ಲಾ ಶಿಕ್ಷಕ ಶಿಕ್ಷಕಿಯರಿಗೆ ಆದರದ ಸ್ವಾಗತ. ನಾಡಿನ ಶೈಕ್ಷಣಿಕ ಪ್ರಗತಿಗೆ ನಾಂದಿಯಾಗಲಿ ಎಂದು ಹಾರೈಸುವ

- ರಮಾಕಾಂತ್ ಕ. ಕಮತಗಿ ಪ್ರಾ.ಶಾ. ಶಿಕ್ಷಕ (ಪ್ರತಿನಿಧಿ ಸ.ಕ. ಹೆಣ್ಣುಮಕ್ಕಳ ಶಾಲೆ), ರೋಣ.

ಯುಗಾದಿಯ ಶುಭಾಶಯ

ಫಕೀರಪ್ಪ, ಸಿರವಾರ, ಕೆ. ನಾಗರಾಜ, ವೀರೇಶ ಅಂಗಡಿ, ಅಮಿರ್ ಅಲಿ, ಸಾಗರ್ ರಾಜ ಕೋಣೆಮನಿ, ಸೈಯದ್ ಆಸೀಫ್‌ಮುಲ್ಲಾ ವ್ಹಿ. ಶಂಕರಕುಮಾರ್, ಬಾಬಾ ಹಲಿ ಹಾಗೂ 'ಬಿಸಿಲ ಬದುಕು' ಓದುಗರಿಗೂ ಹೊಸ ವರ್ಷದ ಹಾಗೂ ಯುಗಾದಿಯ ಶುಭಾಶಯಗಳು.

-ಶ್ರೀರಾಮ ತಳವಾರ, ವೀರಾಪುರ.

ವಿವಾಹ

1999ನೇ ಮಾರ್ಚ್- 14 ರಂದು ಬಳ್ಳಾರಿಯಲ್ಲಿ ನಡೆದ ಎಚ್. ವೃಂದಾಲತ ಹಾಗೂ ವಿ.ಎಚ್. ರಾಮಕೃಷ್ಣಪ್ರಸಾದರ ವಿವಾಹಕ್ಕೆ ಹಾರ್ದಿಕ ಶುಭಾಶಯಗಳು.

-ಸಿ.ಎಂ. ವೀರೇಶ, ಗಂಗಾವತಿ.

ಶುಭಾಶಯ

P.L. DHONDE QUIRE TAILORS NEHRU STADIUM HUBLI ಇವರ 19ನೇ ವರ್ಷದ ವಾರ್ಷಿಕೋತ್ಸವಕ್ಕೆ ಶುಭಾಶಯಗಳು

-D.P. Malavadkar, Gudgeri.

ಹುಟ್ಟು ಹಬ್ಬ

ಪ್ರೀತಿಯ ಯಶ್ವಂತನಿಗೆ (ಏಪ್ರಿಲ್ 1, 1999) 6ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು. ದೇವರು ಅವನಿಗೆ ಆಯಸ್ಸು ಆರೋಗ್ಯ ಕೊಟ್ಟು ಕಾಪಾಡಲೆಂದು ಹಾರೈಸುವ

ನಿನ್ನ ಪ್ರೀತಿಯ **ದೊಡ್ಡಮ್ಮ ಅಂಬಿಕಾ ಹಾಗೂ ಅತ್ತೆ ಗಂಗಮ್ಮ,** ದಾವಣಗೆರೆ.

ಹುಟ್ಟುಹಬ್ಬ

ಪ್ರೀತಿಯ ತಮ್ಮನಾದ ಬಾಹುಬಲಿಗೆ ಬರುವ ಏಪ್ರಿಲ್ 15 ರಂದು ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

-ಧರೆಪ್ಪ, ದುಂಡಪ್ಪ, ಬೆಳಗಲಿ.

ಸ್ವಾಗತ

ಪವಿತ್ರ ಸ್ಥಳಗಳಾದ ಝುರೂಸಲಮ್, ಈಜಿಪ್ತ್, ಇಸ್ರೇಲ್ ಪಟ್ಟಣಗಳನ್ನೆಲ್ಲಾ ಸುತ್ತಾಡಿ ಬಂದ ರೆ॥ ದಾನಿಯೇಲ್ ಹೊಸ್ನಾಯ್ಕರ್ ಅವರಿಗೆ ಸ್ವಾಗತ ಕೋರಿ ದೇವರು ಹೆಚ್ಚಿನ ಆರ್ಶೀವಾದ ನೀಡಲೆಂದು ಪ್ರಾರ್ಥಿಸುತ್ತೇನೆ.

-ಚಂದ್ರಕಾಂತ ಪುಣ್ಯವಂತ ಪೂಜಾರ, ಮುಷ್ಠಿಗೇರಿ.

ಅಭಿನಂದನೆ

ಬೆಂಗಳೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದಲ್ಲಿ 1998ನೇ ಸಾಲಿನ ಚಿನ್ನದ ಪದಕ ಪಡೆದ ಎಚ್. ಮುನಿ ಕೃಷ್ಣಪ್ಪನವರಿಗೆ ಅಭಿನಂದನೆಗಳು.

-ಸಿ ಆನಂದ, ಸುರೇಶ್ ಎ.ಎಂ., ಜ್ಞಾನ ಭಾರತಿ, ಬೆಂಗಳೂರು.

ಹುಟ್ಟುಹಬ್ಬ

1.4.99 ಜನ್ಮದಿನ ಆಚರಿಸುವ ತಮ್ಮ ರಾಘವೇಂದ್ರನಿಗೆ ಶುಭಾಶಯಗಳು .

-ಗೀತಾ ಎಸ್. ಎನ್. ನಾಡ, ಕುಂದಾಪುರ.

ಬೀಳ್ಕೊಡುಗೆ

ವಯೋಮಿತಿ ಮೇಲೆ ನಿವೃತ್ತರಾದ ಹಿರಿಯ ಪಶುವೈದ್ಯಕೀಯ ಪರೀಕ್ಷಕರಾದ ಶ್ರೀ ಸದಾಶಿವಪ್ಪ ಹಾಗು ಶಿವಪ್ಪ ಸಿಪಾಯಿ ಇವರಿಗೆ ಅಪಚಲಪೂರ ಪಶು ಆಸ್ಪತ್ರೆಯಲ್ಲಿ ದಿನಾಂಕ 8.3.99 ರಂದು ಬೀಳ್ಕೊಡಲಾಯಿತು.

- ಡಿ.ಎಸ್. ಗುತ್ತೇದಾರ, ಪಶುವೈದ್ಯಕೀಯ ಪರೀಕ್ಷಕರು, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ದೇವಲಗಾಣಗಾಪೂರ.

ಶುಭ ವಿವಾಹ

19.4.99ರಂದು ನನ್ನ ತಮ್ಮ ವಿವಾಹ ಬಂಧನದಲ್ಲಿ ಸಿಲುಕಲಿರುವ ಚಿ. ಕೃಷ್ಣ ಸೌ॥ ಭಾರತಿ ಈ ದಂಪತಿಗಳು ಸುಖ ಸಂತೋಷದ ಜೀವನವನ್ನು ತಮ್ಮದಾಗಿಸಿಕೊಳ್ಳಲಿ ಎಂದು ಹಾರೈಸುವ

ಪ್ರೀತಿಯ ಅಣ್ಣ ಮತ್ತು ಅತ್ತಿಗೆ

-ಸುರೇಶ ಜನಾರ್ಧನ, ರೇಣುಕ, ಬೆಳಗಾಂ.

ಆಶಯ

ಅಂಜನಾ ಮಿಶ್ರಾರವರ ಜೀವನ ಹೋರಾಟದಲ್ಲಿ ಆದಷ್ಟು ಬೇಗನೆ ಜಯ ಸಿಕ್ಕು, ಶೋಷಣೆಗೆ ಒಳಗಾದ ಸ್ತ್ರೀಯರ ಧ್ವನಿಯಾಗಿ, ದಾರಿದೀಪವೂ ಆಗಲೆಂದು ಕೋರುವ

-ಶಾರದಾ ಪ್ರಭಾಕರ, ಇಲಕಲ್ಲ.

ಉಚಿತ ವರ್ಗೀಕೃತ ಜಾಹೀರಾತು

ಹುಟ್ಟು ಹಬ್ಬ

ಆತ್ಮೀಯ ಕುಮಾರ ಹೆಚ್.ಎಂ.ರವೀಶ್‌ನಿಗೆ ಒಂದನೇ ವರುಷದ (ದಿನಾಂಕ 13.4.99) ಹುಟ್ಟುಹಬ್ಬದ ಹೃತ್ಪೂರ್ವಕ ಶುಭಾಶಯ ಕೋರುವ ಕುಟುಂಬ ಮತ್ತು ಬಂಧು ಮಿತ್ರರು.

-ಎಚ್.ಎಂ. ವಾಮದೇವಯ್ಯ, ಶಿಕ್ಷಕರು, ಅರಸೀಕೆರೆ.

ಸವಿನೆನಪು

ಸ್ವಾಮಿ ನಾ ನಿನ್ನ ಪ್ರೀತಿಸಿದ್ದು ಏಪ್ರಿಲ್ 15ಕ್ಕೆ ಒಂದು ವರ್ಷವಾಗುತ್ತದೆ. ಮುಂದಿನ ದಿನಗಳಲ್ಲೂ ನಮ್ಮ ಪ್ರೀತಿ ಹೀಗೆ ಇರಲಿ ಎನ್ನುವ ನಿನ್ನ ಪ್ರೇಯಸಿ

-ಮಾಧವಿ, ಸಿರಸಿ.

ಅಭಿನಂದನೆ

ಶ್ರೀಬನಶಂಕರಿ ದೇವಿ ಯುವಕ ಮಂಡಳಿ (ರಿ) ಮೂಡಲಗೇರಿ, ಗದಗ ಅಧ್ಯಕ್ಷರು ಶೇಖರಯ್ಯ ಪ. ಹಿರೇಮಠ, ಕಾರ್ಯದರ್ಶಿ ಹನಮಂತ, ಭೀಮನ ಗೌಡ್ರ. ಉಪಾಧ್ಯಕ್ಷರು ಬಿ.ಬಿ. ಅಮಾತಿ ಗೌಡ್ರ, ಕೋಶಾಧ್ಯಕ್ಷರು ಎ.ಬಿ. ಸಣ್ಣಸಕ್ಕನಗೌಡ್ರ, ಸದಸ್ಯರು ಎಚ್. ವಾಯ್. ಆಸೊಟೆ, ಎಸ್.ಆರ್. ಪೂಜಾರಿ. ಡಿ.ಎಚ್. ಎಚ್.ಎಸ್. ಭಾವಿ, ಎಚ್. ಎಚ್. ಬಾಳನಗೌಡ್ರ ಚಂದಪ್ಪ ಕೆಂಗಾರ ನೂತನ ಮಂಡಳಿಗೆ ನನ್ನ ಹಾಗೂ ನಾಗರಿಕರ ಅಭಿನಂದನೆಗಳು.

-ವೆಂಕನಗೌಡ, ಭೀಮನಗೌಡ, ಸಣ್ಣಸಕ್ಕರ ಗೌಡ್ರ, ರೋಣ.

ಅಭಿನಂದನೆ

ಸಿಂಧನೂರು ತಾಲೂಕಾ 'ಬಿಸಿಲ ಬದುಕು' ಏಜೆಂಟರು ಚನ್ನಪ್ಪ ಕುಂಬಾರ ಸಿಂಧನೂರು ಇವರು ನಿಮ್ಮ ಪತ್ರಿಕೆಯ ಏಜೆನ್ಸಿಯನ್ನು ತೆಗೆದುಕೊಂಡಿದ್ದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಹೇಳುವ

-ಶ್ರೀ ಮಲ್ಲೇಶ, ಅರಳಹಳ್ಳಿ.

ವಿವಾಹ ವಾರ್ಷಿಕೋತ್ಸವ

ಮಹಾಂತೇಶ ಹಾಗೂ ಸರೋಜನಿ ದಂಪತಿಗಳಿಗೆ 5ನೇ ವಿವಾಹ ವಾರ್ಷಿಕೋತ್ಸವ ಸಂದರ್ಭದಲ್ಲಿ ಶುಭ ಹಾರೈಕೆಗಳು.

-ಗುರುರಾಜ್ ಬಸಪ್ಪ, ಕನ್ನೂರ (ಬಿ.ಎ),ನಾಲತವಾಡ.

ಹುಟ್ಟು ಹಬ್ಬ

ಪ್ರೀತಿಯ ಅಣ್ಣನಾದ ರವಿಗೆ ಏಪ್ರಿಲ್ 1 ರಂದು ಹುಟ್ಟು ಹಬ್ಬದ ಶುಭಾಶಯಗಳು. ದೇವರು ಅವನಿಗೆ ಆರೋಗ್ಯವನ್ನು ಕೊಟ್ಟು ಕಾಪಾಡಲೆಂದು ಹಾರೈಸುವ ಕುಟುಂಬದ ಸದಸ್ಯರು ಹಾಗೂ ಮಿತ್ರರು.

-ರೂಪಾ ಎಸ್. ಠಾಕೋಡ, ಸುರಪುರ.

ಅಭಿನಂದನೆ

ನನ್ನನ್ನು ಸಿಂಧನೂರ ತಾಲೂಕಾ ಜಿ.ಜೆ.ಪಿ. ಯುವ ಮೋರ್ಚಾದ ಸಂಘಟನಾ ಪ್ರಧಾನ ಕಾರ್ಯದರ್ಶಿ ತಾಲೂಕಾ ವಕ್ತಾರ ಸ್ಥಾನಕ್ಕೆ ನೇಮಕ ಮಾಡಿದ ಅಧ್ಯಕ್ಷರಾದ ಶ್ರೀ ಶಾಂತಗೌಡ ಜಾಗಿರದಾರ, ಪ್ರಧಾನ ಕಾರ್ಯದರ್ಶಿಗಳಾದ ಕೆ. ಮಲ್ಲಯ್ಯ, ಮಲ್ಲದ ಗುಡ್ಡ ಇವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ.

-ಬೊಮ್ಮನಳ ಗೋಪಾಲಶೆಟ್ಟಿ, ಸಂಘಟನಾ ಪ್ರಧಾನ ಕಾರ್ಯದರ್ಶಿ ಹಾಗೂ ವಕ್ತಾರರು, ಸಿಂಧನೂರು.

ಹುಟ್ಟು ಹಬ್ಬ

ಪ್ರೀತಿಯ ತುಳಸಿ, ದಿನಾಂಕ 4.4.99 ರಂದು 4ನೇ ವರ್ಷಕ್ಕೆ ಕಾಲಿಡುತ್ತಿರುವ ನಿನಗೆ ತುಂಬು ಹೃದಯದ ಹಾರ್ದಿಕ ಶುಭಾಶಯಗಳು.

-ಶುಭ ಎಚ್.ಸಿ., ಬೆಂಗಳೂರು.

ಅಭಿನಂದನೆ

ಹರಪನಹಳ್ಳಿ ತಾಲ್ಲೂಕಿನ ಇತಿಹಾಸದಲ್ಲೆ ಪ್ರಜಾಪ್ರಭುತ್ವ ಜಾರಿಯಾದಾಗಿನಿಂದ ಮೊದಲ ಬಾರಿಗೆ ಮಂತ್ರಿ ಪದವಿ ದೊರಕಿಸಿಕೊಂಡ ಡಿ. ನಾರಾಯಣ ದಾಸ್, ಸಮಾಜ ಕಲ್ಯಾಣ ರಾಜ್ಯ ಸಚಿವರಿಗೆ ಪ್ರಜ್ಞಾ ಸಮಿತಿಯಿಂದ ಅಭಿನಂದನೆಗಳು.

-ಸಿ.ಅಶೋಕ, ಸಂಚಾಲಕರು, ಹರಪನಹಳ್ಳಿ.

ಯುಗಾದಿಯ ಶುಭಾಶಯಗಳು

ಶಾರದಾ ಮೇಡಂಗೆ, ಅಶೋಕರಿಗೆ ಮತ್ತು ಮನೆಯವರಾದ ಶ್ಯಾಮಲ, ಸತ್ಯಾ, ಶರಾವತಿ, ಸೀತಮ್ಮ, ರಾಜು, ಡಾ. ವೀರಭದ್ರಪ್ಪಗೌಡ್ರ, ಡಾ. ವಂದನರೆಲ್ಲರಿಗೂ ಯುಗಾದಿ ಹೊಸ ವರ್ಷದ ಶುಭಾಶಯಗಳು.

-ದೊಡ್ಡಪ್ಪ ಬಿ., ಸೊರಬ.

ಶುಭಾಶಯಗಳು

ಪ್ರೀತಿಯ ಅಜ್ಜಿ, ಅಪ್ಪ,ಅಮ್ಮ, ಅಕ್ಕ-ಮಾವ, ಮುದ್ದಿನ ಹರ್ಷವರ್ಧನ್, ನೇತ್ರಾವತಿ, ವೇಣು (ತಮ್ಮ) ಧನ್ಯ, ಬಂಧುಗಳು ಮತ್ತು ಸ್ನೇಹಿತರಿಗೆ ಹಾಗೂ ನನ್ನ ಕೆರಗೋಡಿನ ಗ್ರಾಮದವರಿಗೂ ಯುಗಾದಿಯ ಹಾರ್ದಿಕ ಶುಭಾಶಯಗಳು

-ಕೆ. ಎಲ್. ಧೀರೇಂದ್ರ ಕುಮಾರ್, ಮಂಡ್ಯ.

ವಿವಾಹ ವಾರ್ಷಿಕೋತ್ಸವ

ಚಿದಾನಂದ ಬಿ. ಗುಡ್ಡಮನಿ ಹಾಗೂ ಪುಷ್ಪಾ ದಂಪತಿಗಳ 7ನೆಯ ಮದುವೆಯ ವಾರ್ಷಿಕೋತ್ಸವಕ್ಕೆ ಶುಭ ಹಾರೈಕೆಗಳು.

-ಬೀರಪ್ಪ ಶಂಭೋಜಿ, ಸಿಂಧನೂರು.

ಸ್ನೇಹ ಸಮ್ಮೇಳನ

ಧಾರವಾಡ ಜಿಲ್ಲಾ ಕಲಘಟಗಿ ತಾಲೂಕ ಗಂಜೀಗಟ್ಟಿಯಲ್ಲಿ ಜನವರಿ 5 ರಂದು ಜರುಗಿದ ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ಆಗಮಿಸಿದ ಗುರು ಹಿರಿಯರಿಗೆ ನಮ್ಮ ಶಾಲೆಯ ವತಿಯಿಂದ ವಂದನೆಗಳು.

-ಈರಪ್ಪ ಬಸಪ್ಪ, ಕಲಘಟಗಿ.

ಹುಟ್ಟು ಹಬ್ಬ

ನನ್ನ ಪ್ರೀತಿಯ ಸಹೋದರಿಯಾದ ಟಿ. ನೀಲಮ್ಮಾಳಿಗೆ (ದಿನಾಂಕ 17.3.99) 17ನೇ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

ನಿನ್ನ ಪ್ರೀತಿಯ ಸಹೋದರ

-ದೊಡ್ಡನಗೌಡ, ಬೊಮ್ಮನಾಳ, ಕೆ.ನಾಗರತ್ನ, ಎ. ಜ್ಯೋತಿ,ಅರಳಹಳ್ಳಿ.

ಅಭಿನಂದನೆ

ಕುಂಬ್ಳೆಯವರಿಗೆ 1999ನೇ ಇಸವಿಯಲ್ಲಿ ವಿಕೆಟ್ ವೀರರೆನಿಸಿ 10 ವಿಕೆಟ್ ಗಳಿಸಿ ಇತಿಹಾಸ ಬರೆದುದಕ್ಕೆ ಸಮಸ್ತ ಕನ್ನಡಿಗರ ಪರವಾಗಿ ತುಂಬು ಹೃದಯದ ಅಭಿನಂದನೆಗಳು.

-ಕೆ. ಸುಧಾ, ರಾಮರಾವ್, ಹ್ಯಾಳ್ಯಾ, ಕೆ. ಸ್ವಾಮಿ, ಕೆ. ರಾಜೀವ, ಕೆ. ಸರಸ್ವತಿ, ಬಳ್ಳಾರಿ.

ಯುಗಾದಿಯ ಶುಭಾಶಯ

ಹೊಸ ವರ್ಷ ಸಕಲರಿಗೂ ಬೇವು ಬೆಲ್ಲಗಳಂತೆ ಕಹಿ ಸಿಹಿಗಳ ಮಿಶ್ರಣವಾಗಿರಲೆಂದು ಹಾರೈಸುವ.

-ಕು. ನರಸಮ್ಮ, ಮಸ್ಕಿ.

ಹುಟ್ಟು ಹಬ್ಬ

Happy Birthday to "CATHY LEBRUN GREAT BRITIAN" wish you Happy Birthday on 24th April and cheerful new year.

-Mahantesh, Shiddibhavi.

ಹಾರೈಕೆ

ನನ್ನ ಪ್ರೀತಿಯ ಗೆಳತಿಯರಾದ ಶಾಂತಾ ಸಿ. ಎಚ್. ಹಗೂ ವಿಶಾಲಾಕ್ಷಿ ಜಿ.ಎಂ. ಇವರಿಗೆ ಬರಲಿರುವ ಏಪ್ರಿಲ್ ಪರೀಕ್ಷೆಯಲ್ಲಿ ಹೆಚ್ಚು ಗುಣಗಳನ್ನು ಪಡೆದು ಪಾಸಾಗಲಿ ಎಂದು ಹಾರೈಸುವ

-ಇಂತಿ ನಿಮ್ಮ ಸ್ನೇಹಿತ **ಶ್ರೀ ಶೈಲನ್**, ಜಮಖಂಡಿ.

ಹುಟ್ಟು ಹಬ್ಬ

ಜಿ.ಟಿ. ಚಂದ್ರಪ್ಪ ಗರಳಾಪುರ ಇವರ ಹುಟ್ಟುಹಬ್ಬಕ್ಕೆ ಶುಭಾಶಯ ಕೋರುವ ಅವರ ಸ್ನೇಹಿತರಾದ

-ಟಿ. ಆರ್. ಮಾರೇಗೌಡ, ರಾಮನಂಜೇಗೌಡ ಮತ್ತು ಬಂಧು ಮಿತ್ರರು, ಬೆಂಗಳೂರು.

ಉಚಿತ ಜಾಹೀರಾತು ಕೂಪನ್!

ಜಾಹೀರಾತು ನೀಡಲು ಹಣ ಕೊಡಬೇಕು ಎಂಬುದು ನಿಮಗೆಲ್ಲಾ ಗೊತ್ತಿರುವ ಸತ್ಯ. ಆದರೆ ಈಗ ನಿಮ್ಮ ಈ ನಂಬಿಕೆಯನ್ನೇ ಸುಳ್ಳು ಮಾಡುತ್ತಿದ್ದೇವೆ! ನೀವು ಒಂದು ಪೈಸೆಯನ್ನೂ ಖರ್ಚು ಮಾಡದೆ 'ಬದುಕು' ಮಾಸ ಪತ್ರಿಕೆಗೆ ವರ್ಗೀಕೃತ ಜಾಹೀರಾತು ನೀಡಬಹುದು.

ಜಾಹೀರಾತಿನ ವಿಷಯ

ಮದುವೆ, ಹುಟ್ಟುಹಬ್ಬ, ವಿದೇಶ ಪ್ರಯಾಣ, ಹಬ್ಬ, ಹೊಸವರ್ಷ, ವಿವಾಹ ವಾರ್ಷಿಕೋತ್ಸವ, ಪರೀಕ್ಷೆಯ ಯಶಸ್ಸು, ವ್ಯಾಪಾರದಲ್ಲಿ ಯಶಸ್ಸು, ಪ್ರಶಸ್ತಿ-ಪುರಸ್ಕಾರ.... ಹೀಗೆ ಯಾವುದೇ ಸಂದರ್ಭದಲ್ಲಿ ನೀವು ನಿಮ್ಮ ಆಪ್ತರಿಗೆ, ಗೆಳೆಯರಿಗೆ, ಸಂಬಂಧಿಕರಿಗೆ, ಪರಿಚಿತರಿಗೆ ಶುಭಾಶಯ ಕೋರಲು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಉಚಿತ ಜಾಹೀರಾತು ಕೂಪನ್‌ನ್ನು ವೈಯಕ್ತಿಕ ಜಾಹೀರಾತುಗಳಿಗೆ ಮಾತ್ರ ಉಪಯೋಗಿಸಿ.. ವ್ಯಾಪಾರ, ವೈವಾಹಿಕ ವಿಷಯಗಳಿಗೆ ಈ ಉಚಿತ ಸೌಲಭ್ಯ ಲಭ್ಯವಿಲ್ಲ.

ಹೇಗೆ ಕಳಿಸುವುದು?

ಈ ಕೆಳಗಿನ ಕೂಪನ್‌ನಲ್ಲಿ ಜಾಹೀರಾತು ವಿಷಯವನ್ನು 20 ಶಬ್ದಗಳಿಗೆ ಮೀರದಂತೆ ಬರೆದು 'ಬದುಕು' ವಿಳಾಸಕ್ಕೆ ಕಳಿಸಿದರೆ ನಿಮ್ಮ ಕೆಲಸ ಮುಗಿಯಿತು.

ಮುಂದಿನ ತಿಂಗಳ ಸಂಚಿಕೆಯಲ್ಲಿ ನೀವು ನಿಮ್ಮ ಜಾಹೀರಾತನ್ನು ನೋಡಿ ಆನಂದಿಸಬಹುದು. ಜಾಹೀರಾತಿನ ವಿಷಯ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿರಬಹುದು. ಹಾಂ! ನೆನಪಿಡಿ! ನಮ್ಮ ಕಚೇರಿಯನ್ನು ತಲುಪುವ ಮೊದಲ 50 ಜಾಹೀರಾತುಗಳಿಗೆ ಮಾತ್ರ ಈ ಅವಕಾಶ ಸಿಗುತ್ತದೆ. ಆದ್ದರಿಂದ ತಡ ಮಾಡದೆ ತಕ್ಷಣ ಕೂಪನ್ ಭರ್ತಿ ಮಾಡಿ ಇಂದೇ ಕಳಿಸಿಕೊಡಿ.

ಕೂಪನ್ ಕಳಿಸಬೇಕಾದ ವಿಳಾಸ

'ಬಿಸಿಲ ಬದುಕು' ಮಾಸಪತ್ರಿಕೆ, ಅಂಚೆಪೆಟ್ಟಿಗೆ: 7951, ಬಸವೇಶ್ವರನಗರ, ಬೆಂಗಳೂರು - 560 079.

ಉಚಿತ ಜಾಹೀರಾತು ಕೂಪನ್

ದಯವಿಟ್ಟು ಈ ಕೆಳಗಿನ ವರ್ಗೀಕೃತ ಜಾಹೀರಾತನ್ನು ಮೇ 99ರ 'ಬಿಸಿಲ ಬದುಕು' ಮಾಸಪತ್ರಿಕೆಯಲ್ಲಿ ಪ್ರಕಟಿಸಲು ಕೋರಿಕೆ.

1	2	3	4
5	6	7	8
9	10	11	12
13	14	15	16
17	18	19	20

ಜಾಹೀರಾತು ನೀಡುವವರ ಪೂರ್ಣ ವಿಳಾಸ..


....

....

ಪಿನ್‌ಕೊಡ್.. ದೂರವಾಣಿ ಸಂಖ್ಯೆ...

ಜಾಹೀರಾತುದಾರರ ಸಹಿ

ಕನ್ನಡದಲ್ಲಿ ಕಲಿತವರು



ನಿವೃತ್ತ ಉಪಕುಲಪತಿ

ಡಾ. ಎನ್. ಆರ್. ಶೆಟ್ಟಿ

ಕನ್ನಡ ಮಾಧ್ಯಮದಲ್ಲಿ ಹತ್ತನೆಯ ತರಗತಿಯವರೆಗೆ ಓದಿ, ನಂತರ ಪಿ.ಯು.ಸಿ.ಗೆ ಸೇರಿದ ತಕ್ಷಣ ವಿದ್ಯಾರ್ಥಿಗಳಿಗೆ ಒಂದು ಭಯಂಕರ 'ಭೂತ' ಕಾಟ ಕೊಡಲು ಶುರು ಮಾಡಿ ಬಿಡುತ್ತದೆ. ಅದೇ ಇಂಗ್ಲೀಷ್ ಭಾಷೆ. ಇಂತಹ ಪರಿಸ್ಥಿತಿಯನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ಕೊಡುವ ಸಲುವಾಗಿ ಹಲವಾರು ಗಣ್ಯರೊಡನೆ ಮಾತಾಡಿ, ಹಿಂದೊಮ್ಮೆ ಅವರು ಇದೇ ತರಹದ ಸಮಸ್ಯೆಗಳನ್ನು ಎದುರಿಸಿದ ರೀತಿ ಮತ್ತು ಅವರು ನಿಮ್ಮ ಈ ಸಮಸ್ಯೆಗೆ ನೀಡಿರುವ ಸಲಹೆಗಳನ್ನು ನಿಮಗಾಗಿ ನೀಡುತ್ತಿದ್ದೇವೆ.

■ ವಸುಧೇಂದ್ರ

ಹೆಸರು : ನಿಟ್ಟೆ ರಾಮಚಂದ್ರ ಶೆಟ್ಟಿ
ವೃತ್ತಿ : ಬೆಂಗಳೂರು ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿ ನಿವೃತ್ತರಾಗಿದ್ದಾರೆ.
ಜನನ : 27. 3. 1937

ವಿದ್ಯಾಭ್ಯಾಸ :
ಹೈಸ್ಕೂಲ್‌ವರೆಗೆ: ಕನ್ನಡ ಮಾಧ್ಯಮ-ಮಂಗಳೂರು
ಬಿ.ಎಸ್ಸಿ. (ಆನರ್ಸ್) :ಇಂಗ್ಲಿಷ್ ಮಾಧ್ಯಮ -ಬೆಂಗಳೂರು
ಎಂ.ಎಸ್ಸಿ. (ಆಪ್ಟೋ ಎಲೆಕ್ಟ್ರಾನಿಕ್ಸ್) :ಇಂಗ್ಲಿಷ್ ಮಾಧ್ಯಮ-ಇಂಗ್ಲೆಂಡ್
ಪಿ.ಎಚ್.ಡಿ.: ಇಂಗ್ಲಿಷ್ ಮಾಧ್ಯಮ- ಐ.ಐ.ಟಿ (ಬಾಂಬೆ)

ಪ್ರಶಸ್ತಿಗಳು

ಕರ್ನಾಟಕ ಪ್ರಾದೇಶಿಕ ತಾಂತ್ರಿಕ ವಿದ್ಯಾಲಯದಲ್ಲಿ 1988 ರಿಂದ 1993ರವರೆಗೆ ಪ್ರಿನ್ಸಿಪಾಲರಾಗಿ ಕಾರ್ಯ ನಿರ್ವಹಿಸಿ ಮುಂದೆ ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರ ವೃತ್ತಿ ಜೀವನದಲ್ಲಿ ಹಲವಾರು ಮಹತ್ವದ ಪ್ರಶಸ್ತಿಗಳನ್ನು ಪಡೆದಿದ್ದಾರೆ. UNESCO ದಿಂದ ಫೆಲೋಶಿಪ್, ಅಮೆರಿಕಾದ ಟೆಕ್ಸಾಸ್ ವಿಶ್ವವಿದ್ಯಾನಿಲಯದಿಂದ ಫುಲ್‌ಬ್ರೈಟ್ ಪ್ರಶಸ್ತಿ, ಲಂಡನ್‌ನ ಬ್ರಿಟಿಷ್ ಕೌನ್ಸಿಲ್‌ನಿಂದ ವಿಜಿಟರ್‌ಶಿಪ್ ಮುಂತಾದ ಕೆಲವನ್ನು ಹೆಸರಿಸಬಹುದು. ಪ್ರಾದೇಶಿಕ ಮತ್ತು ಅಂತರ್ ದೇಶೀಯ ವಿಜ್ಞಾನ ಪತ್ರಿಕೆಗಳಲ್ಲಿ 'ಆಪ್ಟಿಕಲ್ ಕಮ್ಯುನಿಕೇಷನ್ಸ್ ಮತ್ತು ಮೈಕ್ರೋವೇವ್ ಇಂಜಿನಿಯರಿಂಗ್' ವಿಷಯದ ಮೇಲೆ ಪ್ರಬಂಧಗಳನ್ನು ಪ್ರಕಟಿಸಿರುವ ಇವರು ದೇಶದ ಬಹು ಮುಖ್ಯ ಸಮಿತಿಗಳ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಇಂಗ್ಲಿಷ್ ಮಾಧ್ಯಮಕ್ಕೆ ಸೇರಿದ ಹೊಸತರಲ್ಲಿ ನಿಮ್ಮ ಅನುಭವಗಳೇನು?

ಆಗ ಸಾಮಾನ್ಯವಾಗಿ ಕನ್ನಡ ನಾಡಿನ ಹುಡುಗರೆಲ್ಲರೂ ಕನ್ನಡ ಮಾಧ್ಯಮದಲ್ಲಿಯೇ ಓದುತ್ತಿದ್ದೆವು. ಕೇವಲ ಕೆಲವು ಕ್ರೈಸ್ತ ಕುಟುಂಬದ ಮಕ್ಕಳು, ಇಂಗ್ಲಿಷ್ ಜನರ ಮಕ್ಕಳು ಮತ್ತು ಬೇರೆ ರಾಜ್ಯದಿಂದ ಬಂದವರು ಮಾತ್ರ ಆಂಗ್ಲ ಮಾಧ್ಯಮಕ್ಕೆ ಸೇರಿಕೊಳ್ಳುತ್ತಿದ್ದರು. ಸಂಖ್ಯೆಯಲ್ಲಿ ನಾವೇ ಹೆಚ್ಚು. ಆಗ ಯಾರಲ್ಲೂ (ನಮಗೆ ಮತ್ತು ನಮ್ಮ ತಂದೆ ತಾಯಿಯರಿಗೆ) ಇಂಗ್ಲಿಷ್ ಮಾಧ್ಯಮ ಶ್ರೇಷ್ಠವೆಂದಾಗಲಿ, ಅದರಲ್ಲಿ ಓದಿದರೆ ಮುಂದೆ ಉನ್ನತ ವ್ಯಾಸಂಗಕ್ಕೆ ಅನುಕೂಲವಾಗುತ್ತದೆಂದಾಗಲಿ ಭಾವನೆಗಳಿರಲಿಲ್ಲ. ಇಂಗ್ಲಿಷ್ ಮಾಧ್ಯಮಕ್ಕೆ ಸೇರುವ ಅವಕಾಶವಿದ್ದರೂ ಕನ್ನಡ ಮಾಧ್ಯಮಕ್ಕೇ ಸೇರುತ್ತಿದ್ದೆವು.

ಇಂಟರ್ ಮೀಡಿಯಟ್‌ಗಾಗಿ ನಾನು ಬೆಂಗಳೂರಿನಲ್ಲಿ ಬಂದು ಸೇರಿಕೊಂಡಾಗ ಕೆಲವು ಸಮಸ್ಯೆಗಳು ಗೋಚರವಾದವು. ಆಗ ಕಂಟೋನ್ಮೆಂಟ್‌ನಲ್ಲಿದ್ದ ಸಾಕಷ್ಟು ವಿದ್ಯಾರ್ಥಿಗಳು, ಆಂಗ್ಲ ಮಾಧ್ಯಮದಲ್ಲಿ ಓದಿದವರು, ನಮ್ಮ ಸಹಪಾಠಿಗಳಾದ ಮೊದಮೊದಲು ಪರೀಕ್ಷೆಗಳಲ್ಲಿ ಅವರು ನಮಗಿಂತಲೂ ಹೆಚ್ಚು ಅಂಕಗಳನ್ನು ಪಡೆದದ್ದು, ನಮ್ಮ ಆತ್ಮವಿಶ್ವಾಸ ಸ್ವಲ್ಪ ಕಡಿಮೆಯಾಗುವಂತಾಯ್ತು. ಆದರೆ ಮುಂದಿನ ಕೆಲವೇ ದಿನಗಳಲ್ಲಿ ಚೇತರಿಸಿಕೊಂಡ ನಾವು ಅವರಿ

ಗಿಂತಲೂ ಹೆಚ್ಚು ಅಂಕಗಳನ್ನು ಪಡೆದು ಅಗ್ರಸ್ಥಾನದಲ್ಲಿದ್ದೆವು. ನಮ್ಮಂತೆಯೇ ಆಂಧ್ರದಿಂದ ತೆಲುಗು ಮಾಧ್ಯಮದಲ್ಲಿ ಓದಿ ಬಂದಿದ್ದ ಹುಡುಗರೂ ಚೇತರಿಸಿಕೊಂಡರು.

ಅಂದು ಎದುರಾದ ಸಮಸ್ಯೆಗಳನ್ನು ಹೇಗೆ ನಿವಾರಿಸಿಕೊಂಡಿರಿ?

ಕಠಿಣ ಪರಿಶ್ರಮದಿಂದ, ಅಷ್ಟೇ! ಹೈಸ್ಕೂಲ್‌ನಲ್ಲಿ ಸಲೀಸಾಗಿ ಅರ್ಥವಾಗುತ್ತಿದ್ದುದಕ್ಕೆ ಈಗ ಸ್ವಲ್ಪ ಹೆಚ್ಚು ಶ್ರಮ ಹಾಕಬೇಕಾಗುತ್ತಿತ್ತು. ಅದಕ್ಕಿಂತ ಹೆಚ್ಚೇನೂ ಇಲ್ಲ! ಜೊತೆಗೆ ಆಗ ನಮ್ಮ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಮೂರನೆಯ ತರಗತಿಯಿಂದಲೇ ಇಂಗ್ಲಿಷ್ ಭಾಷೆಯನ್ನು ಕಲಿಸಿಕೊಡುತ್ತಿದ್ದರಲ್ಲದೆ, ಅದಕ್ಕೆ ಹೆಚ್ಚು ಶ್ರದ್ಧೆಯನ್ನೂ ಕೊಡುತ್ತಿದ್ದರು. ಆದ್ದರಿಂದ ನಮ್ಮ ಹೈಸ್ಕೂಲು ಮುಗಿಯುವ ವೇಳೆಗಾಗಲೇ ನಮಗೆಲ್ಲಾ ಇಂಗ್ಲಿಷ್ ಭಾಷೆ ಚೆನ್ನಾಗಿಯೇ ಬರುತ್ತಿತ್ತು. ಆದ ಕಾರಣ ಇಂಗ್ಲಿಷ್ ಮಾಧ್ಯಮಕ್ಕೆ ಹೊಂದಿಕೊಳ್ಳಲು ಹೆಚ್ಚು ಕಾಲಾವಕಾಶ ಬೇಕಾಗಲಿಲ್ಲ.

ಈಗ, ನಿಮ್ಮ ಆ ದಿನಗಳ ಸಮಸ್ಯೆಗಳನ್ನು ನೆನಪಿಸಿಕೊಂಡರೆ ಏನನ್ನಿಸುತ್ತದೆ?

ನನ್ನ ಹೈಸ್ಕೂಲ್‌ವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ್ದು ತುಂಬಾ ಒಳ್ಳೆಯದಾಯಿತೆಂದೆನಿಸುತ್ತದೆ. ಕನ್ನಡದ ಅಭ್ಯಾಸವನ್ನು ಮಾಡಿರದಿದ್ದರೆ ನಾನು ಈ ರಾಜ್ಯದಲ್ಲಿ ಇಂತಹ ಉನ್ನತ ಹುದ್ದೆಯನ್ನು ನಿರ್ವಹಿಸುವುದಾಗುತ್ತಿರಲಿಲ್ಲ. ಕನ್ನಡದಲ್ಲಿ ಸಲೀಸಾಗಿ ಭಾಷಣ ಮಾಡಲೂ ಸಾಧ್ಯವಿರುತ್ತಿರಲಿಲ್ಲ. ಇಂಗ್ಲಿಷ್ ಮಾಧ್ಯಮದಿಂದ ಉಂಟಾದ ಸಮಸ್ಯೆಗಳು ಕೇವಲ ತಾತ್ಕಾಲಿಕವಾಗಿದ್ದರಿಂದ ಹೆಚ್ಚಿನ ಮಹತ್ವ ಕೊಡುವ ಅವಶ್ಯಕತೆಯಿಲ್ಲ

ಇಂದು ಇದೇ ಸಮಸ್ಯೆಗಳನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ನಿಮ್ಮ ಸಲಹೆ ಏನು?

ಹೆದರಬೇಕಾದ ಅವಶ್ಯಕತೆಯೇ ಇಲ್ಲ. ಇದು ನಾನಾಗಲೇ ಹೇಳಿದಂತೆ ಒಂದು ತಾತ್ಕಾಲಿಕ ಸಮಸ್ಯೆ. ಜ್ಞಾನಾರ್ಜನೆಗೆ ಮಾಧ್ಯಮ ಮುಖ್ಯವಲ್ಲ. ನಾವು ಕಲಿಯುವುದನ್ನು ಸರಿಯಾಗಿ ಕಲಿತಿದ್ದೇವೆಂಬ ನಂಬಿಕೆ ಇದ್ದರಾಯ್ತು.

ಜೊತೆಗೆ ಹೈಸ್ಕೂಲಿನವರೆಗೆ ಕಲಿಯುವ ಇಂಗ್ಲಿಷ್ ಭಾಷೆಯನ್ನು ಸ್ವಲ್ಪ ಶ್ರದ್ಧೆಯಿಂದ ಕಲಿತರೆ ಯಾವುದೇ ತೊಂದರೆಗಳಿರುವುದಿಲ್ಲ.

ಪ್ರಾಥಮಿಕ ಶಿಕ್ಷಣ ಯಾವ ಭಾಷೆಯಲ್ಲಿದ್ದರೆ ಒಳ್ಳೆಯದೆಂದು ನೀವು ಭಾವಿಸುತ್ತೀರಿ?

ಖಂಡಿತವಾಗಿಯೂ ಹತ್ತನೇ ತರಗತಿಯವರೆಗೆ ಮಾತೃಭಾಷೆಯಲ್ಲಿಯೇ ವಿದ್ಯಾಭ್ಯಾಸವಾಗಬೇಕೆಂದು ನಾನು ನಂಬುತ್ತೇನೆ. ಆದರೆ ಹಾಗಂತ ನಾವು ಇಂಗ್ಲಿಷ್ ಭಾಷೆಯನ್ನೂ ಕಡೆಗಾಣಿಸದೆ ಅದನ್ನೂ ಅಷ್ಟೇ ಶ್ರದ್ಧೆಯಿಂದ ಕಲಿಯಬೇಕು. ಇಂದು ಭಾರತೀಯರು ಇಂಗ್ಲೀಷನ್ನು ಚೆನ್ನಾಗಿ ಬಲ್ಲರೆಂಬ ಕಾರಣದಿಂದಾಗಿ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರವನ್ನು ಸುಲಭವಾಗಿ ಮಾಡಬಲ್ಲವರಾಗಿದ್ದಾರೆ. ಅಮೇರಿಕಾಕ್ಕೆ ಉನ್ನತ ವ್ಯಾಸಂಗಕ್ಕಾಗಿ ಹೋಗುವ ವಿದ್ಯಾರ್ಥಿಗಳಲ್ಲಿ, ಅಲ್ಲಿನ ಪ್ರೊಫೆಸರುಗಳಿಗೆ ಭಾರತೀಯ ವಿದ್ಯಾರ್ಥಿಗಳು ಚೀನಾ, ಕೊರಿಯಾ, ಜಪಾನ್‌ನವರಿಗಿಂತಲೂ ಹೆಚ್ಚು ಪ್ರಿಯರಾಗುತ್ತಾರೆನ್ನುವುದು ಈ ಕಾರಣಕ್ಕಾಗಿಯೇ! ■

ಇಂದಿನ ಪತ್ರಿಕೋದ್ಯಮ ಬರೀ ವೇಗದ್ದು. ಘಟನೆಗಳ ಹಿನ್ನೆಲೆ ಬಗ್ಗೆ ಏನೇನೂ ಗೊತ್ತಿಲ್ಲದೆ ನಾವು ವರದಿ ಮಾಡುತ್ತೇವೆ, ಟೀಕೆ ಮಾಡುತ್ತೇವೆ. ಮಾಹಿತಿ ಪೂರೈಸುವ ಬದಲು, ಗೊತ್ತಿಲ್ಲದೆಯೇ ಸುಳ್ಳು ಸುದ್ದಿ ಹರಡುತ್ತೇವೆ. ತಾನು ಸುದ್ದಿಯನ್ನು ಸಂಗ್ರಹಿಸಿದ್ದೇನೆ ಎನ್ನುವ ಭ್ರಮೆಯನ್ನು ಓದುಗನ ಮನಸ್ಸಿನಲ್ಲಿ ಹುಟ್ಟು ಹಾಕುತ್ತೇವೆ.

-ಗಿರಿಲಾಲ್ ಜೈನ್

ಸರಿಯಾಗಿ ಗ್ರಹಿಸು ಇಲ್ಲವೇ ಬಿಟ್ಟು ಬಿಡು. ನೀನು ಸುದ್ದಿಯನ್ನು ತೆಗೆದುಕೊಳ್ಳುವ ನಿರ್ಧಾರವು ಸರಿಯಾಗಿ ಗ್ರಹಿಸದಿದ್ದಲ್ಲಿ ನಿನ್ನ ಸ್ವಂತದ್ದಾಗಿರುವುದಿಲ್ಲ

- ಜೇಮ್ಸ್ ತರ್ಬರ್

ಮತಾಂತರ ಒಂದು ಸಮಸ್ಯೆಯೇ?

ಕಳೆದ ಸಂಚಿಕೆಯಲ್ಲಿ ಮೂಡಿ ಬಂದ 'ಮತಾಂತರ ಒಂದು ಸಮಸ್ಯೆಯೇ?' ಲೇಖನ ಓದುಗರ ತೀವ್ರ ಸ್ಪಂದನಕ್ಕೆ ಕಾರಣವಾಗಿದೆ. ಗಂಭೀರ ಸ್ವರೂಪದ ಈ ಸಮಸ್ಯೆ ಕುರಿತು ಓದುಗರಿಂದ ಪತ್ರಗಳ ಮಹಾಪೂರವೇ ಹರಿದು ಬಂದಿದೆ. ಆಯ್ದ ಕೆಲವು ಅಭಿಪ್ರಾಯಗಳು ಇಲ್ಲಿವೆ.

ಮತಾಂತರ ಪರಿಹಾರವಲ್ಲ

ಮತಾಂತರ ಒಂದು ಸಮಸ್ಯೆಯೇ ಎಂಬ ಕು.ವೀಣಾ ಅವರು ಬರೆದ ಲೇಖನ ನಿಜವಾಗಿಯೂ ಗಂಭೀರವಾದದ್ದು. ಈಗಾಗಲೇ ಮತಾಂತರ ವಿಷಯದಲ್ಲಿ ಪ್ರಧಾನಿ ವಾಜಪೇಯವರೇ ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗಬೇಕೆಂದು ಕರೆಕೊಟ್ಟ ನಂತರ ಈ ಬಗ್ಗೆ ಚರ್ಚೆಯೇ ಅನಗತ್ಯವೆಂದು ಕೆಲವು ರಾಜಕಾರಣಿಗಳು ವಾದಿಸುತ್ತಿದ್ದರೂ, ಪತ್ರಿಕಾ ಮಾಧ್ಯಮದಲ್ಲಿ ಹಾಗೂ ಸಾರ್ವಜನಿಕವಾಗಿ ಚರ್ಚೆ ಆರಂಭವಾಗಿದೆ.

Define your words before you speak (ಮಾತನಾಡುವ ಮೊದಲು ನೀನಾಡುವ ಪದಗಳ ನಿರ್ದಿಷ್ಟ ಅರ್ಥ ಹೇಳು) ಎಂಬುದೊಂದು ನುಡಿಗಟ್ಟಿದೆ. ಮತಾಂತರ ಎಂದರೇನು ಎಂಬುದನ್ನು ಮೊದಲು ಅರಿತುಕೊಳ್ಳಬೇಕು.

ಈ ಮತಾಂತರ ಎನ್ನುವ ಪದದಲ್ಲಿ 'ಮತಾಂಧತೆ, ಅಂಧಶ್ರದ್ಧೆ, ಅಮಾಯಕ ಅಜ್ಞಾನದ ದುರುಪಯೋಗಗಳು ಸೇರಿವೆ. ಮತಾಂತರದ ಉದ್ದೇಶ ಅದರ ಅರ್ಥವ್ಯಾಪ್ತಿಯನ್ನು ತೋರಿಸುತ್ತದೆ. ಎಲ್ಲಾ ಮತಾಂತರಗಳ ಉದ್ದೇಶ ಎರಡು ಬಗೆ: ಇತರೆ ಮತಗಳ ಆಚರಣೆ ಮತ್ತು ವಿಚಾರಗಳಿಂದ ಪರಮಾತ್ಮನ ಪ್ರೀತಿ ಸಾನ್ನಿಧ್ಯ ಅಥವಾ ಸ್ವರ್ಗ ಸಿಗಲಾರದು, ಯಾರು ತಾವು ನಂಬಿದ ದೇವರನ್ನು ಬೇರೆಯವರು ನಂಬುವುದಿಲ್ಲವೋ ಮತ್ತು ಯಾರು ತಮ್ಮ ಮತಾಚರಣೆಯನ್ನು ಮನ್ನಿಸಿ ಆಚರಿಸುವುದಿಲ್ಲವೋ ಅವರಿಗೆ ನರಕವೇ ಗತಿ ಎನ್ನುವ ನಂಬುಗೆ ಮತ್ತು ಪ್ರಚಾರ. ಅದರ ಜೊತೆಗೆ ತಾವು ದೇವರ ಏಜೆಂಟರಂತೆ ವರ್ತಿಸುವ ಕಾಯಕ. ಇದು ಯಾವುದೇ ಮತಪಂಥಗಳ ದಾರಿಯಾಗಿರಬಹುದು ಅದು ಮತಾಂಧತೆಯ ದಾರಿ -ಮತಾಂತರದ ಅಂತರಾರ್ಥ. ಹೀಗೆ ಹೆಚ್ಚು ಜನರನ್ನು ತಾನು ಅನುಸರಿಸುತ್ತಿರುವ ದೈವದ ಭಕ್ತರನ್ನಾಗಿ ಪರಿವರ್ತಿಸಿದರೆ ತಮ್ಮನ್ನು ದೇವರು ವಿಶೇಷವಾಗಿ ಮೆಚ್ಚುವನೆಂಬ 'ಮತೀಯ ಅಂಧ ಪ್ರಜ್ಞೆ'. ಇಂತಹ ಮತ ಪ್ರಚಾರಕರ ಬಲೆಗೆ ಬೀಳುವವರು ಸಾಮಾನ್ಯವಾಗಿ ಮತ-ಧರ್ಮದ ಅರ್ಥ ತಿಳಿಯದ ಅಮಾಯಕರು ಮತ್ತು ಅಸಹಾಯಕರು. ಕು.ವೀಣಾ ಪತ್ರದಲ್ಲಿ ಹೇಳಿದ ಕುಟುಂಬ ಇದರಿಂದ ಹೊರತಲ್ಲ. ಎರಡನೆಯ ಉದ್ದೇಶ ಸಾಮಾಜಿಕ ಮತ್ತು ರಾಜಕೀಯ ಜಗತ್ತಿನಾದ್ಯಂತ ತಮ್ಮ ಮತ ಧರ್ಮದ ಅನುಯಾಯಿಗಳ ಸಂಖ್ಯಾ ಬಲವುಳ್ಳ ಸಮುದಾಯವನ್ನು ಕಟ್ಟುವುದು ಮತ್ತು ಇತರರನ್ನು ಅಲ್ಪಸಂಖ್ಯಾತರನ್ನಾಗಿ ಮಾಡಿ ಬಲಿಷ್ಠ ಸಮುದಾಯದ ಕೃಪಾ ಕಟಾಕ್ಷದಲ್ಲಿ ಬಾಳುವಂತೆ ಮಾಡುವುದು. ಇಂದು ಪಾಕಿಸ್ತಾನ, ಅಫಘಾನಿಸ್ತಾನ, ಮಧ್ಯಏಷ್ಯಾಗಳಲ್ಲಿ ಇದು ನಡೆದಿದೆ. ಯಹೂದ್ಯರ ಭಯವೇ ಅಲ್ಲಿಯ ಅಶಾಂತಿ, ಯುದ್ಧಗಳಿಗೆ ಕಾರಣವಾಗಿದೆ. ಆಸ್ಟ್ರೇಲಿಯ, ಉತ್ತರ ಮತ್ತು ದಕ್ಷಿಣ ಅಮೆರಿಕಾಗಳಲ್ಲಿ ಮೂಲ ನಿವಾಸಿಗಳ ಸ್ಥಿತಿ ಶೋಚನೀಯ. ಭಾರತದಲ್ಲೂ ಹಿಂದೂಗಳ ಒಂದು ಗುಂಪು ಭವಿಷ್ಯದ ಈ ಭಯದಿಂದ ಉದ್ರೇಕಗೊಂಡಿದೆ.

ಕ್ರಿಶ್ಚಿಯನ್ ಧರ್ಮದ 'ಮತಾಂತರದ' ವಿಷಯ ತೆಗೆದುಕೊಂಡರೆ- ಅವರು 'ಬ್ಯಾಪ್ಟಿಸಂ' ಎಂದು ಮಾಡುತ್ತಾರೆ; ಪವಿತ್ರ ಜಲ ಪ್ರೋಕ್ಷಣೆ ಅಥವಾ ಸ್ನಾನ ಮಾಡಿ ಕ್ರಿಶ್ಚಿಯನ್ ಹೆಸರನ್ನು ಇಡುವುದು, ನಂತರ ಆ ವ್ಯಕ್ತಿ ಚರ್ಚಿಗೆ ಹಾಜರಾಗಿ ಬೋಧನೆಗಳನ್ನು (ಬೈಬಲ್) ಕೇಳಬೇಕಾಗುವುದು. ಧಾರ್ಮಿಕ-ದೈವದ ಹಸಿವಿನಿಂದ ವ್ಯಕ್ತಿಯೇ ಇಷ್ಟ ಪಟ್ಟಾಗ ಒಂದು ದೈವಿಕ ಮಾರ್ಗ ತೋರಿಸಿದರೆ ಅದು ನ್ಯಾಯವೇ. ಆದರೆ, ಆ ದೈವಿಕ ಹಸಿವಿಲ್ಲದ ವ್ಯಕ್ತಿಗೆ ಮಾಡಿದ ಮತಾಂತರ ಎರಡೂ ಮತಗಳಿಗೆ ಮಾಡಿದ ಅನ್ಯಾಯವೆಂದೇ ಭಾವಿಸಬೇಕಾಗುತ್ತದೆ. ಆ ವ್ಯಕ್ತಿಯನ್ನು ಅವನ ಬಂಧುವರ್ಗದಿಂದ ಅವನ ಜಾತಿ ಸಮುದಾಯದಿಂದ ಬೇರೆ ಮಾಡಿದ್ದಲ್ಲದೆ, ಹೊಸ ಮತದಲ್ಲೂ ನೆಲೆ ಕಾಣದಂತಾಗುವುದು. ಇಂದಿಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಾಹ ಸಂಬಂಧಗಳನ್ನು ಬೆಳೆಸುವಾಗ ಕ್ರಿಶ್ಚಿಯನ್ನರು, ಹಿಂದಿನ ತಮ್ಮ ಹಿಂದೂ ಜಾತಿಸಂಬಂಧಗಳನ್ನು ಹುಡುಕುವುದು ಕೇಳಿದ್ದೇನೆ, ಕಂಡಿದ್ದೇನೆ.

ಮಹಾತ್ಮನೂ ಜ್ಞಾನಿಯೂ ಆದ ಏಸುವು ಜಗತ್ತಿಗೆ ಪ್ರೀತಿ, ನಿಸ್ವಾರ್ಥ ಸೇವೆ, ಕ್ಷಮೆ ಎಂಬ ತತ್ವಗಳನ್ನು ಬೋಧಿಸಿ ಅದರಂತೆ ನಡೆದನು. ಈ ತತ್ವಗಳನ್ನು ಅನುಸರಿಸಿದರೆ ಮಾನವನು ದೇವರಿಗೆ ಪ್ರೀತಿಪಾತ್ರನಾಗುವನೆಂದನು. ಜೀಸಸ್‌ನು ಮತ ಸ್ಥಾಪಿಸಲೂ ಇಲ್ಲ ಮತಾಂತರ ಮಾಡಲೂ ಹೇಳಿಲ್ಲ. ಮತಾಂತರದಿಂದ ದೇವರ ಪ್ರೀತಿಗಳಿಸಬಹುದೆಂಬುದು ಅಂಧಶ್ರದ್ಧೆ. ನಿಜವಾಗಿ ದೇವರ ಪ್ರೀತಿ ಗಳಿಸುವ ಮಾರ್ಗ ಸತ್ಯ, ಸಾರ್ವತ್ರಿಕ ಪ್ರೇಮ, ನಿಸ್ವಾರ್ಥ ಸೇವೆ ಮತ್ತು ಪ್ರಾಮಾಣಿಕ ಬದುಕು. ಈ ಗುಣವಿರುವ ವ್ಯಕ್ತಿ ದೇವಾಲಯ, ಚರ್ಚ್, ಮಸೀದಿಗಳಿಗೆ ಹೋಗದಿದ್ದರೂ, ದೇವರಿಗೆ ಪ್ರಿಯನೆಂದೇ ನನ್ನ ಭಾವನೆ.

ಕು.ವೀಣಾರವರು ಎತ್ತಿದ ಸಮಸ್ಯೆಗೆ - ಮತಾಂತರ ಪರಿಹಾರವಲ್ಲ. ದಲಿತರು ಮತ್ತು ಗುಡ್ಡಗಾಡು ಜನರಿಗೆ ಈಗ ಬೇಕಾಗಿರುವುದು ವಿದ್ಯೆ ಉದ್ಯೋಗ ಮತ್ತು ಮತಾಂತರದ ಉದ್ದೇಶವಿಲ್ಲದ ನಿಸ್ವಾರ್ಥ ಸೇವೆ. ಹೀಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಅನೇಕ ಕ್ರಿಶ್ಚಿಯನ್ ಮಿಶನರಿಗಳು ನಿಜವಾಗಿಯೂ ವಂದನೀಯರು. ಎಲ್ಲರೂ ಆ ಬಗೆಯ ಸೇವೆಗೆ ತಯಾರಾಗಲೆಂಬುದೆ ನನ್ನ ಆಶಯ. ಅಮಾಯಕ ಜನರು ವಿದ್ಯಾವಂತರಾದರೆ ಈ ಮತಾಂತರ ಸಮಸ್ಯೆ ಬಗೆ ಹರಿಯಬಹುದು.

-ಬಿ.ಎಸ್.ಚಂದ್ರಶೇಖರ
ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯರು
ಸಾಗರ- 577401, ಶಿವಮೊಗ್ಗ ಜಿಲ್ಲೆ.

ಇದೊಂದು ಪುರಾತನ ಸಮಸ್ಯೆ

ಮತಾಂತರ ಒಂದು ಸಮಸ್ಯೆ ಅಷ್ಟೇ ಅಲ್ಲ ಇದು ಬಹಳ ಪುರಾತನವಾದುದು ಹೌದು!

ಭಾರತದಲ್ಲಿ ಮತಾಂತರದ ಸಮಸ್ಯೆ ಈ ಹಿಂದಿನಿಂದಲೂ ಇದೆ. ಕೋಮುಗಲಭೆಗಳಿಂದ ಇದರ ಭಯ ಇನ್ನೂ ಹೆಚ್ಚಾಗಿದೆ. ಭಾರತೀಯರಾದ ನಾವು ಎಲ್ಲಾ ಭೇದಭಾವ ಮರೆತು ಮಾನವರಾಗಲು ಕಲಿಯಬೇಕಾಗಿದೆ.

■ಬಿ.ಎಸ್.ಸೌದಾಗರ್
ಇಂಡಿ (ಬಿಜಾಪುರ)

ಹಾಲಿನ ಪುಡಿಗಾಗಿ ಮತಗೆಡುವುದು ತರವಲ್ಲ!

ಕುಮಾರಿ ವೀಣಾ ಹೇಳಿರುವ ಪ್ರಕಾರ ಬಡವರು, ದಲಿತರು ಅಥವಾ ಯಾರಾದರೂ ಅನ್ಯ ಜಾತಿಯವರು ಕ್ರೈಸ್ತ ಧರ್ಮಕ್ಕೆ ಸೇರಿದರೆ ಅವರಿಗೆ ಕಷ್ಟಕಾಲದಲ್ಲಿ ಎಲ್ಲಾ ರೀತಿಯ ಸಹಾಯ ಮಾಡುತ್ತಾರೆ, ಉಚಿತವಾಗಿ ಹಾಲಿನ ಪುಡಿ ಕೊಡುತ್ತಾರೆ, ಮಕ್ಕಳನ್ನು ಶಾಲೆಗೆ ಸೇರಿಸಿ ಕೊಳ್ಳುತ್ತಾರೆ. ಅಂದರೆ ಈ ಎಲ್ಲಾ ಸಹಾಯಗಳು ಬೇರೆ ಧರ್ಮದಿಂದ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದಾಗ ಮಾತ್ರ ದೊರೆಯುತ್ತವೆ ಏಕೆ? ಕ್ರೈಸ್ತರಲ್ಲಿ ಅಂತಹ ಸೇವಾ ಮನೋಭಾವ ಇದ್ದರೆ ಸಮಾಜದಲ್ಲಿನ ಎಲ್ಲಾ ರೀತಿಯಿಂದ ಹಿಂದುಳಿದ, ದಲಿತ, ಹರಿಜನ, ಕೊಳಚೆ ಪ್ರದೇಶ ವಾಸಿಗಳು ಅಥವಾ ಯಾವುದೇ ಗಂಭೀರ ಖಾಯಿಲೆಗೆ ತುತ್ತಾದ ರೋಗಿಗಳಿಗೆ ಕ್ರೈಸ್ತ ಧರ್ಮಕ್ಕೆ ಮತಾಂತರ ಗೊಳಿಸದೇ (ಅವರ ಮೂಲ ಹೆಸರು ಬದಲಾಯಿಸದೇ) ಅವರ ಮೂಲ ಧರ್ಮ ದಲ್ಲಿಯೇ ಇರಲು ಬಿಟ್ಟು ಅವರಿಗೆ ಬೇಕಾಗಿರುವ ಸಹಾಯ ಮಾಡಬಹುದಲ್ಲವೆ?

ಕ್ರೈಸ್ತರಲ್ಲಿಯೂ ಸಹ ಬಹಳಷ್ಟು ತಾರತಮ್ಯ ಗಳಿವೆ. ಬೇರೆ ಧರ್ಮದಿಂದ ಮತಾಂತರ ಗೊಂಡವರನ್ನು ಎಂದೂ ಸರಿಸಮನಾಗಿ ನೋಡಿ ಕೊಳ್ಳುವುದಿಲ್ಲ ಮತಾಂತರಿಗಳಿಗೆ ಅವರ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮೂಲ ಕ್ರೈಸ್ತರು ಬಿಡುವುದಿಲ್ಲ. ಕ್ರೈಸ್ತರು ದೀನದಲಿ ತರುಗಳ ಸೇವೆ ಮಾಡುವ ಹೆಸರಿನಲ್ಲಿ ಕ್ರೈಸ್ತ ಜನಗಳನ್ನು ಹೆಚ್ಚಿಸಿಕೊಳ್ಳಲು ಹೊರಟಿದ್ದಾರೆ. ಆದ್ದರಿಂದ ಅವರು ಅನ್ಯ ಜಾತಿಯ ಯುವಕ-ಯುವತಿಯರಿಗೆ ಕೆಲಸ ಕೊಡಿಸುವ ಹಾಗೆ ಇನ್ನಿತರ ಹಣದ ಆಮಿಷಗಳನ್ನು ತೋರಿಸಿ ಮತಾಂತರಗೊಳಿಸುತ್ತಾರೆ. ಇದು ದೇಶ ದ್ರೋಹದ ಕೆಲಸ. ಕ್ರೈಸ್ತರು ಮೊದಲು ಮತಾಂತರಗೊಳಿಸುವುದನ್ನು ನಿಲ್ಲಿಸಿ ಭಾರತ ಮಾತೆಗೆ (ಭಾರತೀಯ ಸಂಸ್ಕೃತಿಗೆ) ದ್ರೋಹ ಬಗೆಯದೇ ಉದಾರ ಮನಸ್ಸಿನಿಂದ ದೀನ ದಲಿತರ ಸೇವೆ ಮಾಡಬೇಕು.

■ಟಿ.ಬಸವರಾಜ್ ಉದಗೀರ್
ಯಲಹಂಕ ಉಪನಗರ
ಬೆಂಗಳೂರು.

ಮತಾಂತರ ಎಂಬುದು ಕುಯುಕ್ತಿಯ ಸಾಧನೆ

ನಾಗರಿಕತೆ ಬೆಳೆಯುತ್ತಾ ಹೋದಂತೆ ಮನುಷ್ಯನು ಮಾನಸಿಕವಾಗಿ ವಿಕಾಸಗೊಂಡು ಬುದ್ಧಿಜೀವಿ ಎಂದು ಕರೆಸಿಕೊಂಡನು. ಜೊತೆಗೆ ಕೆಲವು ದುರ್ಭಾವಗಳು ವಿಕಾಸವಾದುವು ಎನ್ನುವುದು ಮಾತ್ರ ಕಟು ಸತ್ಯ. ಇವುಗಳಿಂದಾಗಿ ತಾನೇ ಮೆರೆಯಬೇಕು ಅನ್ಯರು ಇರಬಾರದು ಎಂದು ಅವರ ಭಾವನೆಗಳಿಗೆ ಧಕ್ಕೆ ತರುವಂತಹ ಹೇಯಗಳು ನಡೆದವು. ಅಂತಹ ರಾಕ್ಷಸೀ ಪ್ರವೃತ್ತಿ ಯಲ್ಲಿ ಮೊದಲ ಸ್ಥಾನದಲ್ಲಿರುವುದೇ ಮತಾಂತರ.

ಮತಾಂತರ! ಹೌದು, ಇದೊಂದು ವಿಚಿತ್ರವಾದರೂ ಸತ್ಯ ಸಂಗತಿ. ಪ್ರಸ್ತುತ ಸಮಾಜದ ಪ್ರತಿ ಗಲ್ಲಿ ಗಲ್ಲಿ ಮೂಲೆ ಮೂಲೆಯಲ್ಲಿ, ಸಾಮಾನ್ಯ ಜನರ ನಾಲಿಗೆಯಲ್ಲಿ ಕುಣಿಯುತ್ತಿರುವ ವಿಷಯ ಇದೊಂದೆ.

ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿರುವ ಜನರು ಉದಾರಿಗಳು. ಇವರು ಯಾವುದೇ ಜನಾಂಗದ ಮೇಲೆ ಆಕ್ರಮಣ ಮಾಡಿದವರಲ್ಲ. ಹಾಗಂತ ಸ್ವಾಭಿಮಾನವನ್ನು ಬಿಟ್ಟು ಕೊಟ್ಟವರೂ ಅಲ್ಲ.

ಸೇವೆಯ ಸೋಗಿನಲ್ಲಿ ಮತಾಂತರ ನಡೆಯುತ್ತಿರುವುದು ಯಾಕಾಗಿ? ನಿಜವಾಗಿ ಸೇವೆ ಮಾಡುವ ಮನೋಭಾವ ಇದೆ ಎಂದಾದರ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಏಸುವಿನ ಸ್ಮರಣೆ ಮಾಡುವುದಕ್ಕೆ ಒತ್ತಾಯ ಯಾಕಾಗಿ? ಏಸುವಿಗೆ ಭಕ್ತರ ಕೊರತೆ ಇದೆಯೇ? ಅಥವಾ ಕ್ರಿಶ್ಚಿನ್ ಮಿಷನರಿಗಳ ಈ ದುಷ್ಕೃತ್ಯ ಏಸುವಿಗೆ ಪ್ರಿಯವೇ? ಹಾಗೆ ಹೌದು ಎಂದಾದರೆ ಅದನ್ನು ಧರ್ಮ ಎಂದು ಕರೆಯಲು ಹೇಗೆ ಸಾಧ್ಯ? ಮುಗ್ಧರ ಮನೆ ಮನೆಗಳಿಗೆ ಹೋಗಿ ಅವರ ಮುಗ್ಧ ಮನಸ್ಸಿನಲ್ಲಿ ಹಿಂದು ದೇವದೇವತೆಗಳ ಬಗ್ಗೆ ಕೀಳರಿಮೆ ಉಂಟು ಮಾಡುವುದು ಯಾಕಾಗಿ? ಕ್ರಿಸ್ತನ ಲೀಲೆಗಳ ಬಗ್ಗೆ ಹಿಂದುಗಳಿಗೆ ಸಾಹಿತ್ಯಗಳನ್ನು ಉಚಿತವಾಗಿ ಹಂಚುವ ಉದ್ದೇಶ ಏನು? ಇದಕ್ಕೆಲ್ಲಾ ಸ್ಪಷ್ಟ ಉತ್ತರ ಒಂದೇ - ಅದೇ ಮತಾಂತರ.

ಇತ್ತೀಚೆಗೆ ಮಧ್ಯ ಪ್ರದೇಶದ ಜಬುವಾದಲ್ಲಿ 4 ಜನ ಕ್ರೈಸ್ತ ಸನ್ಯಾಸಿನಿಯರ ಮೇಲೆ ಮೂರ್ಖ ಶಿಖಾಮಣಿಗಳೆನ್ನಿಸಿಕೊಂಡ ರಾಕ್ಷಸರು ಮಾಡಿದ ಅಮಾನುಷ ಕೃತ್ಯ ಸುದ್ದಿ ಮಾತ್ರವಾಗಿ ಉಳಿದಿಲ್ಲ. ಇದೊಂದು ಅತಿರಂಜಿತ ಪ್ರಚಾರ ಪಡೆದ ಘಟನೆ ಯೆಂದು ದಾಖಲಾಗಿದೆ. ಯಾರೋ ಮಾಡಿದ ಈ ತಪ್ಪಿಗಾಗಿ ಕೆಲವು ದಿನಗಳ ಹಿಂದೆ ಬೆಂಗಳೂರಿನಲ್ಲಿ ಕ್ರೈಸ್ತ ಸಂಸ್ಥೆಗಳು ತಾವು ನಡೆಸುವ ಶಾಲೆಗಳ ವಿದ್ಯಾರ್ಥಿಗಳನ್ನು ಒಟ್ಟು ಗೂಡಿಸಿ ಭಾರೀ ಪ್ರತಿಭಟನಾ ಪ್ರದರ್ಶನ ನಡೆಸಿದರು. ಅದಕ್ಕಾಗಿ ಅವರ ಸಂಸ್ಥೆಗಳಲ್ಲಿನ ಹಿಂದು ವಿದ್ಯಾರ್ಥಿಗಳನ್ನು ಬಳಸಿಕೊಂಡರು. ಆ ಮಕ್ಕಳಲ್ಲಿ ಯಾಕೆ ಪ್ರತಿಭಟನೆ ಎಂದು ಕೇಳಿದಾಗ ಅತ್ಯಾಚಾರ ಮಾಡಿದ್ದಕ್ಕೆ ಎಂದರು. ಅತ್ಯಾಚಾಥ ಎಂದರೇನು ಎಂದು ಕೇಳಿದರೆ ಆ ಮಕ್ಕಳಿಂದ ಉತ್ತರವಿಲ್ಲ. ಇದು ಕ್ರಿಶ್ಚಿಯನ್ ಸಂಸ್ಥೆಗಳಿಂದ ಶಿಕ್ಷಣದ ಸುಧಾರಣೆಯೇ?

ನಿಜವಾಗಿ ಹೇಳಬೇಕೆಂದರೆ ಕ್ರಿಶ್ಚನ್ ಬಂಧುಗಳ ಶೈಕ್ಷಣಿಕ ಕಾಳಜಿ ಶ್ಲಾಘನೀಯ ವಾದುದು. ಆದರೆ ಶಿಕ್ಷಣದ ಹೆಸರಿನಲ್ಲಿ ಮತಾಂತರಕ್ಕೆ ಪ್ರೇರಣೆ ನೀಡುವುದು, ಶಿಸ್ತಿನ ಹೆಸರಿನಲ್ಲಿ ಹಿಂದು ಮಕ್ಕಳ ಶೋಷಣೆ ಅಲ್ಲದೆ ಮತ್ತೇನು? ಇವರ ಉದ್ದೇಶ ಭಾರತೀಯರ ಪ್ರಾಚೀನ ಪವಿತ್ರ ಸಂಸ್ಕೃತಿ ಮತ್ತು ಭಾರತೀ ಯತೆಯ ನಾಶ ಪಡಿಸುವುದಲ್ಲವೆ?

ಮತಾಂತರದಿಂದ ರಾಷ್ಟ್ರಾಂತರದ ಭೀಕರ ಅಪಾಯವಿದೆ. ಯಾವುದೇ ಭೂಭಾಗದಲ್ಲಿ ಒಂದೇ ಸಮುದಾಯ ಬಾಹುಳ್ಯವಾದಂತೆ ಬೇರೆ ಯಾಗುವ ಕೂಗು ಕೇಳುತ್ತದೆ. ದೇಶ ಒಡೆಯುವ ಸಂಚು ನಡೆಯುತ್ತದೆ ಹಾಗಾಗಿ ನೀತಿಯುತ ಬಾಳ್ವೆಗೆ ಧಕ್ಕೆ ಒದಗುತ್ತದೆ.

■ಸತೀಶ್ ಶಿರ್ಲಾಲು, ಬೆಳ್ತಂಗಡಿ



■ಕೋ. ಚೆನ್ನಬಸಪ್ಪ
ನಿವೃತ್ತ ನ್ಯಾಯಾಧೀಶರು
127, ಪಶ್ಚಿಮ ಕಾರ್ಡ್ ರಸ್ತೆ,
ಮಹಾಲಕ್ಷ್ಮೀಪುರ, ಬೆಂಗಳೂರು - 86

ಈ ಕ್ರಿಯೆ-ಪ್ರತಿಕ್ರಿಯೆಗೆ ಕಾರಣವಾದ ಅಧ್ಯಕ್ಷ ಭಾಷಣವನ್ನು ಲಕ್ಷ್ಯವಿಟ್ಟು ಆಮೂಲಾಗ್ರವಾಗಿ ಓದಿದೆ. ಆ ಭಾಷಣದಲ್ಲಿ ಯಾವ ಭಾಗ ಬೆಂಕಿಯ ಆಹುತಿಗೆ ಅರ್ಹವೆಂಬುದನ್ನು ಹುಡುಕಲು ಪ್ರಯತ್ನಿಸಿದೆ.

ಭೈರಪ್ಪನವರು ಎಬ್ಬಿಸಿದ ಬಿರುಗಾಳಿ!

ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಭೈರಪ್ಪನವರು ದಲಿತ ಸಾಹಿತ್ಯ, ಸಾಹಿತಿಗಳ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ಕುಪಿತರಾದ, ಕನ್ನಡ ಪ್ರಾಧಿಕಾರದ ಅಧ್ಯಕ್ಷ ಚಂಪಾ ಅವರು ಅಧ್ಯಕ್ಷ ಭಾಷಣದ ಪ್ರತಿಯನ್ನು ಸುಡುವ ಮಟ್ಟಕ್ಕೆ ಇಳಿದು, ಭೈರಪ್ಪನವರು ಕ್ಷಮಾಪಣೆ ಕೋರಬೇಕೆಂದು ಆಗ್ರಹಪಡಿಸಿರುವುದಾಗಿ, ವರದಿಯಾಗಿರುವುದನ್ನು ಓದಿದೆ. ಚಂಪಾ ಅವರ ಈ ನಿಲುಮೆಯನ್ನು ಖಂಡಿಸುವ ಪ್ರತಿಕ್ರಿಯೆಯನ್ನೂ ಓದಿದೆ.

ಈ ಕ್ರಿಯೆ-ಪ್ರತಿಕ್ರಿಯೆಗೆ ಕಾರಣವಾದ ಅಧ್ಯಕ್ಷ ಭಾಷಣವನ್ನು ಲಕ್ಷ್ಯವಿಟ್ಟು ಆಮೂಲಾಗ್ರವಾಗಿ ಓದಿದೆ. ಆ ಭಾಷಣದಲ್ಲಿ ಯಾವ ಭಾಗ ಬೆಂಕಿಯ ಆಹುತಿಗೆ ಅರ್ಹವೆಂಬುದನ್ನು ಹುಡುಕಲು ಪ್ರಯತ್ನಿಸಿದೆ. ಭಾಷಣದ ಮೂರನೆ ಪುಟದಲ್ಲಿ ''ಎಸ್.ಎಸ್.ಎಲ್.ಸಿ. ಮುಗಿಯುವವರೆಗಾದರೂ ಕರ್ನಾಟಕದಲ್ಲಿ ಕನ್ನಡವೆ ಶಿಕ್ಷಣ ಮಾಧ್ಯಮವಾಗಬೇಕು'' ಎಂಬ ವಾಕ್ಯವನ್ನು ಓದಿ, ಚಂಪಾ ಅವರು ಈ ಮಾತನ್ನು ಸುಡಬೇಕೆಂದು ಹವಣಿಸಿದ್ದರೆ, ಕನ್ನಡದ ಉದ್ಧಾರಕ್ಕಾಗಿಯೆ ರಚಿಸಿದ ಪ್ರಾಧಿಕಾರವನ್ನು ಸುಡಬೇಕೆಂದು ಅನಿಸಿತು!! ಭೈರಪ್ಪನವರ ಭಾಷಣದ ಇನ್ನೊಂದು ವಾಕ್ಯ: ''ಇಂಗ್ಲೀಷಿನಲ್ಲಿ ಓದುವ ನಮ್ಮ ಮಕ್ಕಳು ಮೊಮ್ಮಕ್ಕಳಲ್ಲಿ ಯಾರಿಗಾದರೂ ಸಾಹಿತ್ಯ ಸೃಷ್ಟಿಯ ಶಕ್ತಿ ಇದ್ದರೆ ಅವರು ಮುಂದೆ ಕನ್ನಡದಲ್ಲಿ ಬರೆಯಲು ಸಾಧ್ಯವಿಲ್ಲ.'' ಈ ಮಾತನ್ನು ಸುಡಬೇಕೆಂದು ಚಂಪಾ ಇಚ್ಛಿಸಿದ್ದರೆ ಅವರಿಗೆ ಕನ್ನಡ ಭಾಷೆ, ಕನ್ನಡ ಸಾಹಿತ್ಯ ಚಿರಋಣಿಯಾಗಬೇಕು!


ಚಂಪಾ ಅವರು ಈ ಮಾತನ್ನು ಸುಡಬೇಕೆಂದು ಹವಣಿಸಿದ್ದರೆ, ಕನ್ನಡದ ಉದ್ಧಾರಕ್ಕಾಗಿಯೆ ರಚಿಸಿದ ಪ್ರಾಧಿಕಾರವನ್ನು ಸುಡಬೇಕೆಂದು ಅನಿಸಿತು!!

ಬಹುಶಃ ಭೈರಪ್ಪನವರ ಭಾಷಣದ ಬಹುಭಾಗ ಮೀಸಲಾಗಿರುವ ಶತಮಾನದ ಕನ್ನಡ ಸಾಹಿತ್ಯದ ಗೊತ್ತುಗುರಿಗಳ ವಿಚಾರವಾಗಿ ಆಡಿದ ಮಾತುಗಳು ಭಿನ್ನಾಭಿಪ್ರಾಯಕ್ಕೆ ಎಡೆ ಕೊಡಬಹುದು (ಪುಟ 2 ರಿಂದ 20). ತಮ್ಮ ಅಭಿಪ್ರಾಯಗಳು ಕೆಲವರಿಗೆ ಒಪ್ಪಿಗೆಯಾಗಲಾರದೆಂಬ ಸಂದೇಹದಿಂದ ಅವರೆ: ''ಮೇಲೆ ಅವಲೋಕಿಸಿದ ಚಳವಳಿಗೆ ನಾನು ವಿರೋಧಿ ಎಂಬ ಭಾವನೆ ಬಂದಿದ್ದರೆ ಹೋಗಲಾಡಿಸಬೇಕು'' ಎಂದು ಹೇಳಿ, ತಮ್ಮ ನಿಲುಮೆಯನ್ನು ಸಮರ್ಥಿಸಿಕೊಂಡಿದ್ದಾರೆ. ನವೋದಯ ಸಾಹಿತ್ಯ, ಪ್ರಗತಿಶೀಲ ಚಳವಳಿ, ನವ್ಯ, ಬಂಡಾಯ, ದಲಿತ, ಸ್ತ್ರೀವಾದಿ ಚಳವಳಿಯ ಬಗ್ಗೆ ಅವರ ತಿಳುವಳಿಕೆ ಏನು? ಅವರ ದೃಷ್ಟಿಯಲ್ಲಿ ಅವು ಹೇಗೆ ''ಶುದ್ಧ ಸಾಹಿತ್ಯವೆಂಬ ಕಲ್ಪನೆಯಿಂದ ವಿಮುಖವಾಯಿತು'' (ಪು. 8) ಎಂಬುದನ್ನು ಹೇಳಿದ್ದಾರೆ. ಅವರ ಆ ವಿಚಾರವನ್ನು ಒಪ್ಪುವುದು, ಬಿಡುವುದು ನಮ್ಮ ಇಷ್ಟ.

ಅಧ್ಯಕ್ಷ ಭಾಷಣದಲ್ಲಿ ನಾನು ಗುರುತಿಸಿದ ಮುಖ್ಯವಾದ ಅಂಶ: ಯಾವುದೋ ಒಂದು ತತ್ತ್ವ ಸಿದ್ಧಾಂತ, - ಅದು ವರ್ಗಭೇದ, ಸಾಮಾಜಿಕ ಸರಿಸಮಾನತೆ, ಆರ್ಥಿಕ ತತ್ತ್ವ, ಜಾತಿ ಲಿಂಗ,... ಆಧಾರಿತ ಯಾವುದೇ ಸಿದ್ಧಾಂತಕ್ಕೆ ಕಟ್ಟುಬಿದ್ದ ಸಾಹಿತಿ, 'ಶುದ್ಧ ಸಾಹಿತ್ಯ ಸೃಷ್ಟಿಸಲಾರ' ಎಂಬುದು ಅವರ ನಿಲುಮೆಯೆಂದು ಕಾಣುತ್ತದೆ. 'ಶುದ್ಧ ಸಾಹಿತ್ಯ' ಪ್ರತಿಪಾದನೆ ಯಾವಾಗಲೂ ಇದ್ದೇ ಇದೆ. ಹರಿಹರ 'ಶುದ್ಧ ಸಾಹಿತಿ'ಗಳ ಅವಹೇಳನಕ್ಕೆ ಗುರಿಯಾದ ಪ್ರಥಮ ಪ್ರಗತಿಶೀಲ, ಬಂಡಾಯ ಕವಿ. ಅವನನ್ನು 'ರಗಳೆ ಕವಿ' ಎಂದು ಮೂದಲಿಸಿದರು. ಆ ಶುದ್ಧ ಸಾಹಿತ್ಯ ಮಂತ್ರ ಪಠಿಸುವ, ಸಾಹಿತ್ಯ ಕ್ಷೇತ್ರದ ಗೊಡ್ಡು ಸಂಪ್ರದಾಯವಾದಿಗಳ fundamentalists ದೃಷ್ಟಿಯಲ್ಲಿ ಸರ್ವಜ್ಞ ಕವಿಯೆ ಅಲ್ಲ! ಶರಣರ ವಚನಗಳು, ದಾಸರ ಪದಗಳು ಶುದ್ಧ ಸಾಹಿತ್ಯವಲ್ಲ. ಜಾನಪದ ಸಾಹಿತ್ಯವಂತೂ ಶುದ್ಧ ಸಾಹಿತ್ಯದಿಂದ ದೂರ; ಬಹುದೂರ! ಹೀಗೆ ರಸ, ಧ್ವನಿ, ಛಂದಸ್ಸು, ಅಲಂಕಾರಗಳ ಅಳತೆ ಗೋಲಿನಿಂದ ಸಾಹಿತ್ಯವನ್ನು ಅಳೆಯುವ ಪಂಡಿತ ಶಿಖಾಮಣಿಗಳು ಯಾವಾಗಲೂ ಇದ್ದೇ ಇದ್ದಾರೆ! ಅವರು ಎಷ್ಟೇ ಪುಂಖಾನುಪುಂಖವಾಗಿ ಶಂಖ ಹೊಡೆದರೂ 'ಜನಬದುಕಬೇಕೆಂದು' ಬರೆದ ರಾಘವಾಂಕನಿಂದ ಹಿಡಿದು ಇಲ್ಲಿಯವರೆಗೆ - ಸಾಹಿತ್ಯ ಸೃಷ್ಟಿ ಆಗುತ್ತಲೇ ಇದೆ. 'ವ್ಯಾಕರಣ ಏಕೆಂಬೆಯೇನ್? ಕಲಿತು ಮರೆವುದ ಕಲೆ' ಎಂದು 'ಕಲ್ಕಿ', 'ಕ್ರಾಂತಿಕಾಳಿ', 'ಜಲಗಾರ', 'ಮಲೆಗಳಲ್ಲಿ ಮದುಮಗಳು' ರಚಿಸಿದ ಕವಿ, ಕಾದಂಬರಿಕಾರರು 'ಶುದ್ಧ ಸಾಹಿತ್ಯವಾದಿಗಳನ್ನು ಮೀರಿ ನಿಂತಿದ್ದಾರೆ. ಅವರು 2099ರಲ್ಲೂ ಬದುಕಿರುತ್ತಾರೆ- ಈ ಶುದ್ಧ ಸಾಹಿತ್ಯ ಪುರೋಹಿತರ ಶಂಖನಾದ ನಿಂತ ಮೇಲೆ ಎಷ್ಟೋ ಕಾಲದವರೆಗೆ.

ಭೈರಪ್ಪನವರು ಪ್ರಗತಿಶೀಲ ಚಳವಳಿ ಕುರಿತು ಆಡಿರುವ ಮಾತುಗಳ ಬಗ್ಗೆ ನಾಲ್ಕು ಮಾತು. ಯಾಕೆಂದರೆ ಆ ಚಳವಳಿಯಲ್ಲಿದ್ದವರ ಪೈಕಿ ಈಗ ಬದುಕಿರುವ ಇಬ್ಬರಲ್ಲಿ ನಾನೊಬ್ಬ, ಪಾಟೀಲ ಪುಟ್ಟಪ್ಪ ಇನ್ನೊಬ್ಬರು. ಮೊನ್ನೆ ಚದುರಂಗರು ಹೋದ ಮೇಲೆ ಆ ಚಳವಳಿ ಕರ್ನಾಟಕದಲ್ಲಿ ಅನಕೃ ಅವರ ನೇತೃತ್ವದಲ್ಲಿ ನಡೆಯಿತು. ಆ ಪ್ರಗತಿಶೀಲರ ಗುಂಪಿನಲ್ಲಿದ್ದವರನ್ನು - 'ಮಾರ್ಕ್ಸ್‌ವಾದ, ಮತ್ತು ಸೋವಿಯತ್ ರಷ್ಯದ ಕಮ್ಯುನಿಸ್ಟ್ ಪ್ರಚಾರದ ಪರಿಣಾಮವಾಗಿ ಭಾರತ ಮತ್ತು ಪಶ್ಚಿಮೇತರ ದೇಶಗಳಲ್ಲಿ ಹುಟ್ಟು ಹಾಕಿದ ಪ್ರೊಗ್ರೆಸೀವ್ ಚಳವಳಿಯ ಕನ್ನಡ ಅವತರಣಿಕೆಯಾಗಿ ಪ್ರಗತಿಶೀಲ ಚಳವಳಿ ಹುಟ್ಟಿತು' ಎಂದಿದ್ದಾರೆ ಭೈರಪ್ಪನವರು.

ಈ ಆಧಾರದ ಮೇಲೆ ಮುಂದಿನ ಒಂದೂವರೆ ಪುಟದ ವಿಶ್ಲೇಷಣೆ ಮಾಡಿದ್ದಾರೆ. ಅವರ ಈ 'ಮೂಲ ಆಧಾರ' 'ಪ್ರಮೇಯ' (Premise)ವೇ ನಿರಾಧಾರ. ಆಗ ಭಾರತದಲ್ಲಿ ಪ್ರೊಗ್ರೆಸೀವ್ ಬರಹ




ಗಾರರ ಸಂಘ ಕಮ್ಯುನಿಸ್ಟ್ ಪಕ್ಷದವರ ಬೆಂಬಲ ಅಥವಾ ಪ್ರಚೋದನೆಯಿಂದ ಮೊಳಕೆಯಾಗಿದ್ದರೂ, ಒಟ್ಟು ಭಾರತೀಯ ಪ್ರಗತಿಶೀಲ ಬರಹಗಾರರು ಆ ಮಾರ್ಕ್ಸ್‌ವಾದದ ಪ್ರಚಾರಕರಾಗಿದ್ದರೆಂಬುದು ಶುದ್ಧಾಂಗ ತಪ್ಪು. ಮುಲ್ಕರಾಜ ಆನಂದರಿಂದ ಭಾರತೀಯ ವಿವಿಧಭಾಷೆಗಳ ಪ್ರಗತಿಶೀಲ ಬರಹಗಾರರಲ್ಲಿ ಬಹುಜನ ಕಾರ್ಡ್ ಹೋಲ್ಡರ್ಸ್ (Card holders) ಇರಲಿಲ್ಲ. ಕನ್ನಡದಲ್ಲಿ ಕುಳಕುಂದ (ನಿರಂಜನ) ಮಾತ್ರ ಕಾರ್ಡ್ ಹೋಲ್ಡರ್. ಕಟ್ಟೀಮನಿ, ಪುಟ್ಟಪ್ಪ, ತರಾಸು ಮತ್ತು ನಾನು ಶುದ್ಧ ಒರಟು ಖಾದೀಧಾರಿ ಗೊಡ್ಡು ಗಾಂಧೀವಾದಿಗಳು. 'ಅನಕೃ ಠಾಕೂರರ ಗರಡಿಯಲ್ಲಿ ಪಳಗಿದವರು. ಚದುರಂಗ, ಕೆ.ಕೆ.ಪೈ..... ಕಮ್ಯುನಿಜಂ ಹೆಸರನ್ನು ಕೇಳದವರು. ನಾವು ಬರೆದದ್ದು ಶುದ್ಧ ಸಾಹಿತ್ಯವಲ್ಲ ಎಂದು ತಿರಸ್ಕರಿಸಿದರೆ ನಮಗೇನೂ ಚಿಂತೆಯಿಲ್ಲ. ನಮ್ಮ ಬರಹ ಜನರಿಗೆ ಪ್ರಿಯವಾಯಿತೆ? ಅದರಿಂದ ಅವರಿಗೆ ಬೆಳಕು ಮೂಡಿತೆ? '

ಇನ್ನು ನವ್ಯರ ಬಗ್ಗೆ ಒಂದು ಮಾತು. 'ರಸ ಸೃಷ್ಟಿ' 'ರಸಾಸ್ವಾದನೆ' ಶುದ್ಧ ಸಾಹಿತ್ಯದ ಅನಿವಾರ್ಯ ಲಕ್ಷಣ ಎನ್ನುತ್ತಾರೆ ಭೈರಪ್ಪನವರು. ಈ 'ರಸ ಸೃಷ್ಟಿ' 'ರಸಾಸ್ವಾದನೆ'ಯಲ್ಲಿ ನವ್ಯರನ್ನು ಮೀರಿಸುವ ರಸಿಕ ಶಿಖಾಮಣಿಗಳು ಯಾರಿದ್ದಾರೆ? ಕಾವ್ಯ ಮೀಮಾಂಸೆಯಲ್ಲಿ ಒಂಬತ್ತು ರಸಗಳನ್ನು ಹೇಳಿದ್ದರೆ, ನವ್ಯರು ಹದಿನಾರು 'ರಸ'ಗಳ ರುಚಿಯನ್ನು ನೋಡಿದ್ದಾರೆ; ತೋರಿಸಿದ್ದಾರೆ!! ಅವ್ವರು ಬರೆದದ್ದು ಶುದ್ಧ ಸಾಹಿತ್ಯವಲ್ಲದಿದ್ದರೆ ಅವರಿಗೆ ಏನಾಗಬೇಕಾಗಿದೆ?


ಕೊನೆಯದಾಗಿ ಬಂಡಾಯ ಸಾಹಿತಿಗಳ ಮಾತು. 'ನೂರು ದೇವರನೆಲ್ಲ ನೂಕಾಚೆ ದೂರ' 'ಗುಡಿ ಚರ್ಚು ಮಸೀದಿಗಳ ತೊರೆದು ಬನ್ನಿ' ಎಂದು ಸಾರಿದ ಮಹಾಕವಿಯೆ ಬಂಡಾಯ ಸಾಹಿತಿಗಳನ್ನು ಬೆನ್ನು ಚಪ್ಪರಿಸಿದರು. ನವೋದಯದ ಶ್ರೇಷ್ಠ ಕವಿಯೆಂದು, ಆಗಲೇ ಗುರುತಿಸಿದ ಕೆ.ವಿ. ಪುಟ್ಟಪ್ಪನವರು 'ಕುವೆಂಪು' ಆಗುವವರೆಗೆ ಅವರು ಪ್ರಗತಿಶೀಲರಲ್ಲಿ ಉಗ್ರಪ್ರಗತಿಶೀಲರು, ಬಂಡಾಯ ಕವಿಗಳಲ್ಲಿ ಅತ್ಯುಗ್ರ ಬಂಡಾಯ ಕವಿಗಳು. ಹಾಗಾದರೆ ಅವರು ಯಾವ ತತ್ತ್ವ ಸಿದ್ಧಾಂತಗಳಿಗೆ ಬದ್ಧರಾಗಿದ್ದರು? ಕವಿ ಅನನ್ಯ ಪರತಂತ್ರ ಎಂಬುದು ನಿಜವಾದ ಎಲ್ಲ ಸಾಹಿತಿಗಳಿಗೂ ಅನ್ವಯಿಸುತ್ತದೆ. ಪ್ರಗತಿಶೀಲರಲ್ಲಿ, ನವ್ಯರಲ್ಲಿ, ಬಂಡಾಯಿಗಳಲ್ಲಿ ಉತ್ತಮ ಸಾಹಿತ್ಯ ಸೃಷ್ಟಿಯಾಗಿದೆ!

ಭೈರಪ್ಪನವರ ಭಾಷಣದ ಉದ್ದಕ್ಕೂ ಕಂಡು ಬರುವ ಇನ್ನೊಂದು ಅಭಿಪ್ರಾಯದ ಬಗ್ಗೆ ಒಂದೆರಡು ಮಾತು. ಯಾವುದೇ ಒಂದು ತತ್ವಕ್ಕೆ ಬದ್ಧನಾದ ಸಾಹಿತಿ ಶುದ್ಧ ಸಾಹಿತ್ಯ ಸೃಷ್ಟಿ ಮಾಡಲಾರ ಎಂಬುದು ಅವರ ಭಾಷಣದಲ್ಲಿ ಓತಪ್ರೋತವಾಗಿ ಹರಿದಿರುವ ಒಂದು ಅಭಿಪ್ರಾಯ. ಈ ಪಂಥವು (ಪ್ರಗತಿ ಶೀಲ) ಶುದ್ಧ ಸಾಹಿತ್ಯವೆಂಬ ಕಲ್ಪನೆಯಿಂದ ವಿಮುಖವಾಯಿತು (ಪು.8). 'ಅದು ಎಷ್ಟೇ ಆಕರ್ಷಕವಾಗಿರಲಿ.... ಅದನ್ನು ಶುದ್ಧ ಸಾಹಿತ್ಯ ವರ್ಗಕ್ಕೆ ಸೇರಿಸಬಾರದು. ಏಕೆಂದರೆ ಅದು ಸಾಹಿತ್ಯ ವಿಮರ್ಶೆಯ ತತ್ವಗಳಿಗೆ ಹೊರತಾದುದು...' (ಪುಟ 18). ಇವರ ಅಭಿಪ್ರಾಯದಂತೆ ಸಾಹಿತಿಯಾದವನು ಯಾವ ತತ್ವಕ್ಕೂ ಸಿದ್ಧಾಂತಕ್ಕೂ ನಿಷ್ಠನಾಗಿರಬಾರದು; ಬದ್ಧನಾಗಿರಬಾರದು. ಹಾಗೆ ಬದ್ಧನಾದವನು ಶುದ್ಧ ಸಾಹಿತ್ಯ ಸೃಷ್ಟಿಸಲಾರ.

'ನಾನು ಇಂಥ ಸಿದ್ಧಾಂತಕ್ಕೆ ಬದ್ಧ, ಅದರ ಪ್ರತಿಪಾದಕ... ಅದರ ಪ್ರಚಾರಕ್ಕೆ ನನ್ನ ಲೇಖನಿಯನ್ನು ಬಳಸುತ್ತೇನೆ' ಎಂದು ಹೊರಟ ಬರಹಗಾರನನ್ನು 'ಸಾಹಿತಿ' ಎಂದು ಕರೆಯುವುದು ಕಷ್ಟ. ಅವನು ಬರೆದದ್ದು ಸಾಹಿತ್ಯ ವರ್ಗಕ್ಕೆ ಸೇರಲಾರದು. ಆದರೆ ಬರಹಗಾರನಿಗೆ ಯಾವುದೋ ಒಂದು ಮೌಲ್ಯ, ಒಂದು ತತ್ವದಲ್ಲಿ ನಿಷ್ಠೆ ಇರಲೇಬೇಕು. ಆ ತತ್ವ ಆ ಸಿದ್ಧಾಂತ ಸೀಮಿತವಾದುದಲ್ಲ. ಉದಾಹರಣೆಗೆ: ರಾಘವಾಂಕ 'ಜನ ಬದುಕ ಬೇಕೆಂದು ಕಾವ್ಯ ಮುಖದಿಂ ಅನಪೇಕ್ಷೆಯಿಂ' ಕಾವ್ಯ ರಚನೆ ಮಾಡುತ್ತೇನೆಂದು ಹೇಳುತ್ತಾನೆ. ಜನ ಬದುಕಬೇಕೆಂಬ ಕಾಳಜಿ ಸಾಹಿತಿಯಾದವನಿಗೆ ಇರಬೇಕೋ? ಇರಬಾರದೋ? ಇದಕ್ಕೆ ಭೈರಪ್ಪನವರು ಉತ್ತರ ಹೇಳಬೇಕು. ಹರಿಹರನಿಗಿಂತ ಹಿಂದಿನ ಕವಿಗಳು ತಮಗೆ ಆಶ್ರಯವಿತ್ತ ರಾಜ ಮಹಾರಾಜರಿಗೆ ನಿಷ್ಠರಾಗಿ ಅವರನ್ನು ಕುರಿತು ಕಾವ್ಯ ರಚನೆ ಮಾಡಿದರು. ಇದು ರಾಜನಿಷ್ಠಾ ಸಾಹಿತ್ಯ. ಹರಿಹರ ಅದನ್ನು ಒಪ್ಪದೆ 'ಮನುಜರ ಮೇಲೆ ಸಾವವರ ಮೇಲೆ ತನಗಿಂದ್ರ, ಚಂದ್ರ, ದಧೀಚಿ' ಎಂದು



ಇಲ್ಲದ ಸಲ್ಲದ ಗುಣಗಳನ್ನು ಇಟ್ಟು ಹೊಗಳಿದ್ದರು. ಅದರಂತೆ ತಾನು ಕಾವ್ಯ ರಚನೆ ಮಾಡುವುದಿಲ್ಲ ಎಂದ. ಹರಿಹರನ ಈ ನಿಷ್ಠೆ ಸರಿಯೋ ತಪ್ಪೋ! ಜೀವಕೋಟಿಯ ಉದ್ಧಾರದ ಬಗ್ಗೆ, ಜನರ ಒಳಿತಿನ ಬಗ್ಗೆ ನಿಷ್ಠೆಯಿಲ್ಲದ ಯಾವ ಬರಹಗಾರನೂ ಎಂಥ



ಸಾಹಿತ್ಯ ಸೃಷ್ಟಿಸಲೂ ಅಸಮರ್ಥ. ಬರಹಗಾರನಿಗೆ ನಿಷ್ಠೆ ಬೇಕು: ಜನ ಬದುಕಬೇಕೆಂಬ ನಿಷ್ಠೆ. ಬೇಂದ್ರೆ ಅವರು 'ತುತ್ತಿನ ಚೀಲ' ಕವಿತೆ ಬರೆದಾಗ ಅವರಿಗೆ, ತುತ್ತಿನ ಚೀಲ ತುಂಬಿರಬೇಕು ಎಂಬ ಅರ್ಥ ನೀತಿಯಲ್ಲಿ ನಿಷ್ಠೆ ಇದ್ದಿರಲೇ ಬೇಕು. ಅದನ್ನವರು ಸಾರಿ ಹೇಳಿರಲಿಕ್ಕಿಲ್ಲ.

ಇನ್ನು ಭೈರಪ್ಪನವರಿಗೆ ವಿಮರ್ಶಾ ಸೂತ್ರಗಳ ಬಗ್ಗೆ ಇರುವ ನಿಷ್ಠೆ. ಸಾಹಿತಿ ನಿರಂಕುಶಮತಿ. ಅವನನ್ನು ಯಾವ ಸೂತ್ರದಿಂದಲೂ ಬಂಧಿಸಲು ಸಾಧ್ಯವಿಲ್ಲ. ಒಂದು ವೇಳೆ ಅವನು ವಿಮರ್ಶಾ ಸೂತ್ರಗಳಿಗೆ ಬದ್ಧನಾಗಿ ಬರೆದರೆ ಅದು ಸಾಹಿತ್ಯ ವರ್ಗಕ್ಕೆ ಸೇರಲಾರದು. ನಾರದನ ಭಕ್ತಿ ಸೂತ್ರಗಳನ್ನೋ, ಪತಂಜಲಿಯ ಯೋಗ ಸೂತ್ರಗಳನ್ನೋ, ಬ್ರಹ್ಮಸೂತ್ರಗಳನ್ನೋ ಪರಿಸುತ್ತ ಸಾಧನೆ ಮಾಡುವುದಾದರೆ ಯಾವ ಸಾಧಕನೂ ಭಕ್ತನಾಗಲಾರ, ಜ್ಞಾನಿಯಾಗಲಾರ! ಶ್ರೀರಾಮ ಕೃಷ್ಣರು ನಾರದನ ಭಕ್ತಿ ಸೂತ್ರಗಳನ್ನು ಕೇಳಿಯೆ ಇರಲಿಲ್ಲ. ಅವರು ಪಡೆದ ಸಿದ್ಧಿ, ಅವರ ಔನ್ನತ್ಯ ಶಾಸ್ತ್ರಾನುಗುಣವಾಗಿದೆ ಎಂದು ಬ್ರಾಹ್ಮಣಿ ಭೈರವಿ ವಿಶ್ಲೇಷಣೆ ಮಾಡಿ ದಿಟಪಡಿಸಿಕೊಂಡಳು. ಅವರನ್ನು ಅವತಾರ ಪುರುಷ ಎಂದಳು. ಆಕೆ ಹಾಗೆ ಹೇಳದಿದ್ದರೆ ಪರಮಹಂಸರ ಸಾಧನೆ, ಸಿದ್ಧಿ..... ಎಲ್ಲ ಶುದ್ಧ ಸಾಕ್ಷಾತ್ಕಾರವಲ್ಲ ಎಂದು ಹೇಳಲು ಬಂದೀತೆ? ಹಾಗೆಯೇ ಶುದ್ಧ ಸಾಹಿತ್ಯ ವಿಮರ್ಶಾ ಸೂತ್ರಗಳೂ ಉನ್ನತ ಸಾಹಿತಿಯ ದರ್ಶನಕ್ಕೆ ತಕ್ಕ ಹಾಗೆ ಬದಲಾವಣೆ ಆಗಬೇಕು. ಶಬ್ದಮಣಿದರ್ಪಣ, ಆನಂದವರ್ಧನನ ಕಾವ್ಯ ಮೀಮಾಂಸೆಗೆ ಸಾಹಿತಿ ಬದ್ಧನಲ್ಲ. ಅವನ ಎದೆಯ ದನಿಗೆ ಮಾತ್ರ ಬದ್ಧ.

ಭೈರಪ್ಪನವರು ವಿಶ್ಲೇಷಿಸಿದ ಕನ್ನಡ ಸಾಹಿತ್ಯದ ಮಜಲುಗಳು ಐತಿಹಾಸಿಕ ದೃಷ್ಟಿಯಿಂದ ವಾಸ್ತವ ಸಂಗತಿ. ಅವರೊಡನೆ ಜಗಳವಾಡುವ ಕಾರಣವಿಲ್ಲ. ಅವರ ವಿಶ್ಲೇಷಣೆಯ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ವ್ಯಕ್ತಪಡಿಸಲು ಸಾಧ್ಯ- ನಾನು ಮೇಲೆ ಹೇಳಿರುವಂತೆ. ಅಂದಮಾತ್ರಕ್ಕೆ ಅವರ ಭಾಷಣವನ್ನು ಸುಟ್ಟು ಹಾಕಬೇಕೆಂದು ಎಂದೆಂದಿಗೂ ಹೇಳಲಾರೆ! ಛೀ! ಅದು ಶುದ್ಧ ಅವಿವೇಕ ಮತ್ತು ಫ್ಯಾಸಿಸ್ಟ್ ಪ್ರವೃತ್ತಿ. ಫ್ಯಾಸಿಸ್ಟ್ ಸಿದ್ಧಾಂತ ಏನೆಂದು ತಿಳಿಯಬೇಕೆಂದರೆ ಬರ್ನಾರ್ಡ್ ಷಾ, ಬರ್ಟ್ರಂಡ್ ರಸೆಲ್ ಅವರ ಬರಹಗಳನ್ನು ನೋಡಬಹುದು. ಆದರೆ ಆಶ್ಚರ್ಯದ ಸಂಗತಿ ಎಂದರೆ ಕನ್ನಡ ಪ್ರಾಧಿಕಾರದ ಅಧ್ಯಕ್ಷರು, ದಲಿತರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲು ಭೈರಪ್ಪನವರ ಭಾಷಣವನ್ನು ಸುಡಬೇಕೆಂದು ಹೇಳುತ್ತಾರಂತೆ! ಇದೇ ಪರಮಾಶ್ಚರ್ಯ! ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಭಾಷಣದ ಪ್ರತಿ ಬೆಂಕಿಗಾಹುತಿ!!

ಓದುಗರು ಯಾವುದು ಸಾಹಿತ್ಯ, ಯಾವುದು ಶುದ್ಧಸಾಹಿತ್ಯ....ಎಂಬುದನ್ನು ಮುಕ್ತ ಮನಸ್ಸಿನಿಂದ ನಿರ್ಧರಿಸಬಹುದು. ಭಿನ್ನಾಭಿಪ್ರಾಯಗಳನ್ನು ಕೇಳಿ, ಸಾರಾಸಾರ ವಿಚಾರಮಾಡಿ ಬೇಕಾದರೆ ಒಪ್ಪಿಕೊಳ್ಳಿ, ಬೇಡವಾದರೆ ಬಿಟ್ಟುಬಿಡಿ. ಆದರೆ ಅದನ್ನು ಸುಟ್ಟು ಹಾಕುವುದರಿಂದ ಭಾವನೆಗಳನ್ನು ಸುಡಲಾರಿರಿ. ■

ಆತ್ಮವಿಶ್ವಾಸ

ಜೀವನ ಸಂಗ್ರಾಮದಲ್ಲಿ ಜಯಶೀಲನಾಗಬೇಕೆನ್ನುವ ವ್ಯಕ್ತಿ ಮೊದಲು ತನ್ನಲ್ಲಿ ವಿಶ್ವಾಸವನ್ನಿರಿಸಿಕೊಳ್ಳಬೇಕು. ಆ ವಿಶ್ವಾಸವು ಅವನಿಗೆ ಸಾಮರ್ಥ್ಯವನ್ನು ತಂದುಕೊಡುತ್ತದೆ. ತನ್ನಿಂದ ಸಾಧ್ಯ ಎನ್ನುವ ನಂಬಿಕೆಯೇ ಮನುಷ್ಯನಿಂದ ಕೆಲಸವನ್ನು ಮಾಡಿಸುತ್ತದೆ. 'ನಿಮ್ಮಲ್ಲಿ ಎಳ್ಳು ಕಾಳಿನಷ್ಟು ಆತ್ಮವಿಶ್ವಾಸವಿದ್ದರೂ ಸಾಕು; ನಿಮಗೆ ಯಾವ ಕಾರ್ಯವೂ ಅಸಂಭವವಲ್ಲ' ಎನ್ನುತ್ತಾನೆ ಯೇಸು. ಗೆಲ್ಲುವ ನಂಬಿಕೆ ಇರಿಸಿಕೊಂಡ ವ್ಯಕ್ತಿ ಗೆದ್ದೇ ತೀರುತ್ತಾನೆ. 'ಅಹಂ ಅಸ್ಮಿ' ನಾನಿದ್ದೇನೆ, ನಾನು ಬದುಕಿದ್ದೇನೆ ಎಂದು ಸಿಂಹಘರ್ಜನೆ ಮಾಡುವವ ದೀರ್ಘ ಕಾಲ ಬದುಕುತ್ತಾನೆ.

ಮನುಷ್ಯನು ಜೀವನದಲ್ಲಿ ಬೇಡಬೇಕಾದ ಒಂದೇ ಒಂದು ವರವೆಂದರೆ ಅದು ಆತ್ಮವಿಶ್ವಾಸ. ಅದು ಇಲ್ಲದೆ ಬೇರೆ ಏನೆಲ್ಲಾ ಇದ್ದರೂ ಮನುಷ್ಯ ಸೋಲುತ್ತಾನೆ.

ತನಗೋಸ್ಕರ ಇನ್ನೊಬ್ಬ ದಾರಿಯನ್ನು ಸುಗಮಗೊಳಿಸಿಕೊಡಬೇಕೆಂದು ಕುಳಿತುಕೊಂಡವನು ಮುಂದಕ್ಕೆ ಸಾಗುವುದಿಲ್ಲ. ಆದರೆ ತನಗೆ ಎದುರಾಗಿ ಯಾವುದೂ ನಿಲ್ಲಲಾರದೆಂದು ಮುಂದೆ ನುಗ್ಗಿ ಹೋಗುವವನು ತನಗೂ ದಾರಿಮಾಡಿಕೊಳ್ಳುತ್ತಾನೆ. ಇತರರಿಗೂ ದಾರಿ ಮಾಡಿಕೊಡುತ್ತಾನೆ.

ಮನುಷ್ಯ ಜೀವನದ ನಿಶ್ಚಿತ ಸಾಧನೆಗಳು ಅವನು ಆತ್ಮವಿಶ್ವಾಸದಿಂದ ಹೆಜ್ಜೆ ಇರಿಸಿ ಮುಂದೆ ಹೋಗುವುದನ್ನೇ ಅವಲಂಬಿಸಿವೆ. ಪೂರ್ಣ ಆತ್ಮವಿಶ್ವಾಸಿಯೇ ನಿಸ್ಪೃಹನಾಗಿ ಸಾಧನೆಯಲ್ಲಿ ತಲ್ಲೀನನಾಗಬಲ್ಲ.

ಸಂಶಯ ಸ್ವಭಾವದ ವ್ಯಕ್ತಿ ನಾಶಗೊಳ್ಳುತ್ತಾನೆ ಎನ್ನುವ ಸುಭಾಷಿತವೊಂದಿದೆ. ತನ್ನನ್ನೇ ಅಪಮೌಲ್ಯಗೊಳಿಸಿಕೊಂಡವನಿಗೆ ಬೇರಾರೂ ಹೆಚ್ಚಿನ ಬೆಲೆಯನ್ನು ಕೊಡುವುದಿಲ್ಲ. ಆತ್ಮವಿಶ್ವಾಸ ಇಲ್ಲದವನೊಡನೆ ವಿಧಿಯೂ ಸಹಕರಿಸದು. ನಮ್ಮಲ್ಲಿನ ಅನೇಕ ಅಪಜಯಗಳಿಗೆ ಆತ್ಮವಿಶ್ವಾಸವಿಲ್ಲದಿರುವುದೇ ಕಾರಣ. ತಮ್ಮಲ್ಲಿ ಹಾಗೂ ತಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇಲ್ಲದವರೇ ನಿಜವಾದ ದುರ್ಬಲರು.


ಒಬ್ಬ ಮನುಷ್ಯನು ತನ್ನ ಬಗೆಗೆ ಹೊಂದಿರುವ ವಿಶ್ವಾಸವನ್ನು ಅಲುಗಿಸುವುದು ಬಹಳ ಸುಲಭವಿದೆ. ಅದು ಒಮ್ಮೆ ಉಡುಗಿ ಹೋಯಿತೆಂದರೆ ಮನುಷ್ಯನನ್ನು ಬೇರೆ ಯಾವುದರಿಂದಲೂ ಎತ್ತಿ ನಿಲ್ಲಿಸುವುದು ಸಾಧ್ಯವಿಲ್ಲ. ನಮ್ಮ ಬಗ್ಗೆ ನಮಗೆ ನಂಬಿಕೆ ಗೌರವಗಳು ತಪ್ಪಿ ಹೋಗುವುದಕ್ಕಿಂತಲೂ ಘೋರವಾದ ದುರಂತ ಇನ್ನೊಂದಿಲ್ಲ.

ಮನುಷ್ಯನು ಮೊದಲು ತನ್ನಲ್ಲಿ ವಿಶ್ವಾಸವನ್ನು ಹೊಂದಿರಬೇಕು. ಅಂದರೇನೇ ಅವನು ಮತ್ತೊಬ್ಬನಲ್ಲಿ ವಿಶ್ವಾಸವನ್ನು ಕುದುರಿಸಲು ಶಕ್ತಿಶಾಲಿಯಾಗುತ್ತಾನೆ.

ವಿಶ್ವಾಸಪಡುವ ಮನೋಭಾವನೆಯು ಆ ಗುಣವನ್ನೇ ಹೊಂದಿರುವ ಮನುಷ್ಯನಿಗೆ ಬಹು ದೊಡ್ಡ ಘನತೆಯನ್ನು ತಂದು ಕೊಡುತ್ತದೆ. ಏನನ್ನಾದರೂ ನಂಬುವುದಕ್ಕಿಂತ ಮೊದಲು ಮನುಷ್ಯ ತನ್ನನ್ನು ನಂಬಬೇಕು. ತನ್ನ ಬಗೆಗೆ ಅವನು ವಿಶ್ವಾಸವಿರಿಸಿಕೊಂಡಂತೆ ಅವನ ಸಾಮರ್ಥ್ಯವೂ ಹೆಚ್ಚುತ್ತದೆ. ಭರವಸೆಯ ಮನೋಭಾವವು ಅವನ ಧೈರ್ಯಕ್ಕೆ ಪುಟ ಕೊಡುತ್ತದೆ. ಆತ್ಮ ವಿಶ್ವಾಸದ ಬಲ ಯಾವಾಗಲೂ ಅತ್ಯದ್ಭುತ ಬಲ ಎಂಬುದನ್ನು ಮರೆಯಬಾರದು.

ವಿಶ್ವಾಸ ಪಡುವಂಥ ಗುಣಧರ್ಮಗಳನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿಗಳೇ ಈ ಜಗತ್ತನ್ನು ಮುನ್ನಡೆಸಿಕೊಂಡು ಹೋಗಬಲ್ಲರು. ಸಂಪೂರ್ಣ ಆತ್ಮವಿಶ್ವಾಸವಿರಿಸಿಕೊಂಡಿರುವ ವ್ಯಕ್ತಿಗೆ ಯಾವುದೂ ಅಸಾಧ್ಯವೆನಿಸದು. ಆತ್ಮವಿಶ್ವಾಸ ಅಹಂಕಾರವಲ್ಲವೆನ್ನುವುದನ್ನು ನೆನಪಿಡಬೇಕು. ದೀಪಕ್ಕೆ ಎಣ್ಣೆ ಇದ್ದಂತೆ ಎಲ್ಲಾ ಚಟುವಟಿಕೆಗಳಿಗೂ ಆತ್ಮವಿಶ್ವಾಸ.

■ ಟಿ. ವಿ. ವಿ.



ಮಾನವ ಪ್ರಾಣಿಯ ಲೈಂಗಿಕ ಗುಣ

ವ್ಯಕ್ತಿತ್ವ ವಿಕಾಸ - 21

■ ಕೃಶಾಂಗ

ನಾಗರಿಕತೆಯ ಪ್ರಗತಿಯೊಡನೆ ಮನುಷ್ಯರ ಲೈಂಗಿಕ ಚಟುವಟಿಕೆಗಳು ಹೊಂದಿರುವ ಸಂಬಂಧದ ಸ್ವರೂಪ ಎಂತಹದು ಎಂಬುದನ್ನು ಕಳೆದ ಪಯಣದಲ್ಲಿ ತಿಳಿಯಲು ಪ್ರಾರಂಭಿಸಿದೆವಷ್ಟೇ. ಈಗ ಅದನ್ನೇ ಮುಂದುವರೆಸೋಣ.

ಲೈಂಗಿಕ ಚಟುವಟಿಕೆಗಳನ್ನು ಕಡಿವಾಣ, ನಿರ್ಬಂಧಗಳಿಗೊಳಪಡಿಸುವುದು ನಮ್ಮ ಉನ್ನತಿಗಾಗಿಯೇ ಎಂಬುದನ್ನು ನಾವು ತಿಳಿಯಬೇಕು. ನಮ್ಮ ಜೀವನ ಸಂಗಾತಿಯನ್ನಾಯ್ದುಕೊಳ್ಳುವುದರಿಂದ ಸಾಮಾನ್ಯವಾಗಿ ನಮ್ಮ ವ್ಯವಸ್ಥಿತ ಲೈಂಗಿಕ ಜೀವನ ಆರಂಭವಾಗುತ್ತದೆ. ಇದರ ಜೊತೆಗೆ ಸತಿಪತಿಗಳ ಗೌರವಯುತ ಬದುಕೂ ಸಾಧ್ಯವಾಗಬೇಕು. ಅಂದರೆ ಇಬ್ಬರಲ್ಲೊಬ್ಬರಿಗಾದರೂ ಒಂದು ಉದ್ಯೋಗ-ಧನಸಂಪಾದನೆಯ ಮೂಲ-ಅಗತ್ಯವೆಂದಾಯಿತು. ಉದ್ಯೋಗ ನಿರಾಯಾಸವಾಗಿ, ಅಪ್ರಯತ್ನವಾಗಿ ದೊರಕಲು ಸಾಧ್ಯವೇ? ಇಲ್ಲ. ಅದಕ್ಕೆ ಶೈಕ್ಷಣಿಕ ಅರ್ಹತೆ, ಕೌಶಲ್ಯ ಗಳಿಕೆ, ಇತರರ ಸಂಪರ್ಕ ಇತ್ಯಾದಿಗಳು ಅವಶ್ಯ. ದುಡಿಯದ ಸಂಗಾತಿ ಮನೆ, ಮನೆತನ, ಮಕ್ಕಳನ್ನು ನಿಭಾಯಿಸಲು ಶಕ್ತಳಾ(ನಾ)ಗಬೇಕು. ಲೈಂಗಿಕ ಚಟುವಟಿಕೆಗಳು ಮುಕ್ತ ಮತ್ತು ಅನಿರ್ಬಂಧಿತವಾಗಿದ್ದರೆ ಇಂಥ ಕರ್ತವ್ಯ ನಿರ್ವಹಣೆಗೆ ಬೇಕಾದ ದೈಹಿಕ-ಮಾನಸಿಕ ಶಕ್ತಿಗಳನ್ನು ಹೇಗೆ ಹೊಂದಿಸಲು ಸಾಧ್ಯ? ಬದುಕು ಬಾಳುವೆಯಾಗಿ ಪರಿವರ್ತನೆಯಾಗುವುದಕ್ಕೆ ಗಳಿಕೆಯಷ್ಟೇ ಸಾಧನೆಯೂ ಮುಖ್ಯ. ಇವೆರಡೂ ಕೈಗೂಡಲು ಪ್ರೇರಕವಾಗುವಷ್ಟರ ಮಟ್ಟಿಗೆ ಮಾತ್ರ ಲೈಂಗಿಕಾಸಕ್ತಿ, ಪ್ರೇಮ ಬೇಕು. ಇಂಥ ಜೀವನ ನಿರ್ವಹಣೆಯಿಂದ ಮಾತ್ರ ಸ್ವಂತಕ್ಕೆ ಸುಖ, ಸಂತೋಷ, ಸಮಾಧಾನಗಳು ಹಾಗೂ ನಾಗರಿಕತೆಯ ಪ್ರಗತಿ ಸಾಧ್ಯ.


ಮೂಲತಃ ಮಾನವನೂ ಒಂದು ಬಗೆಯ ಪ್ರಾಣಿ. ಅತ್ಯಂತ ಮೇಲ್‌ಸ್ತರದ ಪ್ರಾಣಿ. ಏಕೆಂದರೆ ಈ ಪ್ರಾಣಿಗೆ ವಿಚಾರ ಶಕ್ತಿಯಿದೆ. ಲೈಂಗಿಕ ಚಟುವಟಿಕೆಗಳ ಸ್ವ-ನಿಯಂತ್ರಣ ಇತರ ಪ್ರಾಣಿವರ್ಗದಲ್ಲಿ ಕಂಡರಿಯದ್ದು. ಹಾಗಿದ್ದರೆ ವಿಚಾರವಂತ ಪ್ರಾಣಿಗಷ್ಟೇ ಈ ಸ್ವ-ನಿಯಂತ್ರಣವೇಕೆ ಎಂಬ ಪ್ರಶ್ನೆ ಕಾಡುವುದು ಸಹಜ. ಇದಕ್ಕೆ ಉತ್ತರವಿಲ್ಲದಿಲ್ಲ. ಕಾಮಾಸಕ್ತಿಯ ಕೆರಳಿಕೆ ಮತ್ತು ಅದರ ತೃಪ್ತಿಗಳ ವಿಷಯದಲ್ಲಿ ಕೆಳಸ್ತರದ ಇತರ ಅನೇಕ ಪ್ರಾಣಿಗಳಿಗೂ ಮತ್ತು ಮಾನವ ಪ್ರಾಣಿಗೂ ಭಿನ್ನತೆಯಿದೆ. ಮಾನವ ಪ್ರಾಣಿಯ ಕಾಮಾಸಕ್ತಿ ಬೌದ್ಧಿಕ ಮತ್ತು ಮಾನಸಿಕ ಪ್ರಚೋದನೆಗೊಳಪಟ್ಟದ್ದು. ದೈಹಿಕ ಪ್ರತಿಕ್ರಿಯೆ ನಂತರದ್ದು. ಹಾಗಾಗಿ ಇದು ಋತುಬದ್ಧವಾಗಿಲ್ಲ. ಆದರೆ ಇದನ್ನೇ ಮಾನವ ಪ್ರಾಣಿಯ ಅವಗುಣವೆಂದು ತಿಳಿಯಬೇಕಿಲ್ಲ, ಏಕೆಂದರೆ ಆಜೀವ ಪರ್ಯಂತ ಕಾಮಾಸಕ್ತಿಯ ತೃಪ್ತಿಯಿಂದ ದೂರವುಳಿದೇ ವ್ಯಕ್ತಿಯೊಬ್ಬ ತನ್ನ ಜೀವನವನ್ನು ಮುಕ್ತಾಯಗೊಳಿಸಬಹುದು. ಇದು ಇತರ ಪ್ರಾಣಿಗಳಿಗೂ ಸಾಧ್ಯ. ಕೆಳಸ್ತರದ ಪ್ರಾಣಿಗಳಲ್ಲಿ ಕಾಮಾಸಕ್ತಿಯ ನಿಯಂತ್ರಣದ ಹೊಣೆ ನಿಸರ್ಗದ್ದು. ಹಾಗಾಗಿ ಅದು ಋತುಬದ್ಧವಾಗಿದೆ; ಕ್ರಮಬದ್ಧವಾಗಿದೆ. ಹೆಣ್ಣುಪ್ರಾಣಿಗೆ ವರ್ಷದ ಹತ್ತು ತಿಂಗಳು ಕಾಮಾಸಕ್ತಿ ಕೆರಳದಿರುವಂತೆ ನೋಡಿಕೊಳ್ಳುವುದರ ಮೂಲಕ ನಿಸರ್ಗವು ಆ ವರ್ಗದಲ್ಲಿ ಚೈತನ್ಯದ ಕೊರತೆಯಾಗದಂಥ ವ್ಯವಸ್ಥೆ ರೂಪಿಸಿದೆ. ನಾಗರಿಕ ಸಮಾಜ ವ್ಯಕ್ತಿಗಳ ಮೇಲೆ ವಿಧಿಸಿದ ನಿರ್ಬಂಧಕ್ಕಿಂತಲೂ ಕಠೋರವಾದ, ಏಕಪಕ್ಷೀಯವಾದ, ಬದಲಿಸಲಾಗದ ನಿರ್ಬಂಧವನ್ನು ನಿಸರ್ಗ ವಿಧಿಸಿದೆ. ಉಳಿದೆರಡು ತಿಂಗಳುಗಳಲ್ಲಿ ದೈಹಿಕ ಹಸಿವನ್ನು 'ಹೇಗಾದರೂ' ತೀರಿಸಿಕೊಳ್ಳುವುದು ಆ ವರ್ಗದ ಪ್ರಾಣಿಗಳಿಗೆ ಸಹಜ.

ನಾವು ಪಡೆದ ಲೈಂಗಿಕ ಅನುಭವ ನಮ್ಮ ಬಾಲ್ಯ, ಯೌವನಗಳಲ್ಲಿ ನಾವು ಈ ವಿಷಯಗಳಿಗೆ ಕೊಟ್ಟ ಒತ್ತನ್ನು ಅವಲಂಬಿಸಿರುತ್ತದೆ. ಕೆಲವರಿಗೆ ಇದು ಅತಿ ಒಳ್ಳೆಯ ವಿಷಯವಾದರೆ ಇನ್ನು ಹಲವರಿಗೆ ಅತಿಕೆಟ್ಟದಾದ ವಿಷಯ.

ಲೈಂಗಿಕ ಚಟುವಟಿಕೆಗಳ ಸ್ವರೂಪ ಹೀಗಿದ್ದರೂ ಹಲವು ವ್ಯಕ್ತಿಗಳು ಅನುಚಿತ ಲೈಂಗಿಕ ಜೀವನವನ್ನು ನಿರ್ವಹಿಸುವುದಕ್ಕೆ ಅವರ 'ಅತೃಪ್ತಿಕರ ಲೈಂಗಿಕ ಅನುಭವಗಳು' ಕಾರಣವಾಗಿರಬಹುದು. ಈ ತಲೆಬರಹದಡಿಯಲ್ಲಿ ವ್ಯಕ್ತಿತ್ವದ ಲೋಪಗಳು, ದೈಹಿಕ, ಮಾನಸಿಕ, ಭಾವನಾತ್ಮಕ ಹಾಗೂ ಸಾಮಾಜಿಕ ತಪ್ಪು ಹೊಂದಾಣಿಕೆಗಳು ಇರಬಹುದು. ಅತೃಪ್ತಿಕರ ಅನುಭವಗಳಿಗೆ ಕಾರಣಗಳತ್ತ ದೃಷ್ಟಿ ಹಾಯಿಸೋಣ.

ಲೈಂಗಿಕ ಬಯಕೆ, ಶಕ್ತಿಗಳಲ್ಲಿ ಒಬ್ಬನಂತಿನ್ನೊಬ್ಬನಿಲ್ಲ. ಸ್ವಾಭಾವಿಕವಾಗಿ ಹೆಚ್ಚು ಊಟ ಮಾಡುವ ವ್ಯಕ್ತಿಗೆ, ಸಾಮಾನ್ಯ ಹಸಿವಿನವನಿಗೆ ಇಟ್ಟ ಆಹಾರದ ಪ್ರಮಾಣ ಸಾಕಾಗದು; ಅದರಂತೆಯೇ ಹಸಿವೆಯೇ ಇರದವನಿಗೆ ಸಾಮಾನ್ಯ ಪ್ರಮಾಣದ ಆಹಾರವೂ ವಾಂತಿಗೆ ಕಾರಣವಾದೀತು. ಮೊದಲ ಪ್ರಕಾರದ ಗಂಡು ಎರಡನೆಯ ಪ್ರಕಾರದ ಹೆಣ್ಣಿನೊಂದಿಗೆ ವಿವಾಹ ಬಂಧನಕ್ಕೆ ಒಳಗಾದರೆ ಈ 'ಇಜ್ಜೋಡಿನ' ಗತಿ ಏನಾದೀತೆಂದು ಊಹಿಸಬಹುದಲ್ಲವೇ? -ಅಸಂತೋಷ, ನರದೌರ್ಬಲ್ಯ, ಜಾಡ್ಯ, ಲೈಂಗಿಕ ಮೋಸ, ವಿವಾಹ ವಿಚ್ಛೇದನ, ಆತ್ಮಹತ್ಯೆ ಇತ್ಯಾದಿ. ಈಗ ನಮಗೆ ದುರಾಗುವ ಪ್ರಶ್ನೆ: ಲೈಂಗಿಕ ಆಸಕ್ತಿ ಇತ್ಯಾದಿಗಳಲ್ಲಿ ವ್ಯಕ್ತಿ-ವ್ಯಕ್ತಿಗಳಲ್ಲಿ ತುಂಬಲಾಗದ ಈ ಕಂದಕ

ಸರಿಯಾದ ಮರು ಶಿಕ್ಷಣ ಮತ್ತು ತಜ್ಞ ತರಬೇತಿಗಳಿಂದ ನಮ್ಮಲ್ಲಿ ಬೇರೂರಿದ, ಲೈಂಗಿಕತೆಯ ಬಗೆಗಿನ ತಪ್ಪು ಕಲ್ಪನೆಗಳು ಪೂರ್ಣ ಬದಲಾದಾವೇ? ಇದು ಸಂಶಯಾಸ್ಪದ.



ಇರುವುದೇತಕ್ಕೆ? ಅನೇಕ ಕಾರಣಗಳಿವೆ.

ಬುದ್ಧಿ-ಭಾವ-ಮನಗಳಿಂದ ಲೈಂಗಿಕ ಆಸಕ್ತಿ ಉತ್ತೇಜಿತವಾದರೂ ಸಹ ಅದಕ್ಕೆ ಓಗೊಡುವ ಗ್ರಂಥಿಗಳ ಚಟುವಟಿಕೆ ಪಿತ್ರಾರ್ಜಿತವಾದುದಾಗಿದೆ. ಆದುದರಿಂದ ಎಲ್ಲರಲ್ಲಿಯೂ ಒಂದೇ ಬಗೆಯದಾಗಿರಲಾರದು.

ಇದರ ಜೊತೆಗೇ ದಂಪತಿಗಳನ್ನು 'ಇಜ್ಜೋಡು' ವರ್ಗಕ್ಕೆ ಸೇರಿಸುವ ಇನ್ನೊಂದು ಘಟಕ-ಲೈಂಗಿಕ ಶಿಕ್ಷಣ ಪಡೆದ ರೀತಿ ಮತ್ತು ಅದನ್ನು ಆಧರಿಸಿದ ಲೈಂಗಿಕ ದೃಷ್ಟಿಕೋನ. ವಿವಾಹ ಬಂಧನವೆಂದರೆ ಪ್ರೇಮ, ಕಾಮ, ಸೌಂದರ್ಯಗಳನ್ನನುಭವಿಸುವ ಪರಾಕಾಷ್ಠೆ ಎಂದು ನಂಬಿದವನ ಮದುವೆಯು, ಲೈಂಗಿಕತೆ ಅಗ್ರಾಹ್ಯವಾದುದು, ಅದು ಪ್ರಾಣಿನಡಾವಳಿಯ ಸಮೀಪದ್ದು, ಅದರ ಬಗೆಗೆ ಮಾತನಾಡುವುದು ಕೂಡ ಪಾಪ ಎಂದು ಖಚಿತವಾಗಿ ನಂಬಿದವಳೊಡನೆ ನೆರವೇರಿದರೆ ಪ್ರಥಮ ರಾತ್ರಿಯ ಪ್ರಪ್ರಥಮ ಸಂವಾದದಲ್ಲಿ ಇಬ್ಬರಿಗೂ ಪರಸ್ಪರರ ದೃಷ್ಟಿಕೋನ ತಿಳಿದಾಗ ನದಿಯ ಎರಡೂ ಬದಿಗಳಲ್ಲಿ ನಿಂತಂತೆ ಭಾಸವಾಗಬಹುದು. ಇದರ ಫಲ: ವೈಷಮ್ಯ, ಉನ್ಮಾದ, ಕ್ರೌರ್ಯ, ಔದಾಸೀನ್ಯ ಇತ್ಯಾದಿ.

ನಾವು ಪಡೆದ ಲೈಂಗಿಕ ವಿಷಯಗಳ ಅನುಭವ ನಮ್ಮ ಬಾಲ್ಯ, ಯೌವನಗಳಲ್ಲಿ ನಾವು ಈ ವಿಷಯಗಳಿಗೆ ಕೊಟ್ಟ ಒತ್ತನ್ನವಲಂಬಿಸಿರುತ್ತದೆ. ಕೆಲವರಿಗೆ ಇದು ಅತಿ ಒಳ್ಳೆಯ ವಿಷಯವಾದರೆ ಇನ್ನು ಹಲವರಿಗೆ ಅತಿ ಕೆಟ್ಟದಾದ ವಿಷಯವಾಗಿರಬಹುದು. ತಾವು ಓದುವ ಸಾಹಿತ್ಯ, ವೀಕ್ಷಿಸುವ ಚಲನಚಿತ್ರಗಳ ಮುಖಾಂತರ ಕೆಲವರು ಲೈಂಗಿಕತೆಯನ್ನು ಆರಾಧಿಸಿಕೊಂಡು ಬಂದರೆ ಇನ್ನು ಹಲವರು ಬೇರೆ ವಿಧದ ಸಾಧನೆಗಳಲ್ಲಿ ತೊಡಗುವುದರ ಮೂಲಕ ಈ ಆಸಕ್ತಿಯನ್ನು ಗೌಣವಾಗಿಸಿಬಿಟ್ಟಿರಬಹುದು.

ಸರಿಯಾದ ಮರು ಶಿಕ್ಷಣ ಮತ್ತು ತಜ್ಞ ತರಬೇತಿಗಳಿಂದ ನಮ್ಮಲ್ಲಿ ಬೇರೂರಿದ, ಲೈಂಗಿಕತೆಯ ಬಗೆಗಿನ ತಪ್ಪು ಕಲ್ಪನೆಗಳು ಪೂರ್ಣ ಬದಲಾದಾವೇ? ಇದು ಸಂಶಯಾಸ್ಪದ. ಭಾರತದಂಥ ದೇಶದಲ್ಲಂತೂ ಪರೋಪದೇಶವನ್ನು ಪಡೆಯುವುದು ಹಾಗೂ ಪಡೆದ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸುವುದು- ಅದು ಇಂಥ ವಿಷಯದಲ್ಲಿ ಎಷ್ಟರಮಟ್ಟಿಗೆ ಸಾಧ್ಯವಾಗಬಹುದೆಂಬುದು ಚರ್ಚಾರ್ಹ ವಿಷಯ.

ಲೈಂಗಿಕ ಚಟುವಟಿಕೆಗಳ ಅತಿರೇಕದ ಪರಿಣಾಮಗಳು ಹಲವು: ಬಟ್ಟೆ-ಬರೆಗಳ ಬಗೆಗೆ ನಿರ್ಲಕ್ಷ್ಯ; ಸಾಮಾಜಿಕ ಹೊಣೆಗಾರಿಕೆಯ ಬಗೆಗೆ ಅಸಡ್ಡೆ; ಜೀವನ ಸಂಗಾತಿಯ ಬಗೆಗಿನ ಪ್ರಾರಂಭಿಕ ಒಲವು ಗೌರವಗಳ ಕುಗ್ಗುವಿಕೆ; ಕುಂದುತ್ತ ಸಾಗುವ ದೇಹಶಕ್ತಿ- ಇವು ವೈಯಕ್ತಿಕ ಸುಖಕ್ಕೂ, ವ್ಯಕ್ತಿತ್ವಕ್ಕೂ, ದಾಂಪತ್ಯ ಜೀವನಕ್ಕೂ ಹಾನಿ ಮಾಡಬಹುದು.

ಸ್ತ್ರೀ-ಪುರುಷರನ್ನು ಒಂದೆಡೆ ತರುವುದೇ ಪ್ರೇಮ ಭಾವನೆ. ಲೈಂಗಿಕತೆಯ ಅತಿರೇಕ ಈ ಪ್ರೇಮಭಾವನೆಯನ್ನಳಿಸಿಹಾಕುವುದರ ಮೂಲಕ ವ್ಯಕ್ತಿಯ ಪೂರ್ಣನಾಶವನ್ನು ತಡೆಗಟ್ಟುವುದು ನಿಸರ್ಗದ ಸೋಜಿಗಗಳಲ್ಲೊಂದು. ಅನಿಯಂತ್ರಿತ ಲೈಂಗಿಕ ಚಟುವಟಿಕೆಗಳು ಸಂಬಂಧಿಸಿದ ಒಬ್ಬರು ಅಥವಾ ಇಬ್ಬರಲ್ಲೂ ಸಹಿಸಲು ಸಾಧ್ಯವಾಗದ ದಣಿವನ್ನುಂಟುಮಾಡುವುದರಿಂದ ಆ ದಣಿವಿಗೆ ಕಾರಣನಾದ ವ್ಯಕ್ತಿಯ ಬಗೆಗೆ, ಅಥವಾ ಪರಸ್ಪರರ ಬಗೆಗೆ, ತಿರಸ್ಕಾರ ಕ್ರಮೇಣ ಕಾಣುವುದು ಸಹಜ. ಇಂಥ ನಿಸರ್ಗ ನಿಯಮಿತ ಹಾಗೂ ಸಾಮಾಜಿಕ ನಿಯಂತ್ರಣಗಳಿರದಿದ್ದರೆ ನಮ್ಮ ನಾಗರಿಕತೆ ಬೆಳೆಯುವುದು ಅಸಾಧ್ಯ ಎಂಬುದು ಸತ್ಯ.

ಲೈಂಗಿಕ ಸಮಸ್ಯೆಗಳಿಗೆ ಇನ್ನು ಕೆಲವು ಕಾರಣಗಳಿವೆ. ದಂಪತಿಗಳಲ್ಲಿ ಒಬ್ಬರು ಯಾವುದೋ -ದೈಹಿಕ, ಮಾನಸಿಕ, ಭಾವನಾತ್ಮಕ-ಕಾರಣಕ್ಕಾಗಿ ಕಾಮಾಸಕ್ತಿ ಕಳೆದುಕೊಂಡಿರಬಹುದು. ಉಳಿದೊಬ್ಬರಲ್ಲಿ ಅದು ಪೂರ್ವದ ತೀವ್ರ ಸ್ಥಿತಿಯಲ್ಲಿಯೇ ಉಳಿದುಕೊಂಡಿರಬಹುದು. ಇಂಥವರು ತಮ್ಮ ವೃತ್ತಿ ಹವ್ಯಾಸಗಳಲ್ಲಿ ಅಥವಾ ಹೊಸದೊಂದರಲ್ಲಿ ತೀವ್ರವಾಗಿ ತೊಡಗಿಕೊಂಡು ಈ ಸೋಲನ್ನು ಗೆಲ್ಲಬಹುದು. ಹಾಗಾಗಲು ಸಾಧ್ಯವಿಲ್ಲದ ಸಂದರ್ಭದಲ್ಲಿ ಮಾತ್ರ ಅಂಥ ಕುಟುಂಬವು ದುಃಖಾಧೀನವಾಗಿ ಎಲ್ಲ ವ್ಯಕ್ತಿಗಳ ವ್ಯಕ್ತಿತ್ವವೂ ಹಾನಿಗೀಡಾಗಬಹುದು. ಬುದ್ಧಿಮತ್ತೆ, ತರಬೇತಿ, ಪರಸ್ಪರರ ಬಗೆಗೆ ತಿಳಿವಳಿಕೆ-ಇವುಗಳ ಪಾತ್ರ ಇಂಥ ಸಮಯದಲ್ಲಿ ಮುಖ್ಯವಾಗುತ್ತದೆ.



ಬಡವರ ಗೋಳು ಕೇಳಲು ನಮ್ಮಿಂದ ಸಾಧ್ಯವಿಲ್ಲ... ಹೀಗಾಗಿ ಒಂದೆರಡು ತಿಂಗಳು ಹಾಯಾಗಿ ಹೋಗಿ ಬರೋಣಾಂತ.......

ದಂಪತಿಗಳಲ್ಲಿ ಸಾಮಾಜಿಕ ಮತ್ತು ಲೈಂಗಿಕ ಅಸಾಮರಸ್ಯ ಉಂಟಾಗಲು ಇನ್ನೊಂದು ಕಾರಣ ಗಂಡ-ಹೆಂಡತಿಯರಲ್ಲಿಯ ವಯಸ್ಸಿನ ಅಂತರ. ವಿಶಿಷ್ಟ ಕಾರಣಗಳಿಂದಾಗಿ-ಸ್ವಂತದ ಶಿಕ್ಷಣ, ಅವಲಂಬಿತರ ಶಿಕ್ಷಣ, ಇತರ ಕೌಟುಂಬಿಕ ಜವಾಬ್ದಾರಿಗಳು, ವೃತ್ತಿ ನಿರ್ವಹಣೆ, ಹಣ ಕೂಡಿಹಾಕುವ ಹುಚ್ಚು ಇತ್ಯಾದಿ ನಲವತ್ತು ವರ್ಷಗಳ ವರೆಗೆ ಮದುವೆಯಾಗದೇ ಒಮ್ಮೆಲೇ ಈ ತಡೆಹಿಡಿದ ಕಾರ್ಯಸಾಧಿಸಲು ಮುನ್ನುಗ್ಗುವ ಮಧ್ಯವಯಸ್ಕ ತನ್ನ ಸ್ಥಾನ, ಹಣ ಇತ್ಯಾದಿಗಳ ಬಲದಿಂದ ಇಪ್ಪತ್ತರ ಸುಂದರ ಕನ್ಯೆಯನ್ನು ವಿವಾಹವಾದನೆಂದುಕೊಳ್ಳಿ, ಆಗ ಒದಗುವ ಸ್ಥಿತಿ ಇದೇ.

ಆರ್ಥಿಕ ಸ್ವಾತಂತ್ರ್ಯ, ವೃತ್ತಿ ಜೀವನದ ಯಶಸ್ಸುಗಳಿಗಾಗಿ ಹಂಬಲಿಸಿ ಅವುಗಳಿಗಾಗಿ ತಮ್ಮ ತಾರುಣ್ಯವನ್ನು ಬಲಿಗೊಟ್ಟು ಮೂವತ್ತು ಮೀರಿದ ನಂತರ ಫಕ್ಕನೆ ಮದುವೆಗಾಗಿ ಪರಿತಪಿಸುವ ಹೆಣ್ಣುಗಳ ಗತಿಯೂ ಇದೇ. ತನ್ನ ಗಂಡನಾಗುವವ ತನಗಿಂತ ಚಿಕ್ಕವನಾಗಿರಬಹುದು. ಆದರೆ ತನಗಿಂತ ಹೆಚ್ಚು ಬುದ್ಧಿವಂತನಾಗಿರಬೇಕು, ಕರ್ತೃತ್ವಶಾಲಿಯಾಗಿರಬೇಕು ಎಂಬ ದೃಢ ಅಭಿಪ್ರಾಯಗಳಿಂದ ಹೊರಬರಲಾರದೇ ಒದ್ದಾಡುವ ಉದ್ಯೋಗಸ್ಥ ಮಹಿಳೆ ಮತ್ತು ತನ್ನ ಹೆಂಡತಿಯಾಗುವವಳು ತನಗಿಂತ ಚಿಕ್ಕವಳೂ ಮತ್ತು ಕಡಿಮೆ ಬುದ್ಧಿವಂತಳೂ ಆಗಿರಬೇಕೆಂದು ಇಚ್ಛಿಸುವ ಪುರುಷ ಸಮಾನಾಂತರ ರೇಖೆಗಳಾಗುತ್ತಾರೆ. ಇಂಥವರಿಗೆ ಸುಲಭವಾಗಿ ಗೃಹಸ್ಥ ಜೀವನ ದೊರೆಯುವುದೆಂತು?

ಭಾವೀ ಸತಿಪತಿಯರ ಈ ಬೇಡಿಕೆಗಳು ಅದೆಷ್ಟು ಸೂಕ್ತ ಎಂಬುದನ್ನೀಗ ಪರೀಕ್ಷಿಸೋಣ.

ತನ್ನ ಪತಿ ತನಗಿಂತ ಚಿಕ್ಕವನಾಗಿರಬಾರದೆಂಬ ಅಭಿಪ್ರಾಯಕ್ಕೆ ಶಾಸ್ತ್ರೀಯ ಕಾರಣಗಳಿದ್ದರೂ ಇರಬಹುದು. ಆದರೆ ತನ್ನ ಪತಿ ತನಗಿಂತ ಬುದ್ಧಿವಂತನಾಗಿರಬೇಕೆಂಬ ಬೇಡಿಕೆಗೆ ಬೆಂಬಲವಿದೆ. ಮಗುವಿನ ಹುಟ್ಟು ಬುದ್ಧಿಮತ್ತೆಗೆ ತಂದೆ-ತಾಯಿಗಳ ಬುದ್ಧಿಮತ್ತೆಯ ಪಾತಳಿ ಮುಖ್ಯ ಕಾರಣ. ಚುರುಕಾದ ಗಂಡ ಉತ್ತಮ ಜೀವನ ಮಟ್ಟವನ್ನು ಹೆಂಡತಿ-ಮಕ್ಕಳಿಗೆ ಕಲ್ಪಿಸಲು ಸಾಧ್ಯ. ಉತ್ತಮ ಜೀವನ ಮಟ್ಟ ಮಕ್ಕಳ ಬುದ್ಧಿಮತ್ತೆಯ ಬೆಳವಣಿಗೆಗೆ ಪೂರಕ.

ಗಂಡಸಿನ ಬೇಡಿಕೆ ಅದೆಷ್ಟು ಸಮರ್ಥನೀಯ? ಚಿಕ್ಕವಯಸ್ಸಿನ ಹೆಂಡತಿಯಿಂದ ಸಾಕಷ್ಟು ದೀರ್ಘಕಾಲ 'ಸಂಸಾರ ಸುಖ'ವನ್ನನುಭವಿಸಲು ಸಾಧ್ಯವೆಂಬುದೇನೋ ನಿಜ. ಆದರೆ ಮದುವೆಯ ನಂತರದ ರಸವತ್ತಾದ ಅವಧಿ ಕಳೆದ ನಂತರವೂ ಸುಂದರಳಾಗಿಯೇ ಉಳಿದ ಹೆಂಡತಿ ಬುದ್ಧಿವಂತಿಕೆಯಲ್ಲಿ ಹಿಂದುಳಿದವಳೂ, ವ್ಯವಹಾರ ಜ್ಞಾನ ವಂಚಿತಳೂ, ಉತ್ತಮ ಸಂಭಾಷಣೆ ಕಲೆಯಿರದವಳೂ ಆಗಿದ್ದಾಳೆ ಎಂಬುದನ್ನು ಅನುಭವಿಸುತ್ತ ಹೋದಂತೆ ದುಡಿಯುವ, ವೃತ್ತಿ ವ್ಯವಹಾರಗಳಲ್ಲಿ ತೊಡಗಿರುವ ಗಂಡಂಧಿರು ತಮ್ಮೊಡನೆ ವೃತ್ತಿ, ಸೇವೆಗಳಲ್ಲಿರುವ ಅಥವಾ ತಮ್ಮ ಸಂಪರ್ಕದಲ್ಲಿ ನಿತ್ಯವೂ ಬರುವ, ಬುದ್ಧಿವಂತಿಕೆಯಲ್ಲಿ ತಮಗೆ ಸರಿಸಾಟಿಯಾಗಿರುವ ಹೆಣ್ಣುಗಳೊಡನೆ ತಮ್ಮ ಹೆಂಡಂದಿರನ್ನು ಹೋಲಿಸಿ ಪಡೆದ ನಿರಾಶೆ ಅಂಥವರನ್ನು ಕಡೆಗಣಿಸಿ ವಿವಾಹೇತರ ಸಂಬಂಧಗಳತ್ತ ಮುಖ ಮಾಡುವುದು ತೆಗೆದುಹಾಕುವ ವಿಷಯವಲ್ಲ. ವಿವಾಹವಾಗದೇ ಒದ್ದಾಡುತ್ತಲಿರುವ ಇಂಥ ಹೆಣ್ಣುಗಳ ಬಗೆಗೆ ಆಗಲೇ ತಿಳಿದಿದ್ದೇವೆ. ಹೊಸ ಅಕ್ರಮ ಸಂಬಂಧ ನಿರ್ಮಾಣಕ್ಕೆ ಇವರೂ ಹೊಣೆಗಾರರು. ಆದರೆ, ಇವರೀರ್ವರೂ ಪರಿಸ್ಥಿತಿಯ ಶಿಶುಗಳೇ ಹೊರತು ಅವರಿಗೆ ಅಕ್ರಮ ಸಂಬಂಧಗಳ ಬಗೆಗೆ ಮೂಲಭೂತ ಆಕರ್ಷಣೆಯಿಲ್ಲ! ಹಾಗಾದರೆ ಈ ತ್ರಿಕೋನ ಸಂಬಂಧಗಳ ಮೂಲ ಯಾವುದು? ತನ್ನ ಹೆಂಡತಿ ಬುದ್ಧಿಮತ್ತೆಯಲ್ಲಿ ತನಗಿಂತ ಹಿಂದುಳಿದಿರಬೇಕೆಂಬ ಪುರುಷನ ಮೂರ್ಖ ಬೇಡಿಕೆಯೇ ಅದು. ಸಂಸಾರ ಸರಿದೂಗಿಸುವಲ್ಲಿ ಸ್ತ್ರೀ ತನ್ನ ಬುದ್ಧಿಮಟ್ಟವನ್ನು ಕಾಯ್ದುಕೊಂಡರೆ ಸಾಕು. ಈ ಭಾವನೆಯಿಂದ ಅನೇಕ ಗೃಹಿಣಿಯರು ಬೌದ್ಧಿಕವಾಗಿ ಬೆಳೆಯಲು ಪ್ರಯತ್ನಿಸುವುದಿಲ್ಲ. ಆದರೆ ಸೇವೆ ವೃತ್ತಿಗಳಲ್ಲಿರುವ ಮನುಷ್ಯ ನಿಂತ ನೀರಾದರೆ ಜೀವನ ನಿರ್ವಹಣೆ ಅಸಾಧ್ಯವಾಗಬಹುದಾದ್ದರಿಂದ ಆತ ಚಲನಶೀಲನಾಗಲೇಬೇಕು. ಬೌದ್ಧಿಕತೆಯಲ್ಲಿಯ ಈ ಅಂತರವೂ ವಿರಸದಾಂಪತ್ಯಕ್ಕೆಡೆ ಮಾಡಬಹುದು. ಪುರುಷನ ದೃಷ್ಟಿ ಬೌದ್ಧಿಕವಾಗಿ ಪ್ರಗತಿಗೊಳ್ಳುತ್ತಿರುವ ಸ್ತ್ರೀಯರತ್ತ ಹೊರಳಬಹುದು. ಸುವ್ಯವಸ್ಥಿತವಾದ ಮನೆ 'ಪ್ಲಾಸ್ಟಿಕ್ ಮಲ್ಲಿಗೆಗಳ ವನ' ವಾಗಿ ದೂರದಿಂದ ನೋಡುವವರ ಕಣ್ಣಿಗೆ ಮಾತ್ರ ಹಬ್ಬವಾಗಿ ತೋರಬಹುದು!


'ಜನ್ಮವೆತ್ತಿದ ಮೇಲೆ ಪ್ರೀತಿಸಬೇಕು; ಸ್ವಲ್ಪ ಜೀವಿಸಬೇಕು ಸ್ವಲ್ಪ ಮರಣಿಸಬೇಕು' ಎಂದು ಒಂದು ಚಿತ್ರಗೀತೆ ಸಂದೇಶವನ್ನಿತ್ತರೆ, 'ಪುಷ್ಪವನ, ಸಾಗರಗಳಂತೆ ಪರರಿಗೆ ಜೀವನ ಕೊಡುವುದೇ ಬಾಳುವೆ' ಎಂದು ಇನ್ನೊಂದು ಸಾರುತ್ತದೆ. ಹಾಗಾದರೆ, ಇದರಂತೆಯೇ, ಮದುವೆಯ ಸರ್ವಗ್ರಾಹ್ಯ ಗುರಿ ಯಾವುದು ಎಂದು ಕೇಳಿಕೊಂಡರೆ ಸುಖ ಪಡೆಯುವದಕ್ಕೇ ಆಗಲಿ ಸುಖಪಡಿಸುವುದಕ್ಕೆ ಆಗಲಿ ಮದುವೆಯಾಗುವುದಿಲ್ಲ. ವಿವಾಹವಾಗುವುದು ಪರಸ್ಪರ ಸುಖಾನುಭವಕ್ಕೆ ಎಂದು ಹೇಳಬೇಕಾಗುತ್ತದೆ. ಕೊಟ್ಟು ತೆಗೆದುಕೊಳ್ಳುವುದರಲ್ಲಿರುವ ಸುಖಕ್ಕಿಂತ ಮಿಗಿಲುಂಟೇ? ■

ನರೇಂದ್ರನ ಹುಕ್ಕಾ ಪ್ರಯೋಗ

ಸ್ವಾಮಿ ವಿವೇಕಾನಂದರ ಜೀವನದಲ್ಲಿ ನಡೆದ ಘಟನೆಯಿದು. ವಿವೇಕಾನಂದರ ಬಾಲ್ಯದ ಹೆಸರು ನರೇಂದ್ರ. ನರೇಂದ್ರನ ತಂದೆ ವಿಶ್ವನಾಥರು ದೊಡ್ಡ ನ್ಯಾಯವಾದಿ. ಅವರ ಬಳಿಗೆ ಅನೇಕ ಕಕ್ಷಿದಾರರು ಬರುತ್ತಿದ್ದರು. ಆ ಕಕ್ಷಿದಾರರು ವಿವಿಧ ಜಾತಿ ಸಂಪ್ರದಾಯಗಳಿಗೆ ಸೇರಿದವರು. ಆ ಕಕ್ಷಿದಾರರ ಉಪಯೋಗಕ್ಕಾಗಿ ಅವರ ಮನೆಯಲ್ಲಿ ಅನೇಕ ಹುಕ್ಕಾಗಳನ್ನು ಇಟ್ಟಿದ್ದರು. ಆಯಾ ಜಾತಿಯವರು, ಅವರಿಗೆಂದೇ ನಮೂದಿಸಿರುವ ಹುಕ್ಕಾಗಳನ್ನೇ ಸೇದಬೇಕು. ಬೇರೆ ಬೇರೆ ಜಾತಿಯವರಿಗಾಗಿ ಬೇರೆ ಬೇರೆ ಹುಕ್ಕಾಗಳನ್ನು ಇಡುವ ಈ ವ್ಯವಸ್ಥೆಯನ್ನು ಕಂಡು ನರೇಂದ್ರನಿಗೆ ಆಶ್ಚರ್ಯವಾಯಿತು. ಈ ಹುಕ್ಕಾಗಳಲ್ಲಿ ಅಡಗಿರುವ ವ್ಯತ್ಯಾಸವೇನೆಂಬುದನ್ನು ಕಂಡುಕೊಳ್ಳಲು ಅವನು ಬಯಸಿದ. ಹೀಗೆ ಒಂದು ದಿನ ಅವನು ಪ್ರತಿಯೊಂದು ಹುಕ್ಕಾದಿಂದಲೂ ಒಂದೊಂದು ಧಂ ಎಳೆದು ನೋಡಿದ. ಅವನಿಗೆ ಏನೂ ವ್ಯತ್ಯಾಸ ಕಂಡುಬರಲಿಲ್ಲ. ಈ ರೀತಿ ತನ್ನದೇ ತರ್ಕ ಮತ್ತು ವಿವೇಚನಾ ಶಕ್ತಿಯಿಂದ ಅವನು ಜಾತಿಗಳಲ್ಲಿನ ಭೇದದ ವಿಚಾರವೇ ಅರ್ಥಹೀನವೆಂದು ತೀರ್ಮಾನಿಸಿದನು.

ಅವನು ಹುಕ್ಕಾ ಪ್ರಯೋಗ ನಡೆಸುತ್ತಿದ್ದಾಗ ಅದನ್ನು ಒಬ್ಬರು ನೋಡಿ "ಏಯ್! ಏನಿದು ಎಲ್ಲಾ ಹುಕ್ಕಾಗಳಿಗೂ ಬಾಯಿ ಕೊಡುತ್ತಿರುವೆಯಲ್ಲಾ?" ಎಂದು ಚುಡಾಯಿಸಿದರು. ಅವರನ್ನೇ ನರೇಂದ್ರ ಛೇಡಿಸಿ "ಹೋ ಜಾತಿ ಕಟ್ಟಳೆಗಳನ್ನು ಉಲ್ಲಂಘಿಸಿದರೆ ಏನಾಗುತ್ತದೆ ಎಂಬುದನ್ನು ಪರೀಕ್ಷಿಸುತ್ತಿದ್ದೆ" ಎಂದು ಹೇಳಿದ.

■ಸೋಮನಾಥ ಕಾರಟಗಿ



ಕಾಂಬ್ಳಿಗೆ ಶುಭ ದಿನಗಳು ಒದಗಿ ಬರಬಹುದೇ?

'ಮಹತ್ತರವಾದದ್ದನ್ನು ಸಾಧಿಸುತ್ತೇನೆಂದು ಹೊರಟವನ ಜೋಳಿಗೆ ಕೊನೆಗೆ ಖಾಲಿಯೇ. ಆದರೆ ಯಾವುದೇ ದಿಕ್ಕು ದೆಸೆಯಿಲ್ಲದೆ ಸಾಗುವವರಿಗೆ ಅದೃಷ್ಟವೆಂಬುದು ಅರಸಿ ಕೊಂಡು ಬರುತ್ತದೆ. ಈ ಮಾತು ವಸ್ತುಶಃ ಸತ್ಯ.

ಭಾರತೀಯ ಕ್ರಿಕೆಟಿಗರ ದೃಷ್ಟಿಯಲ್ಲಿ ಮೇಲಿನ ಮಾತುಗಳು ನೂರಕ್ಕೆ ನೂರರಷ್ಟು ಅನ್ವಯವಾಗುತ್ತವೆ. ಏಕೆಂದರೆ ತಂಡದಲ್ಲಿ ಖಾಯಂ ಸದಸ್ಯರಾಗಲು ಪ್ರತಿಯೊಬ್ಬರೂ ಹೆಣಗಾಡುವುದು ವಾಸ್ತವದ ವಿಚಾರ. ಹೌದು, ಯಾವ ಕ್ರಿಕೆಟಿಗನೇ ಆಗಲಿ ತನ್ನ ಉಳಿವಿಗಾಗಿ ಅಪ್ರತಿಮ ಸಾಹಸ ನಡೆಸುತ್ತಾನೆ. ಇಂತಹ ಸಾಹಸಗಳ ನಡುವೆಯೂ ಕೆಲವೊಮ್ಮೆ ತಂಡದಿಂದ ಹೊರಬೀಳುವುದು ವಿಷಾದಕರ ವಾದರೂ ನಿಜ. ಈ ಪಂಕ್ತಿಗೆ ಸೇರುವ ಕ್ರಿಕೆಟಿಗನೇ ಮುಂಬೈನ ವಿನೋದ್ ಗಣಪತ್ ಕಾಂಬ್ಳಿ.

ಇತ್ತೀಚೆಗೆ ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿ 1999ರ ವಿಶ್ವಕಪ್‌ಗಾಗಿ ಪ್ರಕಟಿಸಿದ 19 ಜನ ಕ್ರಿಕೆಟಿಗರ ತಂಡಕ್ಕೆ ಕಾಂಬ್ಳಿ ಕೂಡ ಸೇರ್ಪಡೆಯಾಗಿರುವುದು ಹರ್ಷದಾಯಕ ವಿಚಾರ. ತನ್ನ ಅವಿರತ ಸಂಘರ್ಷದ ನಡುವೆಯೂ ಒಂದೊಮ್ಮೆ ಅಶಿಸ್ತಿನಿಂದ ಮತ್ತೊಮ್ಮೆ ಫಾರಂ ಕಳೆದುಕೊಂಡು, ಮಗದೊಮ್ಮೆ ಗಾಯಾಳುವಾಗಿ ತಂಡದಿಂದ ಹೊರಗುಳಿದು ವೇದನೆಯನ್ನೇ ಅನುಭವಿಸುತ್ತಿದ್ದ ಕಾಂಬ್ಳಿಗೆ ಈಗ ಸ್ವಲ್ಪ ಸಮಾಧಾನ ದೊರೆತಿರಬಹುದು.

ಬಾಲ್ಯ ಸ್ನೇಹಿತ ಹಾಗು ಪ್ರಸ್ತುತ ಜಾಗತಿಕ ಕ್ರಿಕೆಟಿನಲ್ಲಿಯ ಅಗ್ರಮಾನ್ಯ ಆಟಗಾರ ಸಚಿನ್ ತೆಂಡೂಲ್ಕರ್‌ರೊಂದಿಗೆ ಕಾಂಬ್ಳಿ ಶಾಲಾದಿನಗಳಲ್ಲಿ ನೀಡಿದ ದಾಖಲೆಯ ಜೊತೆಯಾಟಗಳು ನಂತರದ ದಿನಗಳಲ್ಲಿ ಕಾಂಬ್ಳಿಗೆ ಕೇವಲ ನೆನಪುಗಳಾಗಿದ್ದೂ ಉಂಟು. ಸಚಿನ್ ಭಾರತ ತಂಡಕ್ಕೆ ಪಾದಾರ್ಪಣೆಗೈದ 3 ವರ್ಷಗಳ ಬಳಿಕ ಕಾಂಬ್ಳಿ ಕೂಡ ಪ್ರವೇಶಿಸಿದರು. ಆದರೆ ತೆಂಡೂಲ್ಕರ್ ಚಿರಸ್ಥಾಯಿಯಾದರೆ ಕಾಂಬ್ಳಿ ಜೋಕರ್ ಆದರು. ಸಚಿನ್‌ರ ನೇತೃತ್ವದಲ್ಲಿ ಒಂದೆರಡು ಬಾರಿ ತಂಡದಲ್ಲಿ ಕಾಂಬ್ಳಿ ಕಾಣಿಸಿಕೊಂಡರೂ ಮಿಂಚಲಿಲ್ಲ. ಆಯ್ಕೆದಾರರ ಬಲಿಪಶುವಾಗಿ ರಾಷ್ಟ್ರೀಯ ತಂಡದಿಂದ ಹೊರಗುಳಿದಾಗ ಮರುಪ್ರವೇಶಕ್ಕಾಗಿ ದೇಶಿಯ ಪಂದ್ಯಗಳಲ್ಲಿ ರನ್ ಹೊಳೆ ಹರಿಸಿದವರು ಈ ಕಾಂಬ್ಳಿ.


ಟೆಸ್ಟ್ ಪಂದ್ಯಗಳಲ್ಲಿ ವಿನೋದ್ ಕಾಂಬ್ಳಿಯವರು ಎರಡು ಬಾರಿ ದ್ವಿಶತಕದ ಸಾಧನೆ ಮಾಡಿದ್ದರೂ ಅವರೊಬ್ಬ ಏಕದಿನ ಕ್ರಿಕೆಟರ್ ಮಾತ್ರ ಎನ್ನುವ ಹಣೆಪಟ್ಟಿ ಹಚ್ಚಲಾಗುತ್ತಿದೆ. ಆಕ್ರಮಣಕಾರಿ ಹಾಗು ತಾಳ್ಮೆ ಎರಡನ್ನೂ ಕರಗತ ಮಾಡಿಕೊಂಡಿರುವ ಈತ ಒಬ್ಬ ನಂಬಿಗಸ್ಥ ಬ್ಯಾಟ್ಸ್‌ಮನ್. 7 ವರ್ಷಗಳ ಹಿಂದೆ ಭಾರತ ತಂಡದಲ್ಲಿ ಕಾಣಿಸಿಕೊಂಡ ನಂತರ ಪಾಲ್ಗೊಂಡಿದ್ದು ಕೇವಲ 17 ಟೆಸ್ಟ್ ಹಾಗೂ 86 ಪಂದ್ಯಗಳಲ್ಲಿ ಮಾತ್ರ.

ನಿಮಗೆ ನೆನಪಿರಬಹುದು! 1996ರ ವಿಶ್ವಕಪ್ ಪಂದ್ಯಾವಳಿಯ ಸೆಮಿಫೈನಲ್ಸ್‌ನಲ್ಲಿ ಕಲ್ಕತ್ತಾದಲ್ಲಿ ಭಾರತ ಹೀನಾಯವಾಗಿ ಸೋತಾಗ ಕಾಂಬ್ಳಿ ಕಣ್ಣೀರು ಸುರಿಸುತ್ತಾ ಪೆವಿಲಿಯನ್ ಕಡೆ ತೆರಳಿದ್ದು. ಕಾಂಬ್ಳಿಯ ಈ ದೃಶ್ಯ ಆ ಪಂದ್ಯವನ್ನು ನಿರೀಕ್ಷಿಸುತ್ತಿದ್ದ ಕೋಟ್ಯಾಂತರ ಅಭಿಮಾನಿಗಳ ಕರುಳು ಹಿಂಡಿದ್ದಂತೂ ಹೌದು. ಇದಾದ ನಂತರ ಭಾರತೀಯ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆಯುವುದು ಕಾಂಬ್ಳಿಗೆ ದುಸ್ಸಾಧ್ಯವೇ ಆಯಿತು. ಹಾವು -ಏಣಿ ಆಟವಾಗಿಯೇ ತೋರಿತು.

ಕಾಂಬ್ಳಿ ಪ್ರಸ್ತುತ 19 ಜನ ಸದಸ್ಯರ ತಂಡದಲ್ಲಿದ್ದರೂ ಮಾರ್ಚ್ 31 ರಂದು ಬಿಡುಗಡೆಯಾಗಲಿರುವ 15 ಜನರ ತಂಡದಲ್ಲಿ ಉಳಿದರೆ ಅದು ಅವರ ಪಾಲಿಗೆ ಭಾಗ್ಯವಾಗಿ ಪರಿಣಮಿಸಬಹುದು. ಜೊತೆಗೆ ಭಾರತಕ್ಕೂ ಇಂತಹ ಆಕ್ರಮಣ ಶೀಲ ಪ್ರವೃತ್ತಿಯ ಆಟಗಾರನ ಅಗತ್ಯತೆ ಬಹಳವಾಗಿದೆ. ಇಂಗ್ಲೆಂಡ್‌ಗೆ ಕಾಂಬ್ಳಿಯೂ ಪ್ರಯಾಣ ಬೆಳೆಸುವಂತಾದರೆ ಅದು ಆಶಾದಾಯಕ ವಾಗುವುದಂತೂ ದಿಟ.

■ ಗರ್ತಿಕೆರೆ ವಿ.ಪ್ರಕಾಶ್

ಪದ ಬಂಧ 15



ಪದಬಂಧ 14ರ ಸರಿಯುತ್ತರ

ಎಡದಿಂದ ಬಲಕ್ಕೆ

1. ವೀರಭದ್ರ 4. ಪುಡಿಗಾಸು 6. ವರ 8. ಸರ 9. ವನ 10. ಕಂಪನ 12. ಸಂಪು 15. ರಂಗಪಂಚಮಿ 18. ಹಯ 19. ಸರಕು 21. ಮಂಗ 22. ಕರ 23. ಕಣ್ಣು 25. ಬನವಾಸಿ 26. ಹರಿಕಥೆ.

ಮೇಲಿನಿಂದ ಕೆಳಕ್ಕೆ

2. ರಕ್ಷಾಕವಚ 3. ದ್ರವ 4. ಪುರ 5. ಗಾಳಿಗೋಪುರ 7. ರಬಾಕಂ 8. ಸಮಾನ 11. ಪಕ್ಷಿಪಂಜರ 13. ಸುರೆಂಗ 14. ಕಾಮಿನಿ 16. ಸಹಜೀವನ 17. ಅಂಗರಕ್ಷಕ 19. ಸಮರ 20. ಕುಡುಕ 22. ಕಸಿ 24. ಣ್ಣುಹ.

ಎಡದಿಂದ ಬಲಕ್ಕೆ

1. ದೀವಾನರು ಕಟ್ಟಿಸಿದ ದೇಗುಲ .... (4)
4. ದಾತ ಎನಿಸಿಕೊಂಡ ಈತ ಬೇಡಲು ಬಂದವರಿಗೆ ಇಲ್ಲ ಎನ್ನದೇ ನೀಡುವ ಉದಾರಿ .... (4)
6. ಕಮರಿಯಲ್ಲಿ ಬಿದ್ದ ಆನೆ ತಿರುಗಿದೆ.............................. (2)
8. ಅನಾಚಾರಿ ಜನರಿಗೆ ಬುದ್ಧಿ ಕಲಿಸಿದ ಸ್ತ್ರೀ .... (2)
9. ಶುಭ ಸಮಾರಂಭದಲ್ಲಿ ಕಂಡು ಬಂದ ಸ್ವಚ್ಛತೆ ತಿರುಗಿದೆ........... (2)
10. ಕಾದ ಕೆಂಡದ ಮೇಲೆ ಸುಟ್ಟು ಹೋದ ಹಾಳೆ...................... (3)
12. ಮಿತ - ಭಾಷೆಯೊಂದಿಗೆ ಸಿಕ್ಕ ಸುಖ .... (2)
15. ರಣರಂಗದಲ್ಲಿ ಹಣೆಗೆ ಇರಿಸಿಕೊಂಡ ನೆತ್ತರದ ಬೊಟ್ಟು.......... (5)
18. ವಿನಾಯಕನ ಪೂಜೆಗೆ ಉಂಟಾದ ಅಡೆತಡೆ........................ (2)
19. ಹುಡುಗಾಟವಾಡುವ ವಯಸ್ಸಿನ ಬಾಲಕ........................... (3)
21. ಮರ ಹತ್ತಿ ನೋಡಿದಾಗ ಕಂಡು ಬಂದ ಆಂಜನೇಯನ ಆರಾಧ್ಯ ದೇವ (2)
22. ಉತ್ತುಂಗಕ್ಕೇರಿದ ನೀರಿನ ಆವಿ................................. (2)
23. ಪರಿಸರದಲ್ಲಿ ಕಂಡಿದ್ದು ನಮ್ಮದಲ್ಲ, ಬೇರೆಯವರದ್ದು .... (2)
25. ಕಾರಕೂನರಿಗೂ ತಿಳಿಯದಂತೆ ಹಗರಣ ಮಾಡಿದ ಅಧಿಕಾರಿ ..... (4)
26. ಕೈಯಲ್ಲಿ ಹಿಡಿದ ಮರ ಕೊರೆಯುವ ಸಾಧನ .... (4)

ಮೇಲಿನಿಂದ ಕೆಳಕ್ಕೆ

2. ವನದಲ್ಲಿ ಕೊಟ್ಟ ಮಾತಿನಂತೆ ನಡೆದು ಕೊಳ್ಳಲಾರದವ............ (5)
3. ಸರಿ ರಾತ್ರಿಯಲ್ಲಿ ಕಬ್ಬು ತಿನ್ನಲು ಬಂದ ವಂಚನೆಗಾರ ಪ್ರಾಣಿ...... (2)
4. ಅನುದಾನ ಸಿಕ್ಕಾಗ ನಿರ್ಮಿಸಿದ ಹಾದಿ .... (2)
5. ಎಲ್ಲರೂ ಒಂದಾಗಿ ಸ್ವಾತಂತ್ರ್ಯಕ್ಕಾಗಿ ಬಳಸಿದ ಮೂಲ ಮಂತ್ರ .... (5)
7. ಕರ್ಮಾನುಸಾರ ಕೆಲಸ ಮಾಡಿದ ಕೆಲಸಗಾರ ತಿರುಗಿದ್ದಾನೆ .... (3)
8. ತಂಬೂರಿನಾದ ಮಾಡುತ್ತ ಬರುವ ತ್ರಿಲೋಕ ಸಂಚಾರಿ .... (3)
11. ಗತಿ ನೀನೇ ಎಂದು ಪತಿವ್ರತೆಯರು ಹೇಳುವ ಜನಪದ ಪದ್ಯ............... (5)
13. ಕಡಿಯಲು ಬರುವ ಕಪ್ಪಾದ ಪ್ರಾಣಿ .... (3)
14. ಮರದ ನಡುವೆ ಬಂದ ಮೊಸಳೆ.................................... (3)
16. ಸಂಭವಿಸಬಹುದಾದ್ದೆಲ್ಲವನ್ನು ನಿಖರವಾಗಿ ನುಡಿದ, ಜ್ಯೋತಿಷ್ಯ ಹೇಳುವವ ... (5)
17. ಕಣ್ಣಲ್ಲಿ ಕಾಣಿಸಿಕೊಂಡ ಹಳದಿ ಬೇನೆ................................ (5)
19. ಹುಗ್ಗಿ ಉಣ್ಣಲು ಅವಸರ ಮಾಡಿದ ಬಾಲಕಿ .... (3)
20. ಗಪ ಗಪ ಕಡಬು ತಿಂದ ಗಣೇಶ..................................... (3)
22. ಉದ್ದುದ್ದಾಗಿ ಹರಡಿಕೊಂಡ ಬೆಂಕಿಯ ಜ್ವಾಲೆ......................... (2)
24. ಕೈಯಿಂದ ತುಂಬಲೇ ಬೇಕಾದ ಸುಂಕ ತಿರುಗಿದೆ .... (2)

■ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ನೀವು ಕಥೆಗಾರರಾಗಬೇಕೆ?.....................

ನಿಮಗೂ ಕಥೆಗಾರರಾಗಬೇಕೆಂಬ ಆಸೆ ಇರಬಹುದಲ್ಲವೆ? ನಿಮ್ಮಂತಹ ಚಿಗುರು ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲಿಕ್ಕಾಗಿಯೇ ಈ ಅಂಕಣ ಮೀಸಲು. ನೀವು ಮಾಡಬೇಕಾದುದಿಷ್ಟೇ; ಈ ಕೆಳಗೆ ನಾವೊಂದು ಕಥೆ ನೀಡಿದ್ದೇವೆ. ಆದರೆ ಅದು ಅಪೂರ್ಣ. ಅದನ್ನು ಪೂರ್ಣಗೊಳಿಸಬೇಕಾದವರು ನೀವೇ!

ಅಪೂರ್ಣ ಕತೆ

ಸುರಪುರದ ಒಂದು ಬೀದಿಯಲ್ಲಿ ಓರ್ವ ವಯಸ್ಸಾದ ಮುದುಕನಿದ್ದ. ಹುಸೇನ ಸಾಬಿ ಎಂತಲೂ ಬರಿಯ ಸಾಬಿ ಎಂತಲೂ ಊರಿನ ಮಂದಿ ಅವನನ್ನು ಕರೆಯುತ್ತಿದ್ದರು. ಮಕ್ಕಳೆಂದರೆ ಅವನಿಗೆ ಬಹಳ ಇಷ್ಟ. ಮಕ್ಕಳಿಗೂ, ಅವನು ಹೇಳುವ ಕಥೆಯೆಂದರೇ ಅಮ್ಮ ಕೊಡುವ ಸಿಹಿ ತಿಂಡಿ ಇದ್ದ ಹಾಗೆ. ಒಮ್ಮೆ ಸಾಬಿ ಹೇಳಿದ ಕತೆ ಹೀಗಿತ್ತು.

ನಿಂಗವ್ವ ಎಂಬೊಬ್ಬ ಅಜ್ಜಿಯಿದ್ದಳು. ಅವಳಿಗೆ ಹಿಂದೆ ಮುಂದೆ ಯಾರೂ ಇರಲಿಲ್ಲ. ಊರಿನವರ ಒಂದೊಂದೂ ಮನೆಗೆ ಹೋಗುವುದು ತನಗೆ ತೋಚಿದಂತೆ ಮಾತಾಡಿ ಅವರು ಕೊಟ್ಟದ್ದು ತಿಂದು ತನ್ನ ಗುಡಿಸಲಿಗೆ ಬಂದು ಮಲಗುತ್ತಿದ್ದಳು.

ಹೀಗೆ ಒಂದು ಹಗಲು ಗೌಡರ ಮನೆಯಿಂದ ಹೊರಟು, ಸೀನಪ್ಪನ ಅಟ್ಟಿ ಅತ್ರ ಹೋಗ್ತಿರಬೇಕಾದ್ರೆ ಅವಳಿಗೊಂದು ಹೊಳೆಯುವ ಉಂಗುರ ಸಿಕ್ಕಿತು. ಇದು ಯಾರ ಉಂಗುರ ವಿರಬಹುದೆಂದು ವಿಚಾರಿಸಬೇಕೆಂದು ಯೋಚಿಸುತ್ತ ಮುಂದೆ ನಡೆದಳು. ಸ್ವಲ್ಪ ದೂರದಲ್ಲಿ ಒಬ್ಬ ತುಂಟ ಹುಡುಗ ದಾರಿಯನ್ನೇ ನೋಡುತ್ತ ಬರುತ್ತಿದ್ದ......................

ಸೂಚನೆಗಳು :

- ಹತ್ತನೆಯ ತರಗತಿಯವರೆಗಿನ ವಿದ್ಯಾರ್ಥಿಗಳು ಮಾತ್ರ ಈ ಕಥೆಯನ್ನು ಪೂರ್ಣಗೊಳಿಸಿ ಕಳುಹಿಸಲು ಅರ್ಹರು.
- ನಿಮ್ಮ ಬರವಣಿಗೆ ಅರ್ಧ ಫೂಲ್‌ಸ್ಕೇಪ್ ಹಾಳೆ ಮೀರದಿರಲಿ.
- ಆ ಹಾಳೆಯ ಹಿಂಬದಿಯಲ್ಲಿ 'ಕಿಲ ಕಿಲ ಕೂಪನ್' ಅಂಟಿಸಿರಬೇಕು.
- ಮುಂದಿನ ಸಂಚಿಕೆಯಲ್ಲಿ ಫಲಿತಾಂಶ.
- ನಿಮ್ಮ ಬರವಣಿಗೆ ನಮಗೆ ತಲುಪಲು ಅಂತಿಮ ದಿನಾಂಕ 15.4.1999

ಕಿಲ ಕಿಲ ಕೂಪನ್ - (ಏಪ್ರಿಲ್ 99)

ಹೆಸರು..

ತರಗತಿ........................... ವಯಸ್ಸು.....................

ತಂದೆ..

ತಾಯಿ..

ವಿಳಾಸ..

....

....

....

ಕಾಯಕ ಗುಣದ ಹಾಗೆ

ಮಳೆಯು ಬಂದರೆ ಹೇಗೆ ಹೇಗೆ?
ಭೂಮಿಯು ಬೆಣ್ಣೆಯ ಹಾಗೆ.
ಉಳುವುದೆಂದರೆ ಹೇಗೆ ಹೇಗೆ?
ಒಡಲದು ಹೂವಿನ ಹಾಗೆ.
ಬೀಜವ ಹಾಕಲು ಹೇಗೆ ಹೇಗೆ?
ಹುಟ್ಟೇ ಅರಿಯದ ಹಾಗೆ.
ಸಸಿಯಾ ಮೊಳಕೆಯು ಹೇಗೆ ಹೇಗೆ?
ಕುಡಿಯನು ನೋಡುವ ಹಾಗೆ.
ಗಿಡದಾ ಬೆಳೆಯದು ಹೇಗೆ ಹೇಗೆ?
ಜಿಗಿಯುವ ಜಿಂಕೆಯ ಹಾಗೆ.
ತೆನೆಯದು ಬಲಿಯಲು ಹೇಗೆ ಹೇಗೆ?
ಸಮೃದ್ಧಿ ನಾಡಿನ ಹಾಗೆ.
ರಾಶಿಯ ಮಾಡಲು ಹೇಗೆ ಹೇಗೆ?
ಕುಣಿಯುವ ನವಿಲಿನ ಹಾಗೆ.
ದುಡಿತಕೆ ಫಲವು ಹೇಗೆ ಹೇಗೆ?
ಕಾಯಕ ಗುಣದಾ ಹಾಗೆ.

ನಾನು ಯಾರು?

ನನ್ನ ಹಾಸಲಾಗಲಿಲ್ಲ
ಹಾಸಿಗೆಯಷ್ಟಿಲ್ಲವಲ್ಲ
ನನ್ನ ಸುತ್ತಲಾಗಲಿಲ್ಲ
ಕೊನೆಯೆಂಬುದಿಲ್ಲವಲ್ಲ
ನನ್ನ ಮಡಿಸಲಾಗಲಿಲ್ಲ
ಚಾಪೆಯಷ್ಟಿಲ್ಲವಲ್ಲ!
ಮಡಿಲಲಿರುವ ಎಲ್ಲರನು
ರಕ್ಷಿಸಿ ಉಳಿಸುವೆನಲ್ಲ
ಹೇಳು ಹೇಳು ನಾನು ಯಾರು?

2

ಹಾರುವೆ ಆಗಸದಲ್ಲಿ
ಪಕ್ಷಿ ನಾನಲ್ಲ
ಕೊಂಬು ಬಾಲಗಳುಂಟು
ಪ್ರಾಣಿ ನಾನಲ್ಲ
ನನ್ನಲಿ ಬಾಗಿದ ಬಿಲ್ಲುವುಂಟು
ಬಾಣ ಬಿಡಲು ಸಲ್ಲ
ಜಗ್ಗಿದರೆ ಮೇಲೇರುವುದುಂಟು
ದಾರದಿ ಬದುಕಬಲ್ಲೆ
ಹೇಳು ಹೇಳು - ನಾನು ಯಾರು?

-ಜೀನಹಳ್ಳಿ ಸಿದ್ದಲಿಂಗಪ್ಪ,
'ಹೇಳು ಹೇಳು ನಾನು ಯಾರು' ಪುಸ್ತಕದಿಂದ.

ಕಳೆದ ತಿಂಗಳ ಅಪೂರ್ಣ ಕಥೆಯ ಮುಕ್ತಾಯ

1

ಮನೋಜ್ ಗುರುಗಳಿಗೆ ತಾತನು ಹೇಳಿದ ಭೀಮನ ಹೆಜ್ಜೆಗಳ ಪರಿಚಯವನ್ನು ವಿವರಿಸಿದನು.

ಗುರುಗಳು ಮಕ್ಕಳೊಡನೆ ಚರ್ಚಿಸಿದರು. ನಂತರ ಗುಡ್ಡದಲ್ಲಿ ಸಂಚರಿಸಿ ಭೀಮನ ಹೆಜ್ಜೆಗಳ ಸಂಶೋಧನೆಯನ್ನು ಪ್ರಾರಂಭಿಸಿದರು.

ಅವರ ಕಲ್ಪನೆಗೆ ಅನುಗುಣವಾಗಿ ಭೀಮನ ಹೆಜ್ಜೆಗಳು ಕಾಣಿಸಿಕೊಂಡವು. ಮನೋಜ್ ಒಬ್ಬ ತುಂಟ ಹುಡುಗನಾದರೂ ಅಷ್ಟೇ ಚುರುಕು ಬುದ್ಧಿಯನ್ನು ಮತ್ತು ಜ್ಞಾಪಕ ಶಕ್ತಿಯುಳ್ಳ ವಿದ್ಯಾರ್ಥಿಯಾಗಿದ್ದನು. ಗುರುಗಳು ಆತನ ಜ್ಞಾಪಕಶಕ್ತಿಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕೆಂದು ಆಶಿಸಿದರು.

-ಎಲ್. ಕೊಟ್ರೇಶ್, ಬಳ್ಳಾರಿ

2

ಭೀಮನ ಹೆಜ್ಜೆಯ ಗುರುತು ಇರುವ ಸ್ಥಳವನ್ನು ಹುಡುಕುತ್ತಾ ಹೊರಟನು. ತನ್ನ ಗುರುಗಳಿಗೂ ಸಹ ಹೇಳದೇ, ಅದು ಬಹಳ ವಿಶಾಲವಾದ ಬೆಟ್ಟವಾಗಿತ್ತು. ಆಗ ಮಧ್ಯಾಹ್ನವಾದ್ದರಿಂದ ಬಿಸಿಲು ಬೇರೆ ಸುಡುತ್ತಿತ್ತು. ಆದರೂ ಸಾಹಸಿ ಮನೋಜನು ಭೀಮನ ಹೆಜ್ಜೆಯ ಗುರುತನ್ನು ಕಾಣಬೇಕೆಂದು, ಒಂದೇ ಸಮನೆ ಯಾವುದನ್ನೂ ಲಕ್ಷಕ್ಕೆ ತೆಗೆದುಕೊಳ್ಳದೆ ಹುಡುಕಿ ಭೀಮನ ಹೆಜ್ಜೆಯ ಗುರುತು ನೋಡಿ ಆನಂದಪಟ್ಟು, ಅದನ್ನು ತನ್ನ ಸಹಪಾಠಿಗಳಿಗೂ ಮತ್ತು ಗುರುಗಳಿಗೂ ಹೇಳಬೇಕೆಂದು ಓಡಿಬಂದನು. ಅವನ ಗುರುಗಳು ಮನೋಜನನ್ನು ಹುಡುಕುತ್ತಿದ್ದರು. ಅವರಿಗೆ ಮನೋಜನು ಹೇಳಿದ ವಿಷಯವನ್ನು ಕೇಳಿ ಆಶ್ಚರ್ಯವೂ, ಸಂತೋಷವೂ ಆಯಿತು ಮತ್ತು ಅವನ ಧೈರ್ಯ ಸಾಹಸಗಳನ್ನು ಗುರುಗಳು ಕೊಂಡಾಡಿದರು.

-ಗಣೇಶ ವಿ. ಹೆಗಡೆ, ಕಾರವಾರ

3

ಅದನ್ನು ವೀಕ್ಷಿಸಲು ಮನೋಜ್ ಹೊರಟ. ಭೀಮನ ಹೆಜ್ಜೆಯ ಗುರುತುಗಳನ್ನು ವೀಕ್ಷಿಸಿ ಬರುವಾಗ ದಾರಿ ತಪ್ಪಿ ಹೋಯಿತು. ಅವನು ಬೊಬ್ಬಿಟ್ಟನು. ಆಗ ದಾರಿಯಲ್ಲಿ ಹೋಗುತ್ತಿದ್ದ ಜನರು ಅವನನ್ನು ಕೇಳಲು ಅವನು ನಾವು ಅಂಬಾಜಿ ದುರ್ಗದ ಮಹಾ ಕೈಲಾಸಗಿರಿ ಕ್ಷೇತ್ರವನ್ನು ನೋಡಲು ಬಂದಿದ್ದೇವೆ ನಮ್ಮ ಶಾಲೆಯ ಗುರುಗಳ ಜತೆ. ನಮ್ಮ ತಾತನ ಕತೆಯನ್ನು ನೆನಪಿಸಿಕೊಂಡು ಭೀಮನ ಹೆಜ್ಜೆಯ ಗುರುತು ನೋಡಲು ಹೋದೆನು. ಬರುವಾಗ ದಾರಿ ತಪ್ಪಿತು ನಮ್ಮ ಗುರುಗಳು ಮತ್ತು ಸ್ನೇಹಿತರು ಕೈವಾರ ದೇವಾಸ್ಥಾನದ ಬಳಿ ಪಾರ್ಕ್‌ನಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ ಎನ್ನಲು ಜನರು ಅಲ್ಲಿಗೆ ತಂದು ಬಿಟ್ಟರು. ಗುರುಗಳು ಜನರಿಗೆ ಶುಭಕೋರಿ ಪ್ರವಾಸ ಮುಗಿಸಿ ಮಕ್ಕಳೊಡನೆ ಊರು ಸೇರಿಕೊಂಡರು.

-ಸುನಿಲ್ ಡಿಸೋಜ, ಭದ್ರಾವತಿ

4

ತಾತನ ಕಥೆ ನೆನಪಿಸಿಕೊಂಡು ಬೆಟ್ಟದಲ್ಲಿ ಸುತ್ತುತ್ತಿರುವಾಗ ಹೆಜ್ಜೆಗಳ ಗುರುತು ಕಂಡು ಅದೇ ಜಾಡಿನಲ್ಲಿ ಮುಂದೆ ಸಾಗಿದಾಗ ಆಕಸ್ಮಿಕವಾಗಿ ಮನೋಜನಿಗೆ ಪುರಾತನ ಗುಡಿ ಕಾಣಲು ಕೂಡಲೇ ಗುಹೆಯ ಒಳಗೆ ಪ್ರವೇಶಿಸಲು ಕೊನೆಯ ಹೆಜ್ಜೆಯನ್ನು ಸ್ಪರ್ಶಿಸಿದ ಕೂಡಲೇ ನಿಧಿಯು ಗೋಚರವಾಗಿ ಮನೋಜ ಪ್ರಜ್ಞಾಹೀನನಾಗಿ ಬೀಳುತ್ತಾನೆ. ಸಂಜೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನಿಸಿದಾಗ ಮನೋಜನ ಗೈರುಹಾಜರಿಯನ್ನು ತಿಳಿದು ಶಿಕ್ಷಕರು ಭಯಭೀತರಾಗಿ ಸುತ್ತಮುತ್ತೆಲ್ಲ ಹುಡುಕಿ ಗುಹೆಯನ್ನು ಪ್ರವೇಶಿದರು. ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದ ಮನೋಜನನ್ನು ಕಂಡು ಗಾಬರಿಯಿಂದ ಅವನ ಮೈದಡವಿ ಎಚ್ಚರಿಸಿದರು. ಮನೋಜ ಎಲ್ಲವನ್ನು ವಿವರಿಸುತ್ತಾನೆ. ಶಿಕ್ಷಕರ ಸಹಾಯದಿಂದ ನಿಧಿಯನ್ನು ಸರ್ಕಾರಕ್ಕೆ ತಲುಪಿಸುತ್ತಾನೆ. ಮನೋಜನ ಪ್ರಾಮಾಣಿಕತನ ಹಾಗೂ ದಿಟ್ಟತನವನ್ನು ಕೊಂಡಾಡುತ್ತಾ ಎಲ್ಲರೂ ಮನೋಜನಂತೆ ಧೈರ್ಯ ಶಾಲಿಗಳಾಗಬೇಕೆಂದು ಪ್ರಶಂಸೆ ಮಾಡಿದರು.

-ಗುರುರಾಜ, ಸಿಂಧನೂರು

5

ತನ್ನ ಸಹಪಾಠಿಗಳಿಗೆ ತಾತ ಹೇಳಿದ ಕಥೆಯನ್ನು ಹೇಳತೊಡಗಿದನು. ಆ ಕಥೆಯನ್ನು ತನ್ನ ಸಹಪಾಠಿಗಳು ಮೈಮರೆತು ಆಲಿಸ ತೊಡಗಿದರು. ಆ ದೃಶ್ಯವನ್ನು ಕಂಡು ಗುರುಗಳು ತಾವೂ ಕಥೆಯನ್ನು ಕೇಳಲು ಆರಂಭಿಸಿದರು. ಆ ಕಥೆ ಹಿಂದೆ ಆದ ಘಟನೆಯಂತೆಯೇ ಭೀಮನ ಹೆಜ್ಜೆಯ ಗುರುತಿನ ಸತ್ಯ ಕತೆಯಾಗಿದ್ದಿತು. ಕಥೆ ಹೇಳುತ್ತಿದ್ದಂತೆ ಮಧ್ಯಾಹ್ನ ಊಟದ ಸಮಯವಾಯಿತು. ಕಥೆ ಮುಗಿಸಿ ಊಟ ಮಾಡಿಕೊಂಡು ಮುಂದಿನ ಪ್ರವಾಸ ಕೈಗೊಂಡರು. ಮನೋಜನಿಗೆ ವರ್ಗದ ಗುರುಗಳು ಒಳ್ಳೆಯ ಕಥೆಗಾರ ಎಂಬ ಬಿರುದನ್ನು ಕೊಟ್ಟು ಆಶೀರ್ವದಿಸಿದರು.

-ಮೇಹಬೂಬ. ಅ. ಹಾಲ್ಯಾಳ, ಹುನಗುಂದ

6

ಮನೋಜನೊಬ್ಬನೇ ಹೋಗಿ ಅವನ್ನು ನೋಡುತ್ತಾ ಕುಳಿತನು. ಗುರುಗಳು ಮತ್ತು ಮಕ್ಕಳು ಮನೋಜನನ್ನು ಹುಡುಕುತ್ತಿದ್ದರು. ಆತ ಬೆಟ್ಟದಲ್ಲಿ ಇದ್ದದ್ದನ್ನು ಒಬ್ಬ ಹುಡುಗ ನೋಡಿ ಗುರುಗಳಿಗೆ ಹೇಳಿದನು. ಎಲ್ಲರೂ ಬೆಟ್ಟಕ್ಕೆ ಹೋದರು. ಅಲ್ಲಿ ಅವರು ಮನೋಜನನ್ನು ಹುಡುಕಿ ಭೀಮನ ಹೆಜ್ಜೆಗಳನ್ನೂ ನೋಡಿದರು. ಹಿಂತಿರುಗಿ ಬಸ್ಸಿನಲ್ಲಿ ಕೇಕೆ ಹೊಡೆಯುತ್ತಾ ನಂದಿ ಪ್ರಾಥಮಿಕ ಶಾಲೆಗೆ ಪ್ರಯಾಣಿಸಿದರು.

-ಮಂಜುನಾಥ ಶಿ. ಹಾವೇರಿ, ಕುರುಬಗೊಂಡ.

7

ಮನೋಜ ತನ್ನ ತಾತ ಹೇಳಿದ್ದನ್ನು ನೆನಪಿಸಿಕೊಂಡು ಬೆಟ್ಟದಲ್ಲಿ ಭೀಮನ ಹೆಜ್ಜೆಗಳಿವೆ ಎಂದು ತನ್ನ ಗೆಳೆಯರಿಗೆ ಹೇಳಿದನು. ಗುರುಗಳು ಮಕ್ಕಳನ್ನು ಬೆಟ್ಟಕ್ಕೆ ಕರೆದುಕೊಂಡು ಹೋದರು. ಬೆಟ್ಟದಲ್ಲಿ ಭೀಮನ ಹೆಜ್ಜೆಯ ಗುರುತುಗಳಿದ್ದವು ಮತ್ತು ಹಳೆಯ ಗುಡಿಗಳಿದ್ದವು. ಇವನ್ನು ಮಕ್ಕಳಿಗೆ ತೋರಿಸಿಕೊಂಡು ಪಾರ್ಕ್‌ಗೆ ಹಿಂತಿರುಗಿದರು. ಸಂಜೆಯ ತನಕ ಹಾಯಾಗಿ ಪಾರ್ಕಿನಲ್ಲಿ ಆಟ ಆಡಿದರು. ಸಂಜೆಯಾದ ಮೇಲೆ ವಾಹನದಲ್ಲಿ ನಂದಿ ಶಾಲೆಗೆ ಹಿಂತಿರುಗಿದರು.

-ಪ್ರವೀಣ ರಾ. ಆಳಲಗೇರಿ,
ಕುರುಬಗೊಂಡ

8

ತನ್ನ ಸ್ನೇಹಿತರನ್ನೆಲ್ಲ ಕರೆದು ತೋರಿಸಿದನು. ಗುರುಗಳು ಇವನ ಜಾಣತನವನ್ನು ಮೆಚ್ಚಿ ಶಹಬಾಷ್ ಎಂದು ಬೆನ್ನು ತಟ್ಟಿದರು.

- ಟಿ. ಬಸವರಾಜ, ಬೇವೂರು.

9

ಮನೋಜನು ಆ ಕಥೆಯನ್ನು ಹೇಳಿ ತನ್ನ ಸಹ ಪಾಠಿಗಳನ್ನು ಸಂತೈಸುತ್ತಾ ಅವರು ಮುಂದಿನ ಪ್ರವಾಸವನ್ನು ಕೈ ಗೊಂಡರು.

- ಸಂಗಮೇಶ ನಂದವಾಡಗಿ, ಹುನಗುಂದ.



ಇಡೀ ಬಾಲಿವುಡ್ ಯೌವನಿಗರಿಂದ ತುಂಬಿಬಿಟ್ಟಿದೆ. ಯುವ ನಿರ್ದೇಶಕರು, ಯುವ ಬರಹಗಾರರು ಬಂದುಬಿಟ್ಟಿದ್ದಾರೆ. ಪ್ರೇಕ್ಷಕರೂ ಬದಲಾಗಿದ್ದಾರೆ.

ಬಾಲಿವುಡ್ ಬೆಳುದಿಂಗಳ ಬಾಲೆಯರು



ಆಗಿಹೋಯ್ತು, ಹಳೆಯ ಗರತಿಯರ ಕಾಲ!

ಝಗಮಗಿಸುವ ಬಾಲಿವುಡ್‌ನಲ್ಲಿ ಯೌವನ ತುಂಬಿದ ಬೆಳುದಿಂಗಳಿನಂತಹ ಬಾಲೆಯರು ತುಂಬಿಬಿಟ್ಟಿದ್ದಾರೆ.

ಬಾಲಿವುಡ್‌ಗೆ ಚೆಂದದ ಹುಡುಗಿಯರ ಹಸಿವು ಎಂದಿಗೂ ತೀರುವಂತಹದಲ್ಲ. ಈಗ ಆ ದಾಹ ತೀವ್ರವಾಗಿ ಹೆಚ್ಚಿದೆ. ಎಲ್ಲವೂ ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ, ಎಂಟಿವಿ ಹಾಗೂ ಪುಟಿಯುವ ಯೌವನ ಬಾಲಿವುಡ್ ಅನ್ನು ದಂಗಾಗಿಸಿ ಬಿಟ್ಟಿದೆ.

ಬರಿಯ ಬೆಡಗಲ್ಲೋ ಅಣ್ಣಾ......

ಉರಿಯುವ ಗೋಳಗಳನ್ನು ತನ್ನ ಕಣ್ಣುಗಳನ್ನಾಗುಳ್ಳ ಕಾಜೋಲ್ ಸೇರಿದಂತೆ,



ಇಂದು ಬಾಲಿವುಡ್‌ಗೆ ಮುತ್ತಿಗೆ ಹಾಕಿರುವ ಬಹುಪಾಲು ಹುಡುಗಿಯರ ಅಸ್ತ್ರ ಸೌಂದರ್ಯ ಮಾತ್ರವಲ್ಲ - ಆತ್ಮ ವಿಶ್ವಾಸ ಹಾಗೂ ತಮಗೇನು ಬೇಕು ಎನ್ನುವುದರ ಅರಿವು.

ಈ ಬಾಲೆಯರು ಶಾಲೆಯನ್ನು ಮಧ್ಯದಲ್ಲೇ ತೊರೆದು ಚಿತ್ರರಂಗ ಸೇರಿದವರಲ್ಲ. ಅಥವಾ ಬರಿಯ ಬಣ್ಣದ ಗೊಂಬೆಗಳಲ್ಲ. ಶಿಲಾಬಾಲಿಕೆಯರ ಅಂಗಸೌಷ್ಠವ ಮತ್ತು ಪಟಗುಟ್ಟುವ ಕಣ್ರೆಪ್ಪೆಯೊಟ್ಟಿಗೆ ಖ್ಯಾತ ಕಾಲೇಜುಗಳ ಪದವಿಗಳು ಈ ಹುಡುಗಿಯರ ಬತ್ತಳಿಕೆಯಲ್ಲಿವೆ. ಸೋಲ್ಜರ್, ದಿಲ್ ಸೆ ಖ್ಯಾತಿಯ ಪ್ರೀತಿ ಜಿಂಟಾ ಮತ್ತು ತಕ್ಷಕ್ ಹಾಗೂ ಭೋಪಾಲ್ ಎಕ್ಸ್‌ಪ್ರೆಸ್‌ನಲ್ಲಿ ನಟಿಸುತ್ತಿರುವ ನೇತ್ರಾ ರಘುರಾಮನ್ - ಈ ಇಬ್ಬರೂ ಮನಃಶಾಸ್ತ್ರದ

ಬಂದಿದೆ ಆಪತ್ತು!

ಕಾಜೋಲ್ ಮುಖರ್ಜಿ

ಬಾಲಿವುಡ್‌ನ ಮಹಾರಾಣಿ. ನಮ್ಮೆಲ್ಲರಂತೆ ದಿರಿಸು ಹಾಕುವ, ಮೇಕ್‌ಅಪ್ ದ್ವೇಷಿಸುವ ಈಕೆ ಬಹಿರಂಗ ಸಭೆಯಲ್ಲಿ ಒಮ್ಮೆ ಯದ್ವಾತದ್ವಾ ಅತ್ತಿದ್ದಾಳೆ. ಪ್ರತಿವರ್ಷ ಒಂದಲ್ಲ ಒಂದು ಪ್ರಶಸ್ತಿ ಗಿಟ್ಟಿಸುವ ಈಕೆಯ ನಟನೆಯನ್ನು ದಿಲ್‌ವಾಲೆ ದುಲ್ಹನಿಯಾ ಮತ್ತು ಕುಚ್ ಕುಚ್ ನಲ್ಲಿ ನೋಡಿದವರು ಮಧುಬಾಲಾ, ನರ್ಗೀಸ್‌ಗೆ ಹೋಲಿಸಿದ್ದಾರೆ.

ಮನೀಶಾ ಕೊಯಿರಾಲಾ

ಶಾಲೆಯಲ್ಲಿದ್ದಾಗ ಕ್ಯಾಮರಾ ಎದುರಿಸಿದ ಈ ನೇಪಾಳದ ಹುಡುಗಿ ಬಾಲಿವುಡ್‌ಗೆ ಬಂದು 10 ವರ್ಷ ಆಗಿದೆ. ಈಕೆಯ ಅತ್ಯುತ್ತಮ ನಟನೆಯಿದ್ದ ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಯಶಸ್ಸು ಗಳಿಸಲಿಲ್ಲ. ಚಿತ್ರರಂಗದ ಸೂಕ್ಷ್ಮಜ್ಞ ನಟಿಯರಲ್ಲೊಬ್ಬಳು.

ಕರಿಷ್ಮಾ

ರಾಜ್‌ಕಪೂರ್ ಖಾಂದಾನ್‌ನ ಅದ್ಭುತ ಅಂಗಸೌಷ್ಟವವುಳ್ಳ ನೀಲಿ ಕಣ್ಣಿನ ಹುಡುಗಿ. ಗೋವಿಂದನ ಖಾಯಂ ನಾಯಕಿಯಾದ ಈಕೆ, ಜಟ್ಕಾ ಹಾಡುಗಳಿಗೆ ಪ್ರಸಿದ್ಧಳು. 'ದಿಲ್ ತೋ ಪಾಗಲ್ ಹೈ' ನಲ್ಲಿ ಗೋವಿಂದ ರಹಿತ ಯಶಸ್ಸು ನೀಡಬಲ್ಲೆ ಎಂದು ಸಾಬೀತು ಮಾಡಿದ್ದಾಳೆ.

ಊರ್ಮಿಳಾ

ಮಾಸೂಮ್‌ನ ಈ ಬಾಲನಟಿ ರಂಗೀಲಾದಲ್ಲಿ ಅಸಡಾ ಬಸಡಾ ಕುಣಿದು, ಏಣಿಯ ಮೇಲೇರಿಬಿಟ್ಟಳು. ಆಕೆಯ ಗಾಡ್ ಫಾದರ್ ರಾಮಗೋಪಾಲ್ ವರ್ಮಾನ ಚಿತ್ರಗಳಲ್ಲಿ ಮೈನೆದರಿಲ್ಲದೆ ನಟಿಸುವ ಈಕೆ, 'ದೌಡ್'ನಲ್ಲಿ ಮೃಗೀಯ ಲೈಂಗಿಕ ಭಂಗಿಗಳನ್ನು ಪ್ರದರ್ಶಿಸಿದ್ದಾಳೆ. ಆದರೆ 'ಸತ್ಯ' ಆಕೆಯ ಇಮೇಜನ್ನು ಬದಲಿಸಿಬಿಟ್ಟಿದೆ. ಈ ಸಾಲಿನ ಇನ್ನೊಂದು ಚಿತ್ರ 'ಚೈನಾ ಗೇಟ್'.

ರವೀನಾ ಟಂಡನ್

'ಮೊಹ್ರಾ'ದ ಈ ಜಿದ್ದಿ ಹುಡುಗಿ ಒಂದಲ್ಲ ಒಂದು ಕಾರಣಗಳಿಂದಾಗಿ ಒಳ್ಳೆಯ ಚಿತ್ರಗಳಿಂದ ವಂಚಿತಳಾಗುತ್ತಿದ್ದಾಳೆ. ಆಕೆಯ ಪಾತ್ರ ಬೇರೆಯವರ ಪಾಲಾಗಿದೆ. ಪ್ರಣಯದಲ್ಲಿ ಸೋತಿದ್ದಾಳೆ. ಈಗಲೂ ಪ್ರೇಕ್ಷಕರ ಎದೆ ಡವಗುಟ್ಟಿಸಬಲ್ಲಳು. ಈಕೆಯ ಬಾಕ್ಸ್ ಆಫೀಸ್ ಸಾಧನೆ ಮಧ್ಯಮ ಶ್ರೇಣಿಯದ್ದು.

ಪದವೀಧರರು. ಪ್ರೀತಿಯ ಮುಖ್ಯ ಅಧ್ಯಯನ ವಿಷಯ ಕ್ರಿಮಿನಲ್ ಸೈಕಾಲಜಿ!... ಸಲ್ಮಾನ್ ನಾಯಕನಾಗಿರುವ ಚಲ್ ಮೇರೆ ಬ್ಯಾ ನಾಯಕಿ ದಿವಾ ಪಾಲಟ್ ನಟನೆ ಮತ್ತು ನಿರ್ದೇಶನದಲ್ಲಿ ಸ್ಟಾನ್‌ಫೋರ್ಡ್ ವಿ.ವಿ.ಯಲ್ಲಿ ಪದವಿ ಪಡೆದ, 4 ನಾಟಕಗಳ ಲೇಖಕಿ. ಜಾಕಿಶ್ರಾಫ್ ಜೊತೆ ಗ್ರಹಣ್‌ನಲ್ಲಿ ನಟಿಸುತ್ತಿರುವ ಅನುಪಮ ವರ್ಮಾ ಬಗಲಿನಲ್ಲಿ ಎಂಬಿಎ ಪದವಿ ಇದೆ. ಕೈಜಾದ್ ಗುಸ್ತಾದನ ವಿಚಿತ್ರ ಆದರೆ ಯಶಸ್ವಿ ಚಿತ್ರ 'ಬಾಂಬೆ ಬಾಂಬ್ಸ್'ನ ನಟಿ ತಾರಾ ದೇಶಪಾಂಡೆ 2 ಪುಸ್ತಕ ಪ್ರಕಟಿಸಿರುವ ಜನಪ್ರಿಯ ಲೇಖಕಿ.'ಪ್ಯಾರ್‌ಮೆ ಕಭೀ ಕಭೀ' ಯ ನಾಯಕಿ, ರಾಜೇಶ್ ಖನ್ನಾ ಡಿಂಪಲ್‌ರ ಕಿರಿಯ ಮಗಳು 'ರಿಂಕಿ', ಸಂಪರ್ಕ ಮಾಧ್ಯಮದ ಪದವೀಧರೆ. ಇವರ ಜೊತೆ ಕುಚ್ ಕುಚ್ ಹೋತಾ ಹೈನ ರಾಣಿ ಮುಖರ್ಜಿ ಹಾಗೂ 'ಪರ್ದೇಸ್'ನಲ್ಲಿ ನಟಿಸಿ ಸುಭಾಷ್ ಘ್ಯಾ ಜೊತೆ ಕಿತ್ತಾಡಿ, ರಾಜಿ ಮಾಡಿಕೊಂಡ ಮಹಿಮಾ ಚೌಧರಿ ಇದ್ದಾರೆ.


ಬರೀ ಸೆಕ್ಸ್ ಚಲ್ತಾ ನಹೀ

ರೋಮಾನ್ಸ್ ಇರುವ ಚಿತ್ರಗಳಿಗೆ ಬೇಡಿಕೆ ಹೆಚ್ಚಿರುವುದರಿಂದ 'ಸುಂದರ ಯುವ ವಸ್ತು' ಗಳಿಗಾಗಿ ಬೇಡಿಕೆ ಹೆಚ್ಚಿದೆ. 98ರ ಬಹುಪಾಲು ಹಿಂದಿ ಚಿತ್ರಗಳು ಪ್ರೇಮವನ್ನು ಕೇಂದ್ರವಾಗಿಸಿಕೊಂಡಿದ್ದವು. ಅವುಗಳಲ್ಲಿ 6-7 ಚಿತ್ರಗಳ ಹೆಸರಿನಲ್ಲಿ 'ಪ್ಯಾರ್' ಇತ್ತು. ಇದರಿಂದಾಗಿಯೇ ಮೊದಲ ನೋಟದಲ್ಲೇ ಮುಗ್ಧತೆ ಹಾಗೂ ಯೌವನದ ಬೆರಗು ಎರಡನ್ನೂ ತೋರಿಸಬಲ್ಲ ಮುಖಗಳಿಗೆ ಬೇಡಿಕೆ ಹೆಚ್ಚಿತು. ಬಂದ ಅನೇಕ ಹುಡುಗಿಯರು ದೀಪ ಕಂತುವ ಮೊದಲು ಜೋರಾಗಿ ಉರಿಯುವಂತೆ, ಒಂದೇ ಚಿತ್ರಕ್ಕೆ ಆಯಸ್ಸು ಮುಗಿಸಿ ಹೊರಟರೆ, ಕೆಲವರು ಉಳಿದುಕೊಂಡರು. 90ರ ಮೊದಲ ಭಾಗದ ಬಹುಪಾಲು ನಟಿಯರು - ಉದ್ದ ಕಾಲಿನ ಶಿಲ್ಪಾ ಶೆಟ್ಟಿ, ಪೃಷ್ಠವನ್ನು ಗರಗರ ತಿರುಗಿಸುವ ಮಾಧುರಿ, 'ಸೆಕ್ಸಿ ಸೆಕ್ಸಿ ಮುಜೆ ಲೋಗ್ ಬೋಲೆ' ಎಂದ ಕರಿಷ್ಮಾ ಮತ್ತು ಕ್ಷಣದಲ್ಲೇ ಎಲ್ಲವನ್ನೂ ಬಿಚ್ಚಿ



ನಿರ್ವಾಣವಾಗುವ ಊರ್ಮಿಳಾ ಇವರೆಲ್ಲ ಆಧರಿಸಿದ್ದು ಮೂರಕ್ಷರದ ಪದ 'SEX' ಅನ್ನು.

ಇಂದು ನಟಿಯೊಬ್ಬಳು ಸೆಕ್ಸಿ ಆಗಿರಬೇಕಾದ್ದು, ಅವಳಲ್ಲಿರಬೇಕಾದ ಅರ್ಹತೆಗಳಲ್ಲೊಂದು. ಇದರೊಟ್ಟಿಗೆ ಬುದ್ಧಿ, ಪರದೆಯ ಮೇಲೆ ತಮ್ಮ ಇರುವನ್ನು ಸಾಬೀತು ಪಡಿಸುವುದು ಹಾಗೂ ಅಪಾರ ಶಕ್ತಿಯನ್ನು ಪ್ರದರ್ಶಿಸುವ ಅಗತ್ಯವಿದೆ. ಸೌಂದರ್ಯ ಮಾತ್ರ ಬಾಲಿವುಡ್‌ನ ಬಾಗಿಲನ್ನು ತೆರೆಸುವ 'ಸೇಸಮ್' ಮಂತ್ರವಾಗಿ ಉಳಿದಿಲ್ಲ. ಬಾಂಬೆ ಬಾಯ್ಸ್‌ನ ಕೈಜಾದ್ ಗುಸ್ತಾದ್ ತಾರಾ ದೇಶಪಾಂಡೆಯನ್ನು ಆಯ್ದುಕೊಂಡಿದ್ದಕ್ಕೆ ಕೊಟ್ಟ ಕಾರಣ-'ಆಕೆಯ ಎರಡು ಕಿವಿಗಳ ನಡುವೆ ನಡೆಯುತ್ತಿರುವ ಕ್ರಿಯೆ ಅದ್ಭುತವಾದದ್ದು'. ತಾರಾಳ ಬುದ್ಧಿವಂತಿಕೆ ಆ ಪಾತ್ರವನ್ನು ಕೊಡಿಸಿತು. ಆಕೆ ಈಗ ಎತ್ತರಕ್ಕೆ ಬೆಳೆದು ನಿಂತಿದ್ದಾಳೆ. ಬುದ್ಧಿಯುಳ್ಳ ಈ ಹುಡುಗಿಯರು ಯಶಸ್ವಿಯಾದ ಬೃಹತ್ತಾದ ವಾಣಿಜ್ಯ ಮಾರುಕಟ್ಟೆಯನ್ನು ತೆರೆದು ಬಿಟ್ಟಿದ್ದಾರೆ. ಬದಲಾಗಿರುವ ಈ ಸಮಯದಲ್ಲಲ್ಲದೆ ಹೋಗಿದ್ದರೆ, ಇವರೆಲ್ಲ ಗಂಭೀರ ಚಲನಚಿತ್ರಗಳನ್ನು ಪ್ರವೇಶಿಸಿ ಸೀಮಿತರಾಗಿ ಬಿಡುತ್ತಿದ್ದರು.



ಚೆಂಡಿನಂತಹ ಶಕ್ತಿ

ಇಡೀ ಬಾಲಿವುಡ್ ಯೌವನಿಗರಿಂದ ತುಂಬಿ ಬಿಟ್ಟಿದೆ. ಯುವ ನಿರ್ದೇಶಕರು, ಯುವ ಬರಹಗಾರರು ಬಂದು ಬಿಟ್ಟಿದ್ದಾರೆ. ಪ್ರೇಕ್ಷಕರೂ ಬದಲಾಗಿದ್ದಾರೆ. ಈ ಯುವ ನಿರ್ದೇಶಕರು ತಮ್ಮದೇ ವಯಸ್ಸಿನವರ

ತರಂಗಕ್ಕನುಗುಣವಾಗಿ ಮಾತಾಡುವಲ್ಲಿ ಯಶಸ್ವಿಯಾಗಿದ್ದಾರೆ. ಆದಿತ್ಯ ಚೋಪ್ರಾ, ಕರಣ್ ಜೋಹಾರ್ ಮತ್ತು ರಾಮ್‌ಗೋಪಾಲ್ ವರ್ಮಾ ಇವರೆಲ್ಲ 30ರ ಆಜೂಬಾಜಿನಲ್ಲಿರುವವರು.

ಈ ಬಾಲೆಯರ ದಿರಿಸು ಮಾತ್ರವಲ್ಲ, ಮನಸ್ಥಿತಿ ಕೂಡಾ ಆಧುನಿಕ. ತಮ್ಮ ಬಾಡಿಲ್ಯಾಂಗ್ವೇಜ್ ಬಗ್ಗೆ ಅವರಿಗೆ ಅರಿವಿದೆ. ಪ್ರೀತಿ ಮತ್ತು ರಾಣಿ ಮುಖರ್ಜಿಯ 'ಆತಿ ಕ್ಯಾ ಖಂಡಾಲಾ' ಪರದೆಯ ಮೇಲೆ ಪುಟಿಯುವ ರೀತಿ ಇದೆಯಲ್ಲ ಅದಕ್ಕೆ ಪ್ರೇಕ್ಷಕ ತತ್‌ಕ್ಷಣ ಪ್ರತಿಸ್ಪಂದಿಸುತ್ತಾನೆ, ಅದನ್ನೇ ಎಲ್ಲರಿಂದಲೂ ನಿರೀಕ್ಷಿಸುತ್ತಾನೆ. ಪ್ರೇಕ್ಷಕ ಪ್ರಕ್ಷುಬ್ಧನಾಗಿದ್ದಾನೆ. ತನ್ನ ದಿನನಿತ್ಯದ ಜಂಜಡಗಳನ್ನೆಲ್ಲ ಮರೆಯಲು ಥಿಯೇಟರಿಗೆ ಬಂದಿರುತ್ತಾನೆ. ಸ್ಟಾರ್ ನಿರ್ದೇಶಕ ಶೇಖರ್ ಕಪೂರ್‌ಗೆ ಪ್ರೀತಿಯನ್ನು ಮೊದಲ ಬಾರಿಗೆ ಹೋಟೆಲಿನ ಚಾವಡಿಯಲ್ಲಿ ಕಂಡಾಗ ಕಾಣಿಸಿದ್ದು ಇದೇ- 'ಎಲ್ಲವನ್ನೂ ಕಿತ್ತೆಸೆಯುವ, ಚೌಕಟ್ಟನ್ನು ಒಲ್ಲದ ದೇದೀಪ್ಯಮಾನ ಶಕ್ತಿ'. ಇದರಿಂದಾಗೇ ಆತ ತನ್ನ ಚಿತ್ರ 'ತರ ರಂ ಪಂ ಪಂ'ಗೆ ಪ್ರೀತಿಯನ್ನು ಆಯ್ದುಕೊಂಡಿದ್ದು.



ಇಂದು ಸ್ಟಾರ್‌ಗಳು ಮನರಂಜಿಸುವುದು ಅವಶ್ಯಕವಾಗಿ ಬಿಟ್ಟಿದೆ. ನಾಯಕ ನಾಯಕಿಯರು ವಿದೂಷಕರಾಗುತ್ತಿದ್ದಾರೆ. ಶಮ್ಮಿ ಕಪೂರನಲ್ಲಿದ್ದ 'ಯಾಹೂ' ಪದಾರ್ಥ ಇಂದಿನ ಟ್ರೆಂಡ್. ಇದನ್ನು ಶಾರೂಖ್, ರಂಗೀಲಾದ ಅಮೀರ್, ಕಾಜೋಲ್ ಮತ್ತು ಪ್ರೀತಿಯಲ್ಲಿ ನೀವು ಕಾಣಬಹುದು.

ಆರ್ ಯು ವರ್ಜಿನ್?

ಮಣಿರತ್ನಂನ 'ದಿಲ್‌ಸೆ' ಯಲ್ಲಿ ಪ್ರೀತಿ ಶಾರೂಖನನ್ನು ಕೇಳುತ್ತಾಳೆ 'ಆರ್ ಯು ವರ್ಜಿನ್''? ಶಾರೂಖ್ ತತ್ತರಿಸಿ ಬಿಡುತ್ತಾನೆ ಎನ್ನುವುದನ್ನು ಹೇಳುವ ಅವಶ್ಯಕತೆಯಿಲ್ಲ. ಈ ಪ್ರಶ್ನೆಯನ್ನು ಹೇಮಾ ಮಾಲಿನಿ ಅಥವಾ ತೀರಾ ಇತ್ತೀಚಿನ ಮಾಧುರಿ ಕೂಡಾ ಕೇಳುತ್ತಾರೆ ಎನ್ನುವುದನ್ನು ಊಹಿಸುವುದೂ ಅಸಾಧ್ಯ. ಈ ಪ್ರಶ್ನೆ ತನುಜಾ ಚಂದ್ರ ತಮ್ಮ ಚಿತ್ರ 'ಅಂಧೇರ್'ಗೆ ಪ್ರೀತಿಯನ್ನು ಆಯ್ದುಕೊಳ್ಳಲು ಪ್ರೇರೇಪಿಸಿತು. 'ಬಾಂಬೆ ಬಾಯ್ಸ್'ನ ತಾರಾ ದೇಶಪಾಂಡೆ ಮುಂಬೈನ ರಸ್ತೆಯೊಂದರಲ್ಲಿ ರಾಹುಲ್ ಬೋಸ್‌ನ ಶರ್ಟ್ ಹರಿದೆಸೆದು, ತಣ್ಣಗೆ ಮನೆಗೆ ನಡೆಯುತ್ತಾಳೆ. ಈಗಿನದ್ದು ನೇರ ವ್ಯವಹಾರ. ಸೂಚನೆ, ಸಂಜ್ಞೆಗಳು ಶಿಲಾಯುಗಕ್ಕೆ ಸೇರಿ ಹೋದವು! ಈ ಕಿತ್ತೆಸೆಯುವ ಕ್ರಿಯೆ ತಾರಾಳಿಗೆ ಮಮ್ಮೂಟ, ಗೋವಿಂದ ಮತ್ತು ಆದಿತ್ಯ ಪಂಚೋಲಿ ಜೊತೆ ನಟಿಸಲು ಅವಕಾಶಗಳಿಸಿ ಕೊಟ್ಟಿದೆ.

'ಗುಲಾಮ್'ನಲ್ಲಿ ಅಮೀರ್ ರಾಣಿ ಮುಖರ್ಜಿಯನ್ನು 'ಆತೀ ಕ್ಯಾ ಖಂಡಾಲಾ' ಎಂದ ತಕ್ಷಣ ರಸ್ತೆ ರೋಮಾನ್ಸ್ ಸಂಸ್ಕೃತಿ ಜಾರಿಗೆ ಬಂದಿತು. ರಾಣಿ ಬಾಲಿವುಡ್‌ನ ಹೊಸ ಕಿನ್ನರಿಯಾಗಿಬಿಟ್ಟಳು. 'ಕುಚ್ ಕುಚ್' ಆಕೆಯ ಬಗಲಿಗೆ ಬಂದು ಬಿದ್ದಿತು. ಆಕೆ ಹೇಳುತ್ತಾಳೆ 'ಸೌಂದರ್ಯ ಅಂದರೆ ಸತ್ವ, ಪಾತ್ರದಲ್ಲಿ ಜೀವ ಇರಬೇಕು.'

ವ್ಯವಹಾರದಲ್ಲಿ ಜಾಣೆಯರು

ಈ ಹುಡುಗಿಯರ ಇನ್ನೊಂದು ವೈಶಿಷ್ಟ್ಯ - ಅವರ ವ್ಯಾಪಾರ ಬುದ್ಧಿ. ಅವರೆಲ್ಲ ತಮ್ಮ ಮ್ಯಾನೇಜರ್‌ನ ಕೈ ಕಾಯುತ್ತ ಕೂರುವುದಿಲ್ಲ. ತಮ್ಮ ವ್ಯವಹಾರ ತಾವೇ ನೋಡಿಕೊಳ್ಳುತ್ತಾರೆ. ಕರೀನಾ ಕಪೂರ್ ಸಂದರ್ಶನಕ್ಕಾಗಿ 'ಇಂಡಿಯ ಟುಡೇ' ಕೇಳಿದಾಗ ಆಕೆ ಹೇಳಿದಳಂತೆ: 'ಮುಖಪುಟದಲ್ಲಿ ನನ್ನ ಬಗ್ಗೆ ಬರುವುದಿದ್ದರೆ ಮಾತ್ರ ಸಂದರ್ಶನ ಕೊಡುತ್ತೇನೆ'.

ಹಳೆಯ ನಾಯಕಿಯರಂತೆ ಈ ಹುಡುಗಿಯರು ತಮ್ಮ ಅಮ್ಮನ ಸೆರಗಿನಲ್ಲಿ ಅಡಗಿಕೊಂಡವರಲ್ಲ. ನೇತ್ರಾ ಮತ್ತು ಪ್ರೀತಿ ಪೇಯಿಂಗ್ ಗೆಸ್ಟ್‌ಗಳಾಗಿದ್ದರೆ, ಉಳಿದವರು ದೂರದ ಊರುಗಳಲ್ಲಿ ತಮ್ಮ ತಂದೆ ತಾಯಂದಿರನ್ನು ಬಿಟ್ಟು ಬಂದಿದ್ದಾರೆ. ರಾಜೇಶ್ ಖನ್ನಾ ಖಾಂದಾನ್‌ನ ರಿಂಕಿ ಹೇಳುತ್ತಾಳೆ: 'ಈಗ ಮುಖ್ಯವಾಹಿನಿ ಚಲನಚಿತ್ರ ಪ್ರವೇಶಕ್ಕೆ ಹಲವು ಹತ್ತು ಮಾರ್ಗಗಳಿವೆ. ನಿಮಗೆ ಸೌಂದರ್ಯವಿಲ್ಲದಿದ್ದರೂ, ನಟನೆಯ ಸಾಮರ್ಥ್ಯವಿದ್ದಲ್ಲಿ ನಿಮ್ಮನ್ನು ಒಪ್ಪಿಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದೆ'.

ಓದುಗರೆ, ನೀವು ಸಾಂಪ್ರದಾಯಿಕ ಅರ್ಥದಲ್ಲಿ ಸುಂದರ ಅಥವಾ ಸುಂದರ ಅಲ್ಲದಿರಬಹುದು. ಸೌಂದರ್ಯ ಕಂಡು ಅನುಭವಿಸಲು ನಿಮ್ಮನ್ಯಾರು ತಡೆದಿದ್ದಾರೆ. Go, be a part of the show!

■


ನಿನ್ನೊಬ್ಬ 'ಏಡ್ಸ್' ರೋಗಿ ಅಲ್ಲ ಅಂತ ದೃಢವಾದ ಮೇಲೆಯೇ ನಿನ್ನನ್ನು ನಾನು ಪ್ರೀತಿಸಬಹುದು........





ನಮ್ಮ 'ಪಟೇಲರ ಸರ್ಕಾರ' ಭದ್ರ.. .... 'ಮದ್ಯಪಾನ' ಇರುವವರೆಗೂ ಸುಭದ್ರ!

ಬೆಲೆ !




ಹೊಸವರ್ಷ 1999 - ಕೇಂದ್ರ ಸರ್ಕಾರದ ಸ್ಥಿತಿ!



ಮೊದಲು ಹೋಗಿ ರೇಷನ್ ತಗೊಂಬರ್ರೀ...
ಆಮೇಲೆ ಆಕಾಶದ ಚಂದಿರನ ತರುವಿರಂತೆ!



ದುಬಾರಿ ಆದರೂ ಅನಿವಾರ್ಯವಲ್ಲವೇ !



ಅಪ್ಪ, ಗೊಂದಲ ಮಾಡ್ಕೋಬೇಡ ಅವರು ಶಾಸಕರ ಬೆಲೆ ಬಗ್ಗೆ ಹೇಳಿಲ್ಲ. ಅಗತ್ಯ ವಸ್ತುಗಳ ಬೆಲೆಗಳ ಬಗ್ಗೆ!

BISILA BADUKU Kannada Monthly APRIL 1999 RNI No. 67406 / 97 Regd. BGW / 394

ಶೀಘ್ರ ಬಿಡುಗಡೆಯಾಗಲಿರುವ 'ಮನೆ' ವಾರಪತ್ರಿಕೆಗೆ ಬರೆಯಿರಿ

ಎರಡು ದೋಣಿಯ ಪಯಣ



ಉದ್ಯೋಗಸ್ಥ ಮಹಿಳೆಯರೇ ಗಮನಿಸಿ. ನೀವು ಯಾವುದೇ ಉದ್ಯೋಗದಲ್ಲಿರಲಿ, ಅದು ನಿಮಗೆ ತೃಪ್ತಿ ಕೊಡುತ್ತಿದೆಯೇ? ಮನೆ, ಮಕ್ಕಳು, ಗಂಡ ಮತ್ತು ಉದ್ಯೋಗ ಎಲ್ಲವನ್ನೂ ಹೇಗೆ ಸಂಭಾಳಿಸುತ್ತಿದ್ದೀರಿ? ಖುಷಿಯಿದೆಯೇ? ವ್ಯಥೆಯಿದೆಯೇ? ಒತ್ತಡವಿದೆಯೇ? ಏನಿದ್ದರೂ ನಿಮ್ಮ ಅನಿಸಿಕೆಗಳನ್ನು ನಮಗೆ ಬರೆದು ಕಳಿಸಿ. ನಿಮ್ಮ ಬರಹ ಅರ್ಧಪುಟ ಮೀರಬಾರದು. ನಿಮ್ಮದೊಂದು ಫೋಟೋ ಕಳಿಸಿ.

ನಾನೂ ಅಮ್ಮನಾದೆ!

ಗಂಡಂದಿರೇ ಇಲ್ಲಿ ನೋಡಿ. ನಿಮ್ಮ ಹೆಂಡತಿ ಉದ್ಯೋಗಸ್ಥೆ. ಆರ್ಥಿಕವಾಗಿ ನಿಮ್ಮ ಜೊತೆಗೆ ಕೈಗೂಡಿಸಿದ್ದಾರೆ. ಆದರೆ ಸಾಮಾಜಿಕವಾಗಿ ನೀವೆಷ್ಟು ನಿಮ್ಮ ಹೆಂಡತಿಯ ಕೆಲಸಕ್ಕೆ ಸಹಕಾರಿಯಾಗಿದ್ದೀರಿ? ನಿಮ್ಮ ಮಕ್ಕಳಿಗೆ ನೀವೂ 'ಅಮ್ಮ'ನ ಪಾತ್ರ ವಹಿಸಿದ್ದೀರಾ? ಅರ್ಧಪುಟದಲ್ಲಿ ನಮಗೆ ಬರೆದು ತಿಳಿಸಿ. ನಿಮ್ಮದೊಂದು ಫೋಟೋ ಕಳಿಸಿ.

ನನ್ನ ಪ್ರಪಂಚ



ಮಕ್ಕಳೇ ನೀವೂ ಬರೆಯಿರಿ. ಶಾಲೆಯಲ್ಲಿ ಮಿಸ್ ಕಾಟ, ಮನೆಯಲ್ಲಿ ಅಮ್ಮ, ಅಪ್ಪನ ಕಾಟ. ಎಲ್ಲರದೂ ಒಂದೇ ಹಾಡು. ಓದುಓದುಓದು! ಇದನ್ನು ಬಿಟ್ಟು ನಿಮಗೇನು ಮಾಡಬೇಕೆನಿಸುತ್ತದೆ? ನಮಗೆ ಬರೆದು ತಿಳಿಸಿ. ಜತೆಗೆ ನಿಮ್ಮ ಭಾವಚಿತ್ರ ಕಳಿಸಿ.

ಸಂಜೆಗಣ್ಣಿನ ನೋಟ

ಮಕ್ಕಳು ಕಲಿತು, ತಮ್ಮ ಬದುಕನ್ನು ದೂರ ದೂರ ರೂಪಿಸಿಕೊಂಡಾಯಿತು. ಕರ್ತವ್ಯಗಳೆಲ್ಲ ಮುಗಿಸಿಯಾಯಿತು! ಈಗ ನಿಮ್ಮ ಬದುಕು ಹೇಗಿದೆ? ನಿರಾಳವಾಗಿದೆಯೇ ಕಾಯಿಲೆಗಳು ಕಾಡುತ್ತಿದೆಯೇ, ಮಕ್ಕಳು ದೂರಾದರೆಂಬ ನೋವಿದೆಯೇ ಅಥವಾ ಎಲ್ಲವನ್ನೂ ನುಂಗಿ, ಮಾಗಿದ ಮನಸ್ಸು, ಅನುಭವಗಳ ಹಿನ್ನೆಲೆಯಲ್ಲಿ 'ರಾಮಾಕೃಷ್ಣಾಂತ' ಬದುಕಲು ಸಾಧ್ಯವಿದೆಯೇ? ನಮಗೆ ಬರೆದು ತಿಳಿಸಿ. ನಿಮ್ಮ ಭಾವಚಿತ್ರ ಕಳಿಸಲು ಮರೆಯಬೇಡಿ.

ಕಥೆ, ಕಾದಂಬರಿ, ಕವನ ಲೇಖನಗಳಿಗೆ ಆಹ್ವಾನ



ಕನ್ನಡಿಗರ ಮನೆ ಮನಗಳಿಗೆ ಭಾರಿ ಪ್ರಮಾಣದಲ್ಲಿ ದಾಳಿ ಇಡಲಿರುವ ಮನೆ ವಾರಪತ್ರಿಕೆ ನಿಮ್ಮದು. ಈ ಪತ್ರಿಕೆಯಲ್ಲಿ ಏನೇನು ಇರಬೇಕೆಂದು ಬಯಸುತ್ತಿರೋ ಅದೆಲ್ಲವನ್ನೂ ಬರೆದು ಕಳಿಸಿ. 'ಮನೆ'ಗೆ ಬರೆಯುವವರು ಉದ್ದಾಮ ಸಾಹಿತಿಗಳೇ ಆಗಿರಬೇಕೆಂದಿಲ್ಲ. ಸಾಮಾನ್ಯ ಓದುಗರಿಗೇ ಇಲ್ಲಿ ಅಧಿಕ ಅವಕಾಶ. ಆದರೆ ಕಡಿಮೆ ಗುಣಮಟ್ಟದ ಬರಹಗಳಿಗೆ ಪ್ರೋತ್ಸಾಹ ಸಿಗಲಾರದು. ನೀವು ನಿಮ್ಮ ಊರು, ಜನ, ರಾಜಕೀಯ, ಉಡುಗೆ, ಅಡುಗೆ, ಮಕ್ಕಳು ಹೀಗೆ ಯಾವ ವಿಷಯದ ಬಗೆಗಾದರೂ ಚುಟುಕಾಗಿ ಬರೆಯಬಹುದು. ನೆನಪಿಡಿ! ಹಸ್ತಪ್ರತಿಯಲ್ಲಿ ಅರ್ಧಪುಟಕ್ಕಿಂತ ಹೆಚ್ಚಾಗಿರುವ ಬರಹಗಳು ಖಂಡಿತಾ ಪ್ರಕಟವಾಗುವುದಿಲ್ಲ. ಕಥೆಗಳು ಹಸ್ತಪ್ರತಿಯಲ್ಲಿ ಒಂದು ಪುಟ ಮೀರಕೂಡದು. ಧಾರಾವಾಹಿಯಾಗಿ ಪ್ರಕಟವಾಗುವ ಕಾದಂಬರಿಗಳು ಹಸ್ತಪ್ರತಿಯಲ್ಲಿ 30 ಪುಟಗಳ ಮಿತಿಯಲ್ಲಿರಬೇಕು. ನಿಮ್ಮ ಬರಹಗಳೊಂದಿಗೆ ಸ್ಟಾಂಪ್ ಹಚ್ಚಿದ ಸ್ವವಿಳಾಸದ ಲಕೋಟೆ ಕಳಿಸಿಕೊಡಿ. ಅಸ್ವೀಕೃತ ಬರಹಗಳನ್ನು ಕಾಯ್ದಿರಿಸುವ ವ್ಯವಸ್ಥೆಯಿಲ್ಲ. ಸ್ವೀಕೃತ ಬರಹಗಳು ಸಮಯಾನುಸಾರ ಪ್ರಕಟಗೊಳ್ಳುತ್ತವೆ. ಅನಗತ್ಯ ಪತ್ರ ವ್ಯವಹಾರ ಬೇಡ.

ಸ್ಪರ್ಧೆ!

ಮಿನಿಕಥೆ :

ಹಸ್ತ ಪ್ರತಿಯಲ್ಲಿ ಒಂದು ಪುಟ ಮೀರಕೂಡದು. ಭಾಷೆ, ವಸ್ತು, ಶೈಲಿ ಚುರುಕಾಗಿರಬೇಕು.

ಹನಿಗವನ :

ಕಡಿಮೆ ಪದಗಳಲ್ಲಿ ಓದುಗರಿಗೆ ಕಚಗುಳಿ ಇಡುವ ಹನಿಗವನಗಳನ್ನು ಮಾತ್ರ ಸ್ಪರ್ಧೆಗೆ ಕಳಿಸಿ.

ಕಾರ್ಟೂನ್:

ಅಡಿ ಟಿಪ್ಪಣಿಗಿಂತ ರೇಖೆಗಳಿಗೇ ಹೆಚ್ಚು ಒತ್ತು ನೀಡಿದ ಕಾರ್ಟೂನ್‌ಗಳು ಅಪೇಕ್ಷಣೀಯ.

ಸೂಚನೆ: ವಿಜೇತರಿಗೆ ಪ್ರಶಸ್ತಿಪತ್ರ ಹಾಗೂ ಬಹುಮಾನ ಕಳಿಸಲಾಗುವುದು. 'ಮನೆ'ವಾರ ಪತ್ರಿಕೆಯ ಮೊದಲ ಸಂಚಿಕೆಯಲ್ಲಿ ಫಲಿತಾಂಶ.

ವಿಳಾಸ: ಸಂಪಾದಕರು, 'ಮನೆ' ವಾರಪತ್ರಿಕೆ, ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ: 7951, ಬಸವೇಶ್ವರನಗರ, ಬೆಂಗಳೂರು - 560 079.